# ವಿಜಯದ ಹಾದಿಯಲ್ಲಿ

ಕ್ರೋಢೀಕರಣ

ಎಂ. ಸಾದುಲ್ಲಾ

ಪರಮ ದಯಾಮಯನೂ ಕರುಣಾ ನಿಧಿಯೂ ಆದ ಅಲ್ಲಾಹನ ನಾಮದಿಂದ

# ಪ್ರಕಾಶಕರ ಮಾತು

ಪ್ರವಾದಿ ಮುಹಮ್ಮದ್‌ರವರು(ಸ) ತೌಹೀದ್ ಅಥವಾ ಏಕದೇವತ್ವದ ಕರೆ ಮೊಳಗಿಸಿದಾಗ ಪ್ರಕೃತಿಯ ಜನರು ಅದರತ್ತ ಬಹುಬೇಗನೆ ಆಕರ್ಷಿತರಾದರು. ಮೂರ್ತಿ ಪೂಜೆ ಹಾಗೂ ತ ಜನ್ಯ ಆಚಾರ ಸಂಪ್ರದಾಯಗಳು ವ್ಯಾಪಕವಾಗಿದ್ದ ಒಂದು ಸಮಾಜದ ಮಟ್ಟಿಗೆ ವತ್ವದ ಕರೆಯು ತೀರಾ ಅರೋಚಕವಾಯಿತು. ಅದರ ವಾಹಕರು ಸತ್ಯದ ಕರೆಯನ್ನು ಧಿಸ ತೊಡಗಿದರು. ಆದರೂ ಸತ್ಯದ ಕರೆಯು ಆ ಪ್ರತಿಕೂಲ ವಾತಾವರಣದಲ್ಲೂ ಸತೊಡಗಿತು. ಸತ್ಯ ಸ್ವೀಕಾರ ಮಾಡುವವರ ಸಂಖ್ಯೆ ದಿನೇ ದಿನೇ ಹೆಚ್ಚತೊಡಗಿತು. ಇದು ಷೇಧಿಗಳ ಮೇಲೆ ಪ್ರತಿಕೂಲ ಪ್ರಭಾವ ಬೀರತೊಡಗಿತು. ಅದು ಮೊದಲು ನಿರ್ಲಕ್ಷ್ಯ, ಕರ ಪರಿಹಾಸ್ಯ, ಮೂದಲಿಕೆಯ ಹಂತಗಳನ್ನು ದಾಟಿ ಕೊನೆಗೆ ಹಿಂಸೆ-ದೌರ್ಜನ್ಯಗಳ ರೂಪ ಕೊಡಗಿತು. ಆದರೆ ಅತ್ಯಂತ ಕಡಿಮೆ ಸಂಖ್ಯೆಯಲ್ಲಿದ್ದ ಸತ್ಯ ವಿಶ್ವಾಸಿಗಳು ಆ ಎಲ್ಲ ಸಂಕಷ್ಟ , ಹಿಂಸೆ-ದೌರ್ಜನ್ಯಗಳನ್ನು ನಗುಮುಖದೊಂದಿಗೆ ಸಹಿಸಿದರು.

ಸತ್ಯ ಮಾರ್ಗವು ಹೂವಿನ ಹಾಸಿಗೆಯಲ್ಲ, ಬದಲಾಗಿ ಮುಳ್ಳಿನ ಹಾದಿಯೆಂದು ಶ್ವಾಸಿಗಳು ದೃಢವಾಗಿ ನಂಬಿದ್ದರು. ಅವರ ದೃಷ್ಟಿಯಲ್ಲಿ ಈ ಲೋಕದ ಕ್ಷಣಿಕ ನಲ್ಲಿ ಬರುವ ಸಂಕಷ್ಟವು ಪರಲೋಕದ ಶಾಶ್ವತ ಸ್ವರ್ಗ ಸುಖದೆದುರು ತೃಣ ಸಮಾನ ತ್ತು. ಆದುದರಿಂದಲೇ ಬೆಟ್ಟದಂತಹ ಸಂಕಷ್ಟಗಳು, ಹೃದಯ ತಲ್ಲಣಗೊಳ್ಳುವಂತಹ -ದೌರ್ಜನ್ಯಗಳು ಎರಗಿದರೂ ಸತ್ಯ ಮಾರ್ಗದಲ್ಲಿ ಅವರು ಅಚಂಚಲರಾಗಿದ್ದರು. ನ್ನು ಮಣಿಸಲು ಮತ್ತು ಸತ್ಯದ ಮಾರ್ಗದಿಂದ ಅವರನ್ನು ಸರಿಸಲು ಯಾವ ಬೃಹತ್ ಬಂದಲೂ ಸಾಧ್ಯವಾಗಲಿಲ್ಲ.

ಈ ಪುಸ್ತಕದಲ್ಲಿ ಸತ್ಯದ ಮಾರ್ಗದಲ್ಲಿ ಸಂಕಷ್ಟಗಳನ್ನೂ ಹಿಂಸೆ-ದೌರ್ಜನ್ಯಗಳನ್ನೂ ಸ್ತಾ ಜೀವಿಸಿದ ಸಹಾಬಿಗಳ (ಪ್ರವಾದಿ ಸಂಗಾತಿಗಳು) ಪೈಕಿ ಕೆಲವರ ಸಂಕ್ಷಿಪ್ತ ಜೀವನ ಂತಗಳನ್ನು ಕೊಡಲಾಗಿದೆ. ಇಂತಹ ತ್ಯಾಗ ಬಲಿದಾನಗಳಿಂದಲೇ ಯಾವುದೇ ೀಲನವು ಲೋಕದಲ್ಲಿ ಬೆಳೆಯುತ್ತದೆ. ಇಸ್ಲಾಮಿನ ಬೆಳವಣಿಗೆಯ ಇತಿಹಾಸದಲ್ಲಿ ಶ ಸಾವಿರಾರು ತ್ಯಾಗ ಬಲಿದಾನಗಳನ್ನು ಇತಿಹಾಸದ ಪುಟಗಳಲ್ಲಿ ಕಾಣಬಹುದು.

ಇಸ್ಲಾಮ್ ಸಾರ್ವತ್ರಿಕ ಚರ್ಚಾ ವಿಷಯವಾಗಿರುವ ಇಂದಿನ ಕಾಲಘಟ್ಟದಲ್ಲಿ ಇಸ್ಲಾಮಿನ ಜಿಜ್ಞಾಸೆಯು ಲೋಕದಾದ್ಯಂತ ಕಂಡು ಬರುತ್ತದೆ. ವ್ಯಾಪಕ ಅಪಪ್ರಚಾರದ ಮಧ್ಯೆಯೂ ಯಿಗಳಾದ ಅನ್ಯ ಧರ್ಮೀಯರು ಇಸ್ಲಾಮಿನತ್ತ ಹರಿದು ಬರುತ್ತಿರುವುದು ಒಂದು ವಿಕತೆಯಾಗಿದೆ. ಈ ನಿಟ್ಟಿನಲ್ಲಿ ಸತ್ಯದ ಮಾರ್ಗವು ಎಷ್ಟೊಂದು ದುರ್ಗಮ, ಅದರಲ್ಲಿ ಾಗಿರುವುದು ಎಷ್ಟೊಂದು ದುಸ್ತರವೆಂದು ತಿಳಿಯಲು ಹಾಗೂ ಸತ್ಯಮಾರ್ಗದತ್ತ ಮಿಡುವವರು ಪೂರ್ಣ ಮನ ಸಂತೃಪ್ತಿಯಿಂದ ಮುಂದೆ ಬರುವಂತಾಗಲೆಂದು ಈ ವನ್ನು ವಾಚಕರ ಮುಂದೆ ಸಮರ್ಪಿಸುತ್ತಿದ್ದೇವೆ.

*ಶಾಂತಿ ಪ್ರಕಾಶನ*

# ಅನುಕ್ರಮಣಿಕೆ

# ಹ. ತುಫೈಲ್ ಬಿನ್ ಅಮ್ರ್ ದೌಸಿ(ರ)

## ನಸೋತ ಕವಿ

ಹ.ತುಫೈಲ್ ಬಿನ್ ಅಮ್ರ್ ದೌಸಿಯವರು(ರ) ಅಜ್ಞಾನ ಕಾಲದಲ್ಲಿ ದೌಸ್ ಗೋತ್ರದ ಮುಕರಾಗಿದ್ದರು. ಅವರು ಬಹಳ ಉದಾರಿ. ಅತಿಥಿ ಸತ್ಕಾರಕ್ಕೆ ಬಹಳ ಪ್ರಸಿದ್ಧರು. ಅವರ ನೆಗೆ ಬರುತ್ತಿದ್ದ ಅತಿಥಿಗಳು ಎಷ್ಟಿರುತ್ತಿದ್ದರೆಂದರೆ ಅವರ ಮನೆಯ ಒಲೆಯಲ್ಲಿ ಯಿಗಳಲ್ಲಿ ಆಹಾರ ಸದಾ ಬೇಯುತ್ತಲಿರುತ್ತಿತ್ತು. ಅವರ ಬಾಗಿಲು ಅತಿಥಿಗಳಿಗಾಗಿ ಸದಾ ರುತ್ತಿತ್ತು. ಅವರು ಹಸಿದವರಿಗೆ ಊಟ ಬಡಿಸುತ್ತಿದ್ದರು. ಭಯ ಭೀತರಿಗೆ ಆಶ್ರಯ ತ್ತಿದ್ದರು. ಈ ಎಲ್ಲ ಗುಣಗಳಲ್ಲದೆ ಅವರೊಬ್ಬ ಪರಿಪಕ್ವ ಸಾಹಿತಿ, ಬುದ್ಧಿವಂತ ಕವಿ ತ್ತು ಅತ್ಯುತ್ತಮ ವಿಮರ್ಶಕರಾಗಿದ್ದರು.

ಹ. ತುಫೈಲ್ ತಮ್ಮ ಗೋತ್ರದವರ ತಿಹಾಮ ಎಂಬ ಸ್ಥಳವನ್ನು ತೊರೆದು ಮಕ್ಕಾಕ್ಕೆ ರಟರು. ಆ ಕಾಲದಲ್ಲಿ ಪ್ರವಾದಿ(ಸ) ಮತ್ತು ಕುರೈಶ್ ಸತ್ಯನಿಷೇಧಿಗಳ ಮಧ್ಯೆ ಕಠಿಣ ಘರ್ಷ ನಡೆಯುತ್ತಿತ್ತು. ಉಭಯತರರು ತಂತಮ್ಮ ಕೂಟಕ್ಕೆ ಬೆಂಬಲಿಗರನ್ನು ಗಳಿಸುವ ಯತ್ನದಲ್ಲಿದ್ದರು. ಪ್ರವಾದಿ(ಸ) ಸತ್ಯ-ನ್ಯಾಯದ ಅಸ್ತ್ರದಿಂದ ಜನರನ್ನು ದೇವನ ದಾಸ್ಯ-ಧನೆಯ ಕಡೆಗೆ ಆಹ್ವಾನಿಸುತ್ತಿದ್ದರೆ, ಸತ್ಯನಿಷೇಧಿಗಳು ಎಲ್ಲ ರೀತಿಯ ಕುತಂತ್ರಗಳನ್ನು ಪಯೋಗಿಸಿ ಸತ್ಯದ ಹುಟ್ಟಡಗಿಸಲು ಮತ್ತು ಜನರನ್ನು ಅದರಿಂದ ತಡೆಯಲು ತಮ್ಮ ಎದ ಪ್ರಯತ್ನ ಮಾಡುತ್ತಿದ್ದರು.

ಮಕ್ಕಾ ತಲುಪಿದ ಕೂಡಲೇ ತುಫೈಲ್‌ರಿಗೆ(ರ) ತಾನೇನೂ ಸಿದ್ಧತೆಯಿಲ್ಲದೆ ಇಲ್ಲಿಗೆ ದು, ಈ ಪ್ರವಾಹದಲ್ಲಿ ತನಗರಿವಿಲ್ಲದಂತೆಯೇ ಸಿಲುಕಿ ಬಿಟ್ಟೆನಲ್ಲಾ ಎಂದು ಭಾಸವಾಯಿತು. ರು ಅದಕ್ಕಾಗಿ ಬಂದಿರಲಿಲ್ಲ. ಪ್ರವಾದಿ(ಸ) ಮತ್ತು ಕುರೈಶರ ನಡುವೆ ನಡೆಯುತ್ತಿದ್ದ ಘರ್ಷದ ವಿಷಯವೂ ಅವರಿಗೆ ತಿಳಿದಿರಲಿಲ್ಲ. ಅವರು ಮಕ್ಕಾ ನಗರದೊಳಗೆ ಪ್ರವೇಶಿಸಿದ ತಲೇ ಕುರೈಶ್ ಸರದಾರರು ಅವರನ್ನು ಸುತ್ತುವರಿದರು. ಅವರನ್ನು ಗೌರವಾದರಗಳೊಂದಿಗೆ ಮಾಡಿಕೊಂಡರು. ಅನಂತರ ತುಫೈಲ್‌ರನ್ನುದ್ದೇಶಿಸಿ ಹೀಗೆಂದರು, "ತುಫೈಲ್! ನೀವು ಮ್ಮ ನಗರಕ್ಕೆ ಬಂದಿರುವಿರಿ. ಇಲ್ಲಿ ತಾನು ಅಲ್ಲಾಹನ ಪ್ರವಾದಿಯೆಂದು ಹೇಳಿಕೊಳ್ಳುತ್ತಿರುವ ತ್ತಿಯೊಬ್ಬ ಇಲ್ಲಿನ ವಾತಾವರಣವನ್ನೇ ಕೆಡಿಸಿ ಬಿಟ್ಟಿದ್ದಾನೆ. ಅವನು ನಮ್ಮಲ್ಲಿ ಒಡಕುಂಟು ಡಿ ನಮ್ಮನ್ನು ಛಿದ್ರಗೊಳಿಸಿ ಬಿಟ್ಟಿದ್ದಾನೆ. ನಮಗೆ ಒದಗಿ ಬಂದಂತಹ ಅಪಾಯ ನಿಮಗೂ ಮ್ಮ ನಾಯಕತ್ವಕ್ಕೂ ಉಂಟಾಗುವುದೋ ಎಂದು ನಮಗೆ ಹೆದರಿಕೆಯಾಗುತ್ತಿದೆ. ಆದುದರಿಂದ

ನೀವು ಅವನೊಂದಿಗೆ ಮಾತಾಡಬಾರದು. ಅವನ ಮಾತನ್ನು ಕೇಳಲೂಬಾರದು. ನಿಮ್ಮ ಇದುವೇ ಉತ್ತಮ. ಏಕೆಂದರೆ ಅವನ ಮಾತು ಬಹಳ ಪ್ರಭಾವಶಾಲಿಯಾಗಿರುತ್ತದೆ ವ್ಯಕ್ತಿಯ ಮಾತಿನ ಮೋಡಿಯಿಂದಾಗಿ ತಂದೆ-ಮಕ್ಕಳು, ಅಣ್ಣ-ತಮ್ಮಂದಿರು ಮತ್ತು ಪತ್ನಿಯರ ನಡುವೆ ಬಿರುಕುಂಟಾಗುತ್ತಿದೆ."

ಕುರೈಶ್ ಸರದಾರರ ಈ ಮಾತಿನಿಂದ ತುಫೈಲ್ ತುಂಬಾ ಪ್ರಭಾವಿತರಾದರು. ಮತ್ತು ತನ್ನ ನಾಯಕತ್ವವು ಅಪಾಯಕ್ಕೆ ಸಿಲುಕಿದೆಯೆಂಬ ಭೀತಿ ಅವರನ್ನು ಕಾ ಆದುದರಿಂದ ತಾನು ಆ ವ್ಯಕ್ತಿಯನ್ನು ಭೇಟಿಯಾಗಲಾರೆ. ಅವರೊಂದಿಗೆ ಮಾತನಾ ಮತ್ತು ಅವರ ಮಾತನ್ನು ಆಲಿಸಲಾರೆ ಎಂದು ದೃಢ ಸಂಕಲ್ಪ ಮಾಡಿಕೊಂಡರು. ಅನ ಅವರು ಕಅಬಾ ಮಂದಿರದ ಮೂರ್ತಿಗಳಿಗೆ ಪೂಜೆ ಸಲ್ಲಿಸಲಿಕ್ಕಾಗಿ ತೆರಳುವಾಗ ಎಲ್ಲಾ ಮುಹಮ್ಮದ್‌ರ(ಸ) ಮಾತು ಕಿವಿಗೆ ಬಿದ್ದೀತೋ ಎಂಬ ಭಯದಿಂದ ತನ್ನ ಕಿವಿಗೆ ತುರುಕಿಸಿದರು. ಕಅಬಾದೊಳಗೆ ಪ್ರವೇಶಿಸಿದಾಗ ಅಲ್ಲಿ ಮುಹಮ್ಮದ್(ಸ) ನಮಾ ಮಾಡುತ್ತಿರುವುದನ್ನು ಕಂಡರು. ಅವರ ಆರಾಧನಾ ಕ್ರಮ ತನ್ನ ಆರಾಧನಾ ಕ್ರಮ ಭಿನ್ನವಾಗಿರುವುದನ್ನು ಗಮನಿಸಿದರು. ಆ ದೃಶ್ಯವು ತುಫೈಲ್‌ರಿಗೆ ತುಂಬಾ ಹಿಡಿ ಆರಾಧನೆಯ ಈ ಕ್ರಮವು ಅವರನ್ನು ಆಕರ್ಷಿಸಿತು. ಅವರು ಮುಂದೆ ಸಾ ತನಗರಿವಿಲ್ಲದಂತೆಯೇ ಪ್ರವಾದಿಯವರ(ಸ) ಅತೀ ಹತ್ತಿರಕ್ಕೆ ತಲುಪಿದರು. ಅಲ್ಲಾ ಅದನ್ನೇ ಬಯಸಿದ್ದನೇನೋ! ಪ್ರವಾದಿಯವರ(ಸ) ಬಾಯಿಯಿಂದ ಹೊರಬಿದ್ದ ಅತ್ಯು ವಾಣಿಯೊಂದು ತುಫೈಲ್‌ರ ಕಿವಿಗೆ ಅಪ್ಪಳಿಸಿತು. ಅವರು ತನ್ನನ್ನೇ ಹಳಿಯುತ್ತಾ ಮನಸ್ಸಿ ಹೀಗೆಂದರು, "ತುಫೈಲ್! ನಿನಗೇನಾಗಿದೆ! ನೀನೊಬ್ಬ ಬುದ್ಧಿವಂತ ಹ ವಿವೇಕಶಾಲಿಯಲ್ಲವೇ? ಭಾಷೆಯ ಒಳಿತು-ಕೆಡುಕುಗಳನ್ನು ನೀನು ಚೆನ್ನಾಗಿ ಬಲ್ಲೆ. ಹಾಗಿರು ನೀನು ಈ ವ್ಯಕ್ತಿಯ ಮಾತನ್ನು ಕೇಳಲು ಹಿಂಜರಿಯುವುದೇಕೆ? ಅವರ ಮಾತು ಒಳ್ಳೆಯದ ಕಂಡು ಬಂದರೆ ಒಪ್ಪಿಕೊಳ್ಳಬಹುದು. ಕೆಟ್ಟದಾದರೆ ತಿರಸ್ಕರಿಸಬಹುದಲ್ಲವೇ?"

ಹೀಗೆ ಭಾವಿಸಿ ಅವರು ಅಲ್ಲೇ ನಿಂತರು. ಪ್ರವಾದಿ(ಸ) ನಮಾಝ್ ಮುಗಿಸಿ ಮರಳುವಾಗ ತುಫೈಲ್ ಕೂಡಾ ಅವರ ಹಿಂದೆಯೇ ನಡೆದರು. ಪ್ರವಾದಿ(ಸ) ಮನೆಯೆ ಪ್ರವೇಶಿಸಿದಾಗ ಅವರೂ ಒಳಗೆ ಹೋಗಿ ಪ್ರವಾದಿಯವರೊಂದಿಗೆ(ಸ) ಹೀಗೆಂ "ಓ ಮುಹಮ್ಮದ್! ತಮ್ಮ ಜನಾಂಗದವರು ನನ್ನನ್ನು ತಮ್ಮಿಂದ ದೂರವಿಡಲು ಪ್ರಯತ್ನಿಸಿ ತಮ್ಮ ಧರ್ಮದ ಕುರಿತು ಬಗೆ ಬಗೆಯ ಮಾತುಗಳನ್ನಾಡಿ ನನ್ನನ್ನು ಹೆದರಿಸಿದರು. ಅದರಿಂ ನಾನು ತಮ್ಮನ್ನೆಂದೂ ಭೇಟಿಯಾಗಲಾರೆನೆಂದು ದೃಢ ನಿರ್ಧಾರ ಕೈಗೊಂಡೆ. ತಮ್ಮ ವ ನನ್ನ ಕಿವಿಗೆ ಬೀಳದಿರಲೆಂದು ನನ್ನ ಕಿವಿಯೊಳಗೆ ಹತ್ತಿ ತುರುಕಿಸಿದೆ. ಆದರೆ ಅಲ್ಲಾಹನ ಇಚ್ಛೆ ಬೇರೆಯಾಗಿತ್ತು. ಅವನು ತಮ್ಮ ಮಾತುಗಳನ್ನು ನನ್ನ ಕಿವಿಗೆ ಬೀಳಿಸಿದನು. ನಾನು ಅವುಗ ಬಹಳವಾಗಿ ಮೆಚ್ಚಿದೆ. ಆದುದರಿಂದ ತಾವು ತಮ್ಮ ಧರ್ಮದ ಕುರಿತು ನನಗೆ ತಿಳಿಸಿ

ಪ್ರವಾದಿಯವರು(ಸ) ತಮ್ಮ ಸಂದೇಶವನ್ನು ತುಫೈಲ್‌ರ ಮುಂದಿಟ್ಟರು ಮತ್ತು ಸ ಇಖ್ಲಾಸ್(ಕುಲ್ ಹುವಲ್ಲಾಹು ಅಹದ್)ಮತ್ತು ಸೂರಃ ಅಲ್ ಫಲಕ್(ಕುಲ್ ಅವೂದು ಬಿರ

ಕ್) ಓದಿ ಕೇಳಿಸಿದರು. ತುಫೈಲ್‌ರ ಮಾತುಗಳಲ್ಲೇ ಹೇಳಬೇಕಾದರೆ, "ದೇವನಾಣೆ! ಅಂತಹ ತ್ತಮ ವಾಣಿಯನ್ನು ಮತ್ತು ಅವರ ಮಾತುಗಳಿಗಿಂತ ಉತ್ತಮ ಮಾತನ್ನು ನಾನು ಈ ದೆಂದೂ ಕೇಳಿರಲಿಲ್ಲ." ಅನಂತರ ಅಲ್ಲೇ ತುಫೈಲ್‌ರು ತಮ್ಮ ಕೈಯನ್ನು ಮುಂದೆ ಚಿದರು. ಸಾಕ್ಷ್ಯ ವಚನ(ಶಹಾದತ್ ಕಲಿಮ) ಹೇಳಿ ಇಸ್ಲಾಮಿನೊಳಗೆ ಪ್ರವೇಶಿಸಿದರು.

## ದ್ಭುತ ಬೆಳಕು

ಹ.ತುಫೈಲ್ ಬಿನ್ ಅಮ್ರ್ ದೌಸಿ(ರ) ಇಸ್ಲಾಮ್ ಸ್ವೀಕರಿಸಿದ ಬಳಿಕ ಅನೇಕ ದಿನಗಳ ಗೆ ಮಕ್ಕಾದಲ್ಲಿ ತಂಗಿದರು. ಆ ಸಮಯದಲ್ಲಿ ಇಸ್ಲಾಮಿನ ಕುರಿತು ಸಾಕಷ್ಟು ಜ್ಞಾನ ಪಾದನೆ ಮಾಡಿದರು. ಸಾಧ್ಯವಾದಷ್ಟು ಕುರ್‌ಆನ್ ಕಂಠಪಾಠ ಮಾಡಿದರು. ಅನಂತರ ರು ತಮ್ಮ ಗೋತ್ರದ ಕಡೆಗೆ ಮರಳ ಬಯಸಿದಾಗ ಪ್ರವಾದಿಯವರಲ್ಲಿ(ಸ) ಹೀಗೆಂದರು, ಲ್ಲಾಹನ ಸಂದೇಶವಾಹಕರೇ! ನಾನು ನನ್ನ ಜನಾಂಗದ ಸರದಾರನಾಗಿರುವೆನು. ಅಲ್ಲಿ ಮಾತಿಗೆ ಬೆಲೆಯಿದೆ. ನಾನೀಗ ಅಲ್ಲಿ ಹೋಗಿ ಅವರಿಗೆ ಇಸ್ಲಾಮಿನ ಸಂದೇಶ ತಬಯಸುತ್ತೇನೆ. ಅಲ್ಲಾಹನು ನನ್ನ ಸಂದೇಶ ಪ್ರಚಾರಕ್ಕೆ ಸಹಕಾರಿಯಾಗಬಲ್ಲಂತಹ ವುದಾದರೂ ಒಂದು ದೃಷ್ಟಾಂತವನ್ನು ನನಗೆ ದಯಪಾಲಿಸುವಂತಾಗಲಿ ಎಂದು ರ್ಥಿಸಿರಿ". ಆಗ ಪ್ರವಾದಿಯವರು(ಸ) ಹೀಗೆ ಪ್ರಾರ್ಥಿಸಿದರು, "ಓ ಅಲ್ಲಾಹ್! ಫೈಲ್‌ರಿಗೆ ಏನಾದರೂ ದೃಷ್ಟಾಂತವನ್ನು ದಯಪಾಲಿಸು."

ತರುವಾಯ ಅವರು ತಮ್ಮ ಗೋತ್ರದ ಕಡೆಗೆ ಪ್ರಯಾಣ ಬೆಳೆಸಿದರು. ಅವರು ಊರಿಗೆ ತ್ತರವಾಗುತ್ತಿದ್ದಂತೆ ಒಂದು ಉನ್ನತ ಸ್ಥಳಕ್ಕೆ ಮುಟ್ಟಿದಾಗ ಅವರ ಎರಡೂ ಕಣ್ಣುಗಳ ುವೆ ದೀಪದಂತಹ ಒಂದು ಬೆಳಕು ಕಾಣಿಸಿತು. ಆಗ ಅವರು ಪ್ರಾರ್ಥಿಸಿದರು, "ದೇವಾ! ನ್ನು ನನ್ನ ಮುಖದ ಹೊರತು ಬೇರಾವುದೇ ಸ್ಥಳಕ್ಕೆ ವರ್ಗಾಯಿಸು. ಏಕೆಂದರೆ ಅದನ್ನು ೋಡಿದ ನನ್ನ ಜನತೆಯು ಇದು ನಾನು ನನ್ನ ಪೂರ್ವಜರ ಧರ್ಮವನ್ನು ತೊರೆದುದಕ್ಕಾಗಿ ಯಾಗಿರಬಹುದೆಂದು ಭಾವಿಸಿಯಾರು". ಆಗ ಅದು ಅವರ ಊರುಗೋಲಿನ ತುದಿಗೆ ತು. ಅವರು ಬೆಟ್ಟದಿಂದ ಕೆಳಗಿಳಿದು ಬರುವಾಗ ಆ ಬೆಳಕು ತೇಲುತ್ತಿರುವ ದೀಪದಂತೆ ಚರಿಸುತ್ತಿತ್ತು. ಅವರು ತಮ್ಮ ಗೋತ್ರದ ಬಳಿಗೆ ತಲುಪಿದಾಗ ವೃದ್ಧಾಪ್ಯಕ್ಕೆ ತಲುಪಿದ ರ ತಂದೆ ಅವರ ಬಳಿಗೆ ಬಂದರು. ತುಫೈಲ್ ಅವರೊಡನೆ, "ನನ್ನ ಮುಂದಿನಿಂದ ಯಿರಿ. ಈಗ ನನಗೂ ತಮಗೂ ಯಾವುದೇ ಸಂಬಂಧವಿಲ್ಲ" ಎಂದು ಹೇಳಿದರು. ಇದನ್ನು ಿದ ತಂದೆ, "ಇದೇನು ಹೇಳುತ್ತಿ ಮಗನೇ" ಎಂದು ಕೇಳಿದರು.

"ನಾನು ಮುಸ್ಲಿಮ್ ಆಗಿದ್ದೇನೆ. ನಾನು ಮುಹಮ್ಮದ್‌ರ(ಸ) ಧರ್ಮವನ್ನು ಅನುಸರಿಸ ಡಗಿದ್ದೇನೆ" ತುಫೈಲ್ ಉತ್ತರಿಸಿದರು.

"ಮಗನೇ! ನಾನೂ ಆ ಧರ್ಮವನ್ನು ಸ್ವೀಕರಿಸುತ್ತೇನೆ".

"ಹಾಗಾದರೆ, ನೀವು ಹೋಗಿ ಸ್ನಾನ ಮಾಡಿ ಶುದ್ಧ ವಸ್ತ್ರ ಧರಿಸಿ ಬನ್ನಿ. ನಾನು ಸ್ವೀಕರಿಸಿದಂತಹ ರ್ಮವನ್ನು ನಿಮಗೂ ಕಲಿಸುತ್ತೇನೆ."

ತುಫೈಲ್‌ರ ತಂದೆ ಹೋಗಿ ಸ್ನಾನಮಾಡಿ ಬಟ್ಟೆ ಬದಲಾಯಿಸಿ ಬಂದರು. ‍ತಂದೆಗೆ ಇಸ್ಲಾಮಿನ ವಿಷಯ ತಿಳಿಸಿದರು. ಅವರು ಸಂತೋಷದಿಂದ ಅದನ್ನು ಸ್ವೀಕರಿಸಿ

ತರುವಾಯ ತುಫೈಲ್‌ರ ಪತ್ನಿ ಅವರ ಬಳಿಗೆ ಬಂದರು. ಅವರು ಪತ್ನಿಯೊಂ "ನೀನು ನನ್ನ ಮುಂದಿನಿಂದ ತೊಲಗು. ನನಗೂ ನಿನಗೂ ಯಾವುದೇ ಸಂಬಂಧವಿಲ್ಲ" ವೆಂ

"ನನ್ನ ತಂದೆ-ತಾಯಿಗಳು ನಿಮಗೆ ಅರ್ಪಿತ, ಅದೇಕೆ ಹಾಗೆನ್ನುತ್ತೀರಿ" ಆಶ್ಚರ್ಯದಿಂದ ಕೇಳಿದರು.

"ನಾನು ಇಸ್ಲಾಮ್ ಸ್ವೀಕರಿಸಿದ್ದೇನೆ. ಮುಹಮ್ಮದ್‌ರ(ಸ) ಧರ್ಮವನ್ನು ಅನುಸರಿಸುತ್ತಿ ಇಸ್ಲಾಮ್ ನನ್ನ ಮತ್ತು ನಿನ್ನ ಮಧ್ಯೆ ಆಳವಾದ ಕಂದರವನ್ನು ಸೃಷ್ಟಿಸಿದೆ."

"ಯಾವ ಧರ್ಮ ನಿಮ್ಮದಾಗಿದೆಯೋ ಅದು ನನ್ನ ಧರ್ಮವೂ ಆಗಿದೆ."

"ಹಾಗಾದರೆ ಹೋಗಿ ಸ್ನಾನ ಮಾಡಿ ಬಾ" ಅವರು ಹೋಗಿ ಸ್ನಾನ ಮಾಡಿ ಬಂ ತುಫೈಲ್, ಅವರ ಮುಂದೆ ಇಸ್ಲಾಮಿನ ಸಂದೇಶವನ್ನಿಟ್ಟರು. ಅವರು ಕೂಡಲೇ ಅ ಸ್ವೀಕರಿಸಿದರು. ತರುವಾಯ ತುಫೈಲ್ ತಮ್ಮ ಗೋತ್ರದ ಜನರ ಮುಂದೆ ಇಸ್ಲಾ ಸಂದೇಶವನ್ನಿಟ್ಟರು. ಆದರೆ ಹ.ಅಬೂ ಹುರೈರಾರ(ರ) ಹೊರತು ಉಳಿದವರು ಇಸ್ಲಾ ಸ್ವೀಕರಿಸಲು ಹಿಂಜರಿದರು.

ಅನಂತರ ತುಫೈಲ್‌ರು ಅಬೂ ಹುರೈರಾರೊಂದಿಗೆ ಪ್ರವಾದಿಯವರ(ಸ) ಸ ಹೋದರು. ಅವರನ್ನು ಕಂಡಾಗ ಪ್ರವಾದಿ(ಸ), "ನಿಮ್ಮ ಗೋತ್ರದವರು ಹೇಗಿದ್ದಾರೆ" ಎ ಕೇಳಿದರು. ತುಫೈಲ್ ಹೇಳಿದರು, "ಅವರ ಮನದೊಳಗಿನ ಅಂಧಕಾರ ಇನ್ನೂ ತೊಲ ಅದು ಸತ್ಯ ಸ್ವೀಕಾರಕ್ಕೆ ಅಡ್ಡಿಯಾಗಿದೆ. ಅವರು ಸತ್ಯನಿಷೇಧದಲ್ಲಿ ಕಠೋರರಾಗಿದ್ದಾರೆ. ಅ ಬಂಡಾಯ ಮತ್ತು ಧಿಕ್ಕಾರದ ನೀತಿಯನ್ನು ಅನುಸರಿಸುತ್ತಿದ್ದಾರೆ" ಇದನ್ನು ಕೇಳಿ ಪ್ರವಾ ಎದ್ದು ಹೋಗಿ ವುಝೂ ಮಾಡಿ ಬಂದು ಪ್ರಾರ್ಥನೆಗಾಗಿ ಎರಡೂ ಕೈಗಳನ್ನೆತ್ತಿದರ

ಹ.ಅಬೂ ಹುರೈರಾ ಹೇಳುತ್ತಾರೆ, "ಪ್ರವಾದಿಯವರ(ಸ) ಈ ಸ್ಥಿತಿಯನ್ನು ಕ ಅವರೆಲ್ಲಾದರೂ ನಮ್ಮ ಗೋತ್ರದ ಜನರಿಗೆ ಶಾಪ ಹಾಕುತ್ತಾರೋ ಮತ್ತು ಅದರಿಂದ ಅ ನಾಶ ಹೊಂದುವರೋ ಎಂದು ನಾನು ಹೆದರಿದೆ. ಆಗ ನನಗರಿವಿಲ್ಲದಂತೆ ನನ್ನ ಬಾಯಿಯಿಂದ, 'ನನ್ನ ಜನಾಂಗವೇ' ಎಂಬ ಉದ್ಗಾರ ಹೊರಟಿತು. ಪ್ರವಾದಿ(ಸ) ಶಾಪ ಹಾಕುವ ಬದಲು, ಅಲ್ಲಾಹನೇ ದೌಸ್ ಗೋತ್ರದವರಿಗೆ ಸನ್ಮಾ ತೋರಿಸು... ಎಂದು ಪ್ರಾರ್ಥಿಸಿದರು."

ಆ ಬಳಿಕ ಪ್ರವಾದಿ(ಸ) ತುಫೈಲ್‌ರತ್ತ ತಿರುಗಿ, "ನಿಮ್ಮ ಗೋತ್ರದವರ ಬಳಿಗೆ ಹೋ ಅವರೊಂದಿಗೆ ನಯವಾಗಿ ವರ್ತಿಸಿರಿ ಮತ್ತು ಅವರ ಮುಂದೆ ಇಸ್ಲಾಮಿನ ಸಂದೇಶವನ್ನಿ ಎಂದು ಹೇಳಿದರು.

ತರುವಾಯ ತುಫೈಲ್‌ರು ತಮ್ಮ ಗೋತ್ರಕ್ಕೆ ಮರಳಿ ಅಲ್ಲೇ ಬಿಡಾರ ಹೂಡಿ ಅವರಿಗೆ ಇಸ್ಲಾಮಿನ ಸಂದೇಶ ನೀಡತ್ತಾ ಇದ್ದರು. ಕೊನೆಗೆ ಪ್ರವಾದಿ(ಸ) ಮಕ್ಕಾದಿ ಹಿಜ್ರತ್ ಮಾಡಿ ಮದೀನಾಕ್ಕೆ ಆಗಮಿಸಿದರು. ಬದ್ರ್, ಉಹುದ್ ಮತ್ತು ಕಂದಕ್ ಯುದ್ಧ

ರ ಹಿಂದೆ ಇನ್ನೊಂದರಂತೆ ನಡೆದುವು. ತುಫೈಲ್(ರ) ಪ್ರವಾದಿಯವರನ್ನು(ಸ) ಮದೀನಾದಲ್ಲಿ ಯಾಗುವ ವೇಳೆಗಾಗಲೇ ದೌಸ್ ಗೋತ್ರದ ಎಂಭತ್ತು ಕುಟುಂಬಗಳು ಇಸ್ಲಾಮ್‌ನ ಳೊಳಗೆ ಸೇರಿ ಇಸ್ಲಾಮಿನ ಬೋಧನೆಗಳನ್ನು ಕರಗತ ಮಾಡಿ ಆಗಿತ್ತು. ಪ್ರವಾದಿಯವರಿಗೆ(ಸ) ನ್ನು ನೋಡಿ ಬಹಳ ಸಂತೋಷವಾಯಿತು. ಖೈಬರ್ ಯುದ್ಧದಲ್ಲಿ ದೊರೆತ ಮತ್(ಸಮರಾರ್ಜಿತ) ಸೊತ್ತಿನಿಂದ ಪ್ರವಾದಿ(ಸ) ದೌಸ್ ಗೋತ್ರದವರಿಗೂ ಪಾಲು ದರು. ಅವರು ಪ್ರವಾದಿಯವರೊಡನೆ(ಸ) ಹೀಗೆಂದರು, "ಪ್ರವಾದಿವರ್ಯರೇ! ತಾವು ನ್ನು ಎಲ್ಲ ಯುದ್ಧಗಳ ವೇಳೆಯೂ ಸೇನಾ ತುಕಡಿಯಲ್ಲಿ ಸೇರಿಸಿರಿ. ನಮಗೆ 'ಮಬ್ರೂರ್' ಸಂಕೇತವನ್ನು ನಿಶ್ಚಯಿಸಿರಿ."

## ಸು ನನಸಾಯಿತು

ಅನಂತರ ತುಫೈಲ್(ರ) ಪ್ರವಾದಿಯವರ(ಸ) ಜೊತೆಯಲ್ಲೇ ವಾಸಿಸತೊಡಗಿದರು. ದಿಯವರಿಗೆ(ಸ) ಮಕ್ಕಾ ವಿಜಯ ಪ್ರಾಪ್ತವಾದಾಗ, ತುಫೈಲ್(ರ) ಪ್ರವಾದಿಯವರ(ಸ) ಗೆ ಹೋಗಿ 'ದುಲ್‌ಕಫೀನ್' ವಿಗ್ರಹವನ್ನು ಬೆಂಕಿಗಾಹುತಿ ಮಾಡಲು ತನ್ನನ್ನು ಕಳುಹಿಸಿರಿ ು ಬಿನ್ನವಿಸಿದರು. ಪ್ರವಾದಿ(ಸ) ಅವರಿಗೆ ಅದರ ಅನುಮತಿ ನೀಡಿದರು. ಅವರು ತಮ್ಮ ತ್ರದ ಒಂದು ಸೇನಾ ತುಕಡಿಯೊಂದಿಗೆ ಹೋಗಿ ವಿಗ್ರಹಕ್ಕೆ ಬೆಂಕಿ ಹಚ್ಚಬೇಕೆಂದಾಗ ಯರೂ ಮಕ್ಕಳೂ ಅಲ್ಲಿ ಅವರ ಸುತ್ತ ನೆರೆದರು. ವಿಗ್ರಹಕ್ಕೇನಾದರೂ ಹಾನಿಯುಂಟಾದರೆ ಶದಿಂದ ಸಿಡಿಲೆರಗಿ ಅವರನ್ನು ನಾಶಪಡಿಸುವುದೆಂದು ಅವರೆಲ್ಲ ಕಣ್ಣು ಕಣ್ಣು ಬಿಟ್ಟು ಡುತ್ತಿದ್ದರು. ಆದರೆ ತುಫೈಲ್(ರ) ನಿರ್ಭೀತಿಯಿಂದ ಅವರ ಎದುರಲ್ಲೇ ಮುಂದುವರಿಯುತ್ತಾ ಕ್ಕೆ ಬೆಂಕಿ ಹಚ್ಚಿದರು. ಆಗ ಅವರು ಈ ರೀತಿ ಹೇಳಿದರು, "ದುಲ್ ಕಫೀನ್! ನಾನು ಆರಾಧಕನಲ್ಲ. ನಮ್ಮ ಜನ್ಮವು ನಿನ್ನ ಜನ್ಮಕ್ಕಿಂತ ಶ್ರೇಷ್ಠವಾದುದು. ನಾನು ನಿನ್ನ ಯದೊಳಕ್ಕೆ ಬೆಂಕಿ ತುಂಬಿದೆ."

ವಿಗ್ರಹವು ಬೆಂಕಿಯಲ್ಲಿ ಉರಿದು ಭಸ್ಮವಾಗುವುದರೊಂದಿಗೆ ದೌಸ್‌ಗೋತ್ರದಲ್ಲಿ ುಳಿದಿದ್ದ ಶಿರ್ಕ್(ಬಹುದೇವಾರಾಧನೆ)ನ ಅಂಶ ಕೂಡಾ ನೆಲಕಚ್ಚಿತು. ಸಂಪೂರ್ಣ ತ್ರ ಇಸ್ಲಾಮಿನೊಳಗೆ ಪ್ರವೇಶಿಸಿತು.

ಅನಂತರ ಪ್ರವಾದಿಯವರ(ಸ) ನಿಧನದ ವರೆಗೂ ತುಫೈಲ್(ರ) ಅವರ ಜೊತೆಯಲ್ಲೇ ರು. ಹ.ಅಬೂಬಕರ್(ರ) ಖಲೀಫರಾದಾಗ ತುಫೈಲ್ ತಮ್ಮನ್ನೂ ತಮ್ಮ ಖಡ್ಗವನ್ನೂ ್ಮ ಪುತ್ರನನ್ನೂ ಖಲೀಫರ ವಿಧೇಯತೆಗೆ ಅರ್ಪಿಸಿದರು. ಮುರ್ತದ್ದ್(ಧರ್ಮಭ್ರಷ್ಟರು) ್ತು ಮಿಥ್ಯ ಪ್ರವಾದಿಯ ಅನುಯಾಯಿಗಳೊಂದಿಗೆ ಯುದ್ಧ ಆರಂಭವಾದಾಗ ಪ್ರವಾದಿತ್ವದ ್ಯವಾದಿಯಾಗಿದ್ದ ಮುಸೈಲಿಮನ ವಿರುದ್ಧ ಹೋರಾಡಲು ಹೊರಟ ತುಕಡಿಯ ಚೂಣಿಯಲ್ಲಿ ತುಫೈಲ್ ಇದ್ದರು. ಯಮಾಮಕ್ಕೆ ಪ್ರಯಾಣ ಹೊರಟಾಗ ದಾರಿ ಮಧ್ಯೆ ರು ಒಂದು ಕನಸು ಕಂಡರು.ಅವರು ತಮ್ಮ ಸಂಗಡಿಗರಲ್ಲಿ ಆ ಸ್ವಪ್ನದ ವ್ಯಾಖ್ಯಾನ ುವಂತೆ ಕೇಳಿಕೊಂಡರು. ಸಂಗಡಿಗರು ಕನಸಿನ ವಿವರವನ್ನು ಕೇಳಿದಾಗ, ತುಫೈಲ್

ಹೀಗೆಂದರು- "ನನ್ನ ತಲೆ ಬೋಳಿಸಲಾಗಿತ್ತು. ನನ್ನ ಬಾಯಿಯಿಂದ ಒಂದು ಪಕ್ಷಿ ಹೊರಟ ಓರ್ವ ಹೆಂಗಸು ನನ್ನನ್ನು ತನ್ನ ಹೊಟ್ಟೆಯಲ್ಲಿ ಸೇರಿಸಿಕೊಂಡಳು. ನನ್ನ ಪುತ್ರ ನನ್ನ ಹಿಂಬಾಲಿಸುತ್ತಿದ್ದನು. ಆದರೆ ನಮ್ಮ ಮಧ್ಯೆ ಒಂದು ತಡೆ ನಿರ್ಮಿಸಲ್ಪಟ್ಟಿತು. ಆದುದರಿ ಅವನಿಗೆ ಹೆಂಗಸಿನ ಹೊಟ್ಟೆಯೊಳಗೆ ಸೇರಲಾಗಲಿಲ್ಲ". ಇದು ಬಹಳ ಉತ್ತಮ ಕನಸೇ ಸಂಗಡಿಗರು ಹೇಳಿದರು. ಆಗ ತುಫೈಲ್ ಹೀಗೆಂದರು-

"ನನ್ನ ಮಟ್ಟಿಗೆ ಸ್ವಪ್ನ ಫಲ ಹೀಗಿದೆ- ತಲೆ ಬೋಳಿಸಲ್ಪಡುವುದೆಂದರೆ ತಲೆಯ ಕಡಿಯಲಾಗುವುದು. ಬಾಯಿಯಿಂದ ಹೊರಟ ಪಕ್ಷಿಯು ನನ್ನ ಪ್ರಾಣವಾಗಿರುವುದು. ನನ್ನ ತನ್ನ ಹೊಟ್ಟೆಯಲ್ಲಿ ಸೇರಿಸಿದ ಹೆಂಗಸು ನನ್ನ ಗೋರಿಯಾಗಿರುವುದು ಮತ್ತು ನನ್ನನ್ನು ಅದು ದಫನ ಮಾಡಲಾಗುವುದು. ಬಹುಶಃ ನಾನು ಹುತಾತ್ಮನಾಗುವೆನು. ನನ್ನನ್ನು ನನ್ನ ಹಿಂಬಾಲಿಸುವುದೆಂದರೆ ಅವನೂ ನನ್ನಂತೆ ಹುತಾತ್ಮನಾಗುವ ಬಯಕೆಯೊಂದಿಗೆ ಜೊತೆಯಲ್ಲಿ ಹೋರಾಡುವನು. ಆದರೆ ಅವನು ಕೆಲವು ದಿನಗಳ ನಂತರ ಹುತಾತ್ಮನಾಗುವ

ಯಮಾಮ ಯುದ್ಧದಲ್ಲಿ ತುಫೈಲ್(ರ) ವೀರಾವೇಶದಿಂದ ಹೋರಾಡುತ್ತಾ ಬಹಳ ಗಾಯಗೊಂಡು ಬಿದ್ದುಬಿಟ್ಟರು. ಗಾಯಗಳ ನೋವು ತಾಳಲಾರದೆ ಹುತಾತ್ಮರಾದರು. ಆ ಅವರ ಪುತ್ರ ಯುದ್ಧ ಮಾಡುತ್ತಲೇ ಇದ್ದರು. ಯುದ್ಧದಲ್ಲಿ ಅವರ ಬಲಗೈ ಕಡಿಯಿ ಅವರು ತಮ್ಮ ತಂದೆಯ ಪಾರ್ಥಿವ ಶರೀರವನ್ನೂ ಕಡಿದು ಹೋದ ತನ್ನ ಕೈಯ ಯಮಾಮದಲ್ಲೇ ದಫನ ಮಾಡಿ ಮದೀನಾಕ್ಕೆ ಮರಳಿದರು.

ಹ.ಉಮರ್‌ರ(ರ) ಆಡಳಿತಾವಧಿಯಲ್ಲಿ ಒಮ್ಮೆ ಅಮ್ರ್‌ಬಿನ್ ತುಫೈಲ್(ರ) ಖಲೀಫ ಭೇಟಿಯಾಗಲು ಹೋದರು. ಅದೇ ಸಂದರ್ಭದಲ್ಲಿ ಹ. ಉಮರ್‌ರಿಗೆ(ರ) ಊಟದ ಹ ಹಾಸಲಾಗಿತ್ತು. ಊಟಕ್ಕೆ ಇನ್ನೂ ಕೆಲವು ಗಣ್ಯರಿದ್ದರು. ಹ.ಉಮರ್(ರ) ಎಲ್ಲರನ್ನೂ ಊ ಕರೆದರು. ಆದರೆ ಹ.ಅಮ್ರ್(ರ) ಊಟಕ್ಕೆ ಕುಳಿತುಕೊಳ್ಳಲಿಲ್ಲ. ಅವರು ಒಂದು ಬದಿಗೆ ಸರಿ ನಿಂತರು. ಆಗ ಹ.ಉಮರ್(ರ) ಹೀಗೆಂದರು, "ನೀವೇನು ಊಟಕ್ಕೆ ಕುಳಿತುಕೊಳ್ಳಲಿ ಬಹುಶಃ ನಿಮ್ಮ ಕಡಿದು ಹೋದ ಕೈಯಿಂದಾಗಿ ನಿಮಗೆ ನಾಚಿಕೆಯಾಗುತ್ತಿರಬಹುದ ಹ.ಅಮ್ರ್ ಹೌದೆಂದರು. ಆಗ ಹ. ಉಮರ್ ಹೇಳಿದರು, "ಅಲ್ಲಾಹನಾಣೆ! ನೀವು ನಿ ಕಡಿದ ಕೈಯನ್ನು ಎಲ್ಲಿಯ ವರೆಗೆ ಊಟದ ಬಟ್ಟಲಿಗೆ ಹಾಕುವುದಿಲ್ಲವೋ ಅಲ್ಲಿಯ ವ ನಾನು ಈ ಊಟದ ರುಚಿ ನೋಡಲಾರೆ. ಅಲ್ಲಾಹನಾಣೆ! ಇಲ್ಲಿ ಕುಳಿತಿರುವವರ ಪೈಕಿ ನಿ ಹೊರತು ಯಾರ ದೇಹದ ಒಂದು ಅಂಗವೂ ಸ್ವರ್ಗ ಪ್ರವೇಶಿಸಲಿಲ್ಲ."

ಹ.ಅಮ್ರ್ ಬಿನ್ ತುಫೈಲ್ ತಮ್ಮ ತಂದೆಯಿಂದ ಅಗಲಿದ ನಂತರ ಹುತಾತ್ಮನಾಗ ಬಯಕೆಯಲ್ಲಿ ಆ ಸಂದರ್ಭಕ್ಕಾಗಿ ನಿರೀಕ್ಷಿಸುತ್ತಿದ್ದರು. ಕೊನೆಗೂ ಯರ್ಮೂಕ್ ಯುದ್ಧದ ಬಹಳ ವೀರಾವೇಶದಿಂದ ಹೋರಾಡಿ ವೀರ ಮರಣವನ್ನಪ್ಪಿದರು. ಈ ಅಭಿಲಾಷೆಯ ಅವರು ತನ್ನ ತಂದೆ ತುಫೈಲ್‌ರಿಂದ ಪಡೆದಿದ್ದರು. ಹ. ತುಫೈಲ್‌ರ ಮೇಲೆ ಅಲ್ಲಾಹ ಸಂತುಷ್ಟನಾಗಲಿ. ಅವರು ಸ್ವತಃ ಹುತಾತ್ಮರು. ಓರ್ವ ಹುತಾತ್ಮನ ತಂದೆಯೂ ಹೌ

# ಹ. ಅಬ್ದುಲ್ಲಾ ಬಿನ್ ಹುದಾಫ(ರ)

## ವಾದಿ ಪತ್ರದೊಂದಿಗೆ ಕಿಸ್ರಾನ ಆಸ್ಥಾನದಲ್ಲಿ

ಹ. ಅಬ್ದುಲ್ಲಾ ಬಿನ್ ಹುದಾಫ ಸಹಮಿ(ರ) ಇತಿಹಾಸದಲ್ಲಿ ಅಮರರಾದ ಕೆಲವೇ ದಿ ಸಹಾಬಿಗಳ ಪೈಕಿ ಒಬ್ಬರು. ಅವರು ಪ್ರವಾದಿಯವರ(ಸ) ಸಮಕಾಲೀನರಾಗಿದ್ದ ಎರಡು ತ್ ಶಕ್ತಿಗಳಾದ ಇರಾನ್‌ನ ಚಕ್ರವರ್ತಿ ಕಿಸ್ರಾ ಮತ್ತು ರೋಮ್‌ನ ಚಕ್ರವರ್ತಿ ಕೈಸರ್‌ರನ್ನು ಿ ಮಾಡಿದ ಕೀರ್ತಿಗೆ ಪಾತ್ರರಾದರು. ಅವರೊಂದಿಗೆ ಅವರ ಭೇಟಿಯ ಕಥೆಯು ಇತಿಹಾಸ ದ್ಧವಾಗಿದೆ.

ಇರಾನ್‌ನ ಚಕ್ರವರ್ತಿ ಕಿಸ್ರಾರನ್ನು ಅವರು ಭೇಟಿಯಾದದ್ದು ಹಿ.ಶ. 6ರಲ್ಲಿ. ಾದಿಯವರು(ಸ) ತಮ್ಮ ಕೆಲವು ಸಹಾಬಿಗಳ ಮೂಲಕ ಅರಬೇತರ ಅರಸರಿಗೆ ಪತ್ರಗಳನ್ನು ನಿಸಿದ್ದರು. ಅವುಗಳ ಮೂಲಕ ಇಸ್ಲಾಮಿನ ಸಂದೇಶವನ್ನು ಅವರಿಗೆ ತಲಪಿಸುವುದು ಅದರ ಖ್ಯ ಉದ್ದೇಶವಾಗಿತ್ತು. ಪ್ರವಾದಿಯವರು(ಸ) ಈ ಅಭಿಯಾನದಿಂದಾಗಿ ಬರಲಿರುವ ಯವನ್ನು ಮೊದಲೇ ಅಂದಾಜಿಸಿದ್ದರು. ಏಕೆಂದರೆ ತಮ್ಮ ರಾಯಭಾರಿಗಳು ಹಿಂದೆಂದೂ ೇಗದಂತಹ ಅತಿ ದೂರದ ಪ್ರದೇಶಗಳಿಗೆ ಅವರನ್ನು ಕಳಿಸಬೇಕಾಗಿತ್ತು. ಅಲ್ಲದೆ ಅವರಿಗೆ ್ಲನ ಭಾಷೆ ಮತ್ತು ಅಲ್ಲಿನ ರಾಜರುಗಳ ಸ್ವಭಾವ ತೀರಾ ಅಪರಿಚಿತವಾಗಿತ್ತು. ಅಷ್ಟೇ ್ಲ, ಅವರಿಗೆ ತಮ್ಮ ಪೂರ್ವಧರ್ಮಗಳನ್ನು ತ್ಯಜಿಸಿ ತಮ್ಮ ಅಧಿಕಾರ ಗದ್ದುಗೆಗಳನ್ನು ಟ್ಟು ನಿಕಟಪೂರ್ವದಲ್ಲಿ ತಮ್ಮ ಅಧೀನವಿದ್ದಂತಹ ಜನಾಂಗದ ಧರ್ಮವನ್ನು ಲಂಬಿಸಬೇಕೆಂಬ ಕರೆ ನೀಡಬೇಕಾಗಿತ್ತು. ವಾಸ್ತವದಲ್ಲಿ ಇದೊಂದು ಅತ್ಯಪಾಯಕಾರಿ ಯಾಣವಾಗಿತ್ತು. ಇದು ಮೃತ್ಯು ದವಡೆಯೊಳಗೆ ಹೋಗುವುದಕ್ಕೆ ಹಾಗೂ ಅಲ್ಲಿಂದ ವಂತವಾಗಿ ಪುನರ್ಜನ್ಮ ಪಡೆಯುವುದಕ್ಕೆ ಸಮಾನವಾಗಿತ್ತು. ಈ ಎಲ್ಲ ಅಪಾಯಗಳನ್ನು ರ್ವಭಾವಿಯಾಗಿ ಮನಗಂಡ ಪ್ರವಾದಿಯವರು(ಸ) ಸಮಾಲೋಚನೆಗಾಗಿ ಸಹಾಬಿಗಳನ್ನು ಟ್ಟುಗೂಡಿಸಿದರು. ಅವರ ಮುಂದೆ ಭಾಷಣ ಮಾಡುತ್ತಾ, "ನಾನು ನಿಮ್ಮ ಪೈಕಿ ಕೆಲವರನ್ನು ಬೇತರ ರಾಜರುಗಳ ಬಳಿಗೆ ರಾಯಭಾರಿಯಾಗಿ ಕಳಿಸಲಿದ್ದೇನೆ. ಈ ಬಗ್ಗೆ ಈಸಾರೊಂದಿಗೆ(ಅ) ೇ ಇಸ್ರಾಈಲರು ಭಿನ್ನಾಭಿಪ್ರಾಯ ತಾಳಿದಂತೆ ನನ್ನೊಂದಿಗೆ ಭಿನ್ನಾಭಿಪ್ರಾಯ ತಾಳಬಾರದು" ದರು. ಇದಕ್ಕೆ ಉತ್ತರವಾಗಿ ಸಹಾಬಿಗಳು, "ಅಲ್ಲಾಹನ ಸಂದೇವಾಹಕರೇ! ತಾವು ್ಮನ್ನು ಎಲ್ಲಿಗೆ ಬೇಕಾದರೂ ಕಳಿಸಿ. ನಾವು ತಮ್ಮ ಸಂದೇಶವನ್ನು ಸಸಂತೋಷ

ಮುಟ್ಟಿಸಬಲ್ಲೆವು" ಎಂದರು.

ಪ್ರವಾದಿಯವರು(ಸ) ಅರೇಬಿಯಾದ ರಾಜರುಗಳಿಗೂ ಅರಬೇತರ ಚಕ್ರವರ್ತಿಗಳಿ ತಮ್ಮ ಪತ್ರಗಳನ್ನು ತಲಪಿಸಲಿಕ್ಕಾಗಿ ಆರು ಮಂದಿ ಸಹಾಬಿಗಳನ್ನು ಆಯ್ಕೆ ಮಾಡಿದ ಅವರಲ್ಲಿ ಹ. ಅಬ್ದುಲ್ಲಾ ಬಿನ್ ಹುದಾಫ ಸಹಮೀ(ರ) ಕೂಡಾ ಒಬ್ಬರಾಗಿದ್ದರು. ಅವ ಇರಾನ್‌ನ ದೊರೆ ಕಿಸ್ರಾನ ಬಳಿಗೆ ಕಳಿಸಲು ಆರಿಸಲಾಗಿತ್ತು.

ಹ. ಅಬ್ದುಲ್ಲಾ ಬಿನ್ ಹುದಾಫ(ರ) ಪ್ರಯಾಣಕ್ಕಾಗಿ ಒಂಟೆಯನ್ನು ಸಿದ್ಧಗೊಳಿಸಿದ ಪತ್ನಿ-ಮಕ್ಕಳಿಂದ ಬೀಳ್ಕೊಂಡು ಒಬ್ಬಂಟಿಯಾಗಿ ತನ್ನ ಗುರಿಯತ್ತ ಪ್ರಯಾಣ ಬೆಳೆಸಿದ ದಾರಿಯ ಏರು ತಗ್ಗುಗಳನ್ನು ಹಿಂದೆ ಹಾಕಿ ಪ್ರಯಾಣದ ಸಂಕಷ್ಟಗಳನ್ನು ಸಹಿಸಿಕೊ ಅವರು ಇರಾನ್ ತಲಪಿದರು. ರಾಜ ದರ್ಬಾರಿಗೆ ಬಂದು ತಾನು ಕಿಸ್ರಾರ ಭೇಟಿಯಾಗಬೇಕಾಗಿದೆಯೆಂದು ಕಾವಲು ಭಟರಿಗೆ ತಿಳಿಸಿದರು. ಜೊತೆಗೆ, ದೊರೆಗೆ ತಂದಿರುವುದಾಗಿಯೂ ತಿಳಿಸಿದರು. ಈ ಸುದ್ದಿ ಸಿಕ್ಕಿದ ಕೂಡಲೇ ರಾಜ ದರ್ಬಾ ಸಿದ್ಧಗೊಳಿಸಲು ಮತ್ತು ಆಸ್ಥಾನದಲ್ಲಿ ತನ್ನ ಎಲ್ಲಾ ಉನ್ನತ ಅಧಿಕಾರಿಗಳು ಹಾಜರಾಗ ಕಿಸ್ರಾ ಆಜ್ಞಾಪಿಸಿದ. ಎಲ್ಲಾ ಸಿದ್ಧತೆಗಳೂ ಆದ ಬಳಿಕ ಅಬ್ದುಲ್ಲಾ ಬಿನ್ ಹುದಾಫರ ಆಸ್ಥಾನಕ್ಕೆ ಕರೆಸಿದ. ಆ ಸಂದರ್ಭದಲ್ಲಿ ಅವರ ಮೈ ಮೇಲೆ ಒಂದು ಸಾಮಾನ್ಯ ಕಂ ಮತ್ತು ನಿಲುವಂಗಿ ಮಾತ್ರ ಇತ್ತು. ಅವರೋರ್ವ ಸರಳ ಅರಬ್ ಗ್ರಾಮೀಣನ ತೋರುತ್ತಿದ್ದರು. ಆದರೆ ಅವರು ನೀಳ ಕಾಯದ ದೊಡ್ಡ ತಲೆಯ ವ್ಯಕ್ತಿಯಾಗಿದ್ದರು. ಅ ಮನದಲ್ಲಿ ಇಸ್ಲಾಮಿನ ಮೇಲ್ಮೆಯ ಸ್ಫೂರ್ತಿ ತುಂಬಿತ್ತು.

ಅಬ್ದುಲ್ಲಾ ಅವರು ತನ್ನತ್ತ ಸಾಗುತ್ತಾ ಬರುತ್ತಿರುವುದನ್ನು ಕಂಡ ಕಿಸ್ರಾ ಆ ಪತ್ರವ ಅವರ ಕೈಯಿಂದ ತೆಗೆದುಕೊಳ್ಳುವಂತೆ ಆಸ್ಥಾನಿಕನಿಗೆ ಸನ್ನೆ ಮಾಡಿದನು. ಆಗ ಹ. ಅಬ್ದು ಹೇಳಿದರು, "ಈ ಪತ್ರವನ್ನು ನಿಮ್ಮ ಕೈಯಲ್ಲಿ ಕೊಡುವಂತೆ ಪ್ರವಾದಿಯವರ(ಸ) ಅಪ್ಪಣೆಯಾಗಿ ನಾನು ಅವರ ಮಾತನ್ನು ಮೀರಲಾರೆ." ಕಿಸ್ರಾ ಆಸ್ಥಾನಿಕರೊಂದಿಗೆ, "ಅವನನ್ನು ಬಿಡಿ. ನ ಬಳಿ ಬರಲಿ" ಎಂದನು. ಹ. ಅಬ್ದುಲ್ಲಾ ನೇರವಾಗಿ ಕಿಸ್ರಾನ ಬಳಿಗೆ ಹೋಗಿ ಪತ್ರವ ಅವನ ಕೈಯಲ್ಲಿಟ್ಟರು. ಅವನು ಹಿಯರಾದ ನಿವಾಸಿಯಾಗಿದ್ದ ತನ್ನ ಅರಬ್ ಕಾರ್ಯದರ್ಶಿಯ ಕರೆದು ತನ್ನ ಮುಂದೆಯೇ ಪತ್ರವನ್ನು ಒಡೆದು ಓದುವಂತೆ ಆಜ್ಞಾಪಿಸಿದ. ಕಾರ್ಯದ ಪತ್ರವನ್ನೋದ ತೊಡಗಿದ-

"ಪರಮ ದಯಾಮಯನೂ ಕರುಣಾನಿಧಿಯೂ ಆದ ಅಲ್ಲಾಹನ ನಾಮದಿಂ ಅಲ್ಲಾಹನ ಸಂದೇಶವಾಹಕ ಮುಹಮ್ಮದ್‌ರ ವತಿಯಿಂದ ಇರಾನ್‌ನ ಚಕ್ರವರ್ತಿ ಕಿಸ್ರಾನಿ ಸನ್ಮಾರ್ಗದಲ್ಲಿ ನಡೆಯುವವನ ಮೇಲೆ ಶಾಂತಿ ಇರಲಿ..."

ಪತ್ರದ ಈ ಒಕ್ಕಣೆ ಕೇಳುತ್ತಲೇ ಅರಸ ಕ್ರೋಧಾಗ್ನಿಯಿಂದ ಉರಿಯ ತೊಡಗಿ ಅವನ ಮುಖವು ಕೋಪದಿಂದ ಕಾದ ಕಬ್ಬಿಣದಂತಾಯಿತು. ಏಕೆಂದರೆ ಪ್ರವಾದಿಯವರು( ಪತ್ರವನ್ನು ತಮ್ಮ ಹೆಸರಿನಿಂದ ಆರಂಭಿಸಿದ್ದರು. ಅವನು ಕಾರ್ಯದರ್ಶಿಯ ಕೈಯಿಂದ ಪ ಕಿತ್ತುಕೊಂಡು, ಅದರಲ್ಲಿರುವ ವಿಷಯವನ್ನರಿಯುವ ಗೋಜಿಗೂ ಹೋಗದೆ ಹರಿದು ಚಿಂ

ಏ ಮಾಡುತ್ತಾ, "ನನ್ನ ಗುಲಾಮನು ನನಗೆ ಈ ರೀತಿ ಪತ್ರ ಬರೆಯುತ್ತಿದ್ದಾನೆ!" ಎಂದು ತ ತೊಡಗಿದ. ಅನಂತರ ಅಬ್ದುಲ್ಲಾ ಬಿನ್ ಹುದಾಫರನ್ನು ಆಸ್ಥಾನದಿಂದ ಹೊರಕ್ಕಟ್ಟುವಂತೆ ಾಪಿಸಿದ. ರಾಜಾಜ್ಞೆಯಂತೆ ಅವರು ಆಸ್ಥಾನದಿಂದ ಹೊರ ಹಾಕಲ್ಪಟ್ಟರು. ಅಲ್ಲಿಂದ ಹೊರ ುವಾಗ ತನ್ನನ್ನು ಕೊಲ್ಲಲಾಗುವುದೋ ಅಥವಾ ಬಿಡಲಾಗುವುದೋ ಎಂಬುದು ಅವರಿಗೆ ಿರಲಿಲ್ಲ. ಅಲ್ಲಾಹನ ತೀರ್ಮಾನ ಏನಾಗಿರಬಹುದೆಂದೂ ಅವರಿಗೆ ತಿಳಿದಿರಲಿಲ್ಲ. ಅವರು ದಲ್ಲೇ ಹೀಗೆಂದರು, ಅಲ್ಲಾಹನಾಣೆ! ಪ್ರವಾದಿಯವರ(ಸ) ಪತ್ರವನ್ನು ತಲಪಿಸಿದ್ದೇನೆ. ್ನ ನನ್ನ ಗತಿ ಏನೇ ಆದರೂ ನನಗೆ ಅದರ ಕಿಂಚಿತ್ತೂ ಪರಿವೆಯಿಲ್ಲ.

ಅತ್ತ ಕಿಸ್ರಾನ ಕೋಪ ತಣಿದಾಗ ಅವನು ಅಬ್ದುಲ್ಲಾರನ್ನು(ರ) ಪುನಃ ರಾಜ ರ್ಬಾರಿನಲ್ಲಿ ಹಾಜರುಪಡಿಸುವಂತೆ ತನ್ನ ಭಟರಿಗೆ ಆಜ್ಞಾಪಿಸಿದ. ಆದರೆ ಅವರು ಸಿಗಲಿಲ್ಲ. ನ ಆಳುಗಳು ಅರೇಬಿಯಾದ ಸರಹದ್ದಿನ ವರೆಗಿನ ಎಲ್ಲ ಮಾರ್ಗಗಳಲ್ಲೂ ಹುಡುಕಾಡಿದರು. ರೆ ಅವರು ಅವರ ಕೈಯಿಂದ ಪಾರಾಗಿದ್ದರು.

## ್ರಾನ ಅಂತ್ಯ

ಹ. ಅಬ್ದುಲ್ಲಾ ಬಿನ್ ಹುದಾಫ(ರ) ಕಿಸ್ರಾನ ಕೈಯಿಂದ ತಪ್ಪಿಸಿಕೊಂಡು ಹೇಗೋ ಾದಿವರ್ಯರ(ಸ) ಬಳಿಗೆ ತಲಪಿ ನಡೆದ ಘಟನೆಯನ್ನೂ ಪತ್ರವನ್ನು ಹರಿದು ಚಿಂದಿ ಡಿದ ವಿಷಯವನ್ನೂ ಚಾಚೂ ತಪ್ಪದೆ ವಿವರಿಸಿದರು. ಅವರ ಎಲ್ಲ ಮಾತುಗಳನ್ನು ಆಲಿಸಿದ ಕ ಪ್ರವಾದಿ(ಸ) ಇಷ್ಟು ಮಾತ್ರ ಹೇಳಿದರು, "ಅಲ್ಲಾಹನು ಅವನ ಸಾಮ್ರಾಜ್ಯವನ್ನೂ ದಿ ಚಿಂದಿ ಮಾಡಲಿ."

ಅತ್ತ ಕಿಸ್ರಾ ಯಮನ್‌ನ ರಾಜ್ಯಪಾಲ ಬಾದಾನ್‌ನಿಗೆ ಒಂದು ಪತ್ರ ಬರೆದನು. ಅದರಲ್ಲಿ ಾರ್ಝ್(ಅರೇಬಿಯಾ)ನಲ್ಲಿ ಪ್ರವಾದಿತ್ವ ಘೋಷಣೆ ಮಾಡಿರುವ ಆ ವ್ಯಕ್ತಿಗಾಗಿ [(ಪ್ರವಾದಿ ುಹಮ್ಮದ್‌ರನ್ನು(ಸ)] ಇಬ್ಬರು ಬಲಿಷ್ಠ ಪರಾಕ್ರಮಿಗಳನ್ನು ಕಳಿಸಿ ಬಂಧಿಸಿ ತನ್ನ ಮುಂದೆ ಜರುಪಡಿಸುವಂತೆ ಆಜ್ಞಾಪಿಸಲಾಗಿತ್ತು. ರಾಜನ ಅಪ್ಪಣೆಯಂತೆ ಬಾದಾನ್ ಇಬ್ಬರು ಶಾಲಿಗಳನ್ನು ಪ್ರವಾದಿಯವರ(ಸ) ಬಳಿಗೆ ಕಳಿಸಿದನು. ಅವನು ಅವರಿಗೆ ಒಂದು ಪತ್ರ ದು ಕೊಟ್ಟು, ಮುಹಮ್ಮದ್‌ರಿಗೆ(ಸ) ತಲಪಿಸುವಂತೆ ಹೇಳಿದನು. ಅದರಲ್ಲಿ ಹೀಗೆ ಯಲಾಗಿತ್ತು- "ನೀವು ಕಿಸ್ರಾನ ಮುಂದೆ ಶರಣಾಗತರಾಗಲಿಕ್ಕಾಗಿ ಈ ಇಬ್ಬರು ವ್ಯಕ್ತಿಗಳೊಂದಿಗೆ ಡಲೇ ಹೊರಡಬೇಕು." ಜೊತೆಗೆ ಪ್ರವಾದಿಯವರ(ಸ) ಸ್ಥಿತಿಗತಿಗಳನ್ನು ಹಾಗೂ ಅವರ ತು ಸಂಪೂರ್ಣ ಮಾಹಿತಿಯನ್ನು ಸಂಗ್ರಹಿಸಿ ತರಬೇಕೆಂದೂ ಅವನು ಅವರಿಬ್ಬರಿಗೆ ಜ್ಞಾಪಿಸಿದನು.

ಬಲಶಾಲಿಗಳಾದ ಆ ಇಬ್ಬರು ಅತಿ ವೇಗವಾಗಿ ನಿರಂತರ ಪ್ರಯಾಣ ಮಾಡುತ್ತಾ ಯಿಫ್‌ಗೆ ತಲಪಿದರು. ಅಲ್ಲಿ ಅವರು ಕುರೈಶರ ವ್ಯಾಪಾರಿ ತಂಡವೊಂದನ್ನು ಭೇಟಿಯಾದರು. ವರಲ್ಲಿ ಮುಹಮ್ಮದ್‌ರ(ಸ) ಕುರಿತು ವಿಚಾರಿಸಿದಾಗ, ಅವರು ಯಸ್ರಿಬ್ ದೀನಾ)ನಲ್ಲಿರುವರೆಂದು ತಿಳಿದುಬಂತು. ಅನಂತರ ಕುರೈಶ್ ವ್ಯಾಪಾರಿಗಳು ಬಹಳ

ಸಂತೋಷದಿಂದ ಮಕ್ಕಾಕ್ಕೆ ಹೋದರು. ಅವರು ಕುರೈಶರೊಂದಿಗೆ, "ನಿಮಗೊಂದು ಒ
ಸಂತೋಷದಾಯಕ ಸುದ್ದಿಯಿದೆ. ಕಿಸ್ರಾ ಚಕ್ರವರ್ತಿಯು ಮುಹಮ್ಮದ್‌ರ(ಸ) ಬೆನ್ನು ಹತ್ತಿ
ಅವರ ಕೆಡುಕಿನಿಂದ ನಿಮ್ಮನ್ನು ರಕ್ಷಿಸಿದ್ದಾನೆ" ಎಂದರು. ಅತ್ತ ಆ ಇಬ್ಬರು ಯೋ
ಮದೀನಾದತ್ತ ಪ್ರಯಾಣ ಬೆಳೆಸಿದರು. ಅಲ್ಲಿಗೆ ತಲಪಿ ಪ್ರವಾದಿಯವರನ್ನು(ಸ) ಭೇಟಿ
ಬಾದಾನ್‌ನ ಪತ್ರವನ್ನು ಅವರ ಕೈಗೆ ನೀಡುತ್ತಾ ಹೀಗೆಂದರು, "ಕಿಸ್ರಾ ಚಕ್ರವರ್ತಿಯು
ರಾಜ್ಯಪಾಲ ಬಾದಾನ್‌ನಿಗೆ ತಮ್ಮನ್ನು ಕರೆತರಲು ಯಾರನ್ನಾದರೂ ಕಳಿಸಬೇಕೆಂದು ಅ
ಕೊಟ್ಟಿರುವನು. ಆದುದರಿಂದ ನಾವು ಬಂದಿದ್ದೇವೆ. ತಾವು ನಮ್ಮೊಂದಿಗೆ ಹೊರಡಿರಿ.
ನಮ್ಮೊಂದಿಗೆ ಬರಲು ಸಿದ್ಧರಿರುವಿರಾದರೆ ನಾವು ಕಿಸ್ರಾನೊಂದಿಗೆ ಮಾತನಾಡಿ ತಮ
ಸೌಲಭ್ಯಗಳನ್ನು ಮಾಡಿಸುವೆವು. ಅವನು ತಮಗೆ ನೀಡಬಲ್ಲಂತಹ ಕಷ್ಟ ಕಿರುಕುಳಗ
ತಮ್ಮನ್ನು ಪಾರುಗೊಳಿಸಬಲ್ಲೆವು. ಒಂದು ವೇಳೆ ತಾವು ನಮ್ಮ ಮಾತನ್ನು ಒಪ್ಪದಿ
ಕಿಸ್ರಾನ ಶಕ್ತಿ-ಸಾಮರ್ಥ್ಯಗಳನ್ನು ತಾವು ಚೆನ್ನಾಗಿ ಬಲ್ಲಿರಿ. ತಮ್ಮನ್ನೂ ತಮ್ಮ
ಜನಾಂಗವನ್ನೂ ಸಂಪೂರ್ಣ ನಾಶಪಡಿಸುವ ಶಕ್ತಿ ಅವನಲ್ಲಿದೆಯೆಂಬುದನ್ನು
ತಿಳಿದಿರಬೇಕು."

ಪ್ರವಾದಿಯವರು(ಸ) ಅವರ ಮಾತನ್ನು ಶಾಂತ ಚಿತ್ತದಿಂದ ಆಲಿಸಿ ಮಂದ
ಬೀರುತ್ತಾ, "ಇವತ್ತು ನೀವು ನಿಮ್ಮ ಕೊಠಡಿಗೆ ಹೋಗಿರಿ, ನಾಳೆ ಬನ್ನಿ" ಎಂದರು. ಮರು
ಇಬ್ಬರೂ ಪುನಃ ಪ್ರವಾದಿಯವರ(ಸ) ಬಳಿಗೆ ಬಂದು, "ತಾವು ನಮ್ಮೊಂದಿಗೆ ಹೊ
ಬಂದು ಕಿಸ್ರಾನ ಮುಂದೆ ಶರಣಾಗತರಾಗಲು ಸಿದ್ಧರಾದಿರಾ" ಎಂದು ಕೇಳಿದರು.
ಪ್ರವಾದಿ(ಸ) ಹೀಗೆ ಉತ್ತರಿಸಿದರು, "ಇನ್ನು ನೀವು ಕಿಸ್ರಾನನ್ನು ಭೇಟಿಯಾಗಲಾ
ಅಲ್ಲಾಹನು ಅವನ ಮಗ 'ಶೇರೂಯ'ನನ್ನು ಇಂತಿಂತಹ ತಿಂಗಳ ಇಂತಿಂತಹ ರಾತ್ರಿ ಅ
ಮೇಲೆ ಎರಗಿಸಿ ಅವನನ್ನು ಕೊಲ್ಲಿಸಿದನು.

ಇಷ್ಟು ಕೇಳಿದ್ದೇ ತಡ. ಇಬ್ಬರೂ ಕಂಪಿಸತೊಡಗಿದರು. ಭಯದಿಂದ ಪ್ರವಾದಿವರ್ಯ
ದಿಟ್ಟಿಸತೊಡಗಿದರು. ಅನಂತರ ತಮ್ಮನ್ನು ತಾವೇ ಸುಧಾರಿಸಿಕೊಳ್ಳುತ್ತಾ ಪ್ರವಾದಿಯವರೊಡ
"ತಾವು ಇದೇನು ಹೇಳುತ್ತೀರಿ. ಈ ವಿಷಯವನ್ನು ನಾವು ಬಾದಾನ್‌ಗೆ ಬರೆಯಬಹುದ
ಎಂದು ಕೇಳಿದರು.

ಪ್ರವಾದಿ(ಸ) ಹೀಗೆ ಉತ್ತರಿಸಿದರು, "ಖಂಡಿತ ಬರೆಯಿರಿ. ಆದರ ಜೊತೆಗೆ
ಧರ್ಮವು ಕಿಸ್ರಾನ ಸಾಮ್ರಾಜ್ಯದ ಕೊನೆಯ ಗಡಿಗಳ ವರೆಗೂ ತಲಪುವುದು ಮತ್ತು ನಿ
ಇಸ್ಲಾಮ್ ಸ್ವೀಕರಿಸಿದರೆ ನಿಮ್ಮ ಅಧೀನವಿರುವ ಪ್ರದೇಶವನ್ನು ನಿಮಗೇ ಮರಳಿಸಿ ನಿಮ್ಮ
ಅದರ ಆಡಳಿತಗಾರನಾಗಿ ಮಾಡುವೆನೆಂದು ಬರೆಯಿರಿ."

ತರುವಾಯ ಆ ಇಬ್ಬರು ಯೋಧರು ಪ್ರವಾದಿಯವರಿಂದ(ಸ) ಬೀಳ್ಕೊಂಡು ಬಾದಾ
ಬಳಿಗೆ ತಲಪಿದರು. ಪ್ರವಾದಿಯವರು(ಸ) ಹೇಳಿದ ವಿಷಯವನ್ನು ಅವನಿಗೆ ತಿಳಿಸಿದರು.
ಬಾದಾನ್ ಹೀಗೆಂದನು, "ಮುಹಮ್ಮದ್‌ರ(ಸ) ಈ ಮಾತು ಸತ್ಯವಾದರೆ ಖಂಡಿತ ಅ
ಅಲ್ಲಾಹನ ಪ್ರವಾದಿಯಾಗಿದ್ದಾರೆ. ಹಾಗೆ ಸಂಭವಿಸದಿದ್ದರೆ ಅವರೊಂದಿಗೆ ಹ

ಂಕೊಳ್ಳಬೇಕೆಂಬ ಬಗ್ಗೆ ಯೋಚಿಸುವೆ."

ಇದಾದ ಕೆಲವೇ ದಿನಗಳ ಬಳಿಕ ಬಾದಾನ್‌ನಿಗೆ ಶೇರೂಯನ ಪತ್ರ ಬಂತು. ಅದರಲ್ಲಿ ಬರೆಯಲಾಗಿತ್ತು- "ನಾನು ಕಿಸ್ರಾನನ್ನು ಕೊಂದಿದ್ದೇನೆ. ನಾನು ಅವನ ಮೇಲೆ ನನ್ನ ಂಗದವರ ಸೇಡು ತೀರಿಸಿದ್ದೇನೆ. ಅವನು ನಮ್ಮ ಜನಾಂಗದ ಸಜ್ಜನರನ್ನು ವಧಿಸುವುದನ್ನು, ಸ್ತ್ರೀಯರನ್ನು ದಾಸಿಯರನ್ನಾಗಿ ಮಾಡುವುದನ್ನು ಮತ್ತು ಅವರ ಸೊತ್ತು ವಿತ್ತಗಳನ್ನು ಡಿಸಿಕೊಳ್ಳುವುದನ್ನು ತನ್ನ ಮಾಮೂಲಾಗಿ ಮಾಡಿದ್ದನು. ಈ ಪತ್ರ ನಿನಗೆ ತಲಪಿದರೆ ಬಳಿಯಿರುವ ಎಲ್ಲ ಜನರು ನನ್ನ ಆಜ್ಞೆಗಳನ್ನು ಸ್ವೀಕರಿಸುವಂತೆ ಮತ್ತು ನನ್ನನ್ನು ಸರಿಸುವಂತೆ ಅವರಿಂದ ಕರಾರು ಪಡೆಯಬೇಕು."

ಬಾದಾನ್ ಆ ಪತ್ರವನ್ನು ಓದಿದ ಕೂಡಲೇ ಅದನ್ನು ಅತ್ತ ಬಿಸಾಡಿ ತಾನು ಮ್ ಸ್ವೀಕರಿಸಿರುವುದಾಗಿ ಘೋಷಿಸಿದನು. ಅವನ ಜೊತೆಯಲ್ಲಿ ಯಮನ್‌ನಲ್ಲಿದ್ದ ಸಕಲ ಿಯರೂ ಇಸ್ಲಾಮ್ ಸ್ವೀಕರಿಸಿದರು.

## ರ್‌ನ ಆಸ್ಥಾನದಲ್ಲಿ

ಹ. ಅಬ್ದುಲ್ಲಾ ಬಿನ್ ಹುದಾಫ಼ರು(ರ) ಹ. ಉಮರ್‌ರ(ರ) ಆಡಳಿತ ಕಾಲದಲ್ಲಿ ಮನ್ ಚಕ್ರವರ್ತಿ ಕೈಸರ್‌ನನ್ನು ಭೇಟಿಯಾಗಲು ಹೋದರು. ಉಮರ್‌ರು(ರ) ಹಿ.ಶ.13 ರಲ್ಲಿ ಮನರೊಂದಿಗೆ ಯುದ್ಧ ಹೂಡುವುದಕ್ಕಾಗಿ ಒಂದು ಸೇನೆಯನ್ನು ರವಾನಿಸಿದ್ದರು. ರಲ್ಲಿ ಹ. ಅಬ್ದುಲ್ಲಾ ಬಿನ್ ಹುದಾಫ಼ ಕೂಡಾ ಇದ್ದರು. ಮುಸ್ಲಿಮ್ ಯೋಧರ ಸತ್ಯ ತೆ, ದೃಢವಿಶ್ವಾಸ ಮತ್ತು ದೇವಮಾರ್ಗದಲ್ಲಿ ಅವರ ತ್ಯಾಗ ಬಲಿದಾನಗಳ ಸುದ್ದಿ ನಿಗೆ ಮೊದಲೇ ತಲಪಿತ್ತು. ಮುಸ್ಲಿಮ್ ಸೈನಿಕರಾರೂ ಸೆರೆಸಿಕ್ಕಿದರೆ ಅವರನ್ನು ಬಾರದೆಂದೂ ಜೀವಂತವಾಗಿ ನನ್ನ ಮುಂದೆ ಹಾಜರು ಪಡಿಸಬೇಕೆಂದೂ ಅವನು ತನ್ನ ರಿಗೆ ಆದೇಶಿಸಿದ್ದನು. ಹ. ಅಬ್ದುಲ್ಲಾ ಬಿನ್ ಹುದಾಫ಼ ರೋಮನ್ ಸೈನಿಕರ ಕೈಗೆ ರು. ಅವರು ಅವರನ್ನು ಅರಸನ ಮುಂದೆ ಹಾಜರುಪಡಿಸಿದರು.

ಕೈಸರನು ಸ್ವಲ್ಪ ಹೊತ್ತಿನ ವರೆಗೆ ಅಬ್ದುಲ್ಲಾರನ್ನು ದಿಟ್ಟಿಸಿ ನೋಡಿದನು. ತರುವಾಯ ರೊಂದಿಗೆ, "ನಾನು ನಿಮ್ಮ ಮುಂದೆ ಒಂದು ವಿಷಯ ಇಡುತ್ತಿದ್ದೇನೆ. ನೀವು ಕ್ರೈಸ್ತ ರ್ಮ ಸ್ವೀಕರಿಸಬೇಕು. ನನ್ನ ಈ ಮಾತನ್ನು ಒಪ್ಪಿದರೆ ನಾನು ನಿಮ್ಮನ್ನು ಬಿಟ್ಟುಬಿಡುವೆನು. ಮ್ಮೊಂದಿಗೆ ಅತ್ಯಂತ ಗೌರವಾದರಗಳೊಂದಿಗೆ ವರ್ತಿಸುವೆನು" ಎಂದು ಹೇಳಿದನು.

ಅವನ ಈ ಮನವಿಯನ್ನು ಹ. ಅಬ್ದುಲ್ಲಾ ಅತ್ಯಂತ ತುಚ್ಛ ಭಾವದೊಂದಿಗೆ ಸ್ಕರಿಸಿದರು ಮತ್ತು ತಾಳ್ಮೆಯಿಂದ ಹೀಗೆಂದರು, "ಇದು ಸಾಧ್ಯವಿಲ್ಲ, ನಿನ್ನ ಈ ವಿಗಿಂತ ಮರಣವೇ ನನಗೆ ಸಾವಿರಪಟ್ಟು ಪ್ರಿಯವಾಗಿದೆ."

"ನೀವೊಬ್ಬ ಧೀಮಂತ ವ್ಯಕ್ತಿಯಾಗಿದ್ದೀರಿ. ನನ್ನ ಮಾತನ್ನು ಕೇಳಿದರೆ ನಿಮಗೆ ನನ್ನ ಕಾರದಲ್ಲಿ ಪಾಲು ನೀಡಬಲ್ಲೆ"- ಕೈಸರನು ಅವರ ಮುಂದೆ ಆಮಿಷವೊಡ್ಡಿದನು.

ರಾಜನ ಈ ತುಚ್ಛ ಬೇಡಿಕೆಯನ್ನು ಕೇಳಿ ಭಾರೀ ಸಂಕೋಲೆಗಳಿಂದ ಬಿಗಿಯಲ್ಪಟ್ಟ

ಆ ಕೈದಿ ನಕ್ಕು ಬಿಟ್ಟರು. ಅನಂತರ ನಿರಪೇಕ್ಷನಾಗಿ ಹೀಗೆ ಉತ್ತರಿಸಿದರು,

"ದೇವನಾಣೆ! ನೀವು ಸರ್ವಲೋಕದ ಸಂಪತ್ತನ್ನೇ ತಂದೊಪ್ಪಿಸಿದರೂ ಅದಕ್ಕೆ ಬದ ಒಂದು ಕ್ಷಣದ ಮಟ್ಟಿಗೂ ನಾನು ಮುಹಮ್ಮದ್‌ರ(ಸ) ಧರ್ಮವನ್ನು ತ್ಯಜಿಸಲಾರೆ."

"ಹಾಗಾದರೆ ನಿಮ್ಮನ್ನು ವಧಿಸಿಬಿಡುವೆನು."

"ನಿಮ್ಮಿಷ್ಟ, ಏನು ಬೇಕಾದರೂ ಮಾಡಿರಿ."

ಅಬ್ದುಲ್ಲಾ ಬಿನ್ ಹುದಾಫ ಅವನ ಬೆದರಿಕೆಯನ್ನು ಒಂದಿಷ್ಟು ಲೆಕ್ಕಿಸದೆ ಉತ್ತರಿಸಿ

ಆಗ ಅವರನ್ನು ಶಿಲುಬೆಗೆ ಕಟ್ಟುವಂತೆ ಆಜ್ಞಾಪಿಸಿದನು. ಅದರಂತೆ ಅವರನ್ನು ಶಿಲು ಕಟ್ಟಲಾಯಿತು. ತರುವಾಯ ಅವನು ಕಟುಕನೊಂದಿಗೆ ರೋಮನ್ ಭಾಷೆಯಲ್ಲಿ ಅ ಎರಡೂ ಕೈಗಳ ಸುತ್ತ ಬಾಣ ಬಿಡುವಂತೆ ಆಜ್ಞಾಪಿಸಿದನು. (ಆಗಲೂ ಅವನು ಅವರೊಂ ಕ್ರೈಸ್ತ ಧರ್ಮವನ್ನು ಸ್ವೀಕರಿಸುವಂತೆ ಹೇಳುತ್ತಿದ್ದನು. ಅವರು ಅದನ್ನು ನಿರಾಕರಿಸುತ್ತ ಇದ್ದರು.) ಅನಂತರ ಎರಡು ಕಾಲುಗಳ ಸುತ್ತ ಬಾಣ ಬಿಡುವಂತೆ ಆಜ್ಞಾಪಿಸಿದನು. (ಆಗ ಅವನು ಅವರನ್ನು ಕ್ರೈಸ್ತ ಧರ್ಮಕ್ಕೆ ಆಹ್ವಾನಿಸುತ್ತಿದ್ದನು. ಅವರು ನಿರಾಕರಿಸುತ್ತಲೇ ಇದ್ದ ಈಗ ಕೈಸರನು ಕಟುಕನಿಗೆ ಅವರನ್ನು ನೇಣುಗಂಬದಿಂದ ಕೆಳಗಿಳಿಸುವಂತೆ ಆಜ್ಞಾಪಿಸಿದ ಅನಂತರ ದೊಡ್ಡ ಕಡಾಯಿಯೊಂದನ್ನು ತರಿಸಿ ಅದರಲ್ಲಿ ಎಣ್ಣೆ ಸುರಿದು ಅದ ಒಲೆಯಲ್ಲಿರಿಸುವಂತೆ ಆಜ್ಞಾಪಿಸಿದನು. ಎಣ್ಣೆ ಕುದಿಯುತ್ತಿದ್ದಾಗ ಇಬ್ಬರು ಮುಸ್ಲಿ ಕೈದಿಗಳನ್ನು ಕರೆಸಿ ಒಬ್ಬನನ್ನು ಆ ಎಣ್ಣೆಯಲ್ಲಿ ಹಾಕಿಸಿದನು. ಅದರಲ್ಲಿ ಬೀಳುತ್ತಲೇ ವ್ಯಕ್ತಿಯ ಚರ್ಮ ಕರಗಿ ಎಲುಬುಗಳು ಗೋಚರಿಸತೊಡಗಿದವು. ಪುನಃ ಕೈಸರನು ಅಬ್ದು ಬಿನ್ ಹುದಾಫರತ್ತ ತಿರುಗಿ ಅವರನ್ನು ಕ್ರೈಸ್ತ ಧರ್ಮ ಸ್ವೀಕರಿಸುವಂತೆ ಹೇಳಿದನು. ಆ ಅಬ್ದುಲ್ಲಾರು ಹಿಂದಿಗಿಂತಲೂ ನಿಷ್ಠುರವಾಗಿ ಅದನ್ನು ತಿರಸ್ಕರಿಸಿದರು.

ಕೈಸರನಿಗೆ ಸಂಪೂರ್ಣ ನಿರಾಶೆಯಾದಾಗ, ಅವರನ್ನು ಅದೇ ಕಡಾಯಿಗೆ ಎಸೆಯುವ ಆಜ್ಞಾಪಿಸಿದನು. ಅವರನ್ನು ಕಡಾಯಿಯತ್ತ ಕೊಂಡೊಯ್ಯುತ್ತಿದ್ದಾಗ ಅವರ ಕಣ್ಣುಗಳಿ ಅಶ್ರುಧಾರೆ ಹರಿಯತೊಡಗಿತು. ಈ ವ್ಯಕ್ತಿ ಅಳುತ್ತಿದ್ದಾನೆಂದು ಕೈಸರನ ಭಟರು ಅವ ಹೇಳಿದರು. ಈಗ ಅವರ ಸ್ಥೈರ್ಯ ಉಡುಗಿ ಹೋಯಿತೆಂದು ಭಾವಿಸಿದ ಕೈಸರನು ಅವರ ತನ್ನ ಬಳಿಗೆ ಕರೆಸಿದನು. ಅಬ್ದುಲ್ಲಾರು ಅವನ ಬಳಿಗೆ ತಲುಪಿದಾಗ, ಅವನು ಅವರೊಂ ಕ್ರೈಸ್ತ ಧರ್ಮವನ್ನು ಸ್ವೀಕರಿಸಬೇಕೆಂಬ ಇಂಗಿತವನ್ನು ಪುನರಾವರ್ತಿಸಿದನು. ಆದರೆ ಅವ ಅದನ್ನು ನಿರಾಕರಿಸಿದಾಗ, "ಮತ್ತೇಕೆ ನೀವು ಅಳುತ್ತಿದ್ದೀರಿ" ಎಂದು ಕೇಳಿದನು.

ಅಬ್ದುಲ್ಲಾ ಬಿನ್ ಹುದಾಫ ಹೀಗೆ ಉತ್ತರಿಸಿದರು, "ನನ್ನನ್ನು ಕಡಾಯಿಗೆ ಹಾಕಲಾಗುವ ಮತ್ತು ನನ್ನ ಪ್ರಾಣ ಹೋಗುವುದು. ಆದರೆ ನನ್ನ ಇಚ್ಛೆ ಅದಲ್ಲ. ನನ್ನ ಶರೀರದ ರೋಮಗಳಿರುವಷ್ಟು ಪ್ರಾಣಗಳಿರುತ್ತಿದ್ದು ಅವೆಲ್ಲವೂ ಅಲ್ಲಾಹನ ಧರ್ಮಕ್ಕಾಗಿ ಕಡಾಯಿಯೊಳಗೆ ಹಾಕಲ್ಪಡಬೇಕು ಎಂಬುದೇ ನನ್ನ ಬಯಕೆಯಾಗಿದೆ. ಈ ವಿಚಾರ ಮನಸ್ಸಿ ಬಂದಾಗ ನನಗೆ ಅಳು ಬಂತು."

"ಹಾಗಾದರೆ ನೀವು ನನ್ನ ಹಣೆಗೆ ಮುತ್ತಿಕ್ಕಬಲ್ಲಿರಾ? ಹಾಗೆ ಮಾಡಿದರೆ ನಾ

ನ್ನು ಬಿಟ್ಟು ಬಿಡುವೆನು" ಕೈಸರ್‌ನ ಈ ಮಾತಿಗೆ ಅಬ್ದುಲ್ಲಾ ಬಿನ್ ಹುದಾಫರು, "ನನ್ನ ಗಾತಿಗಳನ್ನು ವಿಮೋಚಿಸಬಲ್ಲಿರಾ" ಎಂದು ಕೇಳಿದರು.

"ಹೌದು! ನಿಮ್ಮ ಎಲ್ಲ ಸಂಗಾತಿಗಳನ್ನೂ ಬಿಟ್ಟುಬಿಡಲಾಗುವುದು" ಕೈಸರ್ ಉತ್ತರಿಸಿದ. ದ್ದುಲ್ಲಾ ಬಿನ್ ಹುದಾಫರು ಮನಸ್ಸಿನಲ್ಲೇ ಹೇಳಿದರು- "ಈತ ಅಲ್ಲಾಹನ ವೈರಿ. ಇವನ ಗೆ ಮುತ್ತಿಕ್ಕಿದರೆ ಅದಕ್ಕೆ ಪ್ರತಿಯಾಗಿ ಅವನು ನನ್ನನ್ನೂ ನನ್ನ ಸಂಗಾತಿಗಳನ್ನೂ ಮುಕ್ತಗೊಳಿಸುವನು. ಹಾಗೆ ಮಾಡಿದರೆ ನನಗೇನು ನಷ್ಟ!"

ಈ ರೀತಿ ಯೋಚಿಸಿ ಅವರು ಅವನ ಬಳಿಗೆ ಹೋಗಿ ಅವನ ಹಣೆಯನ್ನು ಂಬಿಸಿದರು. ಆಗ ಅವನು ತನ್ನ ಭಟರಿಗೆ ಎಲ್ಲ ಕೈದಿಗಳನ್ನೂ ಅಬ್ದುಲ್ಲಾ ಬಿನ್ ದಾಫರಿಗೆ ಒಪ್ಪಿಸುವಂತೆ ಆಜ್ಞಾಪಿಸಿದನು. ಎಲ್ಲರೂ ಸೆರೆವಾಸದಿಂದ ಮುಕ್ತರಾದರು.

ಹ. ಅಬ್ದುಲ್ಲಾ ಬಿನ್ ಹುದಾಫ(ರ) ನೇರವಾಗಿ ಖಲೀಫಾ ಹ. ಉಮರ್(ರ) ಬಳಿಗೆ ೋಗಿ ನಡೆದ ಘಟನೆಯನ್ನೆಲ್ಲಾ ತಿಳಿಸಿದರು. ಇದನ್ನು ಕೇಳಿ ಖಲೀಫಾರಿಗೆ ತುಂಬಾ ತೋಷವಾಯಿತು. ಅವರು ಎಲ್ಲ ಕೈದಿಗಳನ್ನು ನೋಡಿದಾಗ ಹೀಗೆಂದರು, "ಪ್ರತಿಯೊಬ್ಬ ಸ್ಲಿಮನೂ ಅಬ್ದುಲ್ಲಾ ಬಿನ್ ಹುದಾಫರ ಹಣೆ ಚುಂಬಿಸಬೇಕು. ಈ ಬಾಧ್ಯತೆಯನ್ನು ತ್ತ ಮೊದಲು ನಾನೇ ನಿರ್ವಹಿಸುವೆನು" ಹೀಗೆ ಹೇಳಿ ಅವರು ಹ. ಅಬ್ದುಲ್ಲಾರ ಹಣೆ ಂಬಿಸಿದರು.

# ಹ. ಅಬೂ ಉಬೈದಾ(ರ)

## ಅಲ್ಲಾಹನ ಪಕ್ಷದವರು

ಹ. ಅಬೂ ಉಬೈದಾ ಆಮಿರ್ ಬಿನ್ ಅಬ್ದುಲ್ಲಾ ಬಿನ್ ಜರ್ರಾಹ್ ಫಹ್ರಿ ಆರಂಭಕಾಲದಲ್ಲಿ ಇಸ್ಲಾಮ್ ಸ್ವೀಕಾರ ಮಾಡಿದವರ ಪೈಕಿ ಒಬ್ಬರಾಗಿದ್ದಾರೆ. ಅಬೂಬಕರ್‌ರ ಮುಸ್ಲಿಮ್ ಆಗಿ ಪರಿವರ್ತನೆಗೊಂಡ ಮರುದಿನವೇ ಅವರ ಕೈಯಲ್ಲೇ ಅಬೂ ಉಬ ಇಸ್ಲಾಮ್ ಸ್ವೀಕರಿಸಿದರು. ಹ. ಅಬೂಬಕರ್(ರ) ಇವರನ್ನೂ ಹ. ಅಬ್ದುರ್ರಹ್ಮಾನ್ ಔಫ್, ಉಸ್ಮಾನ್ ಬಿನ್ ಮಝ್ಊನ್ ಮತ್ತು ಅರ್ಕಮ್ ಬಿನ್ ಅಬೂ ಅರ್ಕಮ್‌ರ ಪ್ರವಾದಿವರ್ಯರ ಸನ್ನಿಧಾನಕ್ಕೆ ಕರೆದೊಯ್ದಾಗ ಇವರೆಲ್ಲರೂ ಪ್ರವಾದಿವರ್ಯರ ಮು ಸತ್ಯವಿಶ್ವಾಸ ಸ್ವೀಕಾರದ ಘೋಷಣೆ ಮಾಡಿದರು. ಈ ಮಂದಿ ಇಸ್ಲಾಮಿನ ಭವ್ಯ ಕಟ್ಟ ತಳಪಾಯವಾಗಿದ್ದಾರೆ.

ಹ. ಅಬೂ ಉಬೈದಾ ಅವರ ವ್ಯಕ್ತಿತ್ವವು ಬಹಳ ಆಕರ್ಷಕವಾಗಿತ್ತು. ಅವ ನೋಡಿದರೆ ಕಣ್ಣಿಗೆ ತಂಪು, ಅವರನ್ನು ಭೇಟಿಯಾದರೆ ಆತ್ಮಕ್ಕೆ ಶಾಂತಿ ದೊರಕುತ್ತಿತ್ತು. ಅ ಅತ್ಯುತ್ತಮ ಚಾರಿತ್ರ್ಯವಂತರೂ ಲಜ್ಜಾ ಗುಣ ಹೊಂದಿದ ವ್ಯಕ್ತಿಯೂ ಆಗಿದ್ದರು. ಯಾವುದಾದ ಕಠಿಣ ಪರಿಸ್ಥಿತಿ ಎದುರಾದಾಗ ಅವರು ಕೆರಳಿದ ಸಿಂಹದಂತಾಗುತ್ತಿದ್ದರು. ಹ. ಅ ಉಬೈದಾರನ್ನು ಪ್ರಶಂಸಿಸುತ್ತಾ ಒಮ್ಮೆ ಹ. ಅಬ್ದುಲ್ಲಾ ಬಿನ್ ಉಮರ್(ರ) ಹೀಗೆ ಹೇಳಿದ

"ಕುರೈಶರಲ್ಲಿ ಮೂವರು ಅತ್ಯಂತ ಆಕರ್ಷಕ ವದನದವರೂ ಅತ್ಯಂತ ಚಾರಿತ್ರ್ಯವಂತ ಅತಿ ಹೆಚ್ಚು ಲಜ್ಜಾಗುಣವಿರುವವರೂ ಇದ್ದಾರೆ. ಅವರು ನಿಮ್ಮೊಂದಿಗೆ ಮಾತಾಡಿದರೆ ಎಂ ಸುಳ್ಳಾಡಲಾರರು. ನೀವು ಅವರೊಂದಿಗೆ ಮಾತಾಡಿದರೆ ಎಂದೂ ನಿಮ್ಮ ಮಾತ ನಂಬದಿರಲಾರರು. ಅವರೇ ಅಬೂಬಕರ್ ಸಿದ್ದೀಕ್, ಉಸ್ಮಾನ್ ಬಿನ್ ಅಫ್ಫಾನ್ ಮ ಅಬೂ ಉಬೈದಾ ಬಿನ್ ಜರ್ರಾಹ್(ರ)."

ಹ. ಅಬೂ ಉಬೈದಾ ಅವರು ಮಕ್ಕಾದಲ್ಲಿದ್ದುಕೊಂಡು ಆದಿಯಿಂದ ಅಂತ ತನಕವೂ ಮುಸ್ಲಿಮರಿಗೆದುರಾದ ಅತ್ಯಂತ ಕಠಿಣತಮ ಸತ್ವ ಪರೀಕ್ಷೆಗಳಿಗೂ ಗುರಿಯಾದ ಅವರು ಆರಂಭ ಕಾಲದ ಮುಸ್ಲಿಮರೊಂದಿಗೆ ಅನುಭವಿಸಿದ ಕಷ್ಟಕೋಟಲೆಗಳಿಗೆ ಮಿತಿಯಿಲ್ಲ. ಅಂತಹ ಕಠಿಣ ಪರಿಸ್ಥಿತಿಯನ್ನು ಈ ಭೂಮುಖದಲ್ಲಿ ಯಾರೂ ಎದುರಿಸಿರಲಿಕ್ಕಿ ಆದರೆ ಈ ಎಲ್ಲ ಸತ್ವ ಪರೀಕ್ಷೆಗಳನ್ನೂ ಬಹಳ ದಿಟ್ಟತನದಿಂದ ಅವರು ಎದುರಿಸಿದ ಎಲ್ಲ ಪರಿಸ್ಥಿತಿಗಳಲ್ಲೂ ಅಲ್ಲಾಹ್ ಮತ್ತು ಆತನ ಪ್ರವಾದಿಯೊಂದಿಗೆ(ಸ) ಪ್ರಾಮಾ

ತಿಯನ್ನು ತೋರ್ಪಡಿಸಿದರು. ಆದರೆ ಬದ್ರ್ ಯುದ್ಧದ ವೇಳೆ ಅವರು ಸಹಿಸಬೇಕಾಗಿ ದ ಕಠಿಣ ಪರೀಕ್ಷೆಗಳನ್ನು ಊಹಿಸಲೂ ಸಾಧ್ಯವಿಲ್ಲ.

ಅವರು ಬದ್ರ್ ಯುದ್ಧದಲ್ಲಿ ಮರಣ ಭೀತಿಯೇ ಇಲ್ಲದ ರೀತಿಯಲ್ಲಿ ವೈರಿಗಳ ಕ್ತಿಗಳ ಮಧ್ಯೆ ನುಗ್ಗುತ್ತಾ ಹೋರಾಡುತ್ತಿದ್ದರು. ಅವರ ಆಕ್ರಮಣದಿಂದ ವೈರಿ ಸೇನೆ ತತ್ತರಿಸಿ ೀಯಿತು. ಕುರೈಶರ ದೊಡ್ಡ ದೊಡ್ಡ ಪರಾಕ್ರಮಿಗಳು ಅವರ ಮುಂದೆ ಬರಲು ರುತ್ತಿದ್ದರು. ಆದರೆ ಒಬ್ಬ ವ್ಯಕ್ತಿ ಮಾತ್ರ ಆಗಾಗ ಅವರ ಮುಂದೆ ಬರುತ್ತಿದ್ದರು. ಆದರೆ ಊ ಉಬೈದಾ ಪ್ರತಿಯೊಂದು ಸಂದರ್ಭದಲ್ಲೂ ಆ ವ್ಯಕ್ತಿಯಿಂದ ತಪ್ಪಿಸಿ ಬದಿಗೆ ಯುತ್ತಿದ್ದರು. ಆ ವ್ಯಕ್ತಿ ಪುನಃ ಪುನಃ ಅವರ ಮುಂದೆ ಬರುತ್ತಲೇ ಇದ್ದರು. ಕಟ್ಟಕಡೆಗೆ ವ್ಯಕ್ತಿ ಅಬೂ ಉಬೈದಾರ ಅತ್ಯಂತ ಸನಿಹಕ್ಕೆ ಬಂದರು. ಆ ವ್ಯಕ್ತಿ ನಿರಂತರ ತನ್ನೆಡೆಗೆ ುವುದು ಅಸಹ್ಯವಾದಾಗ ಅಬೂ ಉಬೈದಾ ಒಂದೇ ಏಟಿಗೆ ಆ ವ್ಯಕ್ತಿಯ ರುಂಡವನ್ನು ರಿಸಿ ಬಿಟ್ಟರು. ಆ ವ್ಯಕ್ತಿ ನೆಲದ ಮೇಲೆ ಬಿದ್ದು ನಿಶ್ಚಲವಾದರು.

ಆ ವ್ಯಕ್ತಿ ಬೇರಾರೂ ಆಗಿರಲಿಲ್ಲ. ಬದ್ರ್ ಯುದ್ಧದಲ್ಲಿ ಅಬೂ ಉಬೈದಾರಿಗೆ ಹಿಸಲಸಾಧ್ಯವಾದ ಅಗ್ನಿ ಪರೀಕ್ಷೆಗೆ ಗುರಿಯಾಗ ಬೇಕಾಯಿತೆಂದು ಮೇಲೆ ಪ್ರಸ್ತಾಪಿಸಿದೆಯಷ್ಟೆ. ನ್ನ ರುಂಡವನ್ನು ಹಾರಿಸಿಕೊಂಡ ಆ ವ್ಯಕ್ತಿ ಅಬೂ ಉಬೈದಾರ ತಂದೆಯೇ ಆಗಿದ್ದ ಅಬ್ದುಲ್ಲಾ ನ್ ಜರ್ರಾಹ್ ಆಗಿದ್ದರು. ಅಬೂ ಉಬೈದಾ ತನ್ನ ತಂದೆಯನ್ನು ವಧಿಸಿರಲಿಲ್ಲ. ಅವರ ದೆಯೊಂದಿಗೆ ಅವರಿಗೆ ವೈರವೂ ಇರಲಿಲ್ಲ. ಬದಲಾಗಿ ಅವರು ಆ ವ್ಯಕ್ತಿಯಲ್ಲಿ ಬೇರೂರಿದ್ದ ೃನಿಷೇಧವನ್ನಷ್ಟೆ ವಧಿಸಿದ್ದರು. ಈ ಸಂದರ್ಭದಲ್ಲಿ ಅಬೂ ಉಬೈದಾ ಮತ್ತವರ ತಂದೆಯ ರಿತು ಅಲ್ಲಾಹನು ಪವಿತ್ರ ಕುರ್‌ಆನ್‌ನಲ್ಲಿ ಈ ಕೆಳಗಿನ ಆಯತ್ ಅವತೀರ್ಣಗೊಳಿಸಿದನು:

"ಅಲ್ಲಾಹ್ ಮತ್ತು ಪರಲೋಕದ ಮೇಲೆ ವಿಶ್ವಾಸವಿರಿಸುವವರು, ಅಲ್ಲಾಹ್ ಮತ್ತು ವನ ಸಂದೇಶವಾಹಕರನ್ನು ವಿರೋಧಿಸಿದವರನ್ನು ಪ್ರೀತಿಸುವುದನ್ನು ನೀವೆಂದೂ ಕಾಣಲಾರಿರಿ. ಂಥವರು ಅವರ ತಂದೆ, ಪುತ್ರರು, ಸಹೋದರರು ಮತ್ತು ಆಪ್ತ ಬಂಧುಗಳೇ ಆಗಿದ್ದರೂ ರಿ. ಅವರ ಹೃದಯಗಳಲ್ಲಿ ಅಲ್ಲಾಹನು ಸತ್ಯವಿಶ್ವಾಸವನ್ನು ಅಚ್ಚೊತ್ತಿ ಬಿಟ್ಟಿರುತ್ತಾನೆ. ಾತ್ರವಲ್ಲದೆ, ತನ್ನ ಕಡೆಯಿಂದ ಒಂದು ಆತ್ಮವನ್ನು ಪ್ರದಾನ ಮಾಡಿ ಅವರಿಗೆ ಕ್ತಿಯನ್ನೊದಗಿಸಿದ್ದಾನೆ. ಅವನು ಅವರನ್ನು ತಳಭಾಗದಲ್ಲಿ ಕಾಲುವೆಗಳು ಹರಿಯುತ್ತಿರುವ ಗೋದ್ಯಾನಗಳಲ್ಲಿ ಪ್ರವೇಶಗೊಳಿಸುವನು. ಅವುಗಳಲ್ಲಿ ಅವರು ಸದಾ ಕಾಲ ವಾಸಿಸುವರು. ಲ್ಲಾಹನು ಅವರಿಂದ ಪ್ರಸನ್ನನಾದನು ಮತ್ತು ಅವರು ಅಲ್ಲಾಹನಿಂದ ಪ್ರಸನ್ನರಾದರು. ವರು ಅಲ್ಲಾಹನ ಪಕ್ಷದವರು. ತಿಳಿಯಿರಿ, ಅಲ್ಲಾಹನ ಪಕ್ಷದವರೇ ವಿಜಯಿಗಳಾಗುವರು."

(ಅಲ್ ಮುಜಾದಲಃ - 22)

ಅಬೂ ಉಬೈದಾರ ಈ ಕೃತ್ಯದಿಂದ ಆಶ್ಚರ್ಯ ಪಡಬೇಕಾಗಿಲ್ಲ. ಏಕೆಂದರೆ ಅವರು ನ್ನ ವಿಶ್ವಾಸಬಲ, ಧರ್ಮದ ಬಗ್ಗೆ ನೈಜ ಹಿತಾಕಾಂಕ್ಷೆ ಮತ್ತು ಸಮುದಾಯದ ಹಿತರಕ್ಷಣೆಯ ಾವ ಉನ್ನತ ಮಟ್ಟಕ್ಕೆ ತಲಪಿದ್ದರೆಂದರೆ ಅವರ ಬಗ್ಗೆ ಅನೇಕ ಮಂದಿ ಈರ್ಷ್ಯೆ ಪಡುತ್ತಿದ್ದರು.

## ವಿಶ್ವಸ್ಥ ಸರದಾರ

ಒಮ್ಮೆ ಕ್ರೈಸ್ತರ ನಿಯೋಗವೊಂದು ಪ್ರವಾದಿಯವರನ್ನು(ಸ) ಭೇಟಿಯಾಗಿ, "ಅಬ ಕಾಸಿಮ್‌ರವರೆ! ನಮ್ಮ ಮಧ್ಯೆ ಆಸ್ತಿಯ ಸಂಬಂಧ ವಿವಾದವುಂಟಾಗಿದೆ. ಅವುಗಳ ತೀರ್ಮಾನ ಮಾಡಲಿಕ್ಕಾಗಿ ತಮ್ಮ ಸಂಗಾತಿಗಳ ಪೈಕಿ ತಾವು ಇಷ್ಟಪಡುವ ಒಬ್ಬರನ್ನು ಕೊಡಬೇಕಾಗಿ ಕೇಳಿಕೊಳ್ಳುತ್ತೇವೆ" ಎಂದರು. ಆಗ ಪ್ರವಾದಿವರ್ಯರು ಹೀಗೆ ಉತ್ತರಿಸಿದ "ನೀವು ಹಗಲು ಹೊತ್ತಿನಲ್ಲಿ ನನ್ನನ್ನು ಬಂದು ಭೇಟಿಯಾಗಿರಿ. ನಾನು ನಿಮ್ಮೊಂ ವಿಶ್ವಸ್ಥನಾದ ಒಬ್ಬನನ್ನು ಕಳಿಸುತ್ತೇನೆ."

ಮರುದಿನ ಝೊಹರ್ ನಮಾಝ್‌ಗಾಗಿ ಹ. ಉಮರ್(ರ) ಬೇಗ ಮಸೀ ತಲಪಿದರು. ನಾಯಕತ್ವ ಪದವಿಗಾಗಿ ಅಂದು ಅವರ ಮನಸ್ಸು ಹಾತೊರೆಯುತ್ತಿ ಪ್ರವಾದಿ(ಸ) ಇಷ್ಟಪಡುವ ವ್ಯಕ್ತಿ ತಾನಾಗಿರಬಹುದೆಂದು ಅವರು ಭಾವಿಸಿದ್ದರು. ಅದ ಅವರು ನಿರೀಕ್ಷಿಸಿದ್ದರು ಕೂಡಾ. ಪ್ರವಾದಿ(ಸ) ಝೊಹರ್ ನಮಾಝ್ ಮಾಡಿಯಾದ ನಂ ಅತ್ತಿತ್ತ ನೋಡ ತೊಡಗಿದರು. ಆಗ ಅವರ ದೃಷ್ಟಿ ತಮ್ಮ ಮೇಲೆ ಬೀಳಲಿ ಎಂ ಹ.ಉಮರ್(ರ) ತಮ್ಮ ಕತ್ತೆತ್ತಿ ತೋರ್ಪಡಿಸ ತೊಡಗಿದರು. ಆದರೆ ಪ್ರವಾದಿ(ಸ) ಉಮರ್‌ ನೋಡುವ ಬದಲು ಸಭಿಕರ ಸುತ್ತ ದೃಷ್ಟಿಯನ್ನು ಹಾಯಿಸ ತೊಡಗಿದರು. ಕೊನೆಗೂ ಅ ದೃಷ್ಟಿ ಅಬೂ ಉಬೈದಾರಲ್ಲಿ ಬಂದು ನಿಂತಿತು. ಅವರನ್ನು ತಮ್ಮ ಬಳಿಗೆ ಕರೆದು ಅವ ನಿಯೋಗವನ್ನು ತೋರಿಸುತ್ತಾ ಹೀಗೆಂದರು, "ಇವರೊಂದಿಗೆ ಹೋಗಿರಿ. ಇವರ ಮ ಉಂಟಾಗಿರುವ ವಿವಾದವನ್ನು ಸತ್ಯ ಮತ್ತು ನ್ಯಾಯದೊಂದಿಗೆ ತೀರ್ಮಾನ ಮಾಡಿರಿ." ಇದ ಕಂಡು ಹ. ಉಮರ್ ಮನಸ್ಸಿನಲ್ಲೇ ಹೀಗೆಂದರು- "ಈ ಶ್ರೇಷ್ಠತೆಯನ್ನು ಅಬೂ ಉಬೈ ಕಿತ್ತು ಕೊಂಡರು."

ಹ. ಅಬೂ ಉಬೈದಾ ಕೇವಲ ಪ್ರಾಮಾಣಿಕ ವ್ಯಕ್ತಿಯಾಗಿರಲಿಲ್ಲ. ಅವರ ವಿಶ್ವಾ ದಾರ್ಢ್ಯತೆಯೂ ಅತ್ಯಂತ ಪ್ರಬಲವಾಗಿತ್ತು. ಅನೇಕ ಸಂದರ್ಭಗಳಲ್ಲಿ ಅದು ಪ್ರಕಟವಾಗಿ ಕೂಡಾ. ಒಂದು ಸಂದರ್ಭದಲ್ಲಿ ಪ್ರವಾದಿಯವರು(ಸ) ಕುರೈಶರ ವ್ಯಾಪಾರಿ ತಂಡದ ಮೇ ಆಕ್ರಮಣ ಮಾಡಲಿಕ್ಕಾಗಿ ಸಹಾಬಿಗಳ ಒಂದು ತಂಡವನ್ನು ರವಾನಿಸಿದರು. ಹ. ಅಬ ಉಬೈದಾರನ್ನು ಅದರ ಸರದಾರರನ್ನಾಗಿ ಮಾಡಿದರು. ರವಾನಿಸುವಾಗ ಅವರ ಕೈಯಲ್ಲಿ ಒಂ ಚೀಲ ಖರ್ಜೂರವನ್ನು ನೀಡಿದರು. ಅದಲ್ಲದೆ ಅವರ ಬಳಿ ಬೇರೇನೂ ಇರಲಿಲ್ಲ. ಅಬ ಉಬೈದಾ ಪ್ರತಿ ದಿನ ತಮ್ಮ ಸಂಗಾತಿಗಳಿಗೆ ತಲಾ ಒಂದು ಖರ್ಜೂರ ನೀಡುತ್ತಿದ್ದರ ಪುಟ್ಟ ಮಕ್ಕಳು ತಾಯಿಯ ಎದೆ ಹಾಲನ್ನು ಹೀರುವಂತೆ ಪ್ರತಿಯೊಬ್ಬ ಸಹಾಬಿಯೂ ಖರ್ಜೂರವನ್ನು ಬಾಯಲ್ಲಿಟ್ಟು ಚೀಪುತ್ತಿದ್ದರು ಮತ್ತು ನೀರು ಕುಡಿಯುತ್ತಿದ್ದರು. ಇದು ಅವರ ಒಂದು ದಿನದ ಆಹಾರವಾಗಿರುತ್ತಿತ್ತು.

ಉಹುದ್ ಯುದ್ಧದ ವೇಳೆಯೂ ವಿಶ್ವಾಸ ದಾರ್ಢ್ಯದ ಪ್ರಕಟನೆ ಈ ರೀತಿ ಆಗಿತ್ತು ಯುದ್ಧದಲ್ಲಿ ಮುಸ್ಲಿಮರು ಹಿಮ್ಮೆಟ್ಟಿ ಚೆಲ್ಲಾಪಿಲ್ಲಿಯಾಗಿ ರಣರಂಗವನ್ನು ಬಿಟ

ಕೊಡಗಿದಾಗ, ಮುಶ್ರಿಕರು, "ಮುಹಮ್ಮದ್ ಎಲ್ಲಿದ್ದಾರೆ, ನಮಗೆ ತೋರಿಸಿ ಕೊಡಿ" ು ಬೊಬ್ಬೆ ಹಾಕ ತೊಡಗಿದರು. ಆಗ ಪ್ರವಾದಿವರ್ಯರ ರಕ್ಷಣೆಗಾಗಿ ವೈರಿಗಳ ಬಾಣದ ಮಳೆಯನ್ನು ತಮ್ಮ ಎದೆಯೊಡ್ಡಿ ತಡೆಗಟ್ಟುತ್ತಿದ್ದ ಹತ್ತು ಮಂದಿ ಸಹಾಬಿಗಳ ಪೈಕಿ ಅಬೂ ೈದಾ ಕೂಡಾ ಒಬ್ಬರಾಗಿದ್ದರು.

ಯುದ್ಧ ಕೊನೆಗೊಂಡಾಗ ಪ್ರವಾದಿವರ್ಯರ ಎರಡು ಹಲ್ಲುಗಳು ಉದುರಿದ್ದುವು. ಖಕ್ಕೆ ಪೆಟ್ಟಾಗಿತ್ತು. ಕಪಾಳಕ್ಕೆ ಶಿರಸ್ತ್ರಾಣದ ಸರಪಣಿಯ ಕೊಂಡಿಗಳೆರಡು ಹೊಕ್ಕಿದ್ದುವು. ಅಬೂಬಕರ್(ರ) ಅದನ್ನು ತೆಗೆಯಲು ಪ್ರಯತ್ನಿಸಿದಾಗ ಆ ಕಾರ್ಯವನ್ನು ತನಗೆ ಬೇಕೆಂದು ಅಬೂ ಉಬೈದಾ ಆಣೆ ಹಾಕಿ ವಿನಂತಿಸಿದರು. ಅದನ್ನು ಕೈಯಿಂದ ಹಿಡಿದೆಳೆದರೆ ಾದಿಯವರಿಗೆ(ಸ) ನೋವಾದೀತೆಂದು ಅಬೂ ಉಬೈದಾ ಹೆದರಿದರು. ಆದುದರಿಂದ ರು ಒಂದು ಕೊಂಡಿಯನ್ನು ಹಲ್ಲಿನಿಂದ ಕಚ್ಚಿ ಹಿಡಿದು ಎಳೆದಾಗ ಅದು ಹೊರಗೆ ಬಂತು. ರೊಂದಿಗೆ ಅವರ ಒಂದು ಹಲ್ಲೂ ಉದುರಿತು. ಅನಂತರ ಇನ್ನೊಂದನ್ನೂ ಹಿಡಿದೆಳೆದರು. ೂ ಹೊರಗೆ ಬಂತು. ಆಗ ಅವರ ಇನ್ನೊಂದು ಹಲ್ಲೂ ಉದುರಿ ಕೆಳಗೆ ಬಿತ್ತು. ಅಬೂಬಕರ್ ಹೀಗೆಂದರು, "ಮುಂದಿನ ಹಲ್ಲು ಉದುರಿ ಬಿದ್ದವರ ಪೈಕಿ ಅಬೂ ಉಬೈದಾ ತ್ತಮರಾಗಿದ್ದಾರೆ."

ಹ. ಅಬೂ ಉಬೈದಾ ಅವರು ಪ್ರವಾದಿವರ್ಯರ ಜೊತೆ ಆರಂಭದಿಂದ ಕೊನೆಯ ಗಿನ ಎಲ್ಲ ಯುದ್ಧಗಳಲ್ಲೂ ಭಾಗವಹಿಸಿದ್ದರು. (ಹ. ಅಬೂಬಕರ್(ರ) ಖಲೀಫಾ ಆಗಿ ುಸಲ್ಪಟ್ಟಿದ್ದ ಸಂದರ್ಭ) ಬನೂ ಸಾಇದಾದ ವಿಶಾಲ ಅಂಗಣದಲ್ಲಿ ಅನ್ಸಾರರು ಸೇರಿದ್ದಾಗ ಉಮರ್(ರ) ಅಬೂ ಉಬೈದಾರ ಕಡೆಗೆ ಕೈ ಚಾಚುತ್ತಾ, "ನಿಮ್ಮ ಕೈ ಮುಂದೆ ಚಾಚಿರಿ, ಮ್ಮೊಂದಿಗೆ ಬೈಅತ್ (ವಿಧೇಯತೆಯ ಕರಾರು) ಮಾಡುತ್ತೇನೆ. ಏಕೆಂದರೆ ಪ್ರವಾದಿಯವರು(ಸ) ಮ್ಮ ಬಗ್ಗೆ ಪ್ರತಿಯೊಂದು ಸಮುದಾಯಕ್ಕೂ ಓರ್ವ ವಿಶ್ವಸ್ಥನಿರುತ್ತಾನೆ, ನಮ್ಮ ವಿಶ್ವಸ್ಥ ಕ್ತಿ ತಾವಾಗಿದ್ದೀರಿ ಎಂದು ಹೇಳಿರುವುದನ್ನು ನಾನು ಕೇಳಿದ್ದೇನೆ"ಎಂದರು. ಆಗ ಅಬೂ ಬೈದಾ ಹೀಗೆ ಉತ್ತರಿಸಿದರು, "ಪ್ರವಾದಿ(ಸ) ನಮ್ಮ ನಾಯಕರಾಗಿ ಯಾರನ್ನು ನೇಮಿಸಿದ್ದರೋ ತ್ತು ಅವರ ನಿಧನದ ವರೆಗೂ ಸಮುದಾಯದ ನೇತೃತ್ವ ವಹಿಸುತ್ತಿದ್ದರೋ ಅಂತಹ ಕ್ತಿಗಿಂತ ಮುಂದೆ ಸಾಗುವ ಧೈರ್ಯ ನಾನು ಹೇಗೆ ಮಾಡಲಿ?" ಅನಂತರ ಹ. ಬೂಬಕರ್‌ರ ಖಿಲಾಫತ್‌ನ ಬೈಅತ್ ನಡೆಯಿತು. ಹ. ಅಬೂ ಉಬೈದಾ ಸತ್ಯ-ನ್ಯಾಯಗಳ ಷಯದಲ್ಲಿ ಅವರ ಅತಿದೊಡ್ಡ ಹಿತ ಚಿಂತಕರೂ ಒಳಿತಿನ ಕಾರ್ಯಗಳಲ್ಲಿ ಅವರ ಅತ್ಯಂತ ಶ್ವಸ್ಥ ಸಹಾಯಕರೂ ಆದರು.

## ಂರಣದಿಂದ ರಕ್ಷಣೆ ಹೊಂದಲು ನಿರಾಕರಿಸಿದವರು

ಹ. ಅಬೂಬಕರ್‌ರು(ರ) ತಮ್ಮ ಬಳಿಕ ಖಿಲಾಫತ್‌ನ ಹೊಣೆಗಾರಿಕೆಯನ್ನು ಹ. ಮರ್‌ರಿಗೆ(ರ) ನೀಡಬೇಕೆಂದು ಅಂತಿಮ ಉಪದೇಶ ಮಾಡಿದರು. ಹ. ಉಮರ್‌ರಿಗೆ(ರ) ಲಾಫತ್‌ನ ಹೊಣೆಗಾರಿಕೆಗಳನ್ನು ನೀಡಲಾದಾಗ ಅಬೂ ಉಬೈದಾರು ಅವರಿಗೆ ಸಂಪೂರ್ಣ

ವಿಧೇಯರಾದರು. ಒಮ್ಮೆ ಮಾತ್ರ ಅವರು ಉಮರ್‌ರ ಆಜ್ಞೆಯನ್ನು ಉಲ್ಲಂಘಿಸಿದರು. ಅ ಹೊರತು ಬೇರೆ ಯಾವ ಸಂದರ್ಭದಲ್ಲೂ ಅವರ ಆಜ್ಞೋಲ್ಲಂಘನೆ ಮಾಡಲಿ ಆಜ್ಞೋಲ್ಲಂಘನೆ ಮಾಡಿದ ಆ ಸಂದರ್ಭ ಯಾವುದಾಗಿತ್ತು? ಇದು ಬಹಳ ಸ್ವಾರಸ್ಯ ಘಟನೆ.

ಹ. ಉಮರ್‌ರ(ರ) ಆಡಳಿತ ಕಾಲದಲ್ಲಿ ಇಸ್ಲಾಮಿ ಸಾಮ್ರಾಜ್ಯ ವಿಸ್ತಾರಗೊಳ್ಳುತ್ತಿತ ಅಬೂ ಉಬೈದಾ ಸಿರಿಯಾದ ಪ್ರದೇಶಗಳಲ್ಲಿ ಇಸ್ಲಾಮಿ ಸೇನೆಗಳ ನೇತೃತ್ವ ವಹಿಸಿದ್ದ ಒಂದರ ಹಿಂದೆ ಒಂದರಂತೆ ವಿಜಯ ಪತಾಕೆಯನ್ನು ನಾಟುತ್ತಾ ಅವರು ಮುಂದೆ ಸಾಗಿದ ಪೂರ್ವದಲ್ಲಿ ಯೂಫ್ರಟಿಸ್ ನದಿಯ ವರೆಗೂ ಉತ್ತರದಲ್ಲಿ ಏಷ್ಯಾ ಕೂಚಕ್‌ನ ವರೆ ಅವರು ಸಾಗಿದ್ದರು. ಆ ಸಮಯ ಸಿರಿಯಾದಲ್ಲಿ ಹಠಾತ್ತನೆ ಪ್ಲೇಗ್ ರೋಗ ಹಬ್ಬಿತು. ಇ ಅಸಂಖ್ಯಾತ ಜನರನ್ನು ಬಲಿ ತೆಗೆದುಕೊಂಡಿತು. ಹ. ಉಮರ್‌ರಿಗೆ(ರ) ಇದರ ಸು ತಲಪಿದಾಗ ಅವರು ಅತೀವ ಕಳವಳಕ್ಕೀಡಾದರು. ಅವರು ಒಬ್ಬ ದೂತನನ್ನು ಒಂದು ಪ ಕೊಟ್ಟು ಅಬೂ ಉಬೈದಾರ ಬಳಿಗೆ ಕಳಿಸಿದರು, "ನನಗೆ ಒಂದು ಪ್ರಾಮುಖ್ಯ ವಿಷಯದ ನಿಮ್ಮೊಂದಿಗೆ ಚರ್ಚಿಸ ಬೇಕಾಗಿದೆ. ಆದುದರಿಂದ ಈ ಪತ್ರ ಸಿಕ್ಕಿದ ಕೂಡಲೇ ತಡ ಮಾಡ ಹೊರಟು ಬರಬೇಕು. ಈ ಪತ್ರ ರಾತ್ರಿ ಹೊತ್ತು ಸಿಕ್ಕಿದರೆ ಬೆಳಗಾಗುವ ತನಕ ಕಾಯಬಾರದ ಬೆಳಗ್ಗಿನ ಹೊತ್ತು ಸಿಕ್ಕಿದರೆ ಸಂಜೆಯಾಗುವುದರೊಳಗೆ ಬರಬೇಕು" ಎಂದು ಆ ಪತ್ರದ ಬರೆಯಲಾಗಿತ್ತು.

ಹ. ಅಬೂ ಉಬೈದಾರಿಗೆ ಈ ಪತ್ರ ಸಿಕ್ಕಿದಾಗ ಅವರು ಅದನ್ನೋದಿ ಹೀ ಪ್ರತಿಕ್ರಿಯಿಸಿದರು, "ಅಮೀರುಲ್ ಮುಅ್‌ಮಿನೀನ್ (ಮುಸ್ಲಿಮರ ನಾಯಕ ಉಮರ್)ರಿಗೆ ನ ಅಗತ್ಯ ಏಕೆಂದು ನನಗೆ ಚೆನ್ನಾಗಿ ಗೊತ್ತು." ತರುವಾಯ ಅವರು ಹ. ಉಮರ್‌ರಿಗೆ( ಈ ರೀತಿ ಉತ್ತರ ಬರೆದು ಕಳಿಸಿದರು-

"ಅಮೀರುಲ್ ಮುಅ್‌ಮಿನೀನ್! ನನ್ನ ಅಗತ್ಯ ತಮಗೆ ಏಕೆ ಬಂತೆಂದು ನಾ ಗ್ರಹಿಸಿದ್ದೇನೆ. ನಾನು ಮುಸ್ಲಿಮರ ಸೈನ್ಯದಲ್ಲಾಗಲಿ ನನ್ನ ಮನಸ್ಸಿನಲ್ಲಾಗಲಿ, ಈ ಮಂ ಸಿಲುಕಿರುವಂತಹ ಮಹಾ ಮಾರಿಯಿಂದ ರಕ್ಷಿಸಿಕೊಳ್ಳಬೇಕೆಂಬ ಆಗ್ರಹವನ್ನೆಂದೂ ಮಾಡಲಿಲ್ಲ ಅಲ್ಲಾಹನು ನನ್ನ ಮತ್ತು ಅವರ ಮಧ್ಯೆ ಏನಾದರೂ ತೀರ್ಮಾನ ಮಾಡುವ ತನಕ ನಾ ಅವರನ್ನು ಬಿಟ್ಟು ಬರಲಾರೆ. ಆದುದರಿಂದ ನನ್ನ ಈ ಪತ್ರ ತಮ್ಮ ಕೈಗೆ ಸಿಕ್ಕಿದರೆ ತಾ ತಮ್ಮ ಆಜ್ಞೆಯನ್ನು ನನ್ನ ಪರವಾಗಿ ಹಿಂತೆಗೆಯಿರಿ ಮತ್ತು ನನಗೆ ಇಲ್ಲೇ ಇರಲು ಅನುಮ ನೀಡಿರಿ."

ಇದನ್ನು ಓದಿದ ಹ. ಉಮರ್(ರ) ಒಂದೇ ಸಮನೆ ಅಳತೊಡಗಿದರು. ಅವ ಕಣ್ಣುಗಳಿಂದ ಅಶ್ರುಧಾರೆ ಹರಿಯತೊಡಗಿತು. ಅವರ ಈ ಅವಸ್ಥೆಯನ್ನು ಕಂಡು ಆಸ್ಥಾನಿಗರು "ಅಬೂ ಉಬೈದಾ ನಿಧನರಾದರೇ?" ಎಂದು ಕೇಳಿದರು. ಆಗ ಅವರು, "ಇಲ್ಲ. ಅವರ ನಿಧನರಾಗಲಿಲ್ಲ. ಆದರೆ ಮರಣ ಅವರ ಸನಿಹದಲ್ಲೇ ಇದೆ" ಎಂದರು. ಹ. ಉಮರ್‌ರ(ರ ಭೀತಿ ತಪ್ಪಾಗಿರಲಿಲ್ಲ. ಕೆಲವೇ ದಿನಗಳ ಬಳಿಕ ಪ್ಲೇಗ್ ಅವರನ್ನೂ ಬಾಧಿಸಿತು.

ಅವರ ಮರಣ ಸಮೀಪಿಸಿದಾಗ ತಮ್ಮ ಸೈನ್ಯವನ್ನು ಕರೆದು ಅವರು ತಮ್ಮ ಅಂತಿಮ ದೇಶವನ್ನು ಹೀಗೆ ನೀಡಿದರು: "ನಾನು ನಿಮಗೆ ಉಪದೇಶಿಸುತ್ತೇನೆ. ಅದರಂತೆ ನೀವು ನರೆ ಸದಾ ಒಳಿತಿನಲ್ಲಿರುವಿರಿ. ನೋಡಿರಿ! ನೀವು ನಮಾಝ್ ಸಂಸ್ಥಾಪಿಸಬೇಕು. ಝಾನ್ ತಿಂಗಳಲ್ಲಿ ಉಪವಾಸ ವ್ರತ ಆಚರಿಸಬೇಕು. ದಾನ-ಧರ್ಮಗಳನ್ನು ಮಾಡುತ್ತಿರಬೇಕು. ಜ್ ಮತ್ತು ಉಮ್ರಾ ಮಾಡುತ್ತಿರಬೇಕು. ಪರಸ್ಪರ ಒಳಿತಿನ ಉಪದೇಶ ಮಾಡುತ್ತಿರಬೇಕು. ನಾಯಕರೊಂದಿಗೆ ಪ್ರಾಮಾಣಿಕವಾಗಿ ವರ್ತಿಸಬೇಕು. ಅವರೊಂದಿಗೆ ವಂಚನೆ ಮತ್ತು ಸದ ವರ್ತನೆ ಮಾಡಬಾರದು. ಈ ಲೋಕವು ನಿಮ್ಮನ್ನು ವಂಚನೆಯಲ್ಲಿ ಸಿಲುಕಿಸದಿರಲಿ. ದರೆ ಇಲ್ಲಿ ಪ್ರತಿಯೊಬ್ಬನಿಗೂ ಸಾವಿರ ವರ್ಷದ ಜೀವನ ಲಭಿಸಿದರೂ ನಾನು ಇಂದು ಕಿರುವಂತಹ ಅಂತಿಮ ಗತಿಗೆ ತಲಪಲೇಬೇಕಾಗಿದೆ. ನಿಮ್ಮ ಮೇಲೆ ಅಲ್ಲಾಹನ ಯಿಂದ ಶಾಂತಿ, ಕರುಣೆ ಮತ್ತು ಸಮೃದ್ಧಿಯಿರಲಿ."

ಇದಾದ ಬಳಿಕ ಅವರು ಹ. ಮುಆದ್ ಬಿನ್ ಜಬಲ್‌ರನ್ನು(ರ) ಕರೆದು, "ನನ್ನ ಕರ ಈ ಜನರಿಗೆ ನೀವು ನಮಾಝ್ ಮಾಡಿಸುತ್ತಿರಬೇಕು" ಎಂದು ಹೇಳಿದರು. ಕೆಲವು ಷದ ಬಳಿಕ ಆ ಧೀರ ಸಹಾಬಿಯ ಪ್ರಾಣ ಪಕ್ಷಿ ಹಾರಿ ಹೋಯಿತು. ಇನ್ನಾಲಿಲ್ಲಾಹಿ..... ಣವಾದ ಕೂಡಲೇ ಹ. ಮುಆದ್ ಬಿನ್ ಜಬಲ್(ರ) ಜನರನ್ನುದ್ದೇಶಿಸಿ ತಮ್ಮ ಾಪವನ್ನು ಈ ಕೆಳಗಿನ ಶಬ್ದಗಳಲ್ಲಿ ಸೂಚಿಸಿದರು.

"ಜನರೇ! ಇಂದು ನಾವು ಒಬ್ಬ ಮಹಾನ್ ವ್ಯಕ್ತಿಯ ನಿಧನದಿಂದ ದುಃಖ ಸಾಗರದಲ್ಲಿ ಳುಗಿದ್ದೇವೆ. ಅಲ್ಲಾಹನಾಣೆ! ನಾನು ಈ ವರೆಗೂ ಇಂತಹ ಪ್ರಾಮಾಣಿಕ, ಸುಸ್ವಭಾವದ ತ್ತು ದುಸ್ವಭಾವವಿಲ್ಲದಂತಹ ವ್ಯಕ್ತಿಯನ್ನು ಕಂಡಿಲ್ಲ. ಅದೇ ರೀತಿ ನಾನು ಇವರಿಗಿಂತ ಟ್ಟ ಪರಲೋಕವನ್ನು ನೆಚ್ಚಿಕೊಂಡಿರುವ ಮತ್ತು ಮುಸ್ಲಿಮ್ ಜನಸಾಮಾನ್ಯರ ಹಿತ ಕನೆಯಿರುವ ವ್ಯಕ್ತಿಯನ್ನೂ ಕಂಡಿಲ್ಲ. ಆದುದರಿಂದ ಅಲ್ಲಾಹನಲ್ಲಿ ಇವರ ಮೇಲೆ ಕರುಣೆ ಸುವಂತೆ ಪ್ರಾರ್ಥಿಸಿರಿ. ಅಲ್ಲಾಹನು ನಿಮ್ಮ ಮೇಲೂ ದಯೆ ತೋರಲಿ."

# ಹ. ಸಲ್ಮಾನ್ ಫಾರ್ಸಿ(ರ)

## ಸತ್ಯಾನ್ವೇಷಣೆ

ಹ. ಸಲ್ಮಾನ್ ಫಾರ್ಸಿ(ರ) ಇರಾನ್‌ನ ಅಸ್ಫಹಾನ್ ಪ್ರದೇಶದ 'ಜಿಯಾನ್' ಎಂ ಊರಿನ ಅತಿ ದೊಡ್ಡ ಧನಿಕ, ಜಮೀನ್ದಾರ ಹಾಗೂ ಸಾಮಾಜಿಕ ಮುಂದಾಳುವೊಬ್ ಪುತ್ರರಾಗಿದ್ದರು. ಅವರ ಜನನದಿಂದ ತಂದೆ ಅತ್ಯಂತ ಸಂತೋಷಗೊಂಡಿದ್ದರು. ಪುತ್ರನೊಂ ಅವರಿಗೆ ಗಾಢ ಪ್ರೀತಿಯಿತ್ತು. ಅವರು ಬೆಳೆದಂತೆ ತಂದೆಯ ಪ್ರೀತಿಯು ಹೆಚ್ಚಿ ಅವರಿಗೇನಾದರೂ ಅಪಾಯ ತಟ್ಟದಂತೆ ಸದಾ ಎಚ್ಚರಿಕೆ ವಹಿಸುತ್ತಿದ್ದರು. ಅದಕ ಪುತ್ರನನ್ನು ಎಲ್ಲೂ ಹೊರಗೆ ಹೋಗಲು ಬಿಡುತ್ತಿರಲಿಲ್ಲ. ಅವರು ತಮ್ಮ ಪರಂಪರಾ ಅಗ್ನಿಯಾರಾಧಕ ಧರ್ಮದ ಜ್ಞಾನಗಳಿಸಿ ಅದರಂತೆ ನಡೆಯುವ ವಿಷಯದಲ್ಲಿ ವಿಶೇಷ ಆ ವಹಿಸಿದ್ದರು. ಅದರಲ್ಲೇ ಪ್ರಗತಿ ಹೊಂದುತ್ತಾ ಅದರ ಅರ್ಚಕ ಸ್ಥಾನಕ್ಕೂ ತಲಪಿದ ದಿನರಾತ್ರೆ ಅಗ್ನಿಕುಂಡವನ್ನು ಉರಿಸಿಡುವುದು ಅವರ ಹೊಣೆಗಾರಿಕೆಗಳಲ್ಲೊಂದಾಗಿತ್ತು.

ಹ. ಸಲ್ಮಾನ್‌ರ ತಂದೆಗೆ ಬಹಳ ದೊಡ್ಡ ಜಮೀನಿತ್ತು. ಅದರಿಂದ ಬಹಳಷ್ಟು ಧಾ ಉತ್ಪಾದನೆಯಾಗುತ್ತಿತ್ತು. ಜಮೀನು ಮತ್ತು ಅದರ ಉತ್ಪನ್ನಗಳ ಮೇಲ್ವಿಚಾರಣೆಯನ್ನು ಅ ತಂದೆಯೇ ವಹಿಸುತ್ತಿದ್ದರು. ಒಂದು ದಿನ ಯಾವುದೋ ನಿಬಿಡತೆಯಿಂದಾಗಿ ಅವ ಹೊಲಗಳಿಗೆ ಹೋಗಲಾಗಲಿಲ್ಲ. ಅದಕ್ಕಾಗಿ ಮಗನನ್ನು ಕರೆದು 'ನನಗೆ ತುರ್ತು ಕೆಲಸವಿರುವುದರಿ ಈ ದಿನ ಹೊಲಗಳಿಗೆ ಹೋಗಿ ಅದನ್ನು ನೋಡಿಕೊಳ್ಳಬೇಕು' ಎಂದು ಆದೇಶಿಸಿದ ತಂದೆಯ ಆದೇಶದಂತೆ ದೂರದ ಹೊಲಗಳಿಗೆ ಹೋಗುವ ದಾರಿಯಲ್ಲಿ ಅವರಿಗೆ ಒಂ ಇಗರ್ಜಿ ಕಾಣಸಿಕ್ಕಿತು. ಅಗ ಇಗರ್ಜಿಯಲ್ಲಿ ಪ್ರಾರ್ಥನೆ ನಡೆಯುತ್ತಿತ್ತು. ಆರಾಧಕರ ಶ ಕಿವಿಗೆ ಬಿದ್ದಾಗ ಅವರು ಅತ್ತ ಗಮನಿಸಿದರು. ಅವರ ತಂದೆಯು ಅವರನ್ನು ಎಲ್ಲೂ ಹೊ ಹೋಗಲು ಮತ್ತು ಜನರೊಂದಿಗೆ ಬೆರೆಯಲು ಬಿಡದ ಕಾರಣ ಅವರಿಗೆ ಕ್ರೈಸ್ತ ಅಥ ಇನ್ನಾವುದೇ ಧರ್ಮದ ಕುರಿತು ತಿಳುವಳಿಕೆ ಇರಲಿಲ್ಲ. ಅವರು ಕ್ರೈಸ್ತರು ಏನು ಮಾಡುತ್ತಿದ್ದಾರೆಂ ನೋಡಲು ಇಗರ್ಜಿಯೊಳಗೆ ಪ್ರವೇಶಿಸಿದರು. ಅವರ ಆರಾಧನಾ ಕ್ರಮ ಸಲ್ಮಾನ್‌ರಿಗೆ ಬ ಹಿಡಿಸಿತು. ಆ ಧರ್ಮದ ಮೇಲೆ ಆಸಕ್ತಿ ಮೂಡಿತು. ಅವರು ಮನದಲ್ಲೇ ಇವರ ಧರ್ಮ ನಮ್ಮ ಧರ್ಮಕ್ಕಿಂತ ಉತ್ತಮವೆಂದು ಹೇಳಿದರು. ಅವರು ಸೂರ್ಯಾಸ್ತಮಾನದ ವ ಅವರೊಂದಿಗೆ ಅಲ್ಲೇ ಇದ್ದರು. ಅವರು ಅಲ್ಲಿದ್ದ ಜನರೊಡನೆ ಈ ಧರ್ಮದ ಮೂಲಸ

ದೆಯೆಂದು ಕೇಳಿದಾಗ ಸಿರಿಯಾದಲ್ಲಿದೆ ಎಂದು ತಿಳಿಸಿದರು.

ರಾತ್ರಿ ವೇಳೆ ಮರಳಿದಾಗ ಅವರ ತಂದೆ ಅವರಲ್ಲಿ ಅಂದಿನ ಕೆಲಸ ಕಾರ್ಯಗಳ ವಿವರ ದರು. ಅವರು ತಂದೆಯೊಂದಿಗೆ, "ಅಪ್ಪಾ! ನಾನು ಹೋಗುವಾಗ ಒಂದು ಆರಾಧನಾಲಯ ತಿ. ಅಲ್ಲಿ ಜನರು ಮಾಡುತ್ತಿದ್ದ ಆರಾಧನಾ ಕ್ರಮ ನನಗೆ ಮೆಚ್ಚುಗೆಯಾಯಿತು. ಸಂಜೆಯ ಗೂ ನಾನು ಅಲ್ಲೇ ಇದ್ದೆ" ಎಂದು ಹೇಳಿದರು. ಇದನ್ನು ಕೇಳಿ ತಂದೆಗೆ ತುಂಬಾ ರಿಯಾಯಿತು. ಅವರು ಹೇಳಿದರು, "ಮಗನೇ, ಆ ಧರ್ಮದಲ್ಲೇನೂ ಒಳಿತಿಲ್ಲ. ನಮ್ಮ ಸ್ತಿ ನಮ್ಮ ಪೂರ್ವಜರ ಧರ್ಮವೇ ಉತ್ತಮವಾದುದು." ಆಗ ಸಲ್ಮಾನ್ ಹೇಳಿದರು, ಂಡಿತ ಅಲ್ಲ. ಅವರ ಧರ್ಮವು ನಮ್ಮ ಧರ್ಮಕ್ಕಿಂತ ಉತ್ತಮವಾಗಿದೆ." ಮಗನ ತ್ತರವನ್ನು ಕೇಳಿ ಅವನೇನಾದರೂ ತನ್ನ ಧರ್ಮವನ್ನು ತೊರೆಯುವನೋ ಎಂಬ ಭೀತಿ ರ ತಂದೆಗೆ ಉಂಟಾಯಿತು. ಆದುದರಿಂದ ಅವರ ಕಾಲಿಗೆ ಬೇಡಿ ತೊಡಿಸಿ ಮನೆಯಲ್ಲಿ ತಿ ಹಾಕಿದರು.

ಸಂದರ್ಭ ಸಾಧಿಸಿಕೊಂಡು ಸಲ್ಮಾನ್ ಕ್ರೈಸ್ತರಿಗೆ ಒಂದು ಸಂದೇಶ ಕಳಿಸಿದರು- ಯಾಕ್ಕೆ ಹೋಗುವ ಯಾವುದಾದರೂ ವ್ಯಾಪಾರಿ ತಂಡ ನಿಮ್ಮ ಬಳಿಗೆ ಬಂದರೆ ನನಗೆ ಸಬೇಕು ಎಂದವರು ಆ ಸಂದೇಶದಲ್ಲಿ ತಿಳಿಸಿದ್ದರು. ಅದೃಷ್ಟವಶಾತ್ ಕೆಲವೇ ದಿನಗಳಲ್ಲಿ ದು ತಂಡ ಅಲ್ಲಿಗೆ ಬಂತು. ಕ್ರೈಸ್ತರು ಸಲ್ಮಾನ್‌ರಿಗೆ ವಿಷಯ ತಿಳಿಸಿದರು. ಅವರು ಬಹಳ ಯಾಸಪಟ್ಟು ತನ್ನ ಕಾಲಿನ ಬೇಡಿಯನ್ನು ಕಳಚುವಲ್ಲಿ ಯಶಸ್ವಿಯಾದರು. ಬೇಡಿ ಕಳಚಿ ಸಿಕೊಂಡು ಅವರು ಆ ತಂಡದ ಜೊತೆ ಸಿರಿಯಾಕ್ಕೆ ಹೋದರು. ಅಲ್ಲಿ ಹೋಗಿ ಕ್ರೈಸ್ತ ರ್ಮದ ಅತಿ ಶ್ರೇಷ್ಠ ವ್ಯಕ್ತಿ ಯಾರೆಂದು ಕೇಳಿದರು. ಅಲ್ಲಿನ ಜನರು ಅವರಿಗೆ ಅಲ್ಲಿನ ರ್ಜಿಯ ಆಡಳಿತಾಧಿಕಾರಿಯೂ ಆಗಿದ್ದ ಪಾದ್ರಿಯೋರ್ವರನ್ನು ತೋರಿಸಿದರು. ಅವರು ಪಾದ್ರಿಯ ಬಳಿಗೆ ಹೋಗಿ ಹೀಗೆಂದರು, "ನಾನು ಕ್ರೈಸ್ತ ಧರ್ಮದತ್ತ ಆಕರ್ಷಿತನಾಗಿದ್ದೇನೆ. ು ತಮ್ಮೊಂದಿಗೆ ಇದ್ದು ತಮ್ಮ ಸೇವೆ ಮಾಡುತ್ತಾ ಕ್ರೈಸ್ತ ಧರ್ಮದ ಶಿಕ್ಷಣ ಪಡೆಯಲು ತ್ತು ತಮ್ಮಂತೆ ಆರಾಧನೆ ಮಾಡಲು ಬಯಸುತ್ತೇನೆ. ಪಾದ್ರಿಯು ಅವರ ಕೋರಿಕೆಯನ್ನು ್ನಿಸಿ ತನ್ನೊಂದಿಗೆ ಇರಿಸಿದರು. ಅವರ ಪಾದ ಸೇವೆ ಮಾಡುತ್ತಾ ದಿನ ಕಳೆದರು. ಆದರೆ ವೇ ದಿನಗಳ ಬಳಿಕ ಆ ಪಾದ್ರಿಯ ಗುಣನಡತೆ ಮತ್ತು ಚಾರಿತ್ರ್ಯವು ಉತ್ತಮವಲ್ಲವೆಂದು ರಿಗೆ ಕಂಡು ಬಂತು. ಅವರು ತನ್ನ ಅನುಯಾಯಿಗಳಿಗೆ ದಾನ-ಧರ್ಮವನ್ನು ನೀಡುವಂತೆ ೀಶಿಸುತ್ತಾ ಅದಕ್ಕೆ ಅಪಾರ ಪುಣ್ಯವಿದೆಯೆಂದು ಹೇಳುತ್ತಿದ್ದರು. ಜನರು ದೇವ ಮಾರ್ಗದಲ್ಲಿ ರ್ಚು ಮಾಡಲಿಕ್ಕಾಗಿ ಪಾದ್ರಿಗೆ ಹಣ ನೀಡಿದರೆ, ಅದೆಲ್ಲವನ್ನೂ ತನ್ನ ಸ್ವಂತಕ್ಕಾಗಿ ಕೂಡಿ ಕುತ್ತಿದ್ದರು. ಬಡವರಿಗೆ ಏನೂ ನೀಡುತ್ತಿರಲಿಲ್ಲ. ಹೀಗೆ ಅವರ ಬಳಿ ಬಹಳಷ್ಟು ಧನ ಕ ಸಂಗ್ರಹವಾಯಿತು. ಅವರ ಬಳಿ ಚಿನ್ನಾಭರಣಗಳು ತುಂಬಿದ ಏಳು ಕೊಡವಿತ್ತು. ಅವರ ದುಷ್ಕೃತ್ಯಗಳನ್ನು ನೋಡಿ ಸಲ್ಮಾನ್‌ರಿಗೆ ಅವರ ಬಗ್ಗೆ ತಾತ್ಸಾರ ಭಾವನೆ ಮೂಡಿತು. ವು ದಿನಗಳ ನಂತರ ಪಾದ್ರಿ ತೀರಿ ಹೋದರು.

ಕ್ರೈಸ್ತರು ಅವರ ಅಂತ್ಯಕ್ರಿಯೆಗೆ ಸೇರಿದಾಗ ಸಲ್ಮಾನ್‌ರು ಅವರಿಗೆ, ಆ ವ್ಯಕ್ತಿ ತುಂಬಾ

ಕೆಟ್ಟವನೆಂದೂ ಜನರಿಗೆ ದಾನಧರ್ಮಗಳನ್ನು ಮಾಡುವಂತೆ ಬೋಧಿಸಿ ಅವರು ಕೊಟ್ಟ ಕನಕಗಳನ್ನು ಬಡವರಿಗೆ ಕಿಂಚಿತ್ತೂ ನೀಡದೆ ಎಲ್ಲವನ್ನೂ ತನಗಾಗಿ ಶೇಖರಿಸಿಡುತ್ತಾನೆಂ ತಿಳಿಸಿದರು. ಇದು ನಿಮಗೆ ಹೇಗೆ ತಿಳಿಯಿತು ಎಂದು ಜನರು ಪ್ರಶ್ನಿಸಿದಾಗ, ಅವರಿಗೆ ಪಾದ್ರಿ ಧನ ಕನಕಗಳ ಭಂಡಾರವನ್ನು ತೋರಿಸಿದರು. ಅಲ್ಲಿ ಅವರಿಗೆ ಚಿನ್ನಾಭರಣಗಳು ತುಂ ಏಳು ಕೊಡಗಳು ಸಿಕ್ಕಿದುವು. ಇದರಿಂದ ಕುಪಿತರಾದ ಆ ಜನರು, ಇವನನ್ನು ದ ಮಾಡಬಾರದು ಎಂದು ಹೇಳಿ ಅವನ ಶವವನ್ನು ಶಿಲುಬೆಗೇರಿಸಿ ಕಲ್ಲಿನ ಸುರಿಮಳೆಗೈದ

ತರುವಾಯ ಆ ಪಾದ್ರಿಯ ಸ್ಥಾನದಲ್ಲಿ ಇನ್ನೊಬ್ಬರನ್ನು ನೇಮಿಸಿದರು. ಸಲ್ಮಾ ಹೊಸ ಗುರುವಿನ ಸೇವೆ ಮಾಡ ತೊಡಗಿದರು. ಆ ವ್ಯಕ್ತಿ ನಿಜವಾಗಿಯೂ ಓರ್ವ ದೇವ ಸನ್ಯಾಸಿಯಾಗಿದ್ದರು. ಪರಲೋಕದ ಚಿಂತೆ ಅವರಲ್ಲಿತ್ತು. ಆರಾಧನೆಗಳನ್ನು ಚಾಚೂ ತ ನಿಷ್ಠೆಯಿಂದ ಪಾಲಿಸುತ್ತಿದ್ದರು. ಸಲ್ಮಾನರು ಅವರನ್ನು ಪ್ರೀತಿಸತೊಡಗಿದರು. ಬ ಸಮಯದ ವರೆಗೆ ಅವರಿಂದ ಬೋಧನೆಗಳನ್ನು ಪಡೆದರು.

ಪಾದ್ರಿಯ ಮರಣ ಸಮೀಪಿಸಿದಾಗ ಸಲ್ಮಾನ್‌ರು ಅವರ ಸಮೀಪ ಹೋಗಿ, "ಗು ನನಗೆ ತಮ್ಮ ಉಪದೇಶವೇನು? ತಮ್ಮ ಬಳಿಕ ನಾನು ಯಾರ ಬಳಿಗೆ ಹೋಗಬೇ ಎಂದು ಕೇಳಿದರು.

ಅವರು ಹೀಗೆ ಉತ್ತರಿಸಿದರು, "ಮಗನೇ! ನಾನು ಯಾವ ಧರ್ಮದಲ್ಲಿರುವೆನೋ ತಿಳುವಳಿಕೆಯ ಪ್ರಕಾರ ಅದನ್ನು ಅನುಸರಿಸುವ ಒಬ್ಬ ವ್ಯಕ್ತಿ ಮಾತ್ರ ಇದ್ದಾರೆ. ಅ ಮೌಸಿಲ್ ಪ್ರಾಂತ್ಯದಲ್ಲಿದ್ದಾರೆ. ಅವರು ನೈಜ ಧರ್ಮದಲ್ಲಿ ಯಾವುದೇ ಬದಲಾ ಮಾಡಿಲ್ಲ. ಈಗ ಸತ್ಯವು ಅವರ ಬಳಿಯಲ್ಲಿ ಮಾತ್ರ ಇದೆ."

## ಅದ್ಭುತ ಆತ್ಮಕಥೆ

ಧರ್ಮ ಗುರುವಿನ ಸಾವಿನ ಬಳಿಕ ಹ. ಸಲ್ಮಾನ್ ಮೌಸಿಲ್‌ಗೆ ಪ್ರಯಾಣ ಬೆಳೆಸಿದ ಅಲ್ಲಿಗೆ ಹೋಗಿ ತನ್ನ ಗುರು ಹೇಳಿದ ವ್ಯಕ್ತಿಯನ್ನು ಭೇಟಿಯಾಗಿ ಆತನಿಗೆ ವೃತ್ತಾಂತವನ್ನೆಲ್ಲ ಹೇಳಿದರು. ಸತ್ಯಧರ್ಮವು ಈಗ ನಿಮ್ಮ ಬಳಿಯಲ್ಲಿ ಮಾತ್ರ ಇರುವುದರಿ ನನ್ನನ್ನು ನಿಮ್ಮ ಸೇವೆಗಾಗಿ ಇರಿಸಿಕೊಳ್ಳಿರೆಂದು ಅವರೊಡನೆ ಹೇಳಿದರು. ಪಾದ್ರಿಯು ಅ ಅನುಮತಿ ನೀಡಿದರು. ಅವರು ಬಹಳ ಒಳ್ಳೆಯ ವ್ಯಕ್ತಿಯಾಗಿದ್ದರು. ಆದರೆ ಸಲ್ಮಾ ದುರದೃಷ್ಟಕ್ಕೆ ಆ ಪಾದ್ರಿಯೂ ಬೇಗನೆ ಮರಣ ಹೊಂದಿದರು.

ಮರಣದ ವೇಳೆ, ಇನ್ನು ಯಾರ ಬಳಿಗೆ ಹೋಗಬೇಕೆಂದು ಅವರೊಡನೆ ಕೇಳಿದ 'ನುಸಯ್ಬೈನ್' ಎಂಬಲ್ಲಿ ಒಬ್ಬ ಧರ್ಮಗುರು ಮಾತ್ರ ತಾನಿರುವ ಸತ್ಯ ಧರ್ಮದಲ್ಲಿರುವು ಅವರು ಹೇಳಿದರು. ಗುರುವಿನ ಅಂತ್ಯ ಕ್ರಿಯೆಯ ನಂತರ ಅವರು ಹೇಳಿದ ವ್ಯಕ್ತಿಯ ಬ ಹೋಗಿ ತನ್ನ ಕಥೆಯನ್ನು ಹೇಳಿ ಅವರ ಸೇವೆ ಮಾಡುವ ಅನುಮತಿ ಕೋರಿದರು. ಅವ ಈ ಹಿಂದಿನ ಇಬ್ಬರು ಧರ್ಮ ಗುರುಗಳ ಸತ್ಯ ಧರ್ಮದಲ್ಲೇ ಇದ್ದರು. ಆದರೆ ಸಲ್ಮಾನ್ ಅವರ ಬೋಧನೆ ಮತ್ತು ತರಬೇತಿಯನ್ನು ಹೆಚ್ಚುಕಾಲ ಹೊಂದಲು ಸಾಧ್ಯವಾಗಲಿಲ್ಲ. ಕಾ

ಗುರುವಿನ ಮರಣವೂ ಸಮೀಪಿಸಿತು.

ಮರಣದ ವೇಳೆ ಅವರಲ್ಲೂ ಕೇಳಿದಾಗ, 'ಅಮೂರಿಯ್ಯ' ಎಂಬಲ್ಲಿ ಒಬ್ಬ ವ್ಯಕ್ತಿ ಮಾತ್ರ ಸತ್ಯಧರ್ಮದಲ್ಲಿರುವುದಾಗಿ ಅವರು ತಿಳಿಸಿದರು. ನನ್ನ ಬಳಿಕ ಅವರ ಬಳಿಗೆ ೀಗಬೇಕೆಂದೂ ಅವರು ಉಪದೇಶಿಸಿದರು. ಅವರ ಉಪದೇಶದಂತೆ ಹ. ಸಲ್ಮಾನ್ ಅಲ್ಲಿಗೆ ಯಾಣ ಬೆಳೆಸಿದರು. ಅಲ್ಲಿಗೆ ತಲಪಿ ತನ್ನ ಈ ವರೆಗಿನ ಅಹವಾಲುಗಳನ್ನು ವಿವರಿಸಿದರು. ರ ಅನುಮತಿ ಪಡೆದು ಅಲ್ಲಿದ್ದು ಅವರಿಂದ ಶಿಕ್ಷಣ ಬೋಧನೆಗಳನ್ನು ಗಳಿಸತೊಡಗಿದರು. ಗುರು ಕೂಡಾ ಅವರ ಹಿಂದಿನ ಗುರುಗಳಿದ್ದ ಅದೇ ಸತ್ಯ ಧರ್ಮದಲ್ಲಿದ್ದರು. ಇವರ ಶಿಕ್ಷಣ ಪಡೆಯುತ್ತಿದ್ದ ಕಾಲದಲ್ಲಿ ಹ. ಸಲ್ಮಾನ್ ಕೆಲವು ದನಗಳನ್ನೂ ಆಡುಗಳನ್ನೂ ತೊಡಗಿದ್ದರು. ಈ ಗುರುವಿನ ಮರಣವೂ ಸಮೀಪಿಸಿದಾಗ ಸಲ್ಮಾನ್‌ರು ಅವರನ್ನು ಾಪಿಸಿ, "ಗುರುವರ್ಯರೇ! ನನ್ನ ಸ್ಥಿತಿಗತಿಗಳನ್ನು ತಾವು ಚೆನ್ನಾಗಿ ಬಲ್ಲಿರಿ. ನನಗೆ ತಮ್ಮ ತಿಮ ಉಪದೇಶವೇನು? ನಾನು ಎಲ್ಲಿಗೆ ಹೋಗಬೇಕು!" ಎಂದು ಕೇಳಿದರು.

ಅದಕ್ಕೆ ಅವರು ಹೀಗೆ ಉತ್ತರಿಸಿದರು, ಮಗನೇ! ನನ್ನ ತಿಳುವಳಿಕೆಯ ಮಟ್ಟಿಗೆ ನಾನು ಂವ ಧರ್ಮದಲ್ಲಿ ಇನ್ನಾರೂ ಈ ಲೋಕದಲ್ಲಿ ಉಳಿದಿಲ್ಲ. ಆದರೆ ಅರಬ್ ಪ್ರದೇಶದಲ್ಲಿ ಟ ಪ್ರವಾದಿ ಇಬ್ರಾಹೀಮ್‌ರವರ(ಅ) ಧರ್ಮದೊಂದಿಗೆ ನಿಯುಕ್ತರಾಗಲಿರುವ ಸಮಯ ಹಿತವಾಗಿದೆ. ಅವರು ತಮ್ಮ ನಾಡಿನಿಂದ ಖರ್ಜೂರಗಳ ಪ್ರದೇಶಕ್ಕೆ ವಲಸೆ ಹೋಗುವರು. ಪ್ರದೇಶವು ಕಪ್ಪು ಹರಳು ಕಲ್ಲುಗಳ ಮಧ್ಯೆ ಇರುವುದು. ಅವರ ಕುರಿತು ಕೆಲವು ಸ್ಪಷ್ಟ ರ್ಶನಗಳಿವೆ. ಅವರು ಪಾರಿತೋಷಕವನ್ನು ಸ್ವೀಕರಿಸುವರು. ಆದರೆ ದಾನ-ಧರ್ಮಗಳನ್ನು ಕರಿಸಲಾರರು. ಅವರ ಎರಡೂ ಹೆಗಲುಗಳ ನಡುವೆ ಪ್ರವಾದಿತ್ವದ ಮುದ್ರೆಯಿರುವುದು. ಗೆ ಸಾಧ್ಯವಾದರೆ ನೀನು ಅದೇ ಸ್ಥಳಕ್ಕೆ ಹೋಗು."

ಅವರ ಮರಣಾನಂತರ ಹ. ಸಲ್ಮಾನ್ ಅಮೂರಿಯ್ಯದಲ್ಲೇ ಕೆಲವು ಕಾಲ ಉಳಿದರು. ಬ್ ವ್ಯಾಪಾರಿ ತಂಡವೊಂದು ಅಲ್ಲಿಂದ ಹಾದು ಹೋಯಿತು. ಅವರು ಕಲ್ಬ್ ೀತ್ರದವರಾಗಿದ್ದರು. ಸಲ್ಮಾನ್ ಆ ಗೋತ್ರದ ಜನರೊಂದಿಗೆ ತನ್ನನ್ನು ಅರೇಬಿಯಾಕ್ಕೆ ಂಡೊಯ್ಯುವುದಾದರೆ ತನ್ನಲ್ಲಿರುವ ಎಲ್ಲ ಆಡು, ದನಗಳನ್ನು ನೀಡುವುದಾಗಿ ಹೇಳಿದರು. ವರು ಒಪ್ಪಿದರು. ಅದರಂತೆ ಸಲ್ಮಾನ್ ತಮ್ಮ ಜಾನುವಾರುಗಳನ್ನು ಅವರಿಗೆ ನೀಡಿದರು. ವರೆ ಆ ತಂಡದವರು ಮದೀನಾ ಮತ್ತು ಸಿರಿಯಾದ ಮಧ್ಯೆ 'ಅಲ್‌ಕುರಾ' ಎಂಬ ಕಣಿವೆಗೆ ಪಿದಾಗ ದ್ರೋಹವೆಸಗಿದರು. ಸಲ್ಮಾನ್‌ರನ್ನು ಒಬ್ಬ ಯಹೂದಿಗೆ ಮಾರಿ ಬಿಟ್ಟರು. ವರಂತೆ ಅವರು ಒಬ್ಬ ಗುಲಾಮರಾಗಿ ಯಹೂದಿಯ ಸೇವೆಗೈಯ ತೊಡಗಿದರು. ಕೆಲವು ವಗಳ ನಂತರ ಬನೂ ಕುರೈಝಾ ಗೋತ್ರದ ಒಬ್ಬ ಯಹೂದಿ ಅಲ್ಲಿಗೆ ಬಂದು ಅವರನ್ನು ೀದಿಸಿ ಯಸ್ರಿಬ್‌ಗೆ(ಮದೀನಾ) ಕೊಂಡೊಯ್ದನು. ತನ್ನ ಅಮೂರಿಯ್ಯದ ಗುರು ಸೂಚನೆ ಡಿದ್ದಂತಹ ಖರ್ಜೂರದ ಕುರುಹುಗಳ ಆಧಾರದಲ್ಲಿ ಇದು ಮದೀನಾ ಎಂದು ರುತಿಸಿಕೊಂಡರು. ಅವರು ತನ್ನ ಹೊಸ ಯಹೂದಿ ಯಜಮಾನನೊಂದಿಗೆ ಮದೀನಾದಲ್ಲಿ ಸಿಸತೊಡಗಿದರು.

ಆಗ ಪ್ರವಾದಿ ಮುಹಮ್ಮದ್(ಸ) ಇನ್ನೂ ಮಕ್ಕಾದಲ್ಲೇ ಇದ್ದರು. ತಮ್ಮ ಜನಾಂ ಇಸ್ಲಾಮಿನ ಕರೆ ನೀಡುತ್ತಿದ್ದರು. ಆದರೆ ತನ್ನ ಕೆಲಸದ ಒತ್ತಡದಿಂದಾಗಿ ಬಿಡುವು ಸಿ ಕಾರಣ ಪ್ರವಾದಿಯವರ(ಸ) ಕುರಿತು ಅವರಿಗೆ ಹೆಚ್ಚೇನೂ ತಿಳಿಯಲಿಲ್ಲ. ಪ್ರವಾದಿ(ಸ) ಕೆ ದಿನಗಳ ನಂತರ ಮದೀನಾಕ್ಕೆ ವಲಸೆ ಹೋದರು. ಒಂದು ದಿನ ಅವರು ತನ್ನ ಯಜಮಾ ತೋಟದಲ್ಲಿ ಖರ್ಜೂರದ ಮರಕ್ಕೆ ಹತ್ತಿ ಏನೋ ಕೆಲಸ ಮಾಡುತ್ತಿದ್ದರು. ಅಷ್ಟರಲ್ಲಿ ಅ ನಿಂತಿದ್ದ ಅವರ ಯಜಮಾನನ ಬಳಿಗೆ ಅವನ ಗೋತ್ರದ ಒಬ್ಬ ವ್ಯಕ್ತಿ ಬಂದು ಹಿ ಹೇಳಿದನು, 'ಅಲ್ಲಾಹನು ಔಸ್ ಮತ್ತು ಖಝ್ರಜ್ ಗೋತ್ರಗಳನ್ನು ನಾಶ ಮಾ ಅವರೆಲ್ಲರೂ ಮಕ್ಕಾದಿಂದ ಇಂದೇ ಇಲ್ಲಿಗೆ ತಲಪಿದ ಹಾಗೂ ತನ್ನನ್ನು ಪ್ರವಾದಿಯೆಂ ಹೇಳಿಕೊಳ್ಳುವ ವ್ಯಕ್ತಿಯ ಸುತ್ತ ನೆರೆದಿದ್ದಾರೆ.'

ಇದನ್ನು ಕೇಳುತ್ತಲೇ ಹ. ಸಲ್ಮಾನ್‌ರ ದೇಹದಲ್ಲಿ ವಿದ್ಯುತ್ ಸಂಚಾರವಾದಂತಾಯಿ ಅವರ ಶರೀರ ಕಂಪಿಸ ತೊಡಗಿತು. ಅವರು ಕೂಡಲೇ ಮರದಿಂದ ಕೆಳಗಿಳಿದು ವ್ಯಕ್ತಿಯೊಂದಿಗೆ, "ನೀವೀಗ ಏನು ಹೇಳಿದಿರಿ. ಅದನ್ನು ಇನ್ನೊಮ್ಮೆ ಹೇಳಿರಿ" ಎಂದ

ಸಲ್ಮಾನ್‌ರ ಯಜಮಾನ ಅವರ ಮಾತಿನಿಂದ ಕೋಪೋದ್ರಿಕ್ತನಾಗಿ ಅವರ ಕಪಾ ಒಂದು ಬಿಗಿಯುತ್ತಾ, 'ನಿನಗೇಕೆ ಅದು. ನಡಿ ನಿನ್ನ ಕೆಲಸ ಮಾಡು' ಎಂದನು.

ಸಾಯಂಕಾಲ ಆದಾಗ ಸಲ್ಮಾನ್‌ರು ತಾನು ಶೇಖರಿಸಿಟ್ಟಿದ್ದ ಕೆಲವು ಖರ್ಜೂರಗಳ ತೆಗೆದುಕೊಂಡು ಪ್ರವಾದಿವರ್ಯರ(ಸ) ಬಳಿಗೆ ತಲಪಿದರು. ಅದನ್ನು ಅವರ ಮುಂದಿಡು ಹೀಗೆಂದರು,

"ತಾವು ಒಬ್ಬ ಉತ್ತಮ ವ್ಯಕ್ತಿಯೆಂದು ನಾನು ಕೇಳಿದ್ದೇನೆ. ತಮ್ಮೊಂದಿಗೆ ನಿರಾಶ್ರಿತ ಬಡವರೂ ಇದ್ದಾರೆ. ಇದು ದಾನದ ಖರ್ಜೂರ. ನನ್ನ ಅಭಿಪ್ರಾಯದಲ್ಲಿ ನೀವೆಲ್ಲರೂ ಇ ಅರ್ಹರಾಗಿದ್ದೀರಿ."

ಪ್ರವಾದಿ(ಸ) ಅದನ್ನು ತಮ್ಮ ಸಂಗಾತಿಗಳಿಗೆ ನೀಡಿದರು. ಆದರೆ ತಾವು ಸ್ವತಃ ತಿನ್ನಲಿ ಇದನ್ನು ನೋಡಿದ ಸಲ್ಮಾನ್‌ರಿಗೆ ಇದು ಪ್ರಥಮ ಕುರುಹು ಎಂದು ತೋಚಿತು. ಅ ಅಲ್ಲಿಂದ ಮರಳಿದರು.

ಕೆಲವು ದಿನಗಳ ನಂತರ ಪ್ರವಾದಿವರ್ಯರು ಕುಬಾದಿಂದ ಮದೀನಾಕ್ಕೆ ಬಂದ ಸಲ್ಮಾನ್‌ರು ಕೆಲವು ಆಯ್ದ ಖರ್ಜೂರಗಳೊಂದಿಗೆ ಪ್ರವಾದಿವರ್ಯರ ಬಳಿಗೆ ತೆರಳಿದ ತಾನು ತಂದಿದ್ದ ಖರ್ಜೂರಗಳನ್ನು ಮುಂದಿಡುತ್ತಾ "ಅಂದು ನಾನು ತಂದಿದ್ದ ದಾ ಖರ್ಜೂರಗಳನ್ನು ತಾವು ತಿಂದಿರಲಿಲ್ಲ. ಅದಕ್ಕಾಗಿ ನಾನು ಈ ದಿನ ಇದನ್ನು ಹದಿ (ಉಡುಗೊರೆ) ತಂದಿರುವೆನು" ಎಂದರು. ಪ್ರವಾದಿವರ್ಯರು ಆ ಖರ್ಜೂರದಿಂದ ತಾ ತಿಂದರು. ತಮ್ಮ ಸಂಗಾತಿಗಳಿಗೂ ನೀಡಿದರು. ಆಗ ಸಲ್ಮಾನ್‌ರು ಮನದಲ್ಲೇ "ಇ ಎರಡನೇ ಕುರುಹು" ಎಂದರು.

ಮೂರನೇ ಸಲ ಸಲ್ಮಾನ್ ಪ್ರವಾದಿವರ್ಯರನ್ನು(ಸ) ಭೇಟಿಯಾಗಲು ಹೋದ ಅವರು ಬಕೀಅ್ (ಕಬರ ಸ್ಥಾನ)ನಲ್ಲಿದ್ದರು. ಅಲ್ಲಿ ಒಬ್ಬ ಸಹಾಬಿಯ ದಫನ ಕಾ

ಯುತ್ತಿತ್ತು. ಪ್ರವಾದಿವರ್ಯರು ಅಲ್ಲಿ ಕುಳಿತಿದ್ದರು. ಆಗ ಅವರ ಶರೀರದಲ್ಲಿ ಎರಡು ಸ್ತರಗಳಿದ್ದುವು. ಸಲ್ಮಾನ್‌ರು ಹತ್ತಿರ ಬಂದು ಸಲಾಮ್ ಹೇಳಿದರು. ತರುವಾಯ ಪ್ರವಾದಿವರ್ಯರ ಸುತ್ತು ಬಂದು ಅಮೂರಿಯದ ತನ್ನ ಗುರು ಸೂಚನೆ ನೀಡಿದ್ದಂತಹ ಪ್ರವಾದಿ ಮುದ್ರೆ ಕಾಣುತ್ತದೋ ಎಂದು ನೋಡತೊಡಗಿದರು. ಅವರು ಬೆನ್ನನ್ನು ವೀಕ್ಷಿಸುವುದನ್ನು ನೋಡಿದಾಗ ಪ್ರವಾದಿವರ್ಯರಿಗೆ(ಸ) ಅವರ ಇಂಗಿತದ ಅರಿವಾಯಿತು. ಅವರು ತಮ್ಮ ವಸ್ತ್ರವನ್ನು ಸರಿಸಿದರು. ಸಲ್ಮಾನ್ ಪ್ರವಾದಿ ಮುದ್ರೆಯನ್ನು ನೋಡಿ ಅದನ್ನು ಗುರುತಿಸಿದರು. ತರುವಾಯ ಅದನ್ನು ಚುಂಬಿಸತೊಡಗಿದರು. ಆಗ ಅವರ ಕಣ್ಣಿನಿಂದ ಅಶ್ರುಧಾರೆ ಹರಿಯುತ್ತಿತ್ತು. ಅದನ್ನು ನೋಡಿ ಪ್ರವಾದಿ(ಸ)- ಏನಾಯಿತೆಂದು ಕೇಳಿದರು.

ಹ. ಸಲ್ಮಾನ್ ತಮ್ಮ ಸಂಪೂರ್ಣ ಕಥೆಯನ್ನು ವಿವರಿಸಿದರು. ಇದನ್ನು ಕೇಳಿ ಪ್ರವಾದಿಯವರಿಗೆ ಬಹಳ ಸಂತೋಷವಾಯಿತು. ಸಹಾಬಿಗಳೂ ಅವರ ಆತ್ಮಕಥೆಯನ್ನು ಕೇಳಿದರು. ಸತ್ಯಾನ್ವೇಷಣೆಯ ಈ ಅದ್ಭುತ ಕಥೆಯನ್ನು ಕೇಳಿ ಅವರೆಲ್ಲರೂ ಆಶ್ಚರ್ಯಪಟ್ಟರು. ಅವರೆಲ್ಲರಿಗೂ ಸಂತೋಷವಾಯಿತು.

ಸತ್ಯಾನ್ವೇಷಣೆಯ ಮಾರ್ಗದಲ್ಲಿ ನಿರಂತರ ಮುಂದುವರಿದು ಕೊನೆಗೂ ಅದನ್ನು ಗಳಿಸಿದ ಸಲ್ಮಾನ್‌ರ(ರ) ಮೇಲೆ ಅಲ್ಲಾಹನ ಅನುಗ್ರಹ ಸುರಿಯುತ್ತಿರಲಿ!

# ಹ. ಇಕ್ರಿಮಾ(ರ)

## ಪ್ರತೀಕಾರದ ರೋಷಾಗ್ನಿ

ಇಕ್ರಿಮಾ ಕುರೈಶ್‌ನ ಪ್ರತಿಷ್ಠಿತ ಕುಟುಂಬಕ್ಕೆ ಸೇರಿದ ವ್ಯಕ್ತಿಯಾಗಿದ್ದರು. ಅವ ಮಕ್ಕಾದ ಅತ್ಯಂತ ದುಷ್ಟ, ಕ್ರೂರಿ ಹಾಗೂ ಮುಸ್ಲಿಮರಿಗೆ ಸರ್ವ ರೀತಿಯಿಂದಲೂ ಕಿರುಕು ಕೊಡುತ್ತಿದ್ದ ಬಹುದೇವಾರಾಧಕರ ನಾಯಕ ಅಬೂ ಜಹಲನ ಪುತ್ರರಾಗಿದ್ದರು. ಅಬ ಜಹಲ್ ತಡೆಯಾಗದಿರುತ್ತಿದ್ದರೆ ಇಕ್ರಿಮಾ ತಮ್ಮ ಸಮ ವಯಸ್ಕರಾದ ಸಅದ್ ಬಿನ್ ಅಃ ವಕ್ಕಾಸ್ ಮತ್ತು ಮುಸ್‌ಅಬ್ ಬಿನ್ ಉಮೈರ್‌ರಂಥವರೊಡನೆ(ರ ಎಂದೋ ಇಸ್ಲಾಮ್ ಸ್ವೀಕರಿಸಿ ಆಗುತ್ತಿತ್ತು. ಅವರು ಮಕ್ಕಾದ ಕೆಲವೇ ಮಂದಿ ಸಿರಿವಂತ ಮತ್ತು ಹೆಸರಾಂತ ಕುದುರೆ ಸವಾರರ ಗಣಕ್ಕೆ ಸೇರಿದವರಾಗಿದ್ದರು.

ಪ್ರವಾದಿ ಮುಹಮ್ಮದ್(ಸ) ಸತ್ಯ ಸಂದೇಶದ ಪ್ರಚಾರ ಆರಂಭಿಸಿದಾಗ ಇಕ್ರಿಮಾರಿ ಮೂವತ್ತರ ಹರೆಯ. ತನ್ನ ತಂದೆಯ ಆದೇಶದಂತೆ ಅವರು ಪ್ರವಾದಿವರ್ಯರನ್ನು( ವಿರೋಧಿಸಲು ನಿರ್ಬಂಧಿತರಾದರು. ಮಾತ್ರವಲ್ಲ ಪ್ರವಾದಿವರ್ಯರೊಡನೆ(ಸ) ಕ್ರೂ ಹಗೆತನದಿಂದ ವರ್ತಿಸಿದರು. ತನ್ನ ತಂದೆಯ ಮನ ತಣಿಸುವಷ್ಟು ಪ್ರವಾದಿ ಸಂಗಾತಿಗ ಮೇಲೆ ಅಕ್ರಮ ದೌರ್ಜನ್ಯಗಳನ್ನು ಎಸಗಿದರು.

ಬದ್ರ್ ಯುದ್ಧದ ನಾಯಕತ್ವವನ್ನು ವಹಿಸಿದ್ದ ಅಬೂ ಜಹಲ್, ಮುಹಮ್ಮದ್‌ರನ್ನು( ಸೋಲಿಸದೆ ಮಕ್ಕಾಕ್ಕೆ ಮರಳಲಾರೆನೆಂದು ಲಾತ್ ಮತ್ತು ಉಝ್ಝಾರ ಹೆಸರಿನಲ್ಲಿ ಆಣೆ ಹಾ ಘೋಷಿಸುತ್ತಿದ್ದನು. ಆತ ಬದ್ರ್‌ನಲ್ಲಿ ಮೂರು ದಿನಗಳ ಕಾಲ ಮೊಕ್ಕಾಂ ಹೂಡಿ ಒಂಟೆಗಳನ್ನು ಕೊಯ್ದು ಮಾಂಸ ತಿನ್ನುತ್ತಿದ್ದ ಮತ್ತು ಚೆನ್ನಾಗಿ ಶರಾಬನ್ನೂ ಕುಡಿಯುತ್ತಿದ್ದ ಅವನ ಮನಸ್ಸಿಗೆ ಆನಂದ ನೀಡಲು ಅವನ ಸೇವಕಿಯರು ಡೋಲು ಬಾರಿಸಿ ಹಾಡುತ್ತಲ ಇದ್ದರು. ಈ ಯುದ್ಧದಲ್ಲಿ ಇಕ್ರಿಮಾ ತನ್ನ ತಂದೆಯ ಬಲಗೈ ಬಂಟರಾಗಿದ್ದರು. ಆದ ಲಾತ್ ಉಝ್ಝಾಗಳು ಅಬೂ ಜಹಲನ ಪ್ರಾರ್ಥನೆಯನ್ನು ಆಲಿಸಲೂ ಇಲ್ಲ. ಅವನಿ ನೆರವಾಗಲೂ ಇಲ್ಲ. ಏಕೆಂದರೆ ಅವು ನಿರ್ಜೀವ ವಸ್ತುಗಳಾಗಿದ್ದುವು. ಅಬೂ ಜಹ ಅಪಮಾನಕರ ರೀತಿಯಲ್ಲಿ ಈ ಯುದ್ಧದಲ್ಲಿ ಕೊಲ್ಲಲ್ಪಟ್ಟ. ಇಕ್ರಿಮಾ ಅವನು ಸಾಯುವುದನು ಅವನ ಗಂಟಲಿನಿಂದ ಹೊರಡುವ ಕೊನೆಯ ಚೀರಾಟವನ್ನೂ ಕೇಳಿದ್ದರು.

ಕುರೈಶರ ಅತ್ಯುನ್ನತ ನಾಯಕನಾದ ತನ್ನ ತಂದೆಯ ಶವವನ್ನು ಬದ್ರ್ ರಣರಂಗದಿಂ

ಮ್ಯದೆ, ಅವಮಾನಿತರಾಗಿ ಇಕ್ರಿಮಾ ಮಕ್ಕಾಕ್ಕೆ ಮರಳಿದರು. ತಾನೇ ಜೀವ ರಕ್ಷಿಸಿ ಪಲಾಯನ ಡುತ್ತಿರುವಾಗ ತಂದೆಯ ಶವವನ್ನು ಒಯ್ಯುವುದಾಗಲಿ, ಮಕ್ಕಾದಲ್ಲಿ ದಫನ ಮಾಡುವುದಾಗಲಿ ರಿಗೆ ಸಾಧ್ಯವಿರಲಿಲ್ಲ. ಅಂದಿನಿಂದ ಇಕ್ರಿಮಾರ ದ್ವೇಷಾಗ್ನಿಯು ಇನ್ನೊಂದು ರೂಪ ತಿತು. ಈ ವರೆಗೂ ತಂದೆಯ ಬೆಂಬಲಕ್ಕಾಗಿ ಇಸ್ಲಾಮಿನ ವೈರಿಯಾಗಿದ್ದ ಅವರು ಆ ಗೆಯಿಂದ ತಂದೆಯ ಕೊಲೆಯ ಪ್ರತೀಕಾರ ಭಾವದಿಂದ ಕುದಿಯ ತೊಡಗಿದರು. ್ರ್‌ನಲ್ಲಿ ಮಡಿದ ಇನ್ನಿತರ ಮುಶ್ರಿಕರ ಮಕ್ಕಳೂ ಇಕ್ರಿಮಾರ ದ್ವೇಷಾಗ್ನಿಗೆ ಎಣ್ಣೆ ಯತೊಡಗಿದರು. ಅವರು ಮಕ್ಕಾದವರ ಮನಸ್ಸಿನಲ್ಲೂ ದ್ವೇಷಾಗ್ನಿಯನ್ನು ಉರಿಸತೊಡಗಿದರು. ರರ ಪರಿಣಾಮವಾಗಿಯೇ ಉಹುದ್‌ನ ಭೀಕರ ಯುದ್ಧ ನಡೆಯಿತು.

ಬದ್ರ್ ಯುದ್ಧದ ಸೋಲಿನ ಮತ್ತು ತಮ್ಮ ಸಂಗಾತಿಗಳನ್ನು ಕಳಕೊಂಡುದರ ತೀಕಾರಕ್ಕಾಗಿ ಮಕ್ಕಾದಿಂದ ಹೊರಟ ಕುರೈಶರ ಭಾರೀ ಸೈನ್ಯದಲ್ಲಿ ಇಕ್ರಿಮಾ ಕೂಡಾ ರಿದ್ದರು. ಜೊತೆಗೆ ತನ್ನ ಪತ್ನಿ ಉಮ್ಮು ಹಕೀಮ್‌ಳನ್ನೂ ಸಂಗಡ ಕರಕೊಂಡಿದ್ದರು. ಕರಲ್ಲಿ ಭೀರುತ್ವವೇನಾದರೂ ತಲೆದೋರಿ ಅವರು ಹಿಮ್ಮೆಟ್ಟುವ ಅವಸ್ಥೆಯುಂಟಾದರೆ ಕರ ಸ್ತ್ರೀಯರ ಜೊತೆ ಸೇರಿ ಡೋಲು ಬಾರಿಸಿ ಅವರನ್ನು ಹುರಿದುಂಬಿಸಲಿಕ್ಕಾಗಿ ಆಕೆಯನ್ನು ನ್ನೊಂದಿಗೆ ಒಯ್ದಿದ್ದರು.

ಕುರೈಶರು ತಮ್ಮ ಸೇನೆಯ ಕುದುರೆ ಸವಾರರ ತುಕಡಿಯ ನಾಯಕತ್ವವನ್ನು ಖಾಲಿದ್ ನ್ ವಲೀದ್ ಮತ್ತು ಇಕ್ರಿಮಾರಿಗೆ ವಹಿಸಿಕೊಟ್ಟರು. ಅವರಲ್ಲಿ ಒಬ್ಬರು ಬಲ ಭಾಗದಲ್ಲೂ ನ್ನೊಬ್ಬರು ಎಡ ಭಾಗದಲ್ಲೂ ನಿಂತು ಹೋರಾಡಿದರು. ಅಂದು ಈ ಇಬ್ಬರು ಮುಶ್ರಿಕ್ ನಾಯಕರು ತೋರಿದ ಶೌರ್ಯ-ಪರಾಕ್ರಮಗಳಿಂದಾಗಿ ಕುರೈಶರು ಪ್ರವಾದಿ ಮುಹಮ್ಮದ್(ಸ) ತ್ತವರ ಸಂಗಾತಿಗಳ ಮೇಲೆ ವಿಜಯ ಸಾಧಿಸಿದರು. ಆ ಸಂದರ್ಭದಲ್ಲಿ ಅಬೂ ಸುಫ್ಯಾನ್ ತೋಷಾತಿರೇಕದಿಂದ, "ಇದು ಬದ್ರ್‌ನ ಪ್ರತೀಕಾರ"ವೆಂದು ಘೋಷಿಸಿಬಿಟ್ಟನು.

ಕಂದಕ್ ಯುದ್ಧದ ವೇಳೆ ಮುಶ್ರಿಕರು ಮದೀನಾಕ್ಕೆ ಮುತ್ತಿಗೆ ಹಾಕಿದ್ದರು. ಮುತ್ತಿಗೆಯು ಹಳ ದೀರ್ಘವಾಗುತ್ತಾ ಬಂದಾಗ ಇಕ್ರಿಮಾರಿಗೆ ಸಹಿಸದಾಯಿತು. ಕಟ್ಟಕಡೆಗೆ ಕಂದಕದ ಗಲ ಕಿರಿದಾದ ಭಾಗವೊಂದನ್ನು ಕಂಡು ಹಿಡಿದು ತನ್ನ ಕುದುರೆಯನ್ನು ದೌಡಾಯಿಸಿ ಆಚೆ ದಿಗೆ ತಲಪಿದರು. ಕೆಲವು ವೀರ ಯೋಧರು ಅವರನ್ನು ಹಿಂಬಾಲಿಸಿದರು. ಅವರ ಪೈಕಿ ಮ್ರ್ ಬಿನ್ ಅಬ್ದೂದ್ ಆಮಿರಿ ಎಂಬಾತನು ಮುಸ್ಲಿಮರ ಕೈಯಲ್ಲಿ ಕೊಲ್ಲಲ್ಪಟ್ಟನು. ಆದರೆ ಕ್ರಿಮಾ ತಪ್ಪಿಸಿಕೊಂಡರು.

ಮಕ್ಕಾ ವಿಜಯವಾದಾಗ, ಕುರೈಶರಿಗೆ ಇನ್ನು ಮುಹಮ್ಮದ್(ಸ) ಮತ್ತು ಅವರ ಂಗಾತಿಗಳ ಮುಂದೆ ತಮ್ಮದೇನೂ ನಡೆಯದೆಂದು ಖಾತ್ರಿಯಾಯಿತು. ಆದುದರಿಂದ ಅವರು ದಿಗೆ ಸರಿದು ಬಿಟ್ಟರು. ಅವರು ಈ ತೀರ್ಮಾನ ಮಾಡಿದ್ದೇಕೆಂದರೆ ಪ್ರವಾದಿಯವರು(ಸ) ಮ್ಮ ಸೇನಾ ನಾಯಕರುಗಳಿಗೆ, ಮಕ್ಕಾದ ಜನಸಾಮಾನ್ಯರನ್ನು ಯಾವ ರೀತಿಯಿಂದಲೂ ಪದ್ರವಿಸಬಾರದೆಂದೂ ತಮ್ಮೊಂದಿಗೆ ಹೋರಾಡಿದವರೊಂದಿಗೆ ಮಾತ್ರ ಹೋರಾಡಬೇಕೆಂದೂ ಪ್ಪಣೆ ಕೊಟ್ಟದ್ದನ್ನು ಅವರು ಕಂಡಿದ್ದರು. ಇಕ್ರಿಮಾ ಮತ್ತು ಅವರ ಕೆಲವು ಸಂಗಾತಿಗಳು

ಕುರೈಶರ ತೀರ್ಮಾನವನ್ನು ಲೆಕ್ಕಿಸದೆ ಮಕ್ಕಾದಿಂದ ಹೊರಟು ಬಂದು ಮುಸ್ಲಿಮರ ಭ ಸೈನ್ಯವನ್ನೆದುರಿಸಿದರು. ಆದರೆ ಖಾಲಿದ್ ಬಿನ್ ವಲೀದ್‌ರ ನೇತೃತ್ವದ ಮುಸ್ಲಿಮ್ ಸೈನ ಅವರನ್ನು ಹೊಡೆದೋಡಿಸಿತು. ಈ ಸಂಘರ್ಷದಲ್ಲಿ ಅವರ ಕೆಲವು ಸಂಗಾತಿಗಳು ಕೊಲ್ಲಲ್ಪಟ್ಟ ಉಳಿದವರು ರಣರಂಗದಿಂದ ಓಟಕ್ಕಿತ್ತರು. ಹಾಗೆ ಪಲಾಯನಗೈದವರಲ್ಲಿ ಇಕ್ರಿಮಾ ಕೂ ಇದ್ದರು. ಆಗ ಅವರು ಅತ್ಯಂತ ದುಃಖಿತರಾಗಿದ್ದರು. ಮಕ್ಕಾವಾಸಿಗಳು ಮುಸ್ಲಿಮ ಶರಣಾಗತರಾದ ಬಳಿಕ ಇಕ್ರಿಮಾರಿಗೆ ಅಲ್ಲಿ ಯಾವ ಅಭಯಾಶ್ರಯವೂ ಇಲ್ಲದಾಯಿ ಪ್ರವಾದಿಯವರು(ಸ) ತಮ್ಮ ವಿರುದ್ಧ ಕುರೈಶರು ಮಾಡಿದ್ದ ಎಲ್ಲ ಅತಿಕ್ರಮಗಳ ಅಪರಾಧಗಳನ್ನೂ ಕ್ಷಮಿಸಿ ಅವರನ್ನು ಬಿಟ್ಟು ಬಿಟ್ಟರು. ಆದರೆ ಈ ಸಾರ್ವತ್ರಿಕ ಕ್ಷಮೆಯಿ ಕೆಲವು ಮಂದಿ ಅಪರಾಧಿಗಳನ್ನು ಹೊರತು ಪಡಿಸಿದರು. ಅವರ ಹೆಸರೆತ್ತಿ, ಅವರೆಲ್ಲಾದ ಕಅಬಾದ ಕವಚದೊಳಗೆ ಅವಿತಿದ್ದರೂ ಕೂಡಾ ಅವರನ್ನು ಕೊಲ್ಲಬೇಕೆಂದು ಆಜ್ಞೆಯಿತ್ತ ಈ ಪೈಕಿ ಪ್ರಪ್ರಥಮ ಹೆಸರು ಇಕ್ರಿಮಾರದ್ದಾಗಿತ್ತು. ಆದುದರಿಂದ ಇಕ್ರಿಮಾ ಪ್ರಾಣಭೀತಿಯಿ ಭೂಗತರಾಗಿ ಮಕ್ಕಾ ಬಿಟ್ಟೋಡಿದರು. ಅವರು ಯಮನಿನತ್ತ ಪ್ರಯಾಣ ಬೆಳೆಸಿದ ಏಕೆಂದರೆ ಬೇರೆಲ್ಲೂ ಅಭಯ ಸಿಗುವ ನಿರೀಕ್ಷೆ ಅವರಿಗಿರಲಿಲ್ಲ.

## ಸತ್ಯ ಸ್ವೀಕಾರ ಮಾಡಿದ ಇಕ್ರಿಮಾ

ಅತ್ತ ಇಕ್ರಿಮಾರ ಪತ್ನಿ ಉಮ್ಮು ಹಕೀಮ್ ಮತ್ತು ಉತ್ಬಾನ ಪುತ್ರಿ ಹಿಂದ್ ಇ ಹತ್ತು ಮಹಿಳೆಯರ ಜೊತೆಯಲ್ಲಿ ಪ್ರವಾದಿಯವರೊಂದಿಗೆ ಬೈಅತ್(ಪ್ರಮಾಣ ವ ಮಾಡಲು ಅವರ ಬಳಿಗೆ ಬಂದರು. ಆಗ ಪ್ರವಾದಿವರ್ಯರ(ಸ) ಬಳಿ ಅವರ ಇಬ್ಬ ಪತ್ನಿಯರಲ್ಲದೆ, ಪುತ್ರಿ ಫಾತಿಮಾ(ರ) ಮತ್ತು ಅಬ್ದುಲ್ ಮುತ್ತಲಿಬ್ ಕುಟುಂಬದ ಕೆ ಮಹಿಳೆಯರೂ ಉಪಸ್ಥಿತರಿದ್ದರು. ಆ ಸಂದರ್ಭದಲ್ಲಿ ಹಿಂದ್ ತನ್ನ ಮುಖವ ಮುಚ್ಚಿದ್ದರು.

ಅವರು ಪ್ರವಾದಿವರ್ಯರನ್ನುದ್ದೇಶಿಸಿ, "ಅಲ್ಲಾಹನ ಸಂದೇಶವಾಹಕರೇ! ಅಲ್ಲಾಹ ತನ್ನ ಇಷ್ಟ ಧರ್ಮವನ್ನು ವಿಜಯಿಯಾಗಿ ಮಾಡಿದನು. ಅಲ್ಲಾಹನಿಗೆ ಸ್ತುತಿ. ನನ್ನ ಕೌಟುಂ ಸಂಬಂಧದ ಹಿನ್ನೆಲೆಯಲ್ಲಿ ನನ್ನೊಂದಿಗೆ ಉತ್ತಮವಾಗಿ ವರ್ತಿಸಬೇಕೆಂದು ತಮ್ಮೊಂ ನಾನು ಅಪೇಕ್ಷಿಸುತ್ತಿದ್ದೇನೆ. ನಾನು ತಮ್ಮನ್ನು ದೃಢೀಕರಿಸುವ ಓರ್ವ ಸತ್ಯವಿಶ ಮಹಿಳೆಯಾಗಿದ್ದೇನೆ." ತರುವಾಯ ತನ್ನ ಮುಖ ಪರದೆಯನ್ನು ಸರಿಸುತ್ತಾ, "ಅಲ್ಲಾ ಸಂದೇಶವಾಹಕರೇ! ನಾನು ಉತ್ಬಾನ ಪುತ್ರಿ ಹಿಂದ್ ಆಗಿದ್ದೇನೆ" ಎಂದರು.

ಆಗ ಪ್ರವಾದಿ(ಸ), "ನಾನು ನಿನ್ನನ್ನು ಅಭಿನಂದಿಸುತ್ತೇನೆ. ನಿನ್ನನ್ನು ಸ್ವಾಗತಿಸುತ್ತೆ ಎಂದರು." ಆಕೆ ಪುನಃ ಹೀಗೆಂದರು,

"ಅಲ್ಲಾಹನಾಣೆ! ಪ್ರವಾದಿವರ್ಯರೇ, ಇಂದಿಗಿಂತ ಮುಂಚೆ ಈ ಭೂಮುಖದ ತಮ್ಮ ಮನೆ ಹಾಳಾಗುವುದರಿಂದ ನನಗಾಗುವಷ್ಟು ಸಂತೋಷ ಇನ್ನಾರ ವ ಹಾಳಾಗುವುದರಿಂದಲೂ ಆಗುತ್ತಿರಲಿಲ್ಲ. ಆದರೆ ಇಂದು ತಮ್ಮ ಮನೆಗಿಂತ ಶ್ರೇಷ್ಠ ಮ

ವಾರ್ಹ್ ಮನೆ ನನ್ನ ದೃಷ್ಟಿಯಲ್ಲಿ ಇನ್ನಾರದೂ ಇಲ್ಲ."

ತರುವಾಯ ಇಕ್ರಿಮಾರ ಪತ್ನಿ ಉಮ್ಮು ಹಕೀಮ್ ಎದ್ದು ನಿಂತು ಮೊದಲು ತನ್ನ ್ಮ್ ಸ್ವೀಕಾರದ ಘೋಷಣೆ ಮಾಡಿದರು. ತರುವಾಯ ಹೀಗೆಂದರು,

"ಅಲ್ಲಾಹನ ಸಂದೇಶವಾಹಕರೇ! ತಾವು ವಧಿಸಿ ಬಿಡುವಿರೆಂಬ ಭಯದಿಂದ ಇಕ್ರಿಮಾ ಯನ ಮಾಡಿದ್ದಾರೆ. ತಾವು ಅವರಿಗೆ ಅಭಯ ನೀಡಿದರೆ ಅಲ್ಲಾಹನು ತಮಗೂ ಅಭಯ ವನು."

ಪ್ರವಾದಿಯವರು(ಸ) ಆಕೆಯ ಬಿನ್ನಹವನ್ನು ಕೇಳಿ, "ಇಕ್ರಿಮಾ ಬಿನ್ ಅಬೂ ಲ್‌ನಿಗೆ ನಾನು ಅಭಯ ನೀಡುತ್ತೇನೆ" ಎಂದರು.

ಪತಿಗೆ ಜೀವದಾನ ಮಾಡಿದ ಘೋಷಣೆ ಕೇಳಿದ ಕೂಡಲೇ ಉಮ್ಮು ಹಕೀಮ್(ರ) ರೋಮನ್ ಗುಲಾಮನ ಜೊತೆಯಲ್ಲಿ ಪತಿಯನ್ನು ಹುಡುಕುವುದಕ್ಕಾಗಿ ಹೊರಟರು. ಬ್ಬರೂ ಬಹಳ ದೂರದ ವರೆಗೆ ಸಾಗಿದಾಗ ಗುಲಾಮನಿಗೆ ಆಕೆಯ ಮೇಲೆ ಹವುಂಟಾಯಿತು. ಆತ ಆಕೆಯನ್ನು ಒಲಿಯುವಂತೆ ಪುಸಲಾಯಿಸತೊಡಗಿದ. ಉಮ್ಮು ಮ್ ಆತನಿಗೆ ಆಮಿಷ ನೀಡುತ್ತಾ ಮುಂದೆ ಸಾಗುತ್ತಿದ್ದರು. ಕೊನೆಗೆ ಅರಬರ ಒಂದು ತ್ರದ ಬಳಿ ಬಂದು ಅವರ ಸಹಾಯ ಯಾಚಿಸಿದರು. ಗೋತ್ರದವರು ಆ ಗುಲಾಮನನ್ನು ಬಳಿ ಬಂಧಿಸಿಟ್ಟರು. ಉಮ್ಮು ಹಕೀಮ್ ತನ್ನ ಪ್ರಯಾಣವನ್ನು ಏಕಾಂಗಿಯಾಗಿ ುಂದುವರಿಸಿದರು. ಕಟ್ಟಕಡೆಗೆ ತಿಹಾಮ ಎಂಬಲ್ಲಿ ಸಮುದ್ರದ ಬದಿಯಲ್ಲಿ ಇಕ್ರಿಮಾರನ್ನು ರು. ಆಗ ಇಕ್ರಿಮಾ ಓರ್ವ ಮುಸ್ಲಿಮ್ ಅಂಬಿಗನೊಂದಿಗೆ ಮಾತಾಡುತ್ತಿದ್ದರು. ತನ್ನನ್ನು ುದ್ರದಾಚೆಗೆ ಸಾಗಿಸಬೇಕೆಂದು ಅಂಬಿಗನೊಡನೆ ವಿನಂತಿಸುತ್ತಿದ್ದರು. ಆದರೆ ಅಂಬಿಗನು ೊಡನೆ ನಿಮ್ಮ ಸತ್ಯವಿಶ್ವಾಸದ ಬಗ್ಗೆ ಖಾತ್ರಿ ನೀಡಿದರೆ ಮಾತ್ರ ಅತ್ತ ಸಾಗಿಸುವೆನೆನ್ನುತ್ತಿದ್ದ. ನ್ನು ಹೇಗೆ ಪ್ರದರ್ಶಿಸಲಿ" ಎಂದು ಇಕ್ರಿಮಾ ಪ್ರಶ್ನಿಸಿದಾಗ, "ಅಶ್ಹದು ಅಲ್ಲಾ ಇಲಾಹ ಲ್ಲಾಹು ವಅಶ್ಹದು ಅನ್ನ ಮುಹಮ್ಮದರ್‍ರಸೂಲುಲ್ಲಾಹ್(ಅಲ್ಲಾಹನಲ್ಲದೆ ಅನ್ಯ ಆರಾಧ್ಯನಿಲ್ಲ ್ತ ಮುಹಮ್ಮದ್(ಸ)) ಆತನ ಸಂದೇಶವಾಹಕರಾಗಿದ್ದಾರೆಂದು ನಾನು ಸಾಕ್ಷ್ಯ ನುಡಿಯುತ್ತೇನೆ) ಮ ಘೋಷಿಸು" ಎಂದು ಆತ ಉತ್ತರಿಸಿದನು.

ಇದನ್ನು ಕೇಳಿದ ಕೂಡಲೇ ಇಕ್ರಿಮಾ ಹೀಗೆಂದರು, "ನಾನು ಇದರಿಂದಲೇ ತಪ್ಪಿಸಿಕೊಂಡು ರುತ್ತೇನೆ. ನನಗೆ ಅದನ್ನೇ ಉಚ್ಚರಿಸಲು ಹೇಳುತ್ತೀಯಾ...?"

ಅವರ ಸಂಭಾಷಣೆ ನಡೆಯುತ್ತಿದ್ದಂತೆಯೇ ಉಮ್ಮು ಹಕೀಮ್ ಅವರ ಬಳಿಗೆ ತಲಪಿ ಮಾರೊಂದಿಗೆ ಹೀಗೆಂದರು, "ನಲ್ಲಾ! ನಾನು ನಿಮ್ಮ ಬಳಿಗೆ ಅತ್ಯಂತ ಶ್ರೇಷ್ಠ, ಅತ್ಯಂತ ನ ಮತ್ತು ಅತ್ಯಂತ ಉತ್ತಮ ವ್ಯಕ್ತಿಯ ಬಳಿಯಿಂದ ಬಂದಿರುತ್ತೇನೆ. ನಾನು ನಿಮ್ಮ ೆ ಮುಹಮ್ಮದ್(ಸ) ಬಿನ್ ಅಬ್ದುಲ್ಲಾರ ಬಳಿಯಿಂದ ಬಂದಿರುತ್ತೇನೆ. ಅವರು ನಿಮಗೆ ದಾನ ಮಾಡುವ ವಾಗ್ದಾನ ಮಾಡಿದ್ದಾರೆ. ಅವರಿಂದ ಈ ವಾಗ್ದಾನವನ್ನು ನಾನು ದ್ದೇನೆ. ನೀವು ನಿಮ್ಮ ಜೀವವನ್ನು ಅಪಾಯಕ್ಕೊಳಪಡಿಸಬೇಡಿ."

"ಅವರೊಂದಿಗೆ ನೀನೇ ಸ್ವತಃ ಮಾತಾಡಿದೆಯಾ?" ಇಕ್ರಿಮಾ ಕೇಳಿದರು.

"ಹೌದು, ನಾನೇ ಮಾತಾಡಿದ್ದೇನೆ. ಅವರು ನಿಮಗೆ ಅಭಯ ನೀಡಿದ್ದಾರೆ." ಉವ ಹಕೀಮ್ ನಿರಂತರ ಅವರಿಗೆ ಭರವಸೆ ನೀಡತೊಡಗಿದರು. ಕೊನೆಗೆ ಇಕ್ರಿಮಾ ಸಮಾಧಾನವಾಯಿತು. ಅವರು ಪತ್ನಿಯೊಂದಿಗೆ ಮರಳಿ ಹೋಗಲು ಒಪ್ಪಿದರು. ದಾರಿ ಮ ರೋಮನ್ ಗುಲಾಮನು ತನ್ನೊಂದಿಗೆ ಕೆಟ್ಟದಾಗಿ ವರ್ತಿಸಿದ ವಿಷಯವನ್ನು ತಿಳಿಸಿದ ಇಕ್ರಿಮಾ ಕೆರಳಿ ಕೆಂಡವಾದರು. ಅವರು ನೇರವಾಗಿ ಅವನಿರುವಲ್ಲಿಗೆ ಹೋಗಿ ಅ ರುಂಡವನ್ನು ಹಾರಿಸಿ ಬಿಟ್ಟರು.

ಮರಳುವ ದಾರಿಯಲ್ಲಿ ಒಂದೆಡೆ ಅವರಿಬ್ಬರೂ ತಂಗಿದಾಗ ಇಕ್ರಿಮಾರಿಗೆ ಪತ್ನಿಯ ಸಮೀಪಿಸುವ ಬಯಕೆಯುಂಟಾಯಿತು. ಆದರೆ ಉಮ್ಮು ಹಕೀಮ್ ಬಲವಾಗಿ ನಿರಾಕರಿಸು ನಾನೋರ್ವ ಮುಸ್ಲಿಮ್ ಹೆಂಗಸು ಮತ್ತು ನೀವಾದರೋ ಓರ್ವ ಮುಶ್ರಿಕ್ ಎಂದ

ಇದರಿಂದ ಇಕ್ರಿಮಾರಿಗೆ ಅತ್ಯಾಶ್ಚರ್ಯವಾಯಿತು. ನನ್ನ ನಿನ್ನ ಸಂಸರ್ಗ ತಡೆಯಾಗಬಲ್ಲಂತಹ ನಿನ್ನ ಬಳಿಯಿರುವ ವಸ್ತು ಖಂಡಿತವಾಗಿಯೂ ಶ್ರೇಷ್ಠವಾಗಿರಬೇ ಎಂದವರು ಉದ್ಗರಿಸಿದರು.

ಇಕ್ರಿಮಾ ಮಕ್ಕಾದ ಹತ್ತಿರ ತಲಪಿದಾಗ ಪ್ರವಾದಿ(ಸ) ತಮ್ಮ ಸಂಗಾತಿಗಳೊಂ ಹೀಗೆಂದರು, "ಇಕ್ರಿಮಾ ಬಿನ್ ಅಬೂ ಜಹಲ್ ಓರ್ವ ಸತ್ಯವಿಶ್ವಾಸಿ ವಲಸಿಗನಾಗಿ ನಿ ಬಳಿಗೆ ಬರಲಿದ್ದಾರೆ. ಅವನ ತಂದೆಯನ್ನು ನೀವು ಬೈಯಬಾರದು. ಮೃತರನ್ನು ಹಳಿಯುವುದರಿ ಜೀವಂತ ವ್ಯಕ್ತಿಗಳ ಮನನೋಯುತ್ತದೆ. ಮೃತನಿಗೆ ಅದರ ಸುಳಿವೇ ಇರುವುದಿಲ್ಲ."

ಸ್ವಲ್ಪವೇ ಸಮಯ ಕಳೆದಿರಬಹುದು. ಇಕ್ರಿಮಾ ತನ್ನ ಪತ್ನಿಯೊಂದಿಗೆ ಪ್ರವಾದಿಯವರ ಮುಂದೆ ಹಾಜರಾದರು. ಅವರನ್ನು ಕಂಡ ಕೂಡಲೇ ಪ್ರವಾದಿ(ಸ) ಆನಂದಾತಿರೇಕದಿ ತಮ್ಮ ಉತ್ತರೀಯದ ಪರಿವೆಯೇ ಇಲ್ಲದೆ ಅವರನ್ನು ಸ್ವಾಗತಿಸಲು ಮುಂದೆ ಬಂದ ತರುವಾಯ ಪ್ರವಾದಿ(ಸ) ತಮ್ಮ ಸ್ಥಾನದಲ್ಲಿ ಕುಳಿತಾಗ ಇಕ್ರಿಮಾ ನಿಂತಲ್ಲೇ ನಿಂತು ಹ ಹೇಳಿದರು, "ಮುಹಮ್ಮದ್(ಸ)! ನನಗೆ ತಾವು ಅಭಯ ನೀಡಿರುವಿರೆಂದು ಉಮ್ಮು ಹಕೀ ಹೇಳಿದ್ದಾಳೆ."

"ಆಕೆ ನಿಜ ಹೇಳಿದ್ದಾಳೆ. ನಿಮಗೆ ಅಭಯವಿದೆ."

"ಮುಹಮ್ಮದ್! ತಾವು ನನಗೆ ಯಾವುದರ ಕರೆ ಕೊಡುತ್ತಿದ್ದೀರಿ?"

"ನಾನು ನೀಡುವ ಕರೆಯೇನೆಂದರೆ ಅಲ್ಲಾಹನ ಹೊರತು ಅನ್ಯ ಆರಾಧ್ಯರಿಲ್ಲ ಮ ನಾನು ಅಲ್ಲಾಹನ ದಾಸನೂ ಸಂದೇಶವಾಹಕನೂ ಆಗಿದ್ದೇನೆ ಎಂಬುದನ್ನು ನಿ ಘೋಷಿಸಬೇಕು ಮತ್ತು ನೀವು ನಮಾಝ್ ಮಾಡಬೇಕು, ಝಕಾತ್ ನೀಡಬೇಕ ಪ್ರವಾದಿ(ಸ) ಇಸ್ಲಾಮಿನ ಬುನಾದಿಗಳನ್ನು ಎಣಿಸುತ್ತಾ ಹೇಳಿದರು.

"ಅಲ್ಲಾಹನಾಣೆ! ನೀವು ಸತ್ಯದ ಕರೆ ಕೊಟ್ಟಿದ್ದೀರಿ. ಒಳಿತಿನ ಆಜ್ಞೆ ನೀಡಿದ್ದೀರಿ ಅಲ್ಲಾಹನಾಣೆ! ಈ ಕರೆ ನೀಡುವುದಕ್ಕೆ ಮುಂಚೆಯೂ ತಾವು ನಮ್ಮ ಪೈಕಿ ಅತ್ಯ ಸತ್ಯಸಂಧರೂ ಸಜ್ಜನರೂ ಆಗಿದ್ದಿರಿ." ಹೀಗೆ ಹೇಳಿ ಇಕ್ರಿಮಾ ಬೈಅತ್‌ಗಾಗಿ ತಮ್ಮ ಹಸ್ತವ ಮುಂದೆ ಚಾಚಿ, ಸತ್ಯ ವಚನ ಹೇಳುತ್ತಾ ಇಸ್ಲಾಮ್‌ನ ದೀಕ್ಷೆ ತೊಟ್ಟರು.

## ...ಗ-ಪರಾಕ್ರಮಗಳ ಉಜ್ವಲ ಮಾದರಿ

ಇಸ್ಲಾಮ್ ಸ್ವೀಕರಿಸಿದ ಬಳಿಕ ಇಕ್ರಿಮಾ ಪ್ರವಾದಿವರ್ಯರೊಡನೆ ಹೀಗೆ ಬಿನ್ನವಿಸಿದರು, ...ಲ್ಲಾಹನ ಸಂದೇಶವಾಹಕರೇ! ನಾನು ನಿರಂತರ ಪಠಿಸುವಂತಾಗಲು ನನಗೆ ಅತ್ಯುತ್ತಮ ...ಯವನ್ನು ಕಲಿಸಿರಿ."

"ಅಶ್ಹದು ಅಲ್ಲಾ ಇಲಾಹ ಇಲ್ಲಲ್ಲಾಹು ವಅಶ್ಹದು ಅನ್ನ ಮುಹಮ್ಮದನ್ ಅಬ್ದುಹೂ ...ಸೂಲುಹೂ."

"ಅಲ್ಲಾಹನಲ್ಲದೆ ಅನ್ಯ ಆರಾಧ್ಯರಿಲ್ಲವೆಂದೂ ಮುಹಮ್ಮದ್(ಸ) ಆತನ ದಾಸ ಮತ್ತು ...ದೇಶವಾಹಕರೆಂದೂ ನಾನು ಸಾಕ್ಷ್ಯ ನುಡಿಯುತ್ತೇನೆ ಎಂದು ಹೇಳಿರಿ" ಪ್ರವಾದಿ(ಸ) ...ರಿಸಿದರು.

'ಅನಂತರ?'

"ನಾನು ಅಲ್ಲಾಹನನ್ನೂ ಇಲ್ಲಿ ನೆರೆದಿರುವ ಸಭಿಕರನ್ನೂ ಸಾಕ್ಷಿಯಾಗಿರಿಸಿಕೊಂಡು ...ಸುತ್ತಿದ್ದೇನೆ- ನಾನು ಮುಸ್ಲಿಮ್ (ಆಜ್ಞಾನುವರ್ತಿ), ಮುಜಾಹಿದ್ (ಯೋಧ) ಮತ್ತು ಹಾಜಿರ್ (ಅಲ್ಲಾಹನ ಮಾರ್ಗದ ವಲಸಿಗ) ಆಗಿದ್ದೇನೆಂದು ಹೇಳಿರಿ".

ಇಕ್ರಿಮಾ ಈ ಮಾತನ್ನು ಘೋಷಿಸಿ ಹೇಳಿದರು. ಈ ಸಂದರ್ಭದಲ್ಲಿ ಪ್ರವಾದಿ(ಸ) ...ಮಾರೊಡನೆ- "ಇಂದು ನನ್ನೊಂದಿಗೆ ಏನನ್ನು ಕೇಳಲಿಚ್ಛಿಸುತ್ತೀರೋ ಅದನ್ನು ಕೇಳಿರಿ. ...ು ನೀಡುವೆನು" ಎಂದರು.

"ನಾನು ತಮ್ಮೊಂದಿಗೆ ತೋರಿದ ಹಗೆತನ, ತಮ್ಮ ವಿರುದ್ಧ ನನ್ನ ದುರಾಕ್ರಮಣಗಳು ...ತ್ತು ತಮ್ಮ ವಿರುದ್ಧ ಪ್ರತ್ಯಕ್ಷವಾಗಿ ಪರೋಕ್ಷವಾಗಿ ನಾನು ಆಡಿದ ಮಾತುಗಳು ...ಲ್ಲವುಗಳು ಕ್ಷಮಿಸಲ್ಪಡಲು ನನಗಾಗಿ ಪ್ರಾರ್ಥಿಸಿರಿ " ಇಕ್ರಿಮಾ ಬಿನ್ನವಿಸಿದರು.

ಪ್ರವಾದಿ(ಸ) ಆಗ ಈ ರೀತಿ ಪ್ರಾರ್ಥಿಸಿದರು.

"ಅಲ್ಲಾಹನೆ! ಇಕ್ರಿಮಾ ನನ್ನ ವಿರುದ್ಧ ಇಟ್ಟಿದ್ದ ಹಗೆತನಗಳನ್ನು ಕ್ಷಮಿಸು. ನಿನ್ನ ...ಕಾಶವನ್ನು ನಂದಿಸಲು ಆತನು ಎಸಗಿದ ಎಲ್ಲ ದುಷ್ಕೃತ್ಯಗಳನ್ನು ಮನ್ನಿಸು. ನನ್ನ ಮಾನ ...ನಿಗಾಗಿ ನನ್ನ ಮುಂದೆ ಅಥವಾ ಹಿಂದೆ ಮಾಡಿದ್ದ ಎಲ್ಲಾ ಕೃತ್ಯಗಳನ್ನೂ ಕಡೆಗಣಿಸು."

ಈ ಪ್ರಾರ್ಥನೆಯಿಂದ ಇಕ್ರಿಮಾರ ಮುಖ ಸಂತೋಷದಿಂದ ಅರಳಿತು. ಅವರು ...ಗೆಂದರು, "ಅಲ್ಲಾಹನ ಸಂದೇಶವಾಹಕರೇ! ಅಲ್ಲಾಹನ ಮಾರ್ಗದಿಂದ ಜನರನ್ನು ...ಯಲು ಈ ಹಿಂದೆ ನಾನು ಎಷ್ಟೆಲ್ಲ ಹಣ ಖರ್ಚು ಮಾಡಿದ್ದೇನೋ ಇನ್ನು ಮುಂದೆ ...ರ ದುಪ್ಪಟ್ಟು ಹಣವನ್ನು ನಾನು ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡುವೆನು. ಈ ...ಂಚೆ ಅಲ್ಲಾಹನ ಮಾರ್ಗದಿಂದ ಜನರನ್ನು ತಡೆಯಲು ಎಷ್ಟು ಶಕ್ತಿಯಿಂದ ಹೋರಾಡಿದೆನೋ ...್ನಿ ಮುಂದೆ ಅಲ್ಲಾಹನ ಮಾರ್ಗದಲ್ಲಿ ಅದರ ಇಮ್ಮಡಿ ಶಕ್ತಿಯೊಂದಿಗೆ ಹೋರಾಡುವೆನು."

ಅಂದಿನಿಂದ ಮುಸ್ಲಿಮರ ಕೂಟದಲ್ಲಿ ರಣರಂಗದಲ್ಲಿ ಒಬ್ಬ ಅಪ್ರತಿಮ ಅಶ್ವಯೋಧ ...ತ್ತು ಮಸೀದಿಯಲ್ಲಿ ಒಬ್ಬ ದೇವಭಕ್ತ ಆರಾಧಕ ಹಾಗೂ ಕುರ್‌ಆನ್ ಪಾರಾಯಣ

ಮಾಡುವವನ ಹೆಚ್ಚಳವಾಯಿತು. ಅವರು ಕುರ್‌ಆನನ್ನು ತನ್ನ ಮುಖದ ಮೇಲಿಟ್ಟು ಅಲ್ಲಾ ಭಯದಿಂದ ಕಂಪಿಸುತ್ತಾ, ಬಹಳ ಪ್ರೀತಿಯೊಂದಿಗೆ, "ಕಿತಾಬು ರಬ್ಬೀ, ಕಲಾಮು ರಬ 'ಇದು ನನ್ನ ಪ್ರಭುವಿನ ಗ್ರಂಥ. ಇದು ನನ್ನ ಪ್ರಭುವಿನ ಮಾತು' ಎನ್ನುತ್ತಿದ್ದರು.

ಪ್ರವಾದಿಯವರೊಡನೆ(ಸ) ಇಕ್ರಿಮಾ ಮಾಡಿದ್ದ ವಾಗ್ದಾನವನ್ನು ಪೂರ್ತೀಕರಿಸಿದ ಇಸ್ಲಾಮ್ ಮತ್ತು ಸತ್ಯನಿಷೇಧದ ಮಧ್ಯೆ ಎಷ್ಟೆಲ್ಲ ಯುದ್ಧಗಳು ಅವರ ಇಸ್ಲಾಮ್ ಸ್ವೀಕಾ ನಂತರ ನಡೆಯಿತೋ ಅವೆಲ್ಲದರಲ್ಲೂ ಅವರು ಅತ್ಯುತ್ಸಾಹದಿಂದ ಭಾಗವಹಿಸಿದ ಮುಸ್ಲಿಮರು ಯಾವೆಲ್ಲ ಕಾರ್ಯಾಚರಣೆಗಾಗಿ ಹೊರಟರೋ ಅವೆಲ್ಲದರಲ್ಲೂ ಅ ಮುಂಚೂಣಿಯಲ್ಲಿದ್ದರು.

ಯರ್ಮೂಕ್ ಯುದ್ಧದ ವೇಳೆ ಅವರು ತೋರಿದ್ದ ಸಾಹಸ ಅಪ್ರತಿಮವಾಗಿತ್ತು. ತ ಸೆಖೆಯಲ್ಲಿ ಅತ್ಯಂತ ಬಾಯಾರಿ ಬಳಲಿದ ವ್ಯಕ್ತಿ ಸಿಹಿ ನೀರಿಗಾಗಿ ಹಾತೊರೆದು ಧಾವಿಸುವ ಅವರು ವೈರಿಗಳತ್ತ ಸಾಗುತ್ತಿದ್ದರು. ಒಂದು ಸಂದರ್ಭದಲ್ಲಿ ವೈರಿಗಳು ಮುಸ್ಲಿಮರ ಸಂಪೂರ್ಣ ಸುತ್ತುವರಿದಿದ್ದರು. ಇಕ್ರಿಮಾ ತನ್ನ ಕುದುರೆಯಿಂದ ಕೆಳಗೆ ಹಾರಿ ನಗ್ನ ಖ ಹಿಡಿದು ರೋಮನ್ ಸೇನೆಯ ಪಂಕ್ತಿಗಳಿಗೆ ನುಗ್ಗಿದರು. ಇದನ್ನು ನೋಡಿ ಖಾಲಿದ್ ಬ ವಲೀದ್(ರ) ಕೂಡಲೇ ಅವರ ಬಳಿಗೆ ಹೋಗಿ "ಇಕ್ರಿಮಾ! ನಿಮ್ಮ ಪ್ರಾಣವ ಅಪಾಯಕ್ಕೊಡ್ಡಬೇಡಿರಿ. ನೀವು ವಧಿಸಲ್ಪಟ್ಟರೆ ಮುಸ್ಲಿಮರಿಗೆ ಸಹಿಸಲಸಾಧ್ಯವ ಆಘಾತವುಂಟಾದೀತು" ಎಂದರು.

ಆದರೆ ಇಕ್ರಿಮಾ ಖಾಲಿದ್‌ರಿಗೆ ಹೀಗೆ ಉತ್ತರ ಕೊಟ್ಟರು, "ಅತ್ತ ಸರಿಯಿರಿ. ನ ದಾರಿಗೆ ಅಡ್ಡ ಬರಬೇಡಿರಿ. ನಿಮಗೆ ಪ್ರವಾದಿಯವರ(ಸ) ಸಹವಾಸ ಮತ್ತು ಇಸ್ಲಾ ಸೇವೆಯ ಅವಕಾಶ ನನಗಿಂತ ಎಷ್ಟೋ ಹೆಚ್ಚು ಸಿಕ್ಕಿದೆ. ನಾನು ಮತ್ತು ನನ್ನ ತಂ ಪ್ರವಾದಿಯವರ(ಸ) ಕಡು ವೈರಿಗಳಾಗಿದ್ದೆವು. ನಾನು ಕೊನೆಯ ವರೆಗೂ ಅವರ ವಿರೋಧಿಸುತ್ತಲೇ ಇದ್ದೆ. ಆದುದರಿಂದ ಪ್ರವಾದಿವರ್ಯರ ಸಹವಾಸ ನನಗೆ ತಡವ ಲಭಿಸಿತು. ನನ್ನನ್ನು ಬಿಟ್ಟು ಬಿಡಿ. ನಾನು ನನ್ನ ಗತ ಪಾಪಗಳಿಗೆ ಪ್ರಾಯಶ್ಚಿ ಮಾಡಬೇಕೆಂದಿದ್ದೇನೆ."

ಸ್ವಲ್ಪ ಹೊತ್ತಿನ ಬಳಿಕ ಇಕ್ರಿಮಾ ಮುಂದುವರಿಸಿದರು, "ನಾನು ಅನೇಕ ಸಂದರ್ಭಗಳ ಪ್ರವಾದಿಯವರ(ಸ) ಜೊತೆ ಸ್ಥಿರಚಿತ್ತನಾಗಿ ಹೋರಾಡಿದ್ದೇನೆ. ಇಂದು ರೋಮನರಿ ಪಲಾಯನ ಮಾಡಬೇಕೇ? ಖಂಡಿತ ಸಾಧ್ಯವಿಲ್ಲ." ತರುವಾಯ ಮುಸ್ಲಿಮ್ ಯೋಧರ ಉದ್ದೇಶಿಸಿ, "ಮರಣದೊಂದಿಗೆ ಒಪ್ಪಂದಕ್ಕಾಗಿ ಯಾರು ಸಿದ್ಧರಿದ್ದಾರೆ?" ಎಂದು ಕೇಳಿದ

ಅವರ ಕರೆಗೆ ಓಗೊಟ್ಟು, ನಾನೂರು ಮಂದಿ ಮುಸ್ಲಿಮ್ ಯೋಧರು ಅವರೊಂ ಒಪ್ಪಂದ ಮಾಡಿದರು. ಅವರಲ್ಲಿ ಅವರ ಚಿಕ್ಕಪ್ಪ ಹಾರಿಸ್ ಬಿನ್ ಹಿಶಾಮ್ ಮತ್ತು ಝಿರಾ ಬಿನ್ ಅಝ್ವರ್ ಕೂಡಾ ಇದ್ದರು. ಇವರು ಸೇನಾ ನಾಯಕ ಖಾಲಿದ್ ಬಿನ್ ವಲೀದ ಡೇರೆಯ ಸುತ್ತ ಭೀಕರ ಯುದ್ಧದಲ್ಲಿ ತಲ್ಲೀನರಾಗಿದ್ದರು. ವೈರಿಗಳ ಆಕ್ರಮಣವ ಸಮರ್ಥವಾಗಿ ಎದುರಿಸುತ್ತಿದ್ದರು. ಯರ್ಮೂಕ್ ಯುದ್ಧದ ಕಾರ್ಮೋಡ ಸರಿದು ಮುಸ್ಲಿಮ

ತಂಡ ವಿಜಯದತ್ತ ಸಾಗುತ್ತಿದ್ದಾಗ ಯರ್ಮೂಕ್ ರಣರಂಗದಲ್ಲಿ ಮೂವರು ಯೋಧರಾದ ರಿಸ್ ಬಿನ್ ಹಿಶಾಮ್, ಅಯ್ಯಾಶ್ ಬಿನ್ ರಬೀಅ ಮತ್ತು ಇಕ್ರಿಮಾ ಬಿನ್ ಅಬೂಜಹಲ್ ಯಾಳುಗಳಾಗಿ ಬಿದ್ದು ಒದ್ದಾಡುತ್ತಿದ್ದರು.

ಬಾಯಾರಿ ಬಳಲಿ ಬೆಂಡಾಗಿದ್ದ ಹಾರಿಸ್ ನೀರು ಕೇಳಿದಾಗ, ಒಬ್ಬ ಯೋಧನು ರನೊಂದಿಗೆ ಅವರ ಬಳಿಗೆ ಹೋದಾಗ, ತನ್ನತ್ತ ನೋಡುತ್ತಿದ್ದ ಇಕ್ರಿಮಾರಿಗೆ ಮೊದಲು ತಿಸುವಂತೆ ಅವರು ಸೂಚನೆ ಮಾಡಿದರು. ಆದರೆ ನೀರಿನೊಂದಿಗೆ ಇಕ್ರಿಮಾರ ಬಳಿಗೆ ಪಿದಾಗ ಅವರನ್ನು ಅಯ್ಯಾಶ್ ನೋಡುವುದು ಕಂಡಿತು. ಮೊದಲು ಅಯ್ಯಾಶ್‌ರಿಗೆ ನೀರು ತಿಸುವಂತೆ ಇಕ್ರಿಮಾ ಸೂಚಿಸಿದರು. ನೀರಿನ ಲೋಟದೊಂದಿಗೆ ಅಯ್ಯಾಶ್‌ರ ಬಳಿ ಪಿದಾಗ ಅಯ್ಯಾಶ್ ಕೊನೆಯುಸಿರೆಳೆದಿದ್ದರು.

ಅಲ್ಲಿಂದ ಇಕ್ರಿಮಾರ ಬಳಿಗೆ ಬಂದಾಗ ಅವರೂ ಇಹಲೋಕ ತ್ಯಜಿಸಿದ್ದರು. ಕೊನೆಗೆ ದಲು ನೀರು ಕೇಳಿದ ಹಾರಿಸ್‌ರ ಬಳಿಗೆ ತಲಪಿದಾಗ ಅವರೂ ನಿಶ್ಚಲವಾಗಿ ಬಿದ್ದುದನ್ನು ಸಹಾಬಿ ಕಂಡರು. ಒಟ್ಟಿನಲ್ಲಿ ಮೂವರೂ ಕೌಸರ್‌ನಿಂದ ತಮ್ಮ ನೀರಡಿಕೆ ಇಂಗಿಸಿದ್ದರು.

ಅಲ್ಲಾಹನು ಅವರೆಲ್ಲರಿಗೂ 'ಫಿರ್‌ದೌಸ್' ಸ್ವರ್ಗವನ್ನು ದಯಪಾಲಿಸಲಿ ಮತ್ತು ರರಿಂದ ಸಂತುಷ್ಟನಾಗಲಿ.

# ಹ. ಅಬೂದರ್ ಗಿಫಾರಿ(ರ)

## ಸತ್ಯಾನ್ವೇಷಣೆ

ಮಕ್ಕಾ ನಗರವನ್ನು ಹೊರಗಿನ ಲೋಕದೊಂದಿಗೆ ಜೋಡಿಸುವ ವದ್ದಾನ್ ಕಣಿವೆಯ ಗಿಫಾರ್ ಎಂಬ ಗೋತ್ರ ವಾಸವಾಗಿತ್ತು. ಕುರೈಶರ ವ್ಯಾಪಾರೀ ತಂಡಗಳು ಸಿರಿಯ ಹೋಗುವಾಗಲೂ ಬರುವಾಗಲೂ ಈ ಕಣಿವೆಯನ್ನು ಹಾದು ಹೋಗಬೇಕಾಗಿತ್ತು. ವ್ಯಾಪಾರೀ ತಂಡಗಳು ನೀಡುವ ಸುಂಕವೇ ಗಿಫಾರ್ ಗೋತ್ರದ ಆದಾಯ ಮೂಲವಾಗಿ ಅದರಿಂದಲೇ ಅವರು ಜೀವನ ಸಾಗಿಸುತ್ತಿದ್ದರು. ಅನೇಕ ಸಲ ಈ ತಂಡಗಳು ಗಿಫ ಗೋತ್ರದ ಬೇಡಿಕೆಯಂತೆ ಸುಂಕ ನೀಡದಿದ್ದರೆ ಅವರ ಸೊತ್ತುಗಳನ್ನು ಕೊಳ್ಳೆ ಹೊಡೆಯುತ್ತಿದ್ದ

ಅಬೂದರ್ ಎಂಬ ಕುಲ ನಾಮದೊಂದಿಗ ಖ್ಯಾತರಾಗಿದ್ದ ಜುಂದುಬ್ ಬಿನ್ ಜುನ ಇದೇ ಗಿಫಾರ್ ಗೋತ್ರದವರಾಗಿದ್ದರು. ಧೈರ್ಯ, ಪರಾಕ್ರಮ, ಧೀಮಂತಿಕೆ ಹಾ ದೂರದರ್ಶಿತ್ವದ ಗುಣಗಳಿಂದಾಗಿ ಅವರು ಆ ಗೋತ್ರದಲ್ಲಿ ವಿಶೇಷ ಸ್ಥಾನಮಾನ ಪಡೆದಿದ್ದರು. ಅವರ ಇನ್ನೊಂದು ವಿಶೇಷತೆಯೇನೆಂದರೆ ತನ್ನ ಗೋತ್ರದವರು ಅಲ್ಲಾಹನ ಬಿಟ್ಟು ಪೂಜಿಸುತ್ತಿದ್ದ ವಿಗ್ರಹಗಳ ಬಗ್ಗೆ ಜಿಗುಪ್ಸೆ ಹೊಂದಿದವರಾಗಿದ್ದರು. ಅರೇಬಿಯಾದಲ್ ಕೆಡುಕುಗಳು ಮತ್ತು ಪರಂಪರಾಗತ ಮೂಢನಂಬಿಕೆಗಳು ಅವರಿಗೆ ತೀರಾ ಅಸಹ್ಯವಾಗಿದ್ದು ಅವರು ಜನರ ಮನ-ಮಸ್ತಿಷ್ಕಗಳನ್ನು ಸುಧಾರಿಸುವ ಮತ್ತು ಅವರನ್ನು ಕತ್ತಲೆಯಿಂದ ಬೆ ಕೊಂಡೊಯ್ಯುವ ಒಬ್ಬ ಪ್ರವಾದಿಯ ನಿರೀಕ್ಷೆಯಲ್ಲಿದ್ದರು.

ಅಬೂದರ್‌ರಿಗೆ, ತಮ್ಮ ಗ್ರಾಮದಲ್ಲಿರುವಾಗ, ಮಕ್ಕಾದಲ್ಲಿ ಓರ್ವ ಪ್ರ ಬಂದಿದ್ದಾರೆಂಬ ಸುದ್ದಿ ಸಿಕ್ಕಿತು. ಆಗ ಅವರು ಈ ಹೊಸ ಪ್ರವಾದಿಯ ಬಗ್ಗೆ ಮಾ ಸಂಗ್ರಹಿಸಲಿಕ್ಕಾಗಿ ಹಾಗೂ ಅವರು ಪ್ರವಾದಿ ಹೌದೋ, ಅವರಿಗೆ 'ವ ಅವತೀರ್ಣಗೊಳ್ಳುತ್ತಿದೆಯೋ ಎಂಬ ಬಗ್ಗೆ ತಿಳಿದುಕೊಳ್ಳಲಿಕ್ಕಾಗಿ ತನ್ನ ಸಹೋದರ ಉನೈಸ್‌ ಮಕ್ಕಾಕ್ಕೆ ಕಳಿಸಿದರು.

ಉನೈಸ್ ಮಕ್ಕಾಕ್ಕೆ ಹೋಗಿ ಪ್ರವಾದಿಯವರನ್ನು(ಸ) ಭೇಟಿಯಾಗಿ ಅವರ ಮಾತುಗ ಕೇಳಿ ತಮ್ಮ ಗೋತ್ರಕ್ಕೆ ಮರಳಿದರು. ಅಲ್ಲಿ ಅವರ ಸಹೋದರ ಅಬೂದರ್, ತಮ್ಮನ ಕಾತರದಿಂದ ನಿರೀಕ್ಷಿಸುತ್ತಿದ್ದರು. ಅವರು ಬಂದ ಕೂಡಲೇ ಕುತೂಹಲದಿಂದ

ಯಗಳನ್ನೂ ತಿಳಿದುಕೊಂಡರು. ಅವರು ಹೇಳಿದರು, "ಅಲ್ಲಾಹನಾಣೆ! ನಾನು ಉನ್ನತ ತ್ರ್ಯವನ್ನು ಮೈಗೂಡಿಸಿಕೊಳ್ಳಲು ಕರೆ ನೀಡುವ ವ್ಯಕ್ತಿಯನ್ನು ಭೇಟಿಯಾಗಿ ಬಂದಿದ್ದೇನೆ. ರು ಓದಿ ಕೇಳಿಸುವ ವಾಣಿಯು ಕಾವ್ಯಕ್ಕಿಂತಲೂ ಉನ್ನತವಾದುದು."

"ಜನರು ಅವರ ಕುರಿತು ಏನು ಹೇಳುತ್ತಾರೆ- "ಅಬೂದರ್ ಪ್ರಶ್ನಿಸಿದರು." ಅವರನ್ನು ರು ಮಾಂತ್ರಿಕ, ಜಾದೂಗಾರ ಮತ್ತು ಕವಿ ಎಂದೆಲ್ಲಾ ಹೇಳುತ್ತಾರೆ."

"ದೇವನಾಣೆ ನನಗೆ ನಿನ್ನ ಉತ್ತರದಿಂದ ತೃಪ್ತಿಯಾಗಿಲ್ಲ. ನಿನ್ನನ್ನು ಕಳಿಸಿದ ನನ್ನ ದ್ದೇಶವೂ ಅದರಿಂದ ಪೂರ್ತಿಗೊಂಡಂತಾಗಿಲ್ಲ. ನಾನೇ ಸ್ವತಃ ಹೋಗಿ ಅವರ ಕುರಿತು ಮಾಹಿತಿ ಪಡೆಯಬಯಸುತ್ತೇನೆ. ನನ್ನ ಅನುಪಸ್ಥಿತಿಯಲ್ಲಿ ನನ್ನ ಮನೆ ಮಂದಿಯ ಷಣೆಯನ್ನು ವಹಿಸಬಲ್ಲೆಯಾ?"

"ಸರಿ, ಆ ಹೊಣೆಯನ್ನು ನಾನು ವಹಿಸುತ್ತೇನೆ. ನೀವು ಹೋಗಿರಿ. ಆದರೆ ಮಕ್ಕಾದವರ ಜಾಗ್ರತೆ ವಹಿಸಿರಿ."

ಈ ಸಂಭಾಷಣೆಯ ನಂತರ ಅಬೂದರ್ ಪ್ರವಾದಿವರ್ಯರನ್ನು(ಸ) ಭೇಟಿಯಾಗುವ ದ್ದೇಶದಿಂದ ಪ್ರಯಾಣ ಹೊರಟರು. ದಾರಿ ವೆಚ್ಚಕ್ಕಾಗಿ ಬುತ್ತಿಯನ್ನೂ ಸ್ವಲ್ಪ ನೀರನ್ನೂ ರುಕೊಂಡರು. ಅವರು ಮಕ್ಕಾಕ್ಕೆ ತಲಪಿದಾಗ ಮನಸ್ಸಿನಲ್ಲಿ ಭೀತಿ ಆವರಿಸಿತ್ತು. ಕುರೈಶರು ಪೂಜಾ ವಸ್ತುಗಳನ್ನು ಬೆಂಬಲಿಸುವುದರಲ್ಲಿ ಕಠೋರರಾಗಿರುವರೆಂದು ಅವರಿಗೆ ತ್ತು. ಮುಹಮ್ಮದ್‌ರ(ಸ) ಅನುಯಾಯಿಯಾಗುವ ವಿಷಯದಲ್ಲಿ ಮನಸ್ಸಿನಲ್ಲೂ ೋಚಿಸುವವನನ್ನು ಅವರು ಕಠೋರವಾಗಿ ಶಿಕ್ಷಿಸುತ್ತಿದ್ದರೆಂದೂ ಅವರಿಗೆ ತಿಳಿದಿತ್ತು. ದರಿಂದ ಪ್ರವಾದಿವರ್ಯರ ಕುರಿತು ಯಾರೊಡನೆಯೂ ವಿಚಾರಿಸುವ ಗೊಡವೆಗೆ ಅವರು ಗಲಿಲ್ಲ. ಏಕೆಂದರೆ ಯಾರಲ್ಲಾದರೂ ವಿಚಾರಿಸುವುದಾದರೆ ಆ ವ್ಯಕ್ತಿ ಅವರನ್ನು ುವವನೋ ಅಲ್ಲವೋ ಎಂಬುದು ಅವರಿಗೆ ತಿಳಿದಿರಲಿಲ್ಲ.

ರಾತ್ರಿ ಅವರು ಮಸೀದಿಯಲ್ಲಿ ತಂಗಿದರು. ಅಕಸ್ಮಾತ್ ಅಲ್ಲಿಂದ ಹ. ಅಲೀ ಹಾದು ಗುವಾಗ ಅವರಿಗೆ ಈ ವಿದೇಶಿಯನನ್ನು ಕಂಡು ಮರುಕ ಹುಟ್ಟಿತು. ಅವರು ೂದರ್‌ರನ್ನು ತನ್ನ ಜೊತೆಯಲ್ಲಿ ಮನೆಗೆ ಕರೆದೊಯ್ದರು. ರಾತ್ರಿ ಊಟ ಮುಗಿಸಿ ಗಿದರು. ಬೆಳಿಗ್ಗೆ ತನ್ನ ಕೈ ಚೀಲದೊಂದಿಗೆ ಅವರು ಪುನಃ ಮಸೀದಿಗೆ ಮರಳಿದರು. ುಧ್ಯೆ ಅವರು ಪರಸ್ಪರರ ಬಗ್ಗೆ ಯಾವುದೇ ಮಾತುಕತೆ ನಡೆಸಲಿಲ್ಲ. ಎರಡನೇ ದಿನವೂ ು ಹಾಗೆಯೇ ಕಳೆದರು. ಆದರೆ ಅವರಿಗೆ ಪ್ರವಾದಿವರ್ಯರ ಬಗ್ಗೆ ಏನೂ ಮಾಹಿತಿ ಯಲಿಲ್ಲ. ಅಂದು ರಾತ್ರಿ ಕೂಡಾ ಹ. ಅಲೀಯವರು ಅವರನ್ನು ಕಂಡು ಜೊತೆಯಲ್ಲಿ ೊಯ್ದರು. ಆ ದಿನವೂ ಇಬ್ಬರೂ ಮೌನವಾಗಿದ್ದರು. ಮೂರನೆಯ ದಿನ ಹ.ಅಲೀಯವರು ೊಂದಿಗೆ ಮಕ್ಕಾಕ್ಕೆ ಬಂದ ಉದ್ದೇಶವೇನೆಂದು ಕೇಳಿದರು.

"ನನ್ನನ್ನು ನನ್ನ ಗುರಿಗೆ ಮುಟ್ಟಿಸುವಿರಿ ಎಂದು ವಚನ ಕೊಟ್ಟರೆ ನಾನು ಬಂದ ೇಶವನ್ನು ತಿಳಿಸುವೆ" ಅಬೂದರ್ ನಯವಾಗಿ ಹೇಳಿದರು.

ಹ. ಅಲೀ ವಚನ ಕೊಟ್ಟ ಕೂಡಲೇ ಅವರು ಹೀಗೆಂದರು, "ನಾನು ಬ ದೂರದಿಂದ ಪ್ರಯಾಣ ಮಾಡಿ ಬಂದಿದ್ದೇನೆ. ಇಲ್ಲಿ ಒಬ್ಬ ಪ್ರವಾದಿ ಬಂದಿದ್ದಾರೆ ಕೇಳಿದ್ದೇನೆ. ಅವರ ಸಂದೇಶವೇನೆಂದು ಕೇಳಲು ಬಂದಿರುವೆನು."

ಇದನ್ನು ಕೇಳಿ ಹ. ಅಲೀಯವರ ಮುಖ ಸಂತೋಷದಿಂದ ಅರಳಿತು. ಅ ಹೀಗೆಂದರು, "ಖಂಡಿತವಾಗಿಯೂ ಅವರು ಅಲ್ಲಾಹನ ಸಂದೇಶವಾಹಕರಾಗಿದ್ದಾರೆ. ಅವರ ಅವರು... ನೋಡಿ, ಬೆಳಿಗ್ಗೆ ನಾನು ಯಾವ ಕಡೆಗೆ ನಡೆಯುತ್ತೇನೋ ಅತ್ತ ನೀವೂ ನನ್ ಹಿಂಬಾಲಿಸಬೇಕು. ನಿಮಗೆ ಏನಾದರೂ ಅಪಾಯವಿದೆಯೆಂದು ನನಗೆ ಮನವರಿಕೆಯಾ ನಾನು ಮೂತ್ರ ವಿಸರ್ಜನೆಗೆ ನಿಲ್ಲುವಂತೆ ಎಲ್ಲಾದರೂ ನಿಲ್ಲುವೆನು. ನಾನು ನಡೆಯತೊಡಗು ನನ್ನನ್ನು ಹಿಂಬಾಲಿಸಬೇಕು. ನಾನು ಹೋಗುವಲ್ಲಿಗೆ ನನ್ನ ಹಿಂದೆ ಬರಬೇಕು."

ಪ್ರವಾದಿಯವರನ್ನು(ಸ) ಭೇಟಿಯಾಗುವ ತವಕದಿಂದ ಅವರಿಗೆ ರಾತ್ರಿ ನಿದ್ದೆ ಹತ್ತಲಿಲ್ಲ. ಬೆಳಿಗ್ಗೆ ಹ. ಅಲೀಯವರು ತನ್ನ ಅತಿಥಿಯನ್ನು ಪ್ರವಾದಿಯವರ(ಸ) ವ ಕರೆದುಕೊಂಡು ಹೋದರು. ಪ್ರವಾದಿವರ್ಯರ ಬಳಿಗೆ ತಲಪಿದಾಗ ಅಬೂದರ್‌ರು 'ಅಸ್ಸಲಾ ಅಲೈಕುಮ್ ಯಾ ರಸೂಲಲ್ಲಾಹ್' ಎಂದು ಹೇಳಿದರು. ಪ್ರವಾದಿಯವರು ಅದಕ್ಕೆ ಉತ್ತರ 'ವ ಅಲೈಕಸ್ಸಲಾಮ್ ವರಹ್ಮತುಹೂ ವ ಬರಕಾತುಹೂ' ಎಂದು ಹೇಳಿದರು.

ಪ್ರವಾದಿವರ್ಯರಿಗೆ ಇಸ್ಲಾಮೀ ರೀತಿಯಲ್ಲಿ ಸಲಾಮ್ ಹೇಳಿದವರ ಪೈಕಿ ಅಬೂ ಮೊದಲಿಗರಾಗಿದ್ದರು. ಅನಂತರ ಇದೇ ಕ್ರಮವು ಮುಸ್ಲಿಮ್ ಸಮಾಜದಲ್ಲಿ ರೂಢಿಗೆ ಬಂ ಪ್ರವಾದಿವರ್ಯರು(ಸ) ಇಸ್ಲಾಮಿನ ಸಂದೇಶವನ್ನು ಅವರ ಮುಂದಿಟ್ಟರು ಮತ್ತು ಕುರ್‌ಆ ಸ್ವಲ್ಪ ಭಾಗವನ್ನು ಓದಿದರು. ಅಬೂದರ್ ಹಿಂದೆ ಮುಂದೆ ನೋಡದೆ ಸತ್ಯವಚನ ಘೋಷಿಸಿ ಅಲ್ಲಿಂದ ಏಳುವುದಕ್ಕಿಂತ ಮುಂಚೆಯೇ ಇಸ್ಲಾಮಿನೊಳಗೆ ಪ್ರವೇಶಿಸಿ ಸತ್ಯವಿಶ್ವಾಸ ಸ್ವೀಕರಿಸಿದವರಲ್ಲಿ ಅವರು ನಾಲ್ಕನೆ ಅಥವಾ ಐದನೇ ವ್ಯಕ್ತಿಯಾಗಿದ್ದರು

## ಸಾತ್ವಿಕ ಜೀವನ

ಇಸ್ಲಾಮ್ ಸ್ವೀಕರಿಸಿದ ನಂತರ ಕೆಲವು ದಿನಗಳ ವರೆಗೆ ಅಬೂದರ್ ಪ್ರವಾದಿಯವ ಜೊತೆಯಲ್ಲಿ ಮಕ್ಕಾದಲ್ಲೇ ತಂಗಿದರು. ಆ ದಿನಗಳಲ್ಲಿ ಅವರು ಪ್ರವಾದಿವರ್ಯ ಸಾಕಷ್ಟು ಜ್ಞಾನ ಗಳಿಸಿದರು. ಅವರಿಂದ ಕುರ್‌ಆನ್ ಓದುವುದನ್ನು ಕಲಿತರು. ಪ್ರವಾದಿವಯ ಅವರೊಂದಿಗೆ, "ನಿಮ್ಮ ಇಸ್ಲಾಮ್ ಸ್ವೀಕಾರದ ಸುದ್ದಿಯನ್ನು ಮಕ್ಕಾದಲ್ಲಿ ಯಾ ತಿಳಿಸಬಾರದು, ಅವರು ನಿಮ್ಮನ್ನು ಕೊಂದುಬಿಟ್ಟಾರು" ಎಂದು ಹೇಳಿದ್ದರು. ಅ ಅಬೂದರ್ ಈ ರೀತಿ ಉತ್ತರಿಸಿದರು, "ನಾನು ಮಸ್ಜಿದುಲ್ ಹರಾಮ್‌ನಲ್ಲಿ ಕುರೈಶರ ಮ ಸತ್ಯದ ಘೋಷಣೆ ಮಾಡುವ ವರೆಗೆ ಮಕ್ಕಾ ಬಿಟ್ಟು ಹೋಗಲಾರೆ." ನಂತರ ಅ ಮಸ್ಜಿದುಲ್ ಹರಾಮ್‌ಗೆ ಹೋದರು. ಕುರೈಶರು ಅಲ್ಲೇ ಕುಳಿತು ಪರಸ್ಪರ ಮಾತಾಡುತ್ತಿದ್ ಅಬೂದರ್ ಅವರ ಬಳಿ ಹೋಗಿ ನಿಂತು ಉಚ್ಚ ಸ್ವರದಲ್ಲಿ, "ಕುರೈಶರೇ ಅಲ್ಲಾಹನ

ಆರಾಧ್ಯರಿಲ್ಲವೆಂದೂ ಮುಹಮ್ಮದ್(ಸ) ಅಲ್ಲಾಹನ ಸಂದೇಶವಾಹಕರೆಂದೂ ನಾನು ವಹಿಸುತ್ತೇನೆ" ಎಂದರು.

ಈ ಶಬ್ದಗಳು ಕುರೈಶರ ಕರ್ಣಪಟಲಕ್ಕೆ ಬಡಿಯುತ್ತಲೇ ಅವರು ಕೋಪದಿಂದ ಡಿಯಾದರು. ಎಲ್ಲರೂ ಎದ್ದು ಬಂದು, ಈ ಧರ್ಮಭ್ರಷ್ಟನನ್ನು ಹೊಡೆಯಿರಿ- ಎನ್ನುತ್ತಾ ರ ಮೇಲೆ ಮುಗಿಬಿದ್ದು ಚೆನ್ನಾಗಿ ಥಳಿಸಿದರು. ಪ್ರವಾದಿವರ್ಯರ(ಸ) ಚಿಕ್ಕಪ್ಪ ಅಬ್ಬಾಸ್ ಅಬ್ದುಲ್ ಮುತ್ತಲಿಬ್ ಇದನ್ನು ಕಂಡು ಓಡೋಡಿ ಬಂದರು. ಅವರಿಗೆ ಅಬೂದರ್‌ರ ಚಯವಿತ್ತು. ಅವರ ರಕ್ಷಣೆಗೆ ನಿಂತರು. ತರುವಾಯ ಕುರೈಶರನ್ನುದ್ದೇಶಿಸಿ ಈ ರೀತಿ ಕುಗಿದರು- ಮೂರ್ಖರೇ, ನೀವು ಯಾರನ್ನು ಹೊಡೆಯುತ್ತಿದ್ದೀರಿ. ಗಿಫಾರ್ ಗೋತ್ರದ ವ್ಯಕ್ತಿಯನ್ನು ನೀವು ಕೊಲ್ಲಬಯಸಿದ್ದೀರಾ? ನಿಮ್ಮ ವ್ಯಾಪಾರಿ ತಂಡಗಳು ಅವರಲ್ಲಿಂದ ಮ ಹೋಗ ಬೇಡವೇ?" ಇದನ್ನು ಕೇಳಿ ಅವರು ಅಬೂದರ್‌ರನ್ನು ಬಿಟ್ಟು ಬಿಟ್ಟರು.

ಸ್ವಲ್ಪ ಚೇತರಿಸಿಕೊಂಡ ಬಳಿಕ ಅವರು ಪ್ರವಾದಿವರ್ಯರ(ಸ) ಬಳಿಗೆ ಹೋದರು. ಅವರ ದುರವಸ್ಥೆಯನ್ನು ಕಂಡು ಪ್ರವಾದಿವರ್ಯರು(ಸ), "ನೀವು ಇಸ್ಲಾಮ್ ಸ್ವೀಕರಿಸಿದ್ದನ್ನು ೀಷಿಸ ಬೇಡಿರೆಂದು ನಾನು ಹೇಳಿರಲಿಲ್ಲವೆ" ಎಂದು ಕೇಳಿದರು.

"ಅದು ನನ್ನ ಮನದಾಸೆಯಾಗಿತ್ತು. ಈಗ ಅದು ಪೂರ್ತಿಗೊಂಡಿತು." ಅಬೂದರ್ ತ್ತರಿಸಿದರು.

ತರುವಾಯ ಪ್ರವಾದಿವರ್ಯರು ಅವರಿಗೆ ಹೀಗೆ ಆದೇಶಿಸಿದರು- "ನೀವು ನಿಮ್ಮ ೀತ್ರದವರ ಬಳಿಗೆ ಹೋಗಿ ಇಲ್ಲಿ ಕಂಡದ್ದನ್ನೂ ಕೇಳಿದ್ದನ್ನೂ ಅವರಿಗೆ ಬೋಧಿಸಿ ಅವರನ್ನು ಲ್ಲಾಹನ ಧರ್ಮದತ್ತ ಆಹ್ವಾನಿಸಿರಿ. ಅಲ್ಲಾಹನು ನಿಮ್ಮ ಮೂಲಕ ಅವರಿಗೆ ಪ್ರಯೋಜನ ಕಬಹುದು ಮತ್ತು ನಿಮಗೆ ಅದರ ಪ್ರತಿಫಲ ದಯಪಾಲಿಸಬಹುದು. ನನಗೆ ವಿಜಯ ಪ್ತವಾಗಿದೆಯೆಂದು ನೀವು ಕೇಳಿದರೆ ನನ್ನ ಬಳಿಗೆ ಬರಬೇಕು."

ಅವರು ತಮ್ಮ ಗೋತ್ರದವರಲ್ಲಿಗೆ ಮರಳಿದಾಗ ಅವರ ಸಹೋದರ ಉನೈಸ್ ಅವರನ್ನು ಟಿಯಾದರು. ನೀವೇನು ಮಾಡಿದಿರಿ- ಎಂದು ಉನೈಸ್ ಕೇಳಿದಾಗ, ನಾನು ಮುಹಮ್ಮದ್‌ರ(ಸ) ಾದಿತ್ವವನ್ನು ದೃಢೀಕರಿಸಿ ಮುಸ್ಲಿಮನಾಗಿದ್ದೇನೆಂದರು. ಇದನ್ನು ಕೇಳಿ ಉನೈಸ್ ನನಗೆ ್ಮ ಧರ್ಮದ ಬಗ್ಗೆ ಆಕ್ಷೇಪವೇನೂ ಇಲ್ಲ. ನಾನೂ ಅದನ್ನು ಸ್ವೀಕರಿಸುತ್ತೇನೆಂದು ಿದರು. ತರುವಾಯ ಇಬ್ಬರೂ ಅವರ ತಾಯಿಯ ಬಳಿಗೆ ಹೋಗಿ ಅವರ ಮುಂದೆ ್ಲಾಮಿನ ಸಂದೇಶವನ್ನಿಟ್ಟರು. ತಾಯಿಯು ಅದೇ ಮಾತನ್ನು ಹೇಳಿ ಇಸ್ಲಾಮ್ ಸ್ವೀಕರಿಸಿದರು. ೀ ದಿನ ಅವರೆಲ್ಲರೂ ಗಿಫಾರ್ ಗೋತ್ರದವರನ್ನು ಅಲ್ಲಾಹನ ಧರ್ಮದತ್ತ ಆಹ್ವಾನಿಸುವ ಆರಂಭಿಸಿದರು. ಇವರ ಪರಿಶ್ರಮದ ಪರಿಣಾಮವಾಗಿ ಗಿಫಾರ್ ಗೋತ್ರದ ದೊಡ್ಡ ಗವೊಂದು ಇಸ್ಲಾಮ್ ಸ್ವೀಕರಿಸಿತು. ಅಲ್ಲಿ ನಮಾಝ್‌ನ ವ್ಯವಸ್ಥೆಯನ್ನು ಸ್ಥಾಪಿಸಲಾಯಿತು. ರಲ್ಲಿ ಉಳಿದವರು ತಮ್ಮ ಪೂರ್ವ ಧರ್ಮಕ್ಕೆ ಅಂಟಿ ನಿಂತರು. ಪ್ರವಾದಿ(ಸ) ಮದೀನಾಕ್ಕೆ ದ ಮೇಲೆ ತಾವು ಇಸ್ಲಾಮ್ ಸ್ವೀಕರಿಸುವುದಾಗಿ ಅವರು ಹೇಳಿದರು. ಹಾಗೆಯೇ

ಪ್ರವಾದಿ(ಸ) ಮದೀನಾಕ್ಕೆ ವಲಸೆ ಹೋದ ಬಳಿಕ, ಆ ಜನರೆಲ್ಲ ಇಸ್ಲಾಮ್ ಸ್ವೀಕರಿಸಿದ ಆಗ ಪ್ರವಾದಿ(ಸ) ಹೀಗೆ ಪ್ರಾರ್ಥಿಸಿದರು, "ಅಲ್ಲಾಹನು ಗಿಫಾರ್ ಗೋತ್ರದವರನ್ನು ಕ್ಷಮಿ ಮತ್ತು ಅಸ್ಲಮ್‌ರನ್ನು ರಕ್ಷಿಸಲಿ."

ಹ. ಅಬೂದರ್(ರ) ತಮ್ಮ ಗೋತ್ರದವರ ಬಳಿಯಲ್ಲೇ ವಾಸವಾಗಿದ್ದರು. ಬ ಉಹುದ್ ಮತ್ತು ಕಂದಕ್ ಯುದ್ಧಗಳೆಲ್ಲವೂ ಅವರು ಅಲ್ಲಿರುವಾಗಲೇ ನಡೆದು ತರುವಾಯ ಅವರು ಮದೀನಾಕ್ಕೆ ವಲಸೆ ಹೋದರು. ಅವರು ಪ್ರವಾದಿವರ್ಯರ ಬಳಿಯಲ್ಲೇ ಇದ್ದು ಅವರ ಬೋಧನೆಗಳಿಂದ ಪ್ರಯೋಜನ ಪಡೆಯುತ್ತಿದ್ದರು. ಪ್ರವಾದಿ ಕೂಡಾ ಅವರನ್ನು ತುಂಬಾ ಗೌರವಿಸುತ್ತಿದ್ದರು. ಎಲ್ಲ ವಿಷಯಗಳಲ್ಲೂ ಅವರಿಗೆ ಇತರರಿಗಿ ಆದ್ಯತೆ ನೀಡುತ್ತಿದ್ದರು. ಅವರನ್ನು ಭೇಟಿಯಾಗುವಾಗಲೆಲ್ಲ ಪ್ರೀತಿಯಿಂದ ಅವರ ಕುಲುಕುತ್ತಿದ್ದರು.

ಪ್ರವಾದಿಯವರ(ಸ) ವಿಯೋಗಾನಂತರ ಅಬೂದರ್‌ರಿಗೆ ಅಲ್ಲಿರಲು ಮನಸ್ಸು ಒಪ್ಪಲಿ ಆದುದರಿಂದ ಅವರು ಸಿರಿಯಾದ ಒಂದು ಗ್ರಾಮಕ್ಕೆ ತೆರಳಿ ಹ. ಅಬೂಬಕರ್ ಮ ಉಮರ್‌ರ(ರ) ಖಿಲಾಫತ್‌ನ ತನಕ ಅಲ್ಲೇ ಇದ್ದರು. ಹ. ಉಸ್ಮಾನ್‌ರ(ರ) ಖಿಲಾಫ ಕಾಲದಲ್ಲಿ ಅಲ್ಲಿಂದ ಡೆಮಾಸ್ಕಸ್‌ಗೆ ತೆರಳಿದರು. ಅಲ್ಲಿ ಅವರು ಮುಸ್ಲಿಮರು ಲೋಕಾರಾಧಕ ಆಡಂಬರ ಪ್ರಿಯರೂ ಪರಲೋಕದ ಬಗ್ಗೆ ನಿಶ್ಚಿಂತರೂ ಆಗಿರುವುದನ್ನು ಕಂಡು ಬ ಮರುಗಿದರು. ಅವರ ಈ ದುಸ್ಥಿತಿಯನ್ನು ಕಟುವಾಗಿ ಟೀಕಿಸ ತೊಡಗಿದರು. ಅವರ ವರ್ತನೆಯು ಅಲ್ಲಿನ ಜನರಿಗೆ ಹಿಡಿಸಲಿಲ್ಲ. ಅವರು ಹ. ಉಸ್ಮಾನ್‌ರಿಗೆ ದೂರು ಸಲ್ಲಿಸಿದ ಅವರನ್ನು ಹ. ಉಸ್ಮಾನ್(ರ) ಮದೀನಾಕ್ಕೆ ಕರೆಸಿದರು. ಖಲೀಫಾರ ಕರೆಯ ಮೇರೆಗೆ ಅ ಅಲ್ಲಿಗೆ ತೆರಳಿದರು. ಅಲ್ಲಿನ ಮುಸ್ಲಿಮರ ಅವಸ್ಥೆಯೂ ಡೆಮಾಸ್ಕಸ್‌ನವರಂತೆಯೇ ಇ ಅವರು ಇಲ್ಲೂ ಅದೇ ಧೋರಣೆಯನ್ನು ಕೈಗೊಂಡರು. ಜನರು ಅವರ ಕಟು ಮಾತುಗಳ ಬೇಸತ್ತರು. ಕಟ್ಟಕಡೆಗೆ ಹ. ಉಸ್ಮಾನ್‌ರು ಅವರನ್ನು ಮದೀನಾದ ಹತ್ತಿರದ ರಬ ಎಂಬಲ್ಲಿಗೆ ಹೋಗುವಂತೆ ಆಜ್ಞಾಪಿಸಿದರು. ಅದರ ಪ್ರಕಾರ ಅವರು ಅಲ್ಲಿಗೆ ಹೋ ಜನರಿಂದ ದೂರವಾಗಿ ನೆಲೆಸ ತೊಡಗಿದರು. ಪ್ರವಾದಿ(ಸ) ಮತ್ತು ಅವರ ಪ್ರಥಮ ಇಬ್ಬ ಖಲೀಫರಂತೆ ಲೋಕಾಡಂಬರದಿಂದ ನಿರಪೇಕ್ಷರಾಗಿ ಪರಲೋಕ ಚಿಂತೆಯಲ್ಲೇ ಕ ಕಳೆದರು.

ಒಮ್ಮೆ ಒಬ್ಬ ವ್ಯಕ್ತಿ ಅವರ ಬಳಿಗೆ ಬಂದು, ಮನೆಯ ನಾಲ್ಕೂ ಸುತ್ತ ದೃ ಹಾಯಿಸಿದ. ಮನೆಯಲ್ಲಿ ಯಾವುದೇ ವಸ್ತು ಇಲ್ಲದ್ದನ್ನು ಕಂಡು, "ನಿಮ್ಮ ಸಾಮಾನುಗಳ ಎಲ್ಲಿ?" ಎಂದು ಕೇಳಿದ. "ಅಲ್ಲಿ, ಪರಲೋಕದಲ್ಲಿ ನಮ್ಮ ಮನೆಯೊಂದಿದೆ. ನಾವು ನ ಬೆಲೆ ಬಾಳುವ ಉತ್ತಮ ವಸ್ತುಗಳನ್ನು ಅಲ್ಲಿಗೆ ಕಳಿಸುತ್ತೇವೆ" ಅಬೂದರ್ ಉತ್ತರಿಸಿದ

"ಆದರೆ ನೀವು ಈ ಲೋಕದಲ್ಲಿರುವಾಗ ಜೀವನ ನಡೆಸಲು ಒಂದಲ್ಲ ಒಂದು ವ ಬೇಕೇ ಬೇಕಲ್ಲವೇ?" ಆ ವ್ಯಕ್ತಿಯ ಮರು ಪ್ರಶ್ನೆ.

"ಆದರೆ ಮನೆಯ ಮಾಲಿಕನು ನಮ್ಮನ್ನು ಇಲ್ಲಿ ಬಿಟ್ಟು ಬಿಡಲಾರನು " ಅಬೂದರ್ ್ರಿಸಿದರು.

ಒಮ್ಮೆ ಸಿರಿಯಾದ ರಾಜ್ಯಪಾಲ ಮೂರು ಸಾವಿರ ದಿನಾರ್‌ಗಳನ್ನು 'ಅವರ ಅಗತ್ಯಗಳಿಗೆ ರ್ಚ ಮಾಡಲಿ' ಎನ್ನುತ್ತಾ ಅಬೂದರ್‌ರ ಬಳಿಗೆ ಕಳಿಸಿದರು. ಆದರೆ ಅವರು, ರ್ನರ್‌ರಿಗೆ ನನಗಿಂತ ದರಿದ್ರ ವ್ಯಕ್ತಿ ಸಿಗಲಿಲ್ಲವೆ?" ಎನ್ನುತ್ತಾ ಅದನ್ನು ಮರಳಿಸಿದರು.

ಹಿ.ಶ. 20ರಲ್ಲಿ ಆ ಸಾತ್ವಿಕ ಸಹಾಬಿ ನಿಧನರಾದರು. ಅವರ ಕುರಿತು ಪ್ರವಾದಿ(ಸ) ಂದಿದ್ದರು: ಈ ಭೂಮುಖದ ಮೇಲೆ ಮತ್ತು ಆಕಾಶದ ಕೆಳಗೆ ಅಬೂದರ್‌ರಷ್ಟು ಸತ್ಯ ತ ವ್ಯಕ್ತಿ ಯಾರೂ ಇಲ್ಲ.

# ಹ. ಬಿಲಾಲ್(ರ)

## ಅಗ್ನಿ ಪರೀಕ್ಷೆಗಳೊಂದಿಗೆ ಸರಸವಾಡಿದ ಧೀರ

ಹ. ಬಿಲಾಲ್ ಬಿನ್ ರಬಾಹ್(ರ) ಪ್ರವಾದಿ ಮುಹಮ್ಮದ್‌ರ(ಸ) ಅತ್ಯಂತ ನಿ ಸಂಗಾತಿಗಳಲ್ಲೊಬ್ಬರಾಗಿದ್ದರು. ಅವರ ಹೆಸರು ಕೇಳುತ್ತಲೇ ಪ್ರತಿಯೊಬ್ಬ ಮುಸ್ಲಿ ಮನದಲ್ಲಿ ಅವರ ಬಗ್ಗೆ ಗೌರವಾದರಗಳು ಉಕ್ಕೇರುತ್ತವೆ. ಅವರ ತಂದೆ ರಬಾಹ್ ಮೂ ಹಬಶಿ (ಇಥಿಯೋಪಿಯದವರು)ಯಾಗಿದ್ದರು. ಅವರ ತಾಯಿಯ ಹೆಸರು ಹುಮಾಮ. ದಂಪತಿ ಮಕ್ಕಾ ಪಟ್ಟಣಕ್ಕೆ ಬಂದು ಅಲ್ಲಿ ನೆಲೆಸ ತೊಡಗಿದ್ದರು. ಖುರೈಶರ ಬನೂ ಜು ಗೋತ್ರದ ಗುಲಾಮರಾಗಿ (ಅಥವಾ ಗುಲಾಮರಾಗಿ ಮಾಡಲ್ಪಟ್ಟು) ಅವರ ಚಾ ಮಾಡತೊಡಗಿದರು. ಮುಹಮ್ಮದ್(ಸ) ಪ್ರವಾದಿಯಾಗುವುದಕ್ಕೆ ಸುಮಾರು ಇಪ್ಪತ್ತೆ ವರ್ಷಗಳ ಹಿಂದೆ ಆ ದಂಪತಿಗಳ ಪುತ್ರನಾಗಿ ಬಿಲಾಲ್(ರ) ಜನಿಸಿದರು. ಅ ಬೆಳೆಯುತ್ತಿದ್ದ ಸಮಾಜ ಶಿರ್ಕ್-ಕುಫ್ರ್ (ಬಹುದೇವಾರಾಧನೆ-ದೇವ ನಿರಾಕರಣೆ)ನ ಮಾಲಿನ್ಯ ಮುಳುಗಿತ್ತು. ಬಿಲಾಲ್ ಓರ್ವ ಸಾತ್ವಿಕ ಸ್ವಭಾವದ ವ್ಯಕ್ತಿಯಾಗಿದ್ದರು.

ಪ್ರವಾದಿ ಮುಹಮ್ಮದ್‌ರವರು(ಸ) ತೌಹೀದ್‌ನ ಕರೆ ನೀಡಲು ಆರಂಭಿಸಿದ ಎಲ್ಲರಂತೆ ಅದು ಬಿಲಾಲ್‌ರ ಕಿವಿಗೂ ಬಿತ್ತು. ಪಾವನ, ಸಜ್ಜನ ವ್ಯಕ್ತಿಯಾದ ಬಿಲಾ ಈ ಕರೆ ಕೇಳಿದ ಕೂಡಲೇ ಅದನ್ನು ಅಪ್ಪಿಕೊಂಡರು. ಪ್ರವಾದಿಯವರ(ಸ) ಉನ್ನತ ಚಾರಿತ್ರ ಪರಿಚಯ ಬಹುಶಃ ಅವರಿಗೆ ಮುಂಚೆಯೂ ಆಗಿತ್ತು. ಅವರು ಪ್ರವಾದಿಯವರ ಆಪ್ತರಲ್ಲೊಬ್ಬರಾದರು. ತನು-ಮನವನ್ನು ಪ್ರವಾದಿವರ್ಯರಿಗೆ ಅರ್ಪಿಸಿಬಿಟ್ಟರು. ಪ್ರಪ್ರಥಮ ತೌಹೀದ್‌ನ ಕರೆಗೆ ಓಗೊಟ್ಟ ಏಳು ಮಂದಿ ಸಚ್ಚಾರಿತ್ರ್ಯವಂತರಲ್ಲಿ ಬಿಲಾಲ್ ಬಿನ್ ರಬಾ ಕೂಡಾ ಒಬ್ಬರಾಗಿದ್ದರೆಂದು ಇತಿಹಾಸಗಾರರು ದಾಖಲಿಸಿದ್ದಾರೆ. ಈ ರೀತಿ ಅ ಅಲ್ಲಾಹನಿಂದ ಸಾಬಿಕೂನಲ್ ಅವ್ವಲೂನ್ (ಪ್ರಥಮರು) ಎಂಬ ಬಿರುದಾಂಕಿತ ವಿ ಕೂಟದ ಸದಸ್ಯರಾದರು.

ಬಿಲಾಲ್‌ರ ಯಜಮಾನ ಉಮಯ್ಯ ಬಿನ್ ಖಲಫ್‌ನ ಕಿವಿಗೆ ಅವರ ಇಸ್ಲಾ ಸ್ವೀಕಾರದ ಸುದ್ದಿ ತಲಪಿದಾಗ ಆತ ಕೋಪದಿಂದ ಕೆಂಡಕಾರಿದ. ಆತ ಬಿಲಾಲ್‌ರನ್ನು ಕ ಹೀಗೆ ಪ್ರಶ್ನಿಸಿದ:

"ನೀನು ಬೇರಾವುದೋ ದೇವನನ್ನು ಕಟ್ಟಿಕೊಂಡಿರುವಿಯೆಂದು ಕೇಳಿದೆ. ನಿಜ ಹೇ

ರ ಪೂಜೆ ಮಾಡ ತೊಡಗಿರುವೆ?"

"ಮುಹಮ್ಮದ್‌ರವರ(ಸ) ದೇವನನ್ನು", ಬಿಲಾಲ್ ಸಂಕೋಚವಿಲ್ಲದೆ ಉತ್ತರಿಸಿದರು. ಮಯ್ಯನ ಕಣ್ಣು ಕೆಂಪಾಯಿತು. ಆತ ಹೀಗೆಂದ, ಮುಹಮ್ಮದ್‌ನ ದೇವನ ಆರಾಧನೆ ಡಲಾರಂಭಿಸಿರುವುದರ ಅರ್ಥ ನೀನು ಪರಮ ಪೂಜ್ಯ ಲಾತ್ ಮತ್ತು ಉಝ್ಝಾರ ಯಾಗಿರುವೆಯೆಂದಾಯಿತು. ಒಳ್ಳೆಯ ಮಾತಿನಲ್ಲಿ ಸರಿದಾರಿಗೆ ಬಾ. ಇಲ್ಲವಾದರೆ ಮಾನಕರ ಶಿಕ್ಷೆಯನ್ನೆದುರಿಸಬೇಕಾದೀತು. ಲಾತ್ ಮತ್ತು ಹುಬಲ್ ದೇವತೆಗಳ ಭಕ್ತನೊಬ್ಬನ ಾಮನಾಗಿ ನೀನು ಮುಹಮ್ಮದ್‌ನ ದೇವನ ಆರಾಧನೆ ಮಾಡುವುದನ್ನು ನಾನೆಂದೂ ಸಲಾರೆ.

ಬಿಲಾಲ್‌ರ ಹೃದಯದೊಳಗೆ ತೌಹೀದ್ ನಾಟಿಯಾಗಿತ್ತು. ಅದೆಂದೂ ಅಲ್ಲಿಂದ ಲಲು ಸಿದ್ಧವಿರಲಿಲ್ಲ. ಯಾವುದೇ ತ್ಯಾಗ ಬಲಿದಾನವನ್ನು ಸಹಿಸುವಷ್ಟು ಅವರ ಮನಸ್ಸು ವಾಗಿತ್ತು. ಅಷ್ಟೇ ಬಲಿಷ್ಠವಾಗಿತ್ತು. ಅವರು ಪರಿಣಾಮವನ್ನು ಲೆಕ್ಕಿಸದೆ ಉಮಯ್ಯನಿಗೆ ೆ ಉತ್ತರ ಕೊಟ್ಟರು.

"ನನ್ನ ಶರೀರದ ಮೇಲೆ ನಿನ್ನ ಬಲಪ್ರಯೋಗ ನಡೆಯ ಬಹುದು. ಆದರೆ ನನ್ನ ಣ ಮತ್ತು ಮನಸ್ಸು ಪ್ರವಾದಿ ಮುಹಮ್ಮದ್(ಸ) ಮತ್ತು ಅವರ ದೇವನಿಗೆ ಅರ್ಪಿಸಿಯಾಗಿದೆ. ್ನ ಆ ಏಕೈಕ ದೇವನ ಆರಾಧನೆ ಮತ್ತು ಅನುಸರಣೆಯೇ ನನ್ನ ಜೀವನದ ಪರಮ ಗುರಿ. ವು ರಚಿಸಿಕೊಂಡ ದೇವರುಗಳ ಆರಾಧನೆ ಮಾಡುವುದು ಇನ್ನು ನನ್ನಿಂದಾಗದು."

ಉಮಯ್ಯ ಬಿನ್ ಖಲಫ್ ಕ್ರೋಧಾಗ್ನಿಯಿಂದ ಕುದಿಯ ತೊಡಗಿದ. ಒಬ್ಬ ಸಾಮಾನ್ಯ ಾಮ ತನ್ನ ಕೂಳು ತಿಂದು ತನ್ನ ವಿರುದ್ಧ ಬಂಡಾಯಕ್ಕೆ ನಿಂತಿದ್ದಾನೆ. "ಹಾಗಾದರೆ ೋಡೋಣ.... ನಿನ್ನ ಧರ್ಮಭ್ರಷ್ಟತೆಗೆ ತಕ್ಕ ಶಾಸ್ತಿ ಮಾಡುತ್ತೇನೆ. ಮುಹಮ್ಮದ್ ಮತ್ತು ನ ದೇವನು ನಿನ್ನನ್ನು ಹೇಗೆ ಬಿಡಿಸಿಕೊಳ್ಳುತ್ತಾರೆಂದು ನೋಡುತ್ತೇನೆ" ಉಮಯ್ಯ ್ರರಿಸಿದ. ಹೀಗೆ ಹೇಳಿ ಆತ ಅವರ ಮೇಲೆ ಹಿಂಸೆ ದೌರ್ಜನ್ಯಗಳ ಸರಮಾಲೆಯನ್ನೇ ಗಲು ಪ್ರಾರಂಭಿಸಿದ.

ಮಕ್ಕಾ ಪಟ್ಟಣದ ಹುರ್ರ ಎಂಬ ಸ್ಥಳದ ನೆಲವು ತನ್ನ ತಾಪಕ್ಕೆ ಬಹಳ ಪ್ರಸಿದ್ಧವಾಗಿದೆ. ಬಿಸಿಲ ಬೇಗೆಗೆ ತಾಮ್ರದಂತೆ ಬಿಸಿಯಾಗುತ್ತಿತ್ತು. ಮಧ್ಯಾಹ್ನದ ಸೂರ್ಯ ನಡುನೆತ್ತಿಗೇರಿದ ೆ ಉಮಯ್ಯ, ಬಿಲಾಲ್‌ರ ಕೂದಲು ಹಿಡಿದೆಳೆಯುತ್ತಾ ಹುರ್ರಾದ ಬೆಂದ ಮರಳ ಮೇಲೆ ಗಾತ ಮಲಗಿಸಿ, ಅವರಿಗೆ ಅಲುಗಾಡಲೂ ಆಗದ ರೀತಿಯಲ್ಲಿ ಭಾರೀ ಕಲ್ಲೊಂದನ್ನು ರ ಎದೆಯ ಮೇಲಿಡುತ್ತಿದ್ದ. ಅನಂತರ, ಮುಹಮ್ಮದ್‌ನನ್ನು ತೊರೆ. ಆತನ ಅನುಸರಣೆಯನ್ನು ್ಟ ಬಿಡು. ಲಾತ್ ಮತ್ತು ಉಝ್ಝಾ ಸತ್ಯ ದೇವರೆಂದು ಹೇಳು. ಅನ್ಯಥಾ ಇಲ್ಲೇ ಹೀಗೆಯೇ ಬೇಕಾದೀತು! ಎಂದು ಅರ್ಭಟಿಸುತ್ತಿದ್ದ. ಆದರೆ ಸತ್ಯ ಧರ್ಮದ ಪ್ರತಿಪಾದಕರಾದ ಲ್‌ರ ಬಾಯಿಯಿಂದ ಆ ಸಂದರ್ಭದಲ್ಲೂ 'ಅಹದ್, ಅಹದ್' (ಏಕನು, ಏಕನು) ಎಂದೇ ರಡುತ್ತಿತ್ತು. ಅದು ಉಮಯ್ಯನ ಕ್ರೋಧಾಗ್ನಿಗೆ ಎಣ್ಣೆ ಹೊಯ್ದಂತಾಗುತ್ತಿತ್ತು. ಆಗ ಆತ ರನ್ನು ಕ್ರೂರವಾಗಿ ಹೊಡೆಯುತ್ತಿದ್ದ. ಆದರೆ ಅವರು 'ಅಹದ್, ಅಹದ್' ಎಂದೇ

ಪುನರಾವರ್ತಿಸುತ್ತಿದ್ದರು. ಒಂದು ದಿನವಂತೂ ಆ ಕ್ರೂರಿ ತನ್ನ ದುಷ್ಟತನದ ಪರಾಕಾಷ್ಠೆಯ ಪ್ರದರ್ಶಿಸಿ ಬಿಟ್ಟ. ಇಡೀ ಒಂದು ಹಗಲು ಮತ್ತು ಒಂದು ರಾತ್ರಿ ಅನ್ನ ನೀರು ಕೊ ಅವರನ್ನು ಸತಾಯಿಸಿದ. ಮಾತ್ರವಲ್ಲ ಆ ಉರಿಯುವ ಮರಳಲ್ಲಿ ಅವರು ಒದ್ದಾಡುತ್ತಿರುವುದ ಕಂಡು ಸಂತೋಷ ಪಟ್ಟ. ಸುಪ್ರಸಿದ್ಧ ಸಹಾಬಿವರ್ಯರಾದ ಅಮ್ರ್ ಬಿನ್ ಆಸ್‌ರ ಮಾತಿ ಹೇಳುವುದಾದರೆ ಉಮಯ್ಯ ಬಿನ್ ಖಲಫ್ ಬಿಲಾಲ್‌ರನ್ನು ಎಂತಹ ಉರಿಬಿಸಿಲಿ ಮಲಗಿಸುತ್ತಿದ್ದನೆಂದರೆ ಒಂದು ವೇಳೆ ಅಲ್ಲಿ ಮಾಂಸವಿಡುತ್ತಿದ್ದರೆ ಅದು ಬೆಂದು ಕ ಹೋಗುತ್ತಿತ್ತು. ಅಂತಹ ಪರಿಸ್ಥಿತಿಯಲ್ಲೂ ಅವರು ನಾನು ಲಾತ್ ಮತ್ತು ಉಝ್ಝಾವ ನಿರಾಕರಿಸುತ್ತೇನೆ ಎಂದು ಹೇಳುತ್ತಿದ್ದರು.

ಯಾವುದೇ ದೌರ್ಜನ್ಯವು ಫಲಕಾರಿಯಾಗುವುದಿಲ್ಲವೆಂದು ಖಾತ್ರಿಯಾದಾಗ ಉಮಯ ಕ್ರೋಧಾಗ್ನಿಯು ಪರಾಕಾಷ್ಠೆಗೇರಿತು. ಆತ ತನ್ನ ಇತರ ಗುಲಾಮರನ್ನೂ ತನ್ನ ಗೋ ಪಡ್ಡೆ ಹುಡುಗರನ್ನೂ ಛೂಬಿಟ್ಟು ಬಿಲಾಲ್‌ರನ್ನು ಸತಾಯಿಸುವಂತೆ ಮತ್ತು ಅ ಮುಹಮ್ಮದ್ ಮತ್ತವರ ದೇವನನ್ನು ಬಿಟ್ಟು ಬಿಡುವ ವರೆಗೂ ಅವರ ಮೇಲೆ ದೌರ್ಜ ವೆಸಗುವಂತೆ ಪ್ರೇರೇಪಿಸಿದ. ಈ ಕಿಡಿಗೇಡಿಗಳು ಬಿಲಾಲ್‌ರ ಮೇಲೆ ಮುಗಿಬೀಳುತ್ತಿದ್ದ ಹೊಡೆಯುತ್ತಿದ್ದರು, ಒದೆಯುತ್ತಿದ್ದರು. ಮಧ್ಯಾಹ್ನದ ವೇಳೆ ಲೋಹದ ನಿಲುವಂಗಿ ತೊ ಧಗಧಗಿಸುವ ಬಿಸಿಲಲ್ಲಿ ನಿಲ್ಲಿಸುತ್ತಿದ್ದರು. ಸಂಜೆ ಕೈ ಕಾಲುಗಳನ್ನು ಕಟ್ಟಿ ಒ ಕೊಠಡಿಯೊಳಗೆ ಹಾಕಿ ಬಿಡುತ್ತಿದ್ದರು. ರಾತ್ರಿ ಪುನಃ ಅವರ ಮೇಲೆ ಛಡಿಯೇ ಬಾರಿಸುತ್ತಿದ್ದರು. ಆದರೂ ಆ ಸಹನಾ ಮೂರ್ತಿಯಾದ ಹಾಗೂ ಪ್ರವಾದಿ ಪ್ರೇಮ ಪ್ರತೀಕವಾದ ಬಿಲಾಲ್ 'ಅಹದ್, ಅಹದ್' ಎಂದಲ್ಲದೆ ಬೇರೇನನ್ನೂ ಹೇಳುತ್ತಿರಲಿ

## ಕಷ್ಟ ಕಾರ್ಪಣ್ಯಗಳಿಂದ ಮುಕ್ತಿ

ಉಮಯ್ಯ ಅಷ್ಟಕ್ಕೇ ನಿಲ್ಲಿಸುತ್ತಿರಲಿಲ್ಲ. ಬಿಲಾಲ್‌ರ ಕೊರಳಿಗೆ ಹಗ್ಗ ಕಟ್ಟಿ ಅವರ ಪೋಲಿ ಹುಡುಗರಿಗೆ ಒಪ್ಪಿಸುತ್ತಿದ್ದ. ಆ ಪುಂಡರು ಅವರನ್ನು ಮಕ್ಕಾದ ಬೀದಿಗ ಎಳೆಯುತ್ತಾ, ಕೇಕೆ ಹಾಕುತ್ತಾ ಸಾಗುತ್ತಿದ್ದರು. ಅನಂತರ ಮರಳ ರಾಶಿಯಲ್ಲಿ ಅವರನ್ನು ಕ ಮಲಗಿಸಿ ಅವರ ಮೇಲೆ ಕಲ್ಲು ಮಣ್ಣುಗಳ ರಾಶಿ ಹಾಕುತ್ತಿದ್ದರು. ಆದರೆ ಬಿಲಾಲ್ 'ಅಹದ್, ಅಹದ್' ಎಂದೇ ಹೇಳುತ್ತಿದ್ದರು. ಲಾತ್-ಉಝ್ಝಾರನ್ನು ನಂಬು, ಮುಹಮ್ಮದ್‌ರ ದೇವನನ್ನು ಬಿಟ್ಟು ಬಿಡು ಎಂದು ಅವರೊಡನೆ ಹೇಳಿದಾಗಲೆಲ್ಲ- ನಾನು ಲಾತ್, ಉಝ್ ಹುಬಲ್, ಇಸಾಫ್, ನಾಯಿಲ ಮತ್ತು ಬುವಾನ (ಎಲ್ಲವೂ ದೇವತೆಗಳ ಹೆಸರು)ರನ್ನೆ ನಿರಾಕರಿಸುತ್ತೇನೆ ಎಂದು ಖಡಾಖಂಡಿತ ಹೇಳಿಬಿಡುತ್ತಿದ್ದರು. ಒಟ್ಟಿನಲ್ಲಿ ಒಂದು ದೀರ್ಘಕಾ ತನಕ ಬಿಲಾಲ್(ರ) ಸಹಿಸಬೇಕಾಗಿ ಬಂದ ಹಿಂಸೆ ದೌರ್ಜನ್ಯಗಳ ಕತೆಯನ್ನು ಓದುವ ಮೈನವಿರೇಳುತ್ತದೆ. ದೇಹದ ಯಾವ ಭಾಗವೂ ಗಾಯಗಳಿಂದ ಹೊರತಾಗಿರಲಿಲ್ಲ. ಆ ಮಾನವನ ಊಹೆಗೂ ನಿಲುಕದಂತಹ ಅತ್ಯಂತ ಕಠೋರ ಹಿಂಸೆಗಳಿಂದಲೂ ಅ ಹೃದಯದಲ್ಲಿ ರೂಢಮೂಲವಾಗಿರುವ ಸತ್ಯವಿಶ್ವಾಸವನ್ನು ಅಲುಗಾಡಿಸಲು ಮಿಥ

ಕರಿಂದ ಸಾಧ್ಯವಾಗಿಲ್ಲವೆಂಬುದೇ ಅದ್ಭುತ.

ಉಮಯ್ಯ ಬಿನ್ ಖಲಫ್‌ನ ಜಮೂಹ್ ಗೋತ್ರ ವಾಸಿಸುವ ಕೇರಿಯಲ್ಲೇ ಬೂಬಕರ್‌ರವರ(ರ) ಮನೆಯಿತ್ತು. ಬಿಲಾಲ್‌ರ ಮೇಲೆ ನಡೆಯುತ್ತಿದ್ದ ಹಿಂಸೆ-ರ್ದನ್ಯಗಳನ್ನು ಅವರು ಯಾವಾಗಲೂ ನೋಡುತ್ತಿದ್ದರು. ಆದರೆ ಅವರಿಗೆ ಏನೂ ಡಲಾಗುತ್ತಿರಲಿಲ್ಲ. ಒಳಗಿಂದೊಳಗೇ ಅವರು ಕುದಿಯುತ್ತಿದ್ದರು. ಈ ಕ್ರೂರಿಯ ಷ್ಠಿಯಿಂದ ಬಿಲಾಲ್‌ರನ್ನು ಹೇಗೆ ವಿಮೋಚನೆಗೊಳಿಸಲಿ ಎಂದವರು ಸದಾ ಚಿಂತಿಸುತ್ತಿದ್ದರು. ರಲು ಒಂದು ದಿನ ಬಿಲಾಲ್‌ರ ಮೇಲೆ ಆಗುತ್ತಿದ್ದ ಕ್ರೌರ್ಯವನ್ನು ನೋಡಿ ಅವರಿಗೆ ಸದಾಯಿತು. ಅವರು ನೇರವಾಗಿ ಉಮಯ್ಯನ ಮನೆಗೆ ತೆರಳಿ ಅವನೊಂದಿಗೆ ಹೀಗೆಂದರು-

"ಉಮಯ್ಯ! ನೀನೇಕೆ ಈ ರೀತಿ ಓರ್ವ ಅಸಹಾಯಕ ಗುಲಾಮನನ್ನು ಹಿಂಸಿಸುತ್ತಿರುವೆ. ರು ಓರ್ವ ದೇವನನ್ನು ಆರಾಧಿಸಿದರೆ ನಿನಗೇನು ನಷ್ಟ. ನೀನು ಅವರ ಮೇಲೆ ಕನಿಕರ ರಿದರೆ ನಿನಗೆ ಪರಲೋಕ ಜೀವನದಲ್ಲಿ ಅದು ಹಿತಕಾರಿಯಾಗುವುದು."

"ನಿಮ್ಮ ಕಪೋಲಕಲ್ಪಿತ ಪರಲೋಕವನ್ನು ನಾನು ನಂಬುವುದಿಲ್ಲ. ನನಗೆ ಮನಸ್ಸು ದಂತೆ ನಾನು ನೋಡಿ ಕೊಳ್ಳುತ್ತೇನೆ. ನೀವು ಯಾರು ಕೇಳುವವರು"- ಆತ ತುಚ್ಛವಾಗಿ ರಿಸಿದ.

ಅಬೂಬಕರ್(ರ) ಉಮಯ್ಯನ ಮಾತಿನಿಂದ ನಿರಾಶರಾಗಲಿಲ್ಲ. ನಯವಾಗಿ ಹೀಗೆಂದರು-ನೊಬ್ಬ ಶಕ್ತಿ ಸಾಮರ್ಥ್ಯವಿರುವ ವ್ಯಕ್ತಿ. ನಿನ್ನ ಗುಲಾಮ ಅಸಹಾಯಕ. ಅವರ ಮೇಲೆ ರ್ದನ್ಯವೆಸಗುವುದು ನಿನ್ನಂಥವರಿಗೆ ಭೂಷಣವಲ್ಲ."

ಉಮಯ್ಯನಿಗೆ ಕೋಪ ಬಂತು- "ಹಾಗಾದರೆ ಅಬೂ ಕಹಾಫರ ಮಗನೇ! ನಿಮಗೆ ಷ್ಟು ಸಹಾನುಭೂತಿಯಿದ್ದರೆ ಅವನನ್ನು ಖರೀದಿಸುವುದಿಲ್ಲವೇಕೆ?" ಆತ ಪ್ರಶ್ನಿಸಿದ.

"ಎಷ್ಟು ಬೆಲೆ ಕೊಡಬೇಕು ಹೇಳು"- ಅಬೂಬಕರ್(ರ) ಥಟ್ಟನೆ ಉತ್ತರಿಸಿದರು.

'ನಿಮ್ಮ ಗುಲಾಮ ಫಿಸ್ತಾಸ್ ರೂಮಿಯನ್ನು ನನಗೆ ಕೊಡಿ. ಇವನನ್ನು ನೀವು ಮಕೊಳ್ಳಿ' ಉಮಯ್ಯ ಉತ್ತರಿಸಿದ.

ಫಿಸ್ತಾಸ್ ಗಟ್ಟಿಮುಟ್ಟಿನವನಾಗಿದ್ದ. ಆತ ಬೆಲೆಬಾಳುವ ಗುಲಾಮನೆಂದು ಕ್ಕದವರೆಲ್ಲರಿಗೂ ತಿಳಿದಿತ್ತು. ಆತನನ್ನು ಅಬೂಬಕರ್(ರ) ಕೊಡಲಾರರೆಂದು ಉಮಯ್ಯ ಸಿದ್ದ.

ಅಬೂಬಕರ್(ರ) ಕೂಡಲೇ 'ನನಗೆ ಒಪ್ಪಿಗೆ' ಎಂದು ಬಿಟ್ಟರು.

ಉಮಯ್ಯ ದಂಗಾದ. ಆದರೆ ಪುನಃ ಗರ್ವದಿಂದ, ಫಿಸ್ತಾಸ್‌ನ ಜೊತೆಗೆ 40 ಬೆಳ್ಳಿ ಗಳನ್ನೂ ಕೊಡಬೇಕೆಂದ.

ಅಬೂಬಕರ್(ರ) ಅದಕ್ಕೂ ಸಿದ್ಧ ಎಂದು ಬಿಟ್ಟರು.

ಬಾಹ್ಯ ನೋಟಕ್ಕೆ ಉಮಯ್ಯ ಬಹಳ ದೊಡ್ಡ ಲಾಭದ ವ್ಯಾಪಾರ ಮಾಡಿದ್ದ. ಅವರು ಲ್‌ರನ್ನು ಬಿಡಿಸಿಕೊಂಡು ಹೋಗುವಾಗ ಆತ ಗಹಗಹಿಸಿ ನಗುತ್ತಾ ಹೀಗೆಂದ-

"ಈ ವರೆಗೂ ನಾನು ಅಬೂ ಕಹಾಫರ ಮಗ (ಅಬೂಬಕರ್)ನನ್ನು ಬುದ್ಧಿವಂತ

ನೆಂದು ಭಾವಿಸಿದ್ದೆ. ಆದರೆ ಅವರು ಮೂರ್ಖರೆಂದು ಈಗ ತಿಳಿಯಿತು. ನಾನಾಗಿರುತ್ತಿ ಕವಡೆ ಕಾಸಿಗೂ ಅವನನ್ನು ಖರೀದಿಸುತ್ತಿರಲಿಲ್ಲ".

"ಉಮಯ್ಯಾ! ನಿನಗೆ ಇವರ ಬೆಲೆಯೇನು ಗೊತ್ತು? ಯಮನ್‌ನ ಅರಸೊತ್ತಿಗೆ ಇವರ ಮುಂದೆ ತುಚ್ಛವೆಂದು ನಾನು ಭಾವಿಸುತ್ತೇನೆ" ಹೀಗೆ ಹೇಳುತ್ತಾ ಅಬೂಬಕರ್ ಅವರು ಬಿಲಾಲ್‌ರನ್ನು ಸ್ವತಂತ್ರಗೊಳಿಸಿದರು.

ಅಲ್ಲಿಂದ ಅವರನ್ನು ಪ್ರವಾದಿವರ್ಯರ(ಸ) ಸನ್ನಿಧಿಗೆ ಕರೆದುಕೊಂಡು ಹೋಗಿ ನ ಸಂಗತಿಯನ್ನೆಲ್ಲ ವಿವರಿಸಿದರು.

ಪ್ರವಾದಿಯವರಿಗೆ(ಸ) ಬಹಳ ಸಂತೋಷವಾಯಿತು. ಅವರು ಅಬೂಬಕರ್‌ರಿಗಾಗಿ ಪ್ರಾರ್ಥಿಸಿದರು.

ಸತ್ಯನಿಷೇಧಿಗಳ ಹಿಂಸೆ ದೌರ್ಜನ್ಯಗಳಿಂದ ಬಿಡುಗಡೆಗೊಂಡು ಪ್ರವಾದಿವಯ ಬಳಿಗೆ ಬಂದ ನಂತರ ಅವರು ಎಂದೂ ಪ್ರವಾದಿವರ್ಯರನ್ನು ಅಗಲಿ ನಿಲ್ಲಲಿಲ್ಲ. ಕ ಸುಖಗಳಲ್ಲಿ, ಪ್ರಯಾಣದಲ್ಲಿ, ಬೋಧನಾ ಸಭೆಗಳಲ್ಲಿ, ಯುದ್ಧರಂಗಗಳಲ್ಲಿ- ಹೀಗೆ ಅ ಯಾವಾಗಲೂ ಪ್ರವಾದಿಯವರ(ಸ) ಜೊತೆಗಿರುತ್ತಿದ್ದರು. ಪ್ರವಾದಿವರ್ಯರಲ್ಲಿ ಅ ಎಷ್ಟೊಂದು ಪ್ರೀತಿಯಿತ್ತೆಂದರೆ ಅವರ ಬಾಯಿಯಿಂದ ಏನಾದರೂ ಮಾತು-ಅಪ್ಪಣೆ ಹೊರಡು ತಡ, ಕೂಡಲೇ ಪಾಲಿಸುತ್ತಿದ್ದರು. ಪ್ರವಾದಿವರ್ಯರ ಮುಖವನ್ನು ನೋಡುವುದೇ ಅ ಗೊಂದು ಸಂತೋಷ. ಪ್ರವಾದಿವರ್ಯರೂ ಬಿಲಾಲ್‌ರನ್ನು ಬಹಳವಾಗಿ ಪ್ರೀತಿಸುತ್ತಿದ್ದ

## ಪ್ರಥಮ 'ಮುಅದ್ದಿನ್'

ಪ್ರವಾದಿ ಮುಹಮ್ಮದ್(ಸ) ಮತ್ತು ಸಂಗಾತಿಗಳು ಹದಿಮೂರು ವರ್ಷಗಳ ಸತ್ಯನಿಷೇಧಿಗಳಿಂದ ನಿರಂತರ ಹಿಂಸೆ ದೌರ್ಜನ್ಯಗಳನ್ನು ಸಹಿಸಿದರು. 13ನೇ ವರ್ಷ ಪ್ರವಾದಿವರ್ಯರು ತಮ್ಮ ಸಂಗಾತಿಗಳಿಗೆ ಮದೀನಾಕ್ಕೆ ವಲಸೆ ಹೋಗುವಂತೆ ಆದೇಶಿಸಿದ ನಾಯಕನ ಅಪ್ಪಣೆಯಂತೆ ಬಿಲಾಲ್(ರ) ಕೂಡಾ ಮದೀನಾಕ್ಕೆ ಹೋದರು. ಅಲ್ಲಿ ಸ ಬಿನ್ ಖುಸೈಮ ಅನ್ಸಾರಿಯವರ(ರ) ಅತಿಥಿಯಾಗಿ ಉಳಕೊಂಡರು. ಪ್ರವಾದಿ(ಸ) ಅತ ಕೊನೆಯಲ್ಲಿ ಮದೀನಾಕ್ಕೆ ಬಂದರು. ಆಗಮನದ ಕೆಲವು ತಿಂಗಳ ಬಳಿಕ ಪ್ರವಾದಿವರ್ಯರ ಅನ್ಸಾರ್ ಮತ್ತು ಮುಹಾಜಿರ್‌ಗಳ ನಡುವೆ ಇಸ್ಲಾಮೀ ಸಹೋದರ ಬಾಂಧವ್ಯ ಏರ್ಪಡಿಸಿದರು. ಅದರ ಪ್ರಕಾರ ಬಿಲಾಲ್‌ರನ್ನು ಅಬೂ ರುವೈಹಾ ಅಬ್ದುಲ್ಲಾ ಅಬ್ದುರ್ರಹ್ಮಾನ್ ಖಿಸ್‌ಅಮೀ ಅನ್ಸಾರಿಯವರ ಸಹೋದರನಾಗಿ ಮಾಡಿದರು. ಅವರಿ ನಡುವೆ ಎಂತಹ ಗಾಢ ಸಹೋದರ ಪ್ರೇಮವಿತ್ತೆಂದರೆ ಬಿಲಾಲ್‌ರಿಗೆ ಎಲ್ಲಾದರೂ ಹೊ ಹೋಗಬೇಕಾದಾಗ ತಮ್ಮೆಲ್ಲ ಕೆಲಸಕಾರ್ಯಗಳನ್ನು ಅಬೂ ರುವೈಹಾರಿಗೆ ವಹಿಸಿಕೊ ಹೋಗುತ್ತಿದ್ದರು.

ಹ.ಬಿಲಾಲ್(ರ) ಬದ್ರ್‌ನಿಂದ ತೊಡಗಿ ತಬೂಕ್ ತನಕದ ಎಲ್ಲ ಯುದ್ಧಗಳ ಪ್ರವಾದಿಯವರ(ಸ) ಜೊತೆಗಿದ್ದರು. ಬದ್ರ್ ಯುದ್ಧದಲ್ಲಿ ಅವರು ಹಿಟ್ಟು ನಾದುತ್ತಿದ್ದ

ತ್ತನೆ ಅವರ ದೃಷ್ಟಿ ಅಬ್ದುರ್ರಹ್ಮಾನ್ ಬಿನ್ ಔಫ್(ರ) ಸೆರೆಹಿಡಿದು ತರುತ್ತಿದ್ದ ಓರ್ವ ಯ ಮೇಲೆ ಬಿತ್ತು. ಅವರು ದಿಟ್ಟಿಸಿ ನೋಡಿದರು. ತನ್ನ ಯಜಮಾನ 'ಇಸ್ಲಾಮಿನ ವೈರಿ ಉಮಯ್ಯ ಬಿನ್ ಖಲಫ್' ಎಂಬುದು ಅವರಿಗೆ ಖಾತ್ರಿಯಾಯಿತು. ಕೂಡಲೇ ರು ಹೀಗೆ ಕೂಗಿ ಹೇಳಿದರು- "ಅಲ್ಲಾಹನ ಮತ್ತು ಸಂದೇಶವಾಹಕರ ಸಹಾಯಕರೇ! ಡಿರಿ, ಇಲ್ಲಿ ಸತ್ಯನಿಷೇಧಿಗಳ ಸರದಾರ ಉಮಯ್ಯ ಬಿನ್ ಖಲಫ್‌ನನ್ನು. ಎಲ್ಲಾದರೂ ತಪ್ಪಿಸಿಕೊಂಡು ಹೋಗದಂತೆ ನೋಡಿ ಕೊಳ್ಳಿ". ಅವರ ಸ್ವರ ಕೇಳುತ್ತಲೇ ಕೆಲವು ಬಿಗಳು ಅತ್ತ ಧಾವಿಸಿ ಬಂದು ಉಮಯ್ಯನ ಕಥೆ ಮುಗಿಸಿದರು. ಅದೇ ಯುದ್ಧದಲ್ಲಿ ಲ್(ರ) ಉಮಯ್ಯ ಬಿನ್ ಅಬೀ ಹುದೈಫಾ ಮಖ್ಝೂಮಿ ಎಂಬ ಮುಶ್ರಿಕನೊಬ್ಬನನ್ನು ಡಿದರು. ಅವನನ್ನು ಅನಂತರ ಅಬ್ದುಲ್ಲಾ ಬಿನ್ ರಬೀಅ ಮಖ್ಝೂಮಿ ನಾಲ್ಕು ಸಾವಿರ ಾರ್‌ಗಳನ್ನು ಪರಿಹಾರ ಧನ ನೀಡಿ ಬಿಡಿಸಿ ಕೊಂಡು ಹೋದರು.

ಹಿಜ್ರತ್‌ನ ನಂತರ ಮಸ್ಜಿದುನ್ನಬವಿ ನಿರ್ಮಾಣಗೊಂಡು ಅದಾನ್ ಮೊಳಗಿಸುವ ಪ್ರದಾಯ ಆರಂಭಗೊಂಡಾಗ ಪ್ರವಾದಿಯವರು(ಸ) ಅದಾನ್ ಕರೆ ನೀಡಲಿಕ್ಕಾಗಿ ಲ್‌ರನ್ನು(ರ) ನೇಮಿಸಿದರು. ಈ ರೀತಿ ಬಿಲಾಲ್ ಇಸ್ಲಾಮಿನ ಪ್ರಪ್ರಥಮ 'ಮುಅದ್ದಿನ್' ಮ ಪರಿಗಣಿಸಲ್ಪಟ್ಟರು. ಬಿಲಾಲ್‌ರ ಅದಾನ್ ಎಷ್ಟೊಂದು ಕರ್ಣಾನಂದಕರವಾಗಿತ್ತೆಂದರೆ ನ್ನು ಆಲಿಸಿದವರು ತಮ್ಮೆಲ್ಲ ಕೆಲಸ ಕಾರ್ಯಗಳನ್ನು ಬಿಟ್ಟು ಮಸೀದಿಯ ಕಡೆಗೆ ುಸುತ್ತಿದ್ದರು.

ಹಿ.ಶ 8ರಲ್ಲಿ ಮಕ್ಕಾ ವಿಜಯವಾಯಿತು. ಪ್ರವಾದಿ ಮುಹಮ್ಮದ್‌ರವರು(ಸ) ಕಅಬಾ ನವನ್ನು ವಿಗ್ರಹಗಳಿಂದ ಮುಕ್ತಗೊಳಿಸಿದರು. ಅನಂತರ ಕಅಬಾದ ಮೇಲೇರಿ ಅದಾನ್ ಳಗಿಸುವಂತೆ ಬಿಲಾಲ್‌ರಿಗೆ ಆಜ್ಞಾಪಿಸಿದರು. 'ಬಿಲಾಲ್! ಕಅಬಾದ ಮೇಲೇರಿ ತೌಹೀದ್ ದೇವತ್ವ)ನ ಕರೆಯನ್ನು ಮೊಳಗಿಸು' ಎಂದಾಗ ಬಿಲಾಲ್ ಅದರ ಮೇಲೆ ಹತ್ತಿ ಅದಾನ್ ಳಗಿಸಿದರು.

"ಅಶ್‌ಹದು ಅಲ್ಲಾ ಇಲಾಹ ಇಲ್ಲಲ್ಲಾಹ್ (ಅಲ್ಲಾಹನಲ್ಲದೆ ಅನ್ಯ ಆರಾಧ್ಯರಿಲ್ಲವೆಂದು ು ಸಾಕ್ಷ್ಯ ವಹಿಸುತ್ತೇನೆ), ಅಶ್‌ಹದು ಅನ್ನ ಮುಹಮ್ಮದರ್ರಸೂಲುಲ್ಲಾಹ್ (ಮುಹಮ್ಮದ್(ಸ) ಲ್ಲಾಹನ ಸಂದೇಶವಾಹಕರೆಂದು ನಾನು ಸಾಕ್ಷ್ಯ ವಹಿಸುತ್ತೇನೆ)" ಎಂಬ ಧ್ವನಿ ಮೊಳಗಿಸಿದಾಗ ಲ್ಲೂ ಮೌನ ಆವರಿಸಿತು. ಇದು ವಾಸ್ತವದಲ್ಲಿ ಮರ್ದಿತರನ್ನು ಎತ್ತಿ ಹಿಡಿವ ಪ್ರದಾಯಕ್ಕೆ ನಾಂದಿ ಹಾಕಿದ ಘಟನೆಯಾಗಿತ್ತು. ಕಅಬಾ ಖುರೈಶರ ಪ್ರತಿಷ್ಠೆಯ ದ್ರವಾಗಿತ್ತು. ಸಮಾಜದ ಕೆಳವರ್ಗದವರಿಗೆ ಅಲ್ಲಿ ಸ್ಥಾನವಿರಲಿಲ್ಲ. ಆದರೆ ಪ್ರವಾದಿವರ್ಯರ ಯ ಮೇರೆಗೆ ಪ್ರಪ್ರಥಮವಾಗಿ ಓರ್ವ ಮರ್ದಿತ ಹಾಗೂ ಅನ್ಯರ ಗುಲಾಮಗಿರಿಯಲ್ಲಿ ವನ ಸಾಗಿಸುತ್ತಿದ್ದ ಅಸಹಾಯಕ ವ್ಯಕ್ತಿ ಕಅಬಾದ ತುತ್ತ ತುದಿಗೇರಿ ಅದಾನ್ ತುತ್ತಿದ್ದಾರೆ. ಇಂತಹ ಮಾನವೀಯ ಅನುಕಂಪ ಬೇರೆಲ್ಲಾದರೂ ಹುಡುಕಿದರೂ ಕಾಣಸಿಕ್ಕೀತೆ?

ಮದೀನಾದಲ್ಲಿ ಪ್ರವಾದಿವರ್ಯರೊಂದಿಗೆ ಜೀವಿಸಿದ ಕೆಲವು ಕಾಲದ ನಂತರ ಲ್‌ರಿಗೆ ಮದುವೆಯ ಬಯಕೆಯುಂಟಾಯಿತು. ಆದರೆ ತನಗೆ ಯಾರು ಹೆಣ್ಣು

ಕೊಡುವರು? ಆರ್ಥಿಕವಾಗಿ ಕೈ ಬರಿದು. ಜಮೀನು, ಮನೆಮಾರು, ಸೊತ್ತು ಏನೂ ಇ ಸ್ಥಿತಿ. ಮೇಲಾಗಿ ರೂಪವಾದರೂ ಬೇಡವೆ? ಅತ್ಯಂತ ಕಕ್ರ್ರಗಿನ, ದಪ್ಪ ತುಟಿಯ ವ ಕೃಶಶರೀರದ ವ್ಯಕ್ತಿ. ಎಲ್ಲಕ್ಕಿಂತಲೂ ಮಿಗಿಲಾಗಿ ಓರ್ವ ಪರದೇಸಿ. ತಂದೆ ತಾಯಿ ಹಿಂದಿನಿಂದಲೇ ಕುರೈಶರ ಜಮೂಹ್ ಗೋತ್ರದ ಗುಲಾಮರು. ಪಿತ್ರಾರ್ಜಿತವಾಗಿಯೇ ಕೊರಳಿಗೂ ಅದೇ ಗುಲಾಮಗಿರಿ ಬಿದ್ದಿತ್ತು. ಮುಹಾಜಿರ್‌ಗಳಲ್ಲಾಗಲಿ ಅನ್ಸಾರ್‌ಗಳಲ್ಲಾ ಸಂಬಂಧಿಕರೆಂಬವರು ಯಾರೂ ಇಲ್ಲ. ಈ ದಯನೀಯಾವಸ್ಥೆಯಲ್ಲಿ ಮದುವೆಯು ಕನಸಿನ ಮಾತಾಗಿತ್ತು.

ಆದರೆ ಅವರಲ್ಲಿದ್ದ ಒಂದೇ ಒಂದು ವಿಶೇಷತೆಯೇನೆಂದರೆ ಅವರು ಪ್ರವಾದಿಯವ ಆಪ್ತರಾಗಿ ಬಿಟ್ಟಿದ್ದರು. ಯಾವುದೇ ಅವಸ್ಥೆಯಲ್ಲಿ ಪ್ರವಾದಿವರ್ಯರಿಂದ(ಸ) ದೂರವಿರುತ್ತಿರ ತಾನು ಮದುವೆಯಾಗ ಬಯಸುತ್ತೇನೆ ಎಂದು ಅವರು ಹೇಳಿದ್ದೇ ತಡ. ಮುಹಾಜಿರ್ ವ ಅನ್ಸಾರ್‌ಗಳಲ್ಲಿ ಪ್ರತಿಷ್ಠಿತರ ದಂಡೇ ಮುಂದೆ ಬಂತು. ಇದಕ್ಕಿಂತ ಸೌಭಾಗ್ಯ ಇನ್ನೆ ಬಹುದೆಂಬುದು ಎಲ್ಲರ ಒಮ್ಮತದ ಅಭಿಪ್ರಾಯವಾಗಿತ್ತು. ಒಟ್ಟಿನಲ್ಲಿ ಹ.ಬಿಲಾಲ ಹೆಣ್ಣಿನ ಆಯ್ಕೆ ಒಂದು ಸಮಸ್ಯೆಯಾಯಿತು.

ಹ.ಬಿಲಾಲ್‌ರು ಹ.ಅಬೂಬಕರ್‌ರ(ರ) ಓರ್ವ ಪುತ್ರಿಯನ್ನು ವಿವಾಹವಾಗಿದ್ದ ವಿವಾಹ ಕಾರ್ಯದ ಉಸ್ತುವಾರಿಯನ್ನು ಪ್ರವಾದಿಯವರೇ(ಸ) ನಿರ್ವಹಿಸಿದ್ದರು. ಅದ ಇನ್ನೂ ಕೆಲವು ಮಹಿಳೆಯರನ್ನು ಅವರು ವಿವಾಹವಾಗಿದ್ದಾರೆ. ಅವರ ಪತ್ನಿಯ ಅರೇಬಿಯಾದ ಉನ್ನತ ಕುಟುಂಬಗಳಿಗೆ ಸೇರಿದ ಸ್ತ್ರೀಯರಾಗಿದ್ದರು. ಆದರೆ ಯಾರಿಂದ ಅವರಿಗೆ ಮಕ್ಕಳಾಗಲಿಲ್ಲ.

## ಹ. ಬಿಲಾಲ್‌ರ ಅಂತಿಮ ಅದಾನ್

ಪ್ರವಾದಿ ಮುಹಮ್ಮದ್‌ರು(ಸ) ಹಿಜರಿ 11ರಲ್ಲಿ ಇಹಲೋಕ ತ್ಯಾಗ ಮಾಡಿ ಬಿಲಾಲ್(ರ) ಅತ್ಯಂತ ದುಃಖ ಸಾಗರದಲ್ಲಿ ಮುಳುಗಿದರು. ಅವರಿಗೆ ಈ ಲೋ ಬೇಡವಾಯಿತು. ಒಂದು ದಿನ ಅವರು ಅಬೂಬಕರ್‌ರನ್ನು(ರ) ಭೇಟಿಯಾಗಿ ಹೀಗೆಂದ "ಮುಸ್ಲಿಮರ ನಾಯಕರೆ! ಸತ್ಯವಿಶ್ವಾಸಿಗಳ ಮಟ್ಟಿಗೆ ಅತ್ಯಂತ ಶ್ರೇಷ್ಠವಾದ ಕರ್ಮ ಅಲ್ಲಾ ಮಾರ್ಗದ ಜಿಹಾದ್ ಆಗಿದೆಯೆಂದು ನನ್ನ ಗುರು ಪ್ರವಾದಿ(ಸ) ಹೇಳುವುದನ್ನು ಕೇಳಿದ್ದೆ ನಾನಿನ್ನು ಜೀವಮಾನವಿಡೀ ಜಿಹಾದ್‌ನಲ್ಲೇ ತಲ್ಲೀನನಾಗಿರಬೇಕೆಂದು ಬಯಸುತ್ತೇನೆ.

ಅಬೂಬಕರ್(ರ) ಹೀಗೆಂದರು- "ಬಿಲಾಲ್! ನನ್ನ ಪ್ರಾಯ ಮೀರಿದೆ. ಕೈ ಕಾಲು ಶಕ್ತಿ ಕುಂದುತ್ತಾ ಇದೆ. ನನ್ನ ಮರಣವೂ ಸನ್ನಿಹಿತವಾಗಿದೆ. ಈ ಸಮಯದಲ್ಲಿ ನೀವು ನನ್ನ ಬಿಟ್ಟು ಹೋಗಬಾರದೆಂದು ನಾನು ಅಲ್ಲಾಹನ ಆಣೆಹಾಕಿ ಹೇಳುತ್ತಿದ್ದೇನೆ."

ಬಿಲಾಲ್‌ರು(ರ) ಅಬೂಬಕರ್‌ರ ಮಾತನ್ನು ಒಪ್ಪಿಕೊಂಡು ಮದೀನಾದಲ್ಲೇ ಇ ತೀರ್ಮಾನಿಸಿದರು. ಆದರೆ ಒಂದು ಶರ್ತವನ್ನು ಅವರು ಅಬೂಬಕರ್‌ರ(ರ) ಮುಂದಿಟ್ಟ ಅದೇನೆಂದರೆ, ನಾನು ಪ್ರವಾದಿಯವರಿಗಾಗಿ(ಸ) ಅದಾನ್ ಹೇಳುತ್ತಿದ್ದೆ, ಇನ್ನು ಮುಂದೆ ನ

ರಿಗಾಗಿಯೂ ಅದಾನ್ ಕರೆ ಕೊಡಲಾರೆ. ಅಬೂಬಕರ್‌ರು ಅದಕ್ಕುತ್ತರವಾಗಿ 'ನಿಮ್ಮಿಷ್ಟ' ದಷ್ಟೆ ಹೇಳಿದರು.

ಆದರೆ ಉಮರ್‌ರ(ರ) ಆಡಳಿತ ಕಾಲದಲ್ಲಿ ಬಿಲಾಲ್ ಜಿಹಾದ್‌ಗಾಗಿ ಸಿರಿಯಾಕ್ಕೆ ೀದರು. ರೋಮನರ ವಿರುದ್ಧ ಅನೇಕ ರಂಗಗಳಲ್ಲಿ ಅವರು ವೀರಾವೇಶದಿಂದ ೀರಾಡಿದರು.

ಬೈತುಲ್ ಮಕ್ದಿಸ್‌ನ ವಿಮೋಚನೆಗಾಗಿ ಉಮರ್ ಫಾರೂಕ್‌ರಿಗೆ(ರ) ಸಿರಿಯಾಕ್ಕೆ ೀಗಬೇಕಾಗಿ ಬಂತು. ಅವರು ಬೈತುಲ್ ಮಕ್ದಿಸ್‌ಗೆ ತಲಪಿದಾಗ ಕ್ರೈಸ್ತರು ನಗರದ ರವನ್ನು ತೆರೆದರು. ಕ್ರೈಸ್ತರೊಂದಿಗೆ ಉಮರ್‌ರವರು(ರ) ಒಂದು ಸಂಧಾನ ಪತ್ರ ದರು. ಅನಂತರ ಅವರು ಮುಸ್ಲಿಮರನ್ನುದ್ದೇಶಿಸಿ ಪ್ರಭಾವಪೂರ್ಣವಾದ ಒಂದು ಭಾಷಣ ಡಿದರು. ಆ ಸಭೆಯಲ್ಲಿ ಬಿಲಾಲ್(ರ) ಕೂಡಾ ಇದ್ದರು. ಅವರನ್ನುದ್ದೇಶಿಸಿ ಉಮರ್(ರ) ಗೆಂದರು- "ನಮ್ಮ ನೇತಾರರಾದ ಬಿಲಾಲ್ ಅವರೇ! ಇಂದು ಇಸ್ಲಾಮಿನ ಪ್ರಪ್ರಥಮ ್ಲದಲ್ಲಿ ತೌಹೀದ್‌ನ ಪತಾಕೆ ಹಾರಾಡ ತೊಡಗಿದೆ. ಈ ಶುಭ ಸಂದರ್ಭದಲ್ಲಿ ನೀವು ಾನ್ ಕೊಟ್ಟರೆ ನಾವೆಲ್ಲರೂ ನಿಮಗೆ ಆಭಾರಿಯಾಗುವೆವು."

ಆಗ ಬಿಲಾಲ್ ಹೀಗೆ ಉತ್ತರಿಸಿದರು- "ಅಮೀರುಲ್ ಮುಅ್‌ಮಿನೀನ್! ನಾನು ವಾದಿಯವರ(ಸ) ನಂತರ ಇನ್ನಾರಿಗಾಗಿಯೂ ಅದಾನ್ ಕೊಡಲಾರೆನೆಂದು ಶಪಥ ಡಿದ್ದೆ. ಆದರೆ ನಿಮ್ಮ ಅಣತಿಯಂತೆ ನಾನಿದೋ ಇಂದು ಅದಾನ್ ಕೊಡುತ್ತೇನೆ."

ಹೀಗೆಂದು ಅವರು ಎದ್ದು ನಿಂತು ಅದಾನ್ ಮೊಳಗಿಸ ತೊಡಗಿದರು. ಆಗಿನ ಅಲ್ಲಿನ ತಾವರಣವನ್ನು ವರ್ಣಿಸಲಸಾಧ್ಯ. ಅವರ ಬಾಯಿಯಿಂದ 'ಅಲ್ಲಾಹು ಅಕ್ಬರ್' ಮೊಳಗಿದ್ದೇ , ಸಹಾಬಿಗಳ ದೀನ ರೋದನ ಮುಗಿಲು ಮುಟ್ಟಿತು. ಅವರಿಗೆ ಪ್ರವಾದಿವರ್ಯರ(ಸ) ದ ವಾತಾವರಣ ನೆನಪಾಯಿತು! 'ಅಶ್‌ಹದು ಅನ್ನಮುಹಮ್ಮದರ್ರಸೂಲುಲ್ಲಾಹ್' ಎಂದಾಗ ರ ಅಶ್ರುಧಾರೆಯ ಕಟ್ಟೆಯೊಡೆಯಿತು: ಉಮರ್ ಫಾರೂಕ್‌ರಿಗೆ(ರ) ಅಳುತ್ತಾ ಉಸಿರು ದಂತಾಯಿತು. ಅಬೂ ಉಬೈದಾ, ಮುಆದ್ ಬಿನ್ ಜಬಲ್‌ರಂತಹ(ರ) ಉನ್ನತ ಾಬಿಗಳ ಸ್ಥಿತಿಯೂ ಅದೇ ಆಗಿತ್ತು.

ಸಿರಿಯಾದ ಯುದ್ಧಗಳಿಂದ ವಿರಮಿಸಿದ ಬಳಿಕ ಬಿಲಾಲ್‌ರು(ರ) ಅಲ್ಲೇ ಒಂದು ಳ್ಳಿಯಲ್ಲಿ ವಾಸಿಸತೊಡಗಿದರು. ಒಂದು ರಾತ್ರಿ ಅವರಿಗೊಂದು ಕನಸು ಬಿತ್ತು. ವಾದಿಯವರು(ಸ) ಅವರ ಬಳಿ ಬಂದು, ಬಿಲಾಲ್! ನನ್ನ ಬಳಿಗೊಮ್ಮೆ ಬರಲು ಸಮಯ ಲ್ಲವೇ ಎಂದು ಕೇಳಿದರು. ಇದರಿಂದ ದಿಗ್ಭ್ರಾಂತಿಗೊಂಡು ಅವರು ಮದೀನಾಕ್ಕೆ ಪ್ರಯಾಣ ೆಸಿದರು. ಪ್ರವಾದಿಯವರ(ಸ) ಸಮಾಧಿಯ ಬಳಿ ತಲಪಿ ಸಲಾಮ್ ಹೇಳಿದಾಗ ಅವರ ಖದ ಕಟ್ಟೆಯೊಡೆಯಿತು. ಕಣ್ಣಿನಿಂದ ಧಾರಾಕಾರವಾಗಿ ಕಣ್ಣೀರು ಹರಿಯ ತೊಡಗಿತು. ಈ ಶ್ಯವನ್ನು ಕಂಡವರೆಲ್ಲರೂ ಅತ್ತು ಬಿಟ್ಟರು. ಆ ಸಂದರ್ಭದಲ್ಲಿ ಪ್ರವಾದಿವರ್ಯರ ಮ್ಮಕ್ಕಳಾದ ಹಸನ್ ಮತ್ತು ಹುಸೈನ್(ರ) ಕೂಡಾ ಅಲ್ಲಿದ್ದರು. ಬಿಲಾಲ್(ರ) ಆ ಲಕರನ್ನು ಬರಸೆಳೆದು ತಮ್ಮ ಎದೆಗಪ್ಪಿಕೊಂಡು ಅವರ ಹಣೆಯನ್ನು ಚುಂಬಿಸಿದರು. ಆ

ಬಾಲಕರು, ಬಿಲಾಲ್‌ರೊಡನೆ ಪ್ರವಾದಿಯವರ ಸಮಾಧಿಯ ಬಳಿ ಮಸ್ಜಿದುನ್ನಬವಿಯಲ್ಲಿ ಸ
ಬೆಳಗ್ಗಿನ ಅದಾನ್ ತಾವು ಕೊಡಬೇಕೆಂದು ವಿನಂತಿಸಿದರು. ತನ್ನ ಪ್ರಿಯ ಪ್ರವಾದಿಯ ಕ
ಕುಡಿಗಳಾದ ಆ ಬಾಲಕರ ವಿನಂತಿಯನ್ನು ಬಿಲಾಲ್ ತಿರಸ್ಕರಿಸುವುದಾದರೂ ಹೇಗೆ?

ಮರುದಿನ ಫಜ್ರ್ ನಮಾಝ್‌ಗೆ ಅವರು ಪ್ರವಾದಿವರ್ಯರ(ಸ) ಸಮಾಧಿಯ
(ಒಂದು ವರದಿಯ ಪ್ರಕಾರ ಮಸ್ಜಿದುನ್ನಬವಿಯ ಮಾಡಿನ ಮೇಲೆ) ಅದಾನ್ ಕೊಡತೊಡಗಿ
ಇಡೀ ಮದೀನಾ ಪಟ್ಟಣದಲ್ಲಿ ಅದು ಮಾರ್ದನಿಸಿತು. ಸ್ತ್ರೀ-ಪುರುಷ ಭೇದವಿಲ್ಲದೆ ಜನ
ಹೊರ ಬಂದರು. ಪ್ರವಾದಿವರ್ಯರ(ಸ) ಉಪಸ್ಥಿತಿಯಲ್ಲಿದ್ದ ಮದೀನಾದ ವಾತಾವರಣ ಅ
ಸ್ಮೃತಿಪಟಲಗಳಲ್ಲಿ ಸುಳಿದಾಡಿತು. ಪ್ರವಾದಿವರ್ಯರ(ಸ) ಸಮಾಧಿಯತ್ತ ಅವರು ಬೆ
ತೋರಿಸುತ್ತಾ 'ಅಶ್‌ಹದು ಅನ್ನಮುಹಮ್ಮದರ್ರಸೂಲುಲ್ಲಾಹ್' ಎಂದು ಹೇಳುವ
ಪ್ರವಾದಿವರ್ಯರು(ಸ) ಇಂದಷ್ಟೇ ನಿಧನ ಹೊಂದಿದರೋ ಎಂಬಂತಹ ದುಃಖದ ವಾತಾವ
ಅಲ್ಲಿ ನೆಲೆಸಿತು. ಪ್ರವಾದಿವರ್ಯರ(ಸ) ನಿಧನದ ಬಳಿಕ ಅಂತಹ ಭಾವಪೂರ್ಣ ದೃಶ್ಯವ
ಮದೀನಾ ಪಟ್ಟಣವು ಎಂದೂ ಕಂಡಿರಲಿಲ್ಲ.

ಹ. ಬಿಲಾಲ್(ರ) ಹಿ.ಶ. 20ರಲ್ಲಿ ನಿಧನರಾದರು. ಆಗ ಅವರಿಗೆ ಸುಮಾರು 60 ವ
ಪ್ರಾಯವಾಗಿತ್ತು. ಡೆಮಾಸ್ಕಸ್‌ನ ಬಾಬುಸ್ಸಗೀರ್‌ನ (ಕಿರುದ್ವಾರದ) ಬಳಿ ಅವರನ್ನು ದ
ಮಾಡಲಾಯಿತು. ಅವರ ನಿಧನ ವಾರ್ತೆ ಕೇಳಿದಾಗ ಖಲೀಫರಾಗಿದ್ದ ಉಮರ್(ರ) ಬಹಳವ
ಅತ್ತರು. "ಅಯ್ಯೋ! ನಮ್ಮ ಸರದಾರ ನಮ್ಮನ್ನು ವಿರಹ ವೇದನೆಯಲ್ಲಿ ಸಿಲುಕಿಸಿ ಹೋದ
ಎಂದು ಅವರು ಉದ್ಗರಿಸಿದರು.

## ಸತ್ಯವಿಶ್ವಾಸಿಗಳ ಮಾರ್ಗದೀಪ

ಬಿಲಾಲ್‌ರವರಲ್ಲಿ(ರ) ಅನೇಕ ಗುಣ ವೈಶಿಷ್ಟ್ಯಗಳು ಒಂದುಗೂಡಿದ್ದುವು. ಸತ್ಯವ
ಕಂಡುಕೊಳ್ಳುವವರಲ್ಲಿ ಅವರು ಮೊದಲಿಗರಾಗಿದ್ದರು. ಹಿಂಸೆ-ದೌರ್ಜನ್ಯಗಳ ಸಂದರ್ಭದ
ಸ್ಥೈರ್ಯ-ಸಹನೆಯನ್ನು ಪ್ರದರ್ಶಿಸಿದರು. ಪ್ರವಾದಿ ಪ್ರೇಮವು ಅವರ ಉಡುಪಾಗಿ
ಜಿಹಾದ್‌ನ ಸ್ಫೂರ್ತಿ ಅವರಲ್ಲಿ ಸದಾ ಜಾಗೃತವಾಗಿತ್ತು. ಆರಾಧನೆಗಳಲ್ಲಿ ಭಯ-ಭ
ತುಂಬಿರುತ್ತಿತ್ತು. ಸತ್ಯವಿಶ್ವಾಸದಲ್ಲಿ ಅವರು ಅರಳುವ ಪುಷ್ಪವಾಗಿದ್ದರು. ಊರಲ್ಲಿರ
ಯಾತ್ರೆಯಲ್ಲಿರಲಿ ಅವರು ಪ್ರವಾದಿಯವರನ್ನು(ಸ) ನೆರಳಿನಂತೆ ಹಿಂಬಾಲಿಸುತ್ತಿದ್ದರು. ಈ
ಮತ್ತು ಮಳೆಯ ಪ್ರಾರ್ಥನೆಯ ವೇಳೆ ಅವರು ಪ್ರವಾದಿವರ್ಯರ(ಸ) ಮುಂದೆ ಈಟಿ ಹಿಡಿ
ನಡೆಯುತ್ತಿದ್ದರು. ಪ್ರವಾದಿ(ಸ) ಏನಾದರೂ ಆದೇಶಿಸಿದರೆ ಅದನ್ನು ನಿರ್ವಹಿಸುವುದರ
ಅತ್ಯುತ್ಸಾಹ ತೋರುತ್ತಿದ್ದರು. ಈ ಗುಣಗಳೇ ಅವರನ್ನು ಪ್ರವಾದಿವರ್ಯರ(ಸ) ಆಪ್ತರನ
ಮಾಡಿತ್ತು. ಅವರು ಕೇವಲ ಓರ್ವ ಮುಅದ್ದಿನ್ ಆಗಿರಲಿಲ್ಲ. ನಿಶಾಂಧಕಾರದಲ್ಲಿ ಅಲ್ಲಾಹ
ಮುಂದೆ ಅತ್ಯಂತ ಭಯಭಕ್ತಿಯಿಂದ ನಿಂತು ಪ್ರಾರ್ಥಿಸುವವರಾಗಿದ್ದರು. ಪರಲೋ
ಚಿಂತೆಯಲ್ಲಿ ಅವರು ಅನುನಿಮಿಷವೂ ಕಂಪಿಸುತ್ತಿದ್ದರು.

ಹಿಂದ್ ಎಂಬ ಅವರ ಪತ್ನಿ ಅವರ ಕುರಿತು ಹೀಗೆ ಹೇಳುತ್ತಿದ್ದರು- 'ಬಿಲಾಲ್(

, ಮಲಗಲು ಹೋಗುವಾಗ, ದೇವಾ! ನನ್ನ ಪಾಪಗಳನ್ನು ಕ್ಷಮಿಸು. ನನ್ನ ಅನಾರೋಗ್ಯವನ್ನು ಪಾಲಿಗೆ ನೆಪವಾಗಿ ಪರಿಗಣಿಸು' ಎಂದು ಹೇಳುತ್ತಿದ್ದರು.

ಹ. ಅಬೂ ಹುರೈರಾರವರ(ರ) ವರದಿಯೊಂದು ಬುಖಾರಿಯಲ್ಲಿ ಹೀಗಿದೆ- ಒಂದು ಫಜ್ರ್ ನಮಾಝ್‌ನ ನಂತರ ಪ್ರವಾದಿ(ಸ) ಬಿಲಾಲ್‌ರೊಡನೆ ಹೀಗೆ ಕೇಳಿದರು: ಲಾಲ್! ನೀವು ಅತ್ಯಂತ ಹೆಚ್ಚು ಪುಣ್ಯ ನಿರೀಕ್ಷಿಸುತ್ತಿದ್ದ ನಿಮ್ಮ ಒಂದು ಕರ್ಮವನ್ನು ಸಿ. ಏಕೆಂದರೆ ಸ್ವರ್ಗದಲ್ಲಿ ನಾನು ನನ್ನ ಮುಂದೆ ನಿಮ್ಮ ಪಾದರಕ್ಷೆಯ ಸಪ್ಪಳ ದ್ದೇನೆ".

ಆಗ ಬಿಲಾಲ್(ರ) ಹೀಗೆ ಉತ್ತರಿಸಿದರು- "ಪ್ರವಾದಿವರ್ಯರೆ! ಅಂತಹ ಯಾವುದಾದರೂ ರ್ಮ ನಾನು ಮಾಡಿದ್ದಿಲ್ಲ. ಆದರೆ, ನಾನು ದಿನರಾತ್ರಿಗಳಲ್ಲಿ ಯಾವಾಗಲೆಲ್ಲ ವುಝೂ ಡುತ್ತಿದ್ದೆನೋ ಆಗೆಲ್ಲ ನಮಾಝ್ (ತಹಿಯ್ಯತುಲ್ ವುಝೂ) ಮಾಡುತ್ತಿದ್ದೆ".

ಹ.ಬಿಲಾಲ್‌ರಿಗೆ(ರ), ಪ್ರವಾದಿವರ್ಯರ(ಸ) ಸನ್ನಿಧಿಯಲ್ಲಿ ದೊರೆತಿದ್ದ ಉನ್ನತ ನಮಾನದಿಂದಾಗಿ ಸಹಾಬಿಗಳೆಲ್ಲರೂ ಅವರನ್ನು ಬಹಳವಾಗಿ ಮೆಚ್ಚುತ್ತಿದ್ದರು, ರವಿಸುತ್ತಿದ್ದರು. ಒಮ್ಮೆ ಹ.ಉಮರ್(ರ) ಹೀಗೆಂದರು- "ಅಬೂಬಕರ್(ರ) ನಮ್ಮ ಯಕರಾಗಿದ್ದಾರೆ. ಅವರು ನಮ್ಮ ನಾಯಕ ಅರ್ಥಾತ್ ಬಿಲಾಲ್‌ರನ್ನು ಸ್ವತಂತ್ರಗೊಳಿಸಿದವರು". (ಬುಖಾರಿ)

ಒಮ್ಮೆ ಬಿಲಾಲ್‌ರ(ರ) ಓರ್ವ ಸಹೋದರ ಅರಬ್ ಮನೆತನದ ಓರ್ವ ಹೆಣ್ಣಿಗೆ ಾಹದ ಪ್ರಸ್ತಾಪ ಕಳಿಸಿದರು. ಆ ವ್ಯಕ್ತಿ ತನ್ನನ್ನು ಅರಬ್ ಜನಾಂಗದವನೆಂದು ಚಯಿಸುತ್ತಿದ್ದರು. ಹೆಣ್ಣಿನ ಕಡೆಯವರು ಅವರಿಗೆ ಹೀಗೆ ಹೇಳಿ ಕಳಿಸಿದರು- "ನಮಗೆ ನಿಮ್ಮ ಚಯವಿಲ್ಲ. ಒಂದು ವೇಳೆ ಬಿಲಾಲ್(ರ) ಬಂದು, ನೀವು ಅವರ ಸಹೋದರನೆಂಬುದನ್ನು ್ವೀಕರಿಸಿದರೆ ನಿಮಗೆ ಹೆಣ್ಣು ಕೊಡಲು ನಮ್ಮದೇನೂ ಅಭ್ಯಂತರವಿಲ್ಲ."

ಹ.ಬಿಲಾಲ್(ರ) ಬಂದು ಅವರೊಡನೆ ಹೇಳಿದರು- "ಜನರೇ! ನಾನು ಬಿಲಾಲ್ ಬಿನ್ ಾಹ. ಇವರು ನನ್ನ ಸಹೋದರ. ಆದರೆ ಇವರ ಧಾರ್ಮಿಕ ಮತ್ತು ಚಾರಿತ್ರ್ಯದ ನೆಲೆ ಷ್ಟೇನೂ ಒಳ್ಳೆಯದಲ್ಲ. ನಿಮಗೆ ಇಷ್ಟವಿದ್ದರೆ ಇವರಿಗೆ ಹೆಣ್ಣು ಕೊಡಬಹುದು! ಡವೆಂದಾದರೆ ನಿರಾಕರಿಸಲೂ ನಿಮಗೆ ಸ್ವಾತಂತ್ರ್ಯವಿದೆ".

ಅದಕ್ಕೆ ಅವರ ಉತ್ತರ ಹೀಗಿತ್ತು- "ಬಿಲಾಲ್‌ರ ಸಹೋದರನಾಗಿರುವ ನಿಮ್ಮೊಂದಿಗೆ ಾಹ ಸಂಬಂಧ ಏರ್ಪಡಿಸುವುದು ನಮಗೆ ಹೆಮ್ಮೆಯ ವಿಷಯ".

ಉಮರ್ ಫಾರೂಕ್‌ರ(ರ) ಆಡಳಿತ ಕಾಲದಲ್ಲಿ ಕುರೈಶರ ಕೆಲವು ಸರದಾರರು ಅವರನ್ನು ಟಿಯಾಗಲು ಬಂದರು. ಅದೇ ಸಂದರ್ಭದಲ್ಲಿ ಹ.ಬಿಲಾಲ್(ರ) ಕೂಡಾ ಉಮರ್‌ರ ಟಿಗಾಗಿ ಅಲ್ಲಿಗೆ ತಲಪಿದರು. ಉಮರ್(ರ) ಮೊದಲು ಬಿಲಾಲ್‌ರನ್ನು ಒಳಗೆ ಕರೆದರು. ು ಕುರೈಶ್ ಸರದಾರರಿಗೆ ಅರೋಚಕವಾಯಿತು. ಅವರ ಬಾಯಿಯಿಂದ ಈ ಮಾತು ರಟಿತು, "ಕುರೈಶ್‌ನ ಪ್ರತಿಷ್ಠಿತರು ಹೊರಗೆ ಕಾಯಬೇಕು. ನೀಗ್ರೋ ಬಿಲಾಲ್‌ರಿಗೆ ುಗಿಂತ ಆದ್ಯತೆ ನೀಡಲಾಗುತ್ತಿದೆ". ಆಗ ಇಕ್ರಿಮಾ ಬಿನ್ ಅಬೂ ಜಹಲ್ ಅಥವಾ

ಸುಹೈಲ್ ಬಿನ್ ಅಮ್ರ್(ರ) ಹೀಗೆಂದರು:

"ಪ್ರವಾದಿ(ಸ) ನಮ್ಮೆಲ್ಲರನ್ನೂ ಸತ್ಯದತ್ತ ಆಹ್ವಾನಿಸಿದರು. ಆದರೆ ಅ ಅಂಗೀಕರಿಸುವಲ್ಲಿ ನಾವು ವಿಳಂಬ ತೋರಿದೆವು. ಬಿಲಾಲ್‌ರಂತಹ ಮಂದಿ ಅದನ್ನು ಕೂ ಅಪ್ಪಿಕೊಂಡು ನಮಗಿಂತ ಮುಂದೆ ಸಾಗಿದರು. ಆದುದರಿಂದ ಈಗಲೂ ಆದ್ಯತೆಗೆ ಅ ಅರ್ಹರು. ನಾವೇನೂ ಅವರನ್ನು ದೂಷಿಸುವಂತಿಲ್ಲ".

ಎಲ್ಲ ಸತ್ಕರ್ಮಗಳಿಗೂ ಆಧಾರ ಸತ್ಯವಿಶ್ವಾಸವೆಂದು ಬಿಲಾಲ್(ರ) ದೃಢ ನಂಬಿದ್ದರು. ಒಮ್ಮೆ ಯಾರೋ ಅವರೊಡನೆ, ಅತ್ಯುತ್ತಮ ಕರ್ಮ ಯಾವುದು ಎ ಕೇಳಿದಾಗ, "ಅಲ್ಲಾಹ್ ಮತ್ತು ಆತನ ಪ್ರವಾದಿಯಲ್ಲಿ ನಿಷ್ಕಳಂಕ ನಂಬಿಕೆಯಿರಿಸಬೇ ಅನಂತರ ಅಲ್ಲಾಹನ ಮಾರ್ಗದಲ್ಲಿ ಜಿಹಾದ್ ಮಾಡಬೇಕು. ತರುವಾಯ ಅಲ್ಲಾಹನ ಭವ ಹಜ್ಜ್ ನಿರ್ವಹಿಸಬೇಕು" ಎಂದರು.

ಇಸ್ಲಾಮ್ ಸ್ವೀಕರಿಸಿದ ನಂತರ ಬಿಲಾಲ್(ರ) ಯಾವಾಗಲೂ ಪ್ರವಾದಿಯವರೊಂದಿಗೆ ದಾರಿದ್ರ್ಯವನ್ನು ಹಂಚಿ ಕೊಳ್ಳುತ್ತಿದ್ದರು. ಪ್ರವಾದಿ(ಸ) ಹಸಿದಿರುವಾಗ ತಾನೂ ಹಸಿದಿರುತ್ತಿದ್ದ ಪ್ರವಾದಿವರ್ಯರಿಗೆ(ಸ) ದುಃಖವಾದಾಗ ತಾನೂ ಖಿನ್ನರಾಗುತ್ತಿದ್ದರು.

ಪ್ರವಾದಿ(ಸ) ಒಮ್ಮೆ ಹೇಳಿದರು- "ಅಲ್ಲಾಹನ ಮಾರ್ಗದಲ್ಲಿ ನನ್ನನ್ನು ಹೆದರಿಸಲಾದ ಇನ್ನಾರನ್ನೂ ಹೆದರಿಸಲಾಗಿಲ್ಲ. ಅಲ್ಲಾಹನ ಮಾರ್ಗದಲ್ಲಿ ನನಗೆ ನೀಡಿದಷ್ಟು ಕಿರುಕುಳ, ಹಿ ಬೇರೆ ಯಾರಿಗೂ ನೀಡಲಾಗಿಲ್ಲ. ಒಮ್ಮೆ ಮೂರು ದಿನ-ರಾತ್ರಿಗಳನ್ನು ನಾವು ತಿನ್ನ ಏನೊಂದೂ ಇಲ್ಲದ ಅವಸ್ಥೆಯಲ್ಲಿ ಕಳೆದಿದ್ದೇವೆ. ಬಿಲಾಲ್ ತನ್ನ ಕಂಕುಳಲ್ಲಿ ಬಚ್ಚಿಟ್ಟಿದ್ದ ಹೊರತು".

ಹ.ಬಿಲಾಲ್(ರ) ಇತಿಹಾಸದ ಪುಟಗಳಲ್ಲಿ ಕೆತ್ತಿದ ಸಹನೆ, ಸ್ಥೈರ್ಯ, ಸತ್ಯ ಸಂಧ ನಿಷ್ಕಳಂಕತೆಯ ಜೀವನ ಮಾದರಿಯು ಪ್ರತಿಯೊಬ್ಬ ಸತ್ಯವಿಶ್ವಾಸಿಯ ಮ ಮಾರ್ಗದೀಪವಾಗಿದೆ.

# ಹ. ಅಮ್ಮಾರ್ ಬಿನ್ ಯಾಸಿರ್(ರ)

## ರಿಯುತ್ತಿದ್ದ ಕೆಂಡದ ಮೇಲೆ ಮಲಗಿದವರು

ಹ. ಅಮ್ಮಾರ್ ಬಿನ್ ಯಾಸಿರ್(ರ) ಪ್ರವಾದಿ ಮುಹಮ್ಮದ್‌ರವರ(ಸ) ಮೇಲೆ ವಿಶ್ವಾಸ ದವರ ಪೈಕಿ ಮೊದಲಿನ ಸಾಲಿನವರು. ಅವರ ತಂದೆ ಯಾಸಿರ್(ರ) ಮನ್‌ನವರಾಗಿದ್ದರು. ತಾಯಿಯ ಹೆಸರು ಸುಮಯ್ಯಾ(ರ). ತಂದೆ-ತಾಯಿಗಳಿಬ್ಬರೂ ಮ್ಮಾರ್ ಇಸ್ಲಾಮ್ ಸ್ವೀಕರಿಸಿದ್ದ ಕಾಲದಲ್ಲೇ ಇಸ್ಲಾಮ್ ಸ್ವೀಕರಿಸಿದ್ದರು. ಯಾಸಿರ್(ರ) ರು ತನ್ನೋರ್ವ ನಾಪತ್ತೆಯಾದ ಸಹೋದರನನ್ನು ಹುಡುಕಿಕೊಂಡು ತನ್ನ ಇನ್ನಿಬ್ಬರು ೋದರರಾದ ಹಾರಿಸ್ ಮತ್ತು ಮಾಲಿಕ್‌ರ ಜೊತೆ ಮಕ್ಕಾಕ್ಕೆ ಬಂದಿದ್ದರು. ಅವರಿಬ್ಬರೂ ಮ್ಮ ದೇಶಕ್ಕೆ ಮರಳಿದರಾದರೂ ಯಾಸಿರ್ ಅಲ್ಲೇ ಉಳಿದರು. ಬನೂ ಮಖ್ಝೂಮ್ ೀತ್ರದವರೊಂದಿಗೆ ಮೈತ್ರಿ ಮಾಡಿಕೊಂಡು ಅದೇ ಗೋತ್ರದ ಅಬೂ ಹುದೈಫಾ ಬಿನ್ ಗೀರಾರ ಓರ್ವ ದಾಸಿ ಸುಮಯ್ಯಾರನ್ನು ವಿವಾಹವಾಗಿ ಅಲ್ಲೇ ವಾಸಿಸತೊಡಗಿದರು. ಈ ಾಹಿಕ ಸಂಬಂಧದಿಂದ ಹುಟ್ಟಿದ ಮಗುವೇ ಅಮ್ಮಾರ್(ರ). ಅಬೂ ಹುದೈಫಾ, ಮ್ಮಾರ್‌ರನ್ನು ಗುಲಾಮನಾಗಿ ಮಾಡದೆ ಎಳೆ ಪ್ರಾಯದಲ್ಲೇ ಸ್ವತಂತ್ರಗೊಳಿಸಿದರು. ಅವರು ಮ್ಮಾರ್ ಮತ್ತು ಯಾಸಿರ್‌ರನ್ನು ತನ್ನ ಬಳಿಯೇ ಇರಿಸಿ ಪ್ರೀತಿಯಿಂದ ಸಾಕತೊಡಗಿದರು.

ಅಬೂ ಹುದೈಫಾ ಮರಣ ಹೊಂದಿದ ಬಳಿಕ ಮಕ್ಕಾದಲ್ಲಿ ಇಸ್ಲಾಮ್‌ನ ಉದಯವಾಯಿತು. ಲ್ಲಾಮ್‌ನ ಪ್ರಥಮ ಶಬ್ದ ಕೇಳಿಯೇ ಅವರ ಮನಸ್ಸಿನ ಕವಾಟ ತೆರೆಯಿತು. ಅವರು ಲ್ಲಾಮಿನ ತೆಕ್ಕೆಯೊಳಗೆ ಬಂದರು. ಅವರು ಮತ್ತು ಸುಹೈಬ್ ಬಿನ್ ಸಿನಾನ್(ರ) ಒಟ್ಟಿಗೆ ಲ್ಲಾಮ್ ಸ್ವೀಕರಿಸಿದರು. ಅವರ ಮತಾಂತರದ ಕಥೆ ಹೀಗಿದೆ- ಪ್ರವಾದಿ(ಸ) ಮತ್ತು ಅವರ ವೇ ಮಂದಿ ಸಂಗಾತಿಗಳು ಕುರೈಶರ ಕಿರುಕುಳದಿಂದ ತಪ್ಪಿಸಿಕೊಳ್ಳಲಿಕ್ಕಾಗಿ 'ಅರ್ಕಮ್ ಬಿನ್ ೂ ಅರ್ಕಮ್‌ರವರ(ರ) ನಿವಾಸವನ್ನು (ದಾರುಲ್ ಅರ್ಕಮ್) ತಮ್ಮ ಕೇಂದ್ರವಾಗಿ ಾಡಿಕೊಂಡಿದ್ದರು. ಅಲ್ಲಿ ಪ್ರವಾದಿವರ್ಯರು ತಮ್ಮ ಸಂಗಾತಿಗಳಿಗೆ ಧರ್ಮದ ಶಿಕ್ಷಣ ುತ್ತಿದ್ದರು. ಒಂದು ದಿನ ದಾರುಲ್ ಅರ್ಕಮ್‌ನ ಬಾಗಿಲಲ್ಲಿ ಸುಹೈಬ್ ನಿಂತಿರುವುದನ್ನು ತ ಅಮ್ಮಾರ್, "ಇಲ್ಲೇಕೆ ನಿಂತಿರುವಿರಿ" ಎಂದು ಕೇಳಿದರು. ಆಗ ಅವರು, 'ಮೊದಲು ವು ತಿಳಿಸಿರಿ, ನೀವೇಕೆ ಇಲ್ಲಿಗೆ ಬಂದಿರಿ' ಎಂದು ಮರು ಪ್ರಶ್ನಿಸಿದರು. ಅಮ್ಮಾರ್

ಹೀಗೆಂದರು, ಮುಹಮ್ಮದ್‌ರವರನ್ನು(ಸ) ಭೇಟಿಯಾಗಿ ಕೆಲವು ವಿಷಯಗಳನ್ನು ಕೇಳಬೇಕೆ ಬಂದಿದ್ದೇನೆ.

"ನಾನೂ ಅದೇ ಉದ್ದೇಶದೊಂದಿಗೆ ಬಂದಿದ್ದೇನೆ", ಸುಹೈಬ್ ದನಿಗೂಡಿಸಿ ಹೀಗೆ ಇಬ್ಬರೂ ದಾರುಲ್ ಅರ್ಕಮ್‌ನೊಳಗೆ ಪ್ರವೇಶಿಸಿದರು. ಅಲ್ಲಿ ಪ್ರವಾದಿಯವರನ್ ಭೇಟಿಯಾಡಿ ಪ್ರವಾದಿವರ್ಯರ(ಸ) ದೌತ್ಯದ ಬಗ್ಗೆ ಪ್ರಶ್ನಿಸಿದರು. ಪ್ರವಾದಿವಯ ಇಸ್ಲಾಮಿನ ವಾಸ್ತವಿಕತೆಯನ್ನು ವಿವರಿಸಿದರು. ಕೂಡಲೇ ಇಬ್ಬರೂ ಪವಿತ್ರ ವಚನ ಮುಸ್ಲಿಮರಾದರು. ಆ ಸಂದರ್ಭದಲ್ಲಿ ಹ. ಅಬೂಬಕರ್(ರ) ಅವರಲ್ಲದೆ 5 ಮ ಗುಲಾಮರು ಮತ್ತು ಇಬ್ಬರು ಮಹಿಳೆಯರು ಅಲ್ಲಿದ್ದರು. ಈ ಮಂದಿ ತಮ್ಮ ಇಸ್ಲಾ ಸ್ವೀಕಾರವನ್ನು ಘೋಷಿಸಿದವರಾಗಿದ್ದರು. ಅನ್ಯಥಾ ಕೆಲವು ವರದಿಗಳ ಪ್ರಕಾರ, ಸತ್ಯನಿಷೇಧಿ ಹೆದರಿ ತಮ್ಮ ಇಸ್ಲಾಮನ್ನು ಬಹಿರಂಗ ಪಡಿಸದ ಮೂವತ್ತಕ್ಕಿಂತಲೂ ಅಧಿಕ ಜ ಮಕ್ಕಾದಲ್ಲಿದ್ದರು.

ಹ. ಅಮ್ಮಾರ್(ರ) ಓರ್ವ ಅಸಹಾಯಕ ಪರದೇಸಿಯಾಗಿದ್ದರು. ತೀರಾ ಬಡತನ ದಿನ ದೂಡುತ್ತಿದ್ದರು. ಲೌಕಿಕವಾಗಿ ಏನೊಂದೂ ಅವರ ಬಳಿಯಿರಲಿಲ್ಲ. ಅದಕ್ಕಿಂತ ಮಿಗಿ ಅವರ ತಾಯಿ ಸುಮಯ್ಯಾ(ರ) ಇನ್ನೂ ಬನೂ ಮಖ್ಜೂಮ್ ಗೋತ್ರದ ಗುಲಾಮಗಿರಿಯಿ ವಿಮೋಚನೆ ಹೊಂದಿರಲಿಲ್ಲ. ಆದರೆ ಆ ತಾಯಿ ಮತ್ತು ಮಗನಿಗೆ ತಮ್ಮ ಹೃದಯದಲ್ಲಿ ಈಮಾನನ್ನು ಬಚ್ಚಿಡಲು ಸಾಧ್ಯವಾಗಲಿಲ್ಲ. ಅವರು ಅದನ್ನು ಬಹಿರಂಗವಾಗಿಯೇ ಸಾರಿದ ಇದು ಸತ್ಯನಿಷೇಧಿಗಳನ್ನು ಕುಪಿತಗೊಳಿಸಿತು. ಅವರು ಯಾಸಿರ್ ಕುಟುಂಬವನ್ನು ತರತರ ಪೀಡಿಸಿದರು. ಸಾಕಷ್ಟು ಹಿಂಸೆ ದೌರ್ಜನ್ಯಗಳನ್ನೆಸಗಿದರು. ನಡು ಮಧ್ಯಾಹ್ನದ ಸುಡುಬಿಸಿ ಅವರನ್ನು ಮರಳ ಮೇಲೆ ಮಲಗಿಸಿದರು. ಉರಿಯುತ್ತಿರುವ ಅಗ್ನಿ ಕೆಂಡಗಳಿಂದ ಅ ಶರೀರದ ಮೇಲೆ ಬರೆಯೆಳೆದರು. ಗಂಟೆಗಟ್ಟಲೆ ನೀರಿನಲ್ಲಿ ಗೋತಾ ಹೊಡೆಸಿದರು. ಆದ ಅವರ ಹೃದಯಕ್ಕೆ ಹೊತ್ತಿದ್ದ ತೌಹೀದ್‌ನ ಕಿಡಿ ಆರಲು ಕೇಳಲಿಲ್ಲ. ಎಷ್ಟೇ ದೌರ್ಜನ್ಯಗ ಬಲಿಯಾದರೂ ತಮ್ಮ ಧರ್ಮವನ್ನು ಬಿಟ್ಟುಕೊಡಲು ಅವರು ಸಿದ್ಧರಿರಲಿಲ್ಲ.

ಅಮ್ಮಾರ್‌ರ(ರ) ತಾಯಿ ಸುಮಯ್ಯಾರನ್ನು ಅಬೂ ಜಹಲನು ಬರ್ಬರವಾಗಿ ಕೊಂದ ಅವರ ಮರ್ಮಾಂಗಕ್ಕೆ ಭರ್ಚಿಯಿಂದ ಹೊಡೆದು ಅವರನ್ನು ಸಾಯಿಸಿದನು. ಅದು ಇಸ್ಲಾ ಇತಿಹಾಸದ ಪ್ರಪ್ರಥಮ ಪಾಠಬೋಧಕ ಹುತಾತ್ಮತೆಯಾಗಿತ್ತು. ಅವರ ತಂದೆ ಯಾಸಿರ್ ಮ ಅವರ ಸಹೋದರ ಅಬ್ದುಲ್ಲಾ(ರ) ಕೂಡಾ ಅದೇ ರೀತಿಯ ಕ್ರೌರ್ಯಕ್ಕೆ ಬಲಿಯಾಗಿ ಜ ತೆತ್ತರು. ಅತ್ಯಂತ ಧೈರ್ಯ ಸ್ಥೈರ್ಯಗಳೊಂದಿಗೆ ಅವರು ಮರಣವನ್ನು ಅಪ್ಪಿ ಹಿಡಿದರಾದ ತಮ್ಮ ವಿಶ್ವಾಸವನ್ನು ಮತ್ತು ಧರ್ಮವನ್ನು ಬಿಟ್ಟು ಬಿಡಲಿಲ್ಲ.

ಒಂದು ದಿನ ಅಮ್ಮಾರ್‌ರನ್ನು(ರ) ಮುಶ್ರಿಕರು ಉರಿಯುತ್ತಿದ್ದ ಕೆಂಡಗಳ ಮ ಮಲಗಿಸಿದರು. ಆ ಸಂದರ್ಭದಲ್ಲಿ ಪ್ರವಾದಿ(ಸ) ಆ ದಾರಿಯಾಗಿ ಸಾಗುತ್ತಿದ್ದರು. ಅ ಅಮ್ಮಾರ್‌ರ ತಲೆಯ ಮೇಲೆ ಕೈಯಿಟ್ಟು ಹೀಗೆಂದರು, "ಓ ಅಗ್ನಿಯೇ ನ ಇಬ್ರಾಹೀಮ್‌ರಿಗೆ(ಅ) ತಣ್ಣಗಾದಂತೆ ಅಮ್ಮಾರ್‌ರಿಗೂ ತಣ್ಣಗಾಗು." ಅದೇ ರೀತಿ ಅ

ಯ ದಾರಿಯಾಗಿ ಸಾಗುವಾಗ ಯಾಸಿರ್ ಕುಟುಂಬದ ಮೇಲೆ ಎಸಗಲಾಗುತ್ತಿರುವ ರ್ಜವನ್ನು ನೋಡಿ ಹೇಳಿದರು, "ಯಾಸಿರ್ ಕುಟುಂಬವೇ! ನಿಮಗಿದೋ ಶುಭವಾರ್ತೆ-ವು ನಿಮ್ಮನ್ನು ಎದುರು ನೋಡುತ್ತಿದೆ."

ಒಮ್ಮೆ ಯಾಸಿರ್‌ರು(ರ) ಪ್ರವಾದಿಯವರಲ್ಲಿ(ಸ) ತಮ್ಮ ಮೇಲಾಗುತ್ತಿರುವ ದೌರ್ಜನ್ಯಗಳ ತೋಡಿಕೊಂಡಾಗ, 'ತಾಳ್ಮೆ ವಹಿಸಿರಿ, ತಾಳ್ಮೆ ವಹಿಸಿರಿ' ಎಂದು ಹೇಳಿ ಪ್ರವಾದಿಯವರು(ಸ) ಪ್ರಾರ್ಥಿಸಿದರು, "ಓ ಅಲ್ಲಾಹ್! ಯಾಸಿರ್ ಕುಟುಂಬವನ್ನು ಕ್ಷಮಿಸು. ಅವರ ಮೇಲೆ ು ತೋರು."

ಒಂದು ದಿನ ಸತ್ಯನಿಷೇಧಿಗಳು ಅಮ್ಮಾರ್‌ರನ್ನು ನೀರಿನಲ್ಲಿ ಪದೇ ಪದೇ ಮುಳುಗಿಸಿದರು. ಿಂದ ಕಂಗೆಟ್ಟಾಗ, ಅವರ ಬಾಯಿಯಿಂದ ಪ್ರವಾದಿಯವರನ್ನು ಬೈಯಿಸಿದರು. ಮುಶ್ರಿಕರು ುಸಿದಂತೆ ಅವರು ಬೈದರು. ಅದರ ನಂತರವೇ ಅವರು ಅವರನ್ನು ಬಿಟ್ಟು ಬಿಟ್ಟರು. ರೆ ಅಮ್ಮಾರ್‌ರ ಮನಸ್ಸು ತುಂಬಾ ನೊಂದಿತು. ಏಕೆಂದರೆ ಅವರು ಬಯಸದೆಯೇ ಸತ್ಯ ್ವಸವು ಹೃದಯದಲ್ಲಿ ನಾಟಿಕೊಂಡಿದ್ದರೂ, ಪ್ರವಾದಿವರ್ಯರನ್ನು ಬೈಯಬೇಕಾಗಿತ್ತು. ರು ನೇರವಾಗಿ ಪ್ರವಾದಿಯವರ(ಸ) ಬಳಿ ಬಂದು ಕಣ್ಣೀರಿಳಿಸುತ್ತಾ ಹೀಗೆಂದರು, ವಾದಿವರ್ಯರೇ! ಇಂದು ಮುಶ್ರಿಕರು ನನ್ನನ್ನು ಎಷ್ಟೊಂದು ಪೀಡಿಸಿದರೆಂದರೆ, ನಾನು ್ಮನ್ನು ಬೈಯದೆ ಮತ್ತು ಅವರ ವಿಗ್ರಹಗಳನ್ನು ಕೊಂಡಾಡದೆ ಅವರು ನನ್ನನ್ನು ಲೊಪ್ಪಲಿಲ್ಲ. ಆಗ ನಾನು ತಮ್ಮನ್ನು ಚೆನ್ನಾಗಿ ಬೈದೆ."

"ನನ್ನನ್ನು ಬೈಯುವಾಗ ನಿಮ್ಮ ಮನಸ್ಸಿನ ಸ್ಥಿತಿ ಹೇಗಿತ್ತು?" ಪ್ರವಾದಿಯವರು ದರು.

"ಸತ್ಯ ವಿಶ್ವಾಸದಲ್ಲಿ ಸಂತೃಪ್ತವಾಗಿತ್ತು" ಅವರು ಉತ್ತರಿಸಿದರು.

ಆಗ ಪ್ರವಾದಿ(ಸ) ಅತ್ಯಂತ ಪ್ರೀತಿಯಿಂದ ಅಮ್ಮಾರ್‌ರನ್ನು ಹತ್ತಿರ ಕರೆದು ್ಣೀರೊರೆಸುತ್ತಾ ಹೀಗೆಂದರು, "ಮುಂದೆಂದಾದರೂ ಇಂತಹ ಅವಸ್ಥೆ ತಲೆದೋರಿದರೆ ಗೆಯೇ ಮಾಡಿರಿ." ಅನಂತರ ಪವಿತ್ರ ಕುರ್‌ಆನ್‌ನಲ್ಲಿ ಈ ಆಯತ್ ಅವತೀರ್ಣಗೊಂಡಿತು:

"ಸತ್ಯವಿಶ್ವಾಸವನ್ನು ಸ್ವೀಕರಿಸಿದ ಬಳಿಕ ನಿಷೇಧಿಸುವವನು ಒಂದು ವೇಳೆ ್ಬಂಧಿಸಲ್ಪಟ್ಟಿದ್ದು, ಅವನ ಹೃದಯವು ಈಮಾನಿನ ಬಗ್ಗೆ ಸಂತೃಪ್ತವಾಗಿದ್ದರೆ ಅವರನ್ನು ಸಲಾಗದು."

## ತ್ಯುನ್ನತ ಸ್ಥಾನಮಾನ ಪಡೆದ ಗುಲಾಮ

ಹ. ಅಮ್ಮಾರ್ ಬಿನ್ ಯಾಸಿರ್(ರ) ಮದೀನಾಕ್ಕೆ ವಲಸೆ(ಹಿಜ್ರತ್) ಹೋಗುವ ವರೆಗೆ ಕ್ಕಾದಲ್ಲೇ ನೆಲೆಸಿದ್ದು ಸತ್ಯನಿಷೇಧಿಗಳ ಅಕ್ರಮ ದೌರ್ಜನ್ಯಗಳನ್ನು ಸಹಿಸುತ್ತಲೇ ಇದ್ದರು. ಮಧ್ಯೆ ಕೆಲವು ದಿನಗಳ ಮಟ್ಟಿಗೆ ಅಬಿಸೀನಿಯಾ (ಇಥಿಯೋಪಿಯಾ)ಕ್ಕೂ ವಲಸೆ ುೀಗಿದ್ದರು. ಪ್ರವಾದಿ(ಸ) ಮದೀನಾಕ್ಕೆ ವಲಸೆ ಹೋಗುವುದಕ್ಕಿಂತ ಒಂದೆರಡು ತಿಂಗಳ ುಂಚೆ ಅಮ್ಮಾರ್ ಬಿನ್ ಯಾಸಿರ್(ರ) ಮದೀನಾಕ್ಕೆ ಹೋಗಿದ್ದರು. ಅವರು ಮೊದಲು

ಕುಬಾದಲ್ಲಿ ತಂಗಿದರು. ಅಲ್ಲಿ ಬನೂ ಅಮ್ರ್ ಗೋತ್ರದ ಮುಬಶ್ಶಿರ್ ಬಿನ್ ಅಬ್ ಮುಂದಿರ್ ಅವರ ಅತಿಥಿಯಾದರು. ಪ್ರವಾದಿಯವರು(ಸ) ಕುಬಾಕ್ಕೆ ಆಗಮಿಸುವ ವ ಅವರು ಅಲ್ಲಿ ಉಳಕೊಂಡರು. ಕುಬಾದಲ್ಲಿ ಪ್ರವಾದಿವರ್ಯರು(ಸ) ಮಸೀದಿ ನಿರ್ಮಿ ಅಮ್ಮಾರ್(ರ) ಬಹಳ ಉತ್ಸಾಹ ಲವಲವಿಕೆಯಿಂದ ನಿರ್ಮಾಣ ಕಾರ್ಯದಲ್ಲಿ ಭಾಗವಹಿಸಿ ಕುಬಾ ಮಸೀದಿಗಾಗಿ ಕಲ್ಲುಗಳನ್ನು ಅಮ್ಮಾರ್ ಅವರೇ ಶೇಖರಿಸಿದ್ದರೆಂದು ಹೇಳಲಾಗು ಮಸೀದಿ ನಿರ್ಮಾಣದ ಕಾರ್ಯದಲ್ಲಿ ಅತ್ಯಧಿಕ ಪರಿಶ್ರಮ ವಹಿಸಿದವರೂ ಅವರೇ ಆಗಿ

ಕೆಲವು ದಿನಗಳ ಬಳಿಕ ಪ್ರವಾದಿ(ಸ) ಮದೀನಾದತ್ತ ಪ್ರಯಾಣ ಬೆಳೆಸಿದಾಗ, ಅಮ ಕೂಡಾ ಪ್ರವಾದಿವರ್ಯರ ಜತೆಗೂಡಿದರು. ಮದೀನಾದಲ್ಲಿ ಮಸ್ಜಿದುನ್ನಬವಿಯ ಆರಂಭವಾದಾಗ ಅದರಲ್ಲೂ ಅಮ್ಮಾರ್(ರ) ಬಹಳ ಉತ್ಸಾಹದಿಂದ ಭಾಗವಹಿಸಿದರು. ಸಹಾಬಿಗಳು ಒಂದೊಂದು ಕಲ್ಲನ್ನೆತ್ತಿ ತರುತ್ತಿದ್ದರೆ, ಅಮ್ಮಾರ್ ಎರಡೆರಡು ಕಲ್ಲುಗ ಹೊತ್ತು ತರುತ್ತಿದ್ದರು. ಪ್ರವಾದಿ(ಸ) ಅಮ್ಮಾರ್‌ರ ಮೈಮೇಲಿದ್ದ ಮಣ್ಣನ್ನು ಒರೆಸುತ್ತಿ ಪ್ರವಾದಿ(ಸ) ಕೂಡಾ ಇಟ್ಟಿಗೆ-ಗಾರೆಗಳನ್ನು ತಂದು ಹಾಕುತ್ತಿದ್ದರು. ಸಹಾಬಿಗಳು ತಾವೇ ಕಾರ್ಯವನ್ನು ಮಾಡುತ್ತೇವೆಂದು ಹೇಳಿ ಪ್ರವಾದಿವರ್ಯರನ್ನು(ಸ) ತಡೆಯ ಬಯಸಿ ಅವರ ವಿನಂತಿಯನ್ನು ಪ್ರವಾದಿವರ್ಯರು(ಸ) ತಿರಸ್ಕರಿಸಿದರು.

ಅಮ್ಮಾರ್(ರ) ಕೆಲವು ಸಮಯ ಸುಫ್ಫಾದಲ್ಲಿದ್ದರು. ನಿರ್ಗತಿಕರಾದ ಕೆಲವು ಸಹಾಬಿ ಮಸ್ಜಿದುನ್ನಬವಿಯ ಒಂದು ಪಡಸಾಲೆಯಲ್ಲಿ ತಂಗಿ ಪ್ರವಾದಿವರ್ಯರಿಂದ ಇಸ್ಲಾಮಿನ ಗಳಿಸುತ್ತಿದ್ದರು. ಪ್ರವಾದಿಯವರು(ಸ) ಅವರ ತರಬೇತಿ ಮಾಡುತ್ತಿದ್ದರು. ಆ ಪಡಸಾಲೆಗೆ 'ಸ ಎಂದು ಹೆಸರು. ಅದರಲ್ಲಿ ತಂಗಿದ್ದ ಸಹಾಬಿಗಳನ್ನು 'ಅಸ್‌ಹಾಬುಸ್ಸುಫ್ಫ' (ಸುಫ್ಫಾದ ಎಂದು ಕರೆಯಲಾಗುತ್ತಿತ್ತು.

ಮದೀನಾಕ್ಕೆ ಬಂದ ಕೆಲವು ಸಮಯದ ನಂತರ ಪ್ರವಾದಿವರ್ಯರು(ಸ) ಅನ ಮತ್ತು ಮುಹಾಜಿರ್‌ಗಳ ಮಧ್ಯೆ ಭ್ರಾತೃ ಸಂಬಂಧವನ್ನೇರ್ಪಡಿಸಿದರು. ಅದರ ಪ್ರ ಅಮ್ಮಾರ್‌ರನ್ನು ಹುದೈಫಾ ಬಿನ್ ಯಮಾನ್‌ರ ಇಸ್ಲಾಮೀ ಸಹೋದರನಾಗಿ ಮಾಡಿ ಪ್ರವಾದಿಯವರು(ಸ) ಅಮ್ಮಾರ್‌ರಿಗೆ ಮದೀನಾದಲ್ಲಿ ಖಾಯಂ ನಿವಾಸ ಹೂಡಲಿಕ್ಕಾಗಿ ಒಂ ತುಂಡು ಭೂಮಿಯನ್ನು ಬಳುವಳಿಯಾಗಿ ನೀಡಿದರು.

ಹ. ಅಮ್ಮಾರ್ ಸತ್ಯಮಾರ್ಗದ ಓರ್ವ ಯೋಧರಾಗಿದ್ದರು. ಅವ ಪ್ರವಾದಿವರ್ಯರೆಂದರೆ(ಸ) ಪಂಚಪ್ರಾಣ. ಪ್ರವಾದಿವರ್ಯರಿಗಾಗಿ(ಸ) ಯಾವ ತ್ಯಾಗ ಅವರು ಸಿದ್ಧರಿದ್ದರು. ಪ್ರವಾದಿವರ್ಯರನ್ನು ತನ್ನ ಪ್ರಾಣಕ್ಕಿಂತ ಹೆಚ್ಚಾಗಿ ಪ್ರೀತಿಸುತ್ತಿದ್ದ ಬದ್ರ್‌ನಿಂದ ತಬೂಕ್ ವರೆಗಿನ ಎಲ್ಲ ಯುದ್ಧಗಳಲ್ಲೂ ಪ್ರವಾದಿಯವರ(ಸ) ಜೊತೆಯಲ್ಲಿ ಪ್ರಾಣದ ಹಂಗು ತೊರೆದು ಹೋರಾಡಿದ್ದರು. ಅದಲ್ಲದೆ ಕೆಲವೊಂದು ಚಿಕ್ಕ ಕಾರ್ಯಾಚರಣೆಗಳಲ್ಲೂ ಅವರು ಭಾಗವಹಿಸಿದ್ದರು. ಅವರ ನಿಸ್ಪೃಹತೆ ಮತ್ತು ಆತ್ಮಾರ್ಪಣೆ ಗುಣಗಳನ್ನು ಪ್ರವಾದಿವರ್ಯರು(ಸ) ಕೊಂಡಾಡುತ್ತಿದ್ದರು.

ಒಮ್ಮೆ ಪ್ರವಾದಿಯವರು(ಸ) ಖಾಲಿದ್ ಬಿನ್ ವಲೀದ್‌ರ(ರ) ನೇತೃತ್ವದಲ್ಲಿ ಒಂ

ರ್ಯಾಚರಣೆಗಾಗಿ ಸೇನಾ ತುಕಡಿಯೊಂದನ್ನು ರವಾನಿಸಿದರು. ಯಾವ ಗೋತ್ರದವರೊಂದಿಗೆ ಗ್ಗೆ ಯುದ್ಧ ಮಾಡಬೇಕಿತ್ತೋ ಅದರ ಹತ್ತಿರ ರಾತ್ರಿ ತಲಪಿ ಅಲ್ಲೇ ಬಿಡಾರ ಹೂಡಿದರು. ಗೋತ್ರದ ಯಾರೋ ಒಬ್ಬ ವ್ಯಕ್ತಿ ನೋಡಿ ಸೇನೆಯ ಸುಳಿವನ್ನು ಗೋತ್ರಕ್ಕೆ ನೀಡಿದನು. ತ್ರದ ಜನರೆಲ್ಲ ಪಲಾಯನ ಮಾಡಿದರು. ಆದರೆ ಒಬ್ಬ ವ್ಯಕ್ತಿ ಮಾತ್ರ ಅಲ್ಲೇ ನಿಂತರು. ದರೆ ಅವರೂ ಅವರ ಮನೆಮಂದಿಯೂ ಇಸ್ಲಾಮ್ ಸ್ವೀಕಾರ ಮಾಡಿದ್ದರು. ಮನೆ ಮಂದಿ ತಾ ಪಲಾಯನ ಮಾಡಲು ತಮ್ಮ ಸಾಮಾನು ಸರಂಜಾಮುಗಳನ್ನು ಒಂಟೆಯ ಮೇಲೆ ದರು. ಆದರೆ ಆ ವ್ಯಕ್ತಿ ಅವರನ್ನು ಹೋಗಗೊಡದೆ ತಾನು ಮರಳಿ ಬರುವ ವರೆಗೂ ೀ ನಿಲ್ಲಬೇಕೆಂದು ಸೇನೆಯಿರುವಲ್ಲಿಗೆ ನಡೆದರು. ಅಲ್ಲಿ ಅಮ್ಮಾರ್ ಬಿನ್ ಯಾಸಿರ್‌ರನ್ನು ತಿಯಾಗಿ ಹೀಗೆಂದರು, "ಮಹನೀಯರೆ! ನಾನೂ ನನ್ನ ಮನೆಮಂದಿಯೂ ಇಸ್ಲಾಮ್ ಕರಿಸಿದ್ದೇವೆ. ಇದರಿಂದ ನನಗೇನಾದರೂ ಪ್ರಯೋಜನವಾದೀತೆ? ನನ್ನ ಗೋತ್ರದವರು ್ಮ ಬರುವಿಕೆಯ ಸುದ್ದಿ ಕೇಳಿ ಓಡಿ ಹೋದರು." ಅಮ್ಮಾರ್(ರ) ಆ ವ್ಯಕ್ತಿಯೊಡನೆ, ವು ಅಲ್ಲೇ ನಿಲ್ಲಿ. ನಿಮಗೆ ಅಭಯವಿದೆ'ಯೆಂದು ಹೇಳಿದರು. ಇದರಿಂದಾಗಿ ಅವರು ಮನೆ ದಿಯೊಂದಿಗೆ ತಮ್ಮ ಊರಲ್ಲೇ ಉಳಿದರು. ಬೆಳಗಾತ ಖಾಲಿದ್ ಬಿನ್ ವಲೀದ್(ರ) ್ರಾಮದ ಮೇಲೆ ಆಕ್ರಮಣ ನಡೆಸಿದರು. ಆದರೆ ಊರವರೆಲ್ಲರೂ ಪಲಾಯನ ಮಾಡಿದ್ದರು. ರು ಆ ವ್ಯಕ್ತಿ ಮತ್ತು ಅವರ ಮನೆಯವರನ್ನು ಸೆರೆಹಿಡಿದರು. ಆಗ ಹ. ಅಮ್ಮಾರ್(ರ) ಲಿದ್(ರ)ರೊಡನೆ, 'ಅವರು ಇಸ್ಲಾಮ್ ಸ್ವೀಕಾರ ಮಾಡಿದ್ದಾರೆ, ಅವರನ್ನು ನೀವೇನೂ ಡಬಾರದು' ಎಂದು ಹೇಳಿದರು.

"ಸೇನಾ ನಾಯಕ ನಾನಾಗಿರುವಾಗ, ನೀವು ಅವರಿಗೆ ಅಭಯ ನೀಡುವಿರಾ?" ಖಾಲಿದ್ ು ಪ್ರಶ್ನಿಸಿದರು.

"ಹೌದು, ನಾನು ಅವರಿಗೆ ಅಭಯ ನೀಡಿರುವೆನು. ನೀವು ನಾಯಕರಾಗಿದ್ದರೂ ಸರಿ. ುಸಿದ್ದರೆ ಉಳಿದವರಂತೆ ಈ ವ್ಯಕ್ತಿಯೂ ಪಲಾಯನ ಮಾಡುತ್ತಿದ್ದರು. ಆದರೆ ಇಸ್ಲಾಮ್ ಕರಿಸಿದ್ದ ಕಾರಣ ನಾನೇ ಅವರನ್ನು ಹೋಗದಂತೆ ತಡೆದೆ" ಅಮ್ಮಾರ್ ಉತ್ತರಿಸಿದರು.

ಈ ವಿಷಯದಲ್ಲಿ ಇಬ್ಬರ ನಡುವೆ ಮಾತಿನ ಚಕಮಕಿ ನಡೆಯಿತು. ಸೇನೆಯು ದೀನಾಕ್ಕೆ ಮರಳಿದಾಗ ಖಾಲಿದ್ ಮತ್ತು ಅಮ್ಮಾರ್(ರ) ಇಬ್ಬರೂ ಪ್ರವಾದಿಯವರ(ಸ) ್ಥಾನಕ್ಕೆ ತೆರಳಿದರು. ಅಮ್ಮಾರ್‌ರು(ರ) ನಡೆದ ವೃತ್ತಾಂತವನ್ನೆಲ್ಲ ಪ್ರವಾದಿವರ್ಯರ ಂದೆ ವಿವರಿಸಿದರು. ಪ್ರವಾದಿಯವರು(ಸ) ಅಮ್ಮಾರ್ ಅಭಯ ನೀಡಿರುವುದನ್ನು ುಮೋದಿಸಿದರಾದರೂ ಇನ್ನು ಮುಂದೆ ತನ್ನ ನಾಯಕನೊಂದಿಗೆ ಸಮಾಲೋಚಿಸದೆ ಅಥವಾ ಕರ ಅನುಮತಿ ಪಡೆಯದೆ ಯಾರಿಗೂ ಅಭಯ ನೀಡಬಾರದೆಂದು ಆದೇಶಿಸಿದರು.

ಅನಂತರ ಪುನಃ ಇಬ್ಬರೂ ಜಗಳಾಡಿದರು. ಹ. ಖಾಲಿದ್ ಕೋಪದಿಂದ ಹೀಗೆಂದರು, ್ರವಾದಿವರ್ಯರೆ! ಈ ಗುಲಾಮ ನನ್ನೊಂದಿಗೆ ಕಠೋರಾಗಿ ಮಾತನಾಡುತ್ತಿದ್ದಾರೆ ವಿಲ್ಲದಿರುತ್ತಿದ್ದರೆ ಇವರಿಗೆ ಆ ಧೈರ್ಯ ಬರುತ್ತಿರಲಿಲ್ಲ."

ಆಗ ಪ್ರವಾದಿ(ಸ) ಕೂಡಾ ಕೋಪಗೊಂಡು ಹೀಗೆಂದರು, "ಖಾಲಿದ್! ಅಮ್ಮಾರ್‌ರನ್ನು

ಏನೂ ಹೇಳಬೇಡಿ. ಅಮ್ಮಾರ್‌ರನ್ನು ಬೈಯುವವನು ಅಲ್ಲಾಹನನ್ನು ಬೈದಂತೆ. ಅಮ್ಮಾರ್‌ ಕುಪಿತಗೊಳಿಸಿದವನು ಅಲ್ಲಾಹನನ್ನು ಕೋಪಗೊಳಿಸಿದಂತೆ ಮತ್ತು ಅಮ್ಮಾರ್‌ ಅಪಮಾನಿಸಿದವನು ಅಲ್ಲಾಹನನ್ನು ಅಪಮಾನಿಸಿದಂತೆ."

ಅನಂತರ ಅಮ್ಮಾರ್ ಅಲ್ಲಿಂದೆದ್ದು ನಡೆಯತೊಡಗಿದರು. ಖಾಲಿದ್ ಬಿನ್ ವಲೀ ಅಮ್ಮಾರ್‌ರ ಹಿಂದೆ ನಡೆದು ಅವರನ್ನು ಪ್ರಸನ್ನಗೊಳಿಸಲು ಪ್ರಯತ್ನಿಸಿದರು. ಅಮ್ಮಾ ಅಂಗಿ ಹಿಡಿದು ಅವರಿಂದ ಕ್ಷಮೆ ಕೇಳಿದರು. ಪ್ರವಾದಿವರ್ಯರಲ್ಲೂ ತನ್ನ ಕ್ಷಮೆ ಪ್ರಾರ್ಥಿಸುವಂತೆ ವಿನಂತಿಸಿದರು.

## ಸತ್ಯದ ನಂಟು

ಪ್ರವಾದಿಯವರ(ಸ) ನಿಧನಾನಂತರ ಹ.ಅಬೂಬಕರ್(ರ) ಖಲೀಫಾ ಆಗಿ ಅಧಿ ವಹಿಸಿಕೊಂಡರು. ಅವರ ಕಾಲದಲ್ಲಿ ಇಡೀ ಅರಬ್ ದೇಶದಲ್ಲಿ ಧರ್ಮಭ್ರಷ್ಟತೆಯ ವ ಹಬ್ಬಿತು. ಆದರೆ ಅಬೂಬಕರ್(ರ) ಈ ಕ್ಷೋಭೆಯನ್ನು ಬಹಳ ಧೈರ್ಯ- ಸ್ಥೈರ್ಯಗಳಿ ಎದುರಿಸಿದರು. ಅದಕ್ಕಾಗಿ ಅನೇಕ ರಕ್ತರಂಜಿತ ಹೋರಾಟಗಳೂ ನಡೆದುವು. ಹ.ಅಮ್ಮಾರ್ ಹೆಚ್ಚಿನ ಯುದ್ಧಗಳಲ್ಲಿ ಮುರ್ತದ್ದ್(ಧರ್ಮಭ್ರಷ್ಟ)ಗಳ ವಿರುದ್ಧ ಪರಾಕ್ರಮವನ್ನು ಮೆರೆದ ಮುಸೈಲಿಮ ಎಂಬ ಕಪಟ ಪ್ರವಾದಿಯ ವಿರುದ್ಧ ನಡೆದ ಯಮಾಮ ಯುದ್ಧದ ಶೂರತೆಯಿಂದ ಹೋರಾಡಿದರು. ಇದು ಅತ್ಯಂತ ಭೀಕರ ಕಾಳಗವಾಗಿತ್ತು. ಆ ಯುದ್ಧ ಅಮ್ಮಾರ್‌ರ(ರ) ಒಂದು ಕಿವಿ ಖಡ್ಗದ ಏಟಿಗೆ ಕಡಿದು ಬಿತ್ತು. ಆದರೆ ಅದನ್ನು ಲೆಕ್ಕಿ ಅವರು ಹೋರಾಟದಲ್ಲಿ ನಿರತರಾದರು. ಒಂದು ಸಂದರ್ಭದಲ್ಲಿ ಮುಸ್ಲಿಮರ ಸೇನೆ ಹಿಮ್ಮೆ ಯೋಧರು ಅತ್ತಿತ್ತ ಓಡ ತೊಡಗಿದರು. ಆಗ ಅಮ್ಮಾರ್ ಎತ್ತರದ ಬಂಡೆಯೊಂದನ್ ಹೀಗೆ ಕೂಗ ತೊಡಗಿದರು,

"ಮುಸ್ಲಿಮರೇ! ಸ್ವರ್ಗದಿಂದ ಓಡಿ ಹೋಗುತ್ತೀರಾ, ಬನ್ನಿ ನನ್ನೆಡೆಗೆ, ನ ಅಮ್ಮಾರ್!" ಈ ಸ್ವರ ಕೇಳಿದಾಗ ಸೈನಿಕರು ಪುನಃ ಒಟ್ಟುಗೂಡಿ ಧೈರ್ಯದಿ ಹೋರಾಡಿದರು. ಕೊನೆಗೂ ಮುಸ್ಲಿಮರಿಗೆ ಜಯವಾಯಿತು. ಆಗ ಅಮ್ಮಾರ್‌ರ ಪ್ರಾಯ ವರ್ಷಗಳಾಗಿತ್ತು. ಆದರೆ ಯುವಕರನ್ನೂ ನಾಚಿಸುವ ರೀತಿಯಲ್ಲಿ ಅವರು ಹೋರಾಡಿದ್ದ

ಹ.ಉಮರ್ ಫಾರೂಕ್(ರ) ಅಮ್ಮಾರ್‌ರನ್ನು ಬಹಳವಾಗಿ ಗೌರವಿಸುತ್ತಿದ್ದರು. ಒಂ ದಿನ ಅಬೂ ಸುಫ್ಯಾನ್ ಬಿನ್ ಹರಬ್, ಹಾರಿಸ್ ಬಿನ್ ಹಿಶಾಮ್ ಮತ್ತು ಸುಹೈ ಬಿನ್ ಅಮ್ರ್- ಈ ಮೂವರು ಕುರೈಶ್ ಸರದಾರರು ಉಮರ್‌ರನ್ನು(ರ) ಭೇಟಿಯಾಗ ಬಂದಿದ್ದರು. ಅದೇ ಸಂದರ್ಭದಲ್ಲಿ ಅಮ್ಮಾರ್, ಬಿಲಾಲ್ ಮತ್ತು ಸುಹೈಬ್- ಈ ಮೂವ ಖಲೀಫರ ಭೇಟಿಗಾಗಿ ಬಂದಿದ್ದರು. ಖಲೀಫರಿಗೆ ಸುದ್ದಿ ತಿಳಿದಾಗ ಈ ಮೂವರನ್ನು ಕರೆ ಮಾತಾಡಿದರು. ಅನಂತರ ಆ ಸರದಾರರನ್ನು ಒಳ ಕರೆದು ಮಾತಾಡಿದರು. ಅ ಸುಫ್ಯಾನ್‌ರಿಗೆ ಇದು ತಾಗಿತು. ಅವರು ಖಲೀಫರಲ್ಲಿ ಹೀಗೆ ದೂರಿಕೊಂಡರು- ಗುಲಾಮರ ಕೂಡಲೇ ಕರೆಯಲಾಯಿತು. ನಾವು ಕುರೈಶ್‌ನ ಉನ್ನತ ವ್ಯಕ್ತಿಗಳಾಗಿದ್ದೂ ಕಾ

ತುಕೊಳ್ಳಬೇಕಾಯಿತಲ್ಲವೇ?

ಆಗ.ಉಮರ್(ರ) ಆ ಸರದಾರರಿಗೆ ಹೀಗೆ ಉತ್ತರಿಸಿದರು- "ಅದರ ಉತ್ತರವನ್ನು ನೀವು ್ಮ ಆತ್ಮಸಾಕ್ಷಿಯೊಂದಿಗೇ ಪ್ರಶ್ನಿಸಬೇಕು. ಇಸ್ಲಾಮ್ ಎಲ್ಲರಂತೆ ನಿಮ್ಮನ್ನೂ ತನ್ನೆಡೆಗೆ ತ್ತು. ಆದರೆ ನೀವು ಹಿಂದೆ ಸರಿದಿರಿ. ಅವರು ಮುಂದೆ ಬಂದರು."

ಹಿ.ಶ.20ರಲ್ಲಿ ಉಮರ್ ಫಾರೂಕ್(ರ) ಅಮ್ಮಾರ್‌ರನ್ನು ಕೂಫಾದ ರಾಜ್ಯಪಾಲರಾಗಿ ಮಿಸಿ ಕಳಿಸಿದರು. ಆ ಸಂದರ್ಭದಲ್ಲಿ ಕೂಫಾದ ಜನರಿಗೆ ಹೀಗೆ ಬರೆದು ಕಳಿಸಿದರು-

"ಅಮ್ಮಾರ್‌ರನ್ನು ನಿಮ್ಮ ಆಡಳಿತಾಧಿಕಾರಿಯಾಗಿಯೂ ಅಬ್ದುಲ್ಲಾ ಬಿನ್ ್‌ಊದ್‌ರನ್ನು ನಿಮ್ಮ ಬೋಧಕ (ಮಂತ್ರಿ)ರಾಗಿಯೂ ನೇಮಿಸಿ ಕಳಿಸುತ್ತಿದ್ದೇನೆ. ಇಬ್ಬರೂ ಾದಿಯವರ(ಸ) ಆಪ್ತ ಸಂಗಾತಿಗಳಾಗಿದ್ದಾರೆ ಮತ್ತು ಬದ್ರ್ ಯುದ್ಧದಲ್ಲಿ ಭಾಗವಹಿಸಿದ ೇಧರಾಗಿದ್ದಾರೆ. ಅವರನ್ನು ಅನುಸರಿಸಿರಿ. ಅವರ ಆಜ್ಞೆಗಳನ್ನು ಪಾಲಿಸಿರಿ".

ಕೂಫಾದ ರಾಜ್ಯಪಾಲರಾಗಿದ್ದ ಕಾಲದಲ್ಲಿ ನಹಾದಂದ್ ಎಂಬ ಯುದ್ಧ ನಡೆಯಿತು. ಮರ್‌ರವರ(ರ) ಆದೇಶ ಪ್ರಕಾರ ಅಮ್ಮಾರ್ ಸೇನಾ ತುಕಡಿಯೊಂದನ್ನು ತೆಗೆದುಕೊಂಡು ೇದರು. ಆದರೆ ಅವರು ಹೋಗಿ ನೋಡುವಾಗ ಯುದ್ಧ ಕೊನೆಗೊಂಡಿತ್ತು. ಮುಸ್ಲಿಮರಿಗೆ ುವಾಗಿತ್ತು. ಅಮ್ಮಾರ್‌ರು ತನ್ನ ಸೈನಿಕರಿಗೆ ಸಮರಾರ್ಜಿತದಿಂದ ಪಾಲು ಕೇಳಿದರು. ಆದರೆ ುರಾರ್ಜಿತವನ್ನು ಸಂಗ್ರಹಿಸಿದ ಸೈನಿಕರು ಅದನ್ನು ಕೊಡಲೊಪ್ಪಲಿಲ್ಲ. ನೀವು ಯುದ್ಧದಲ್ಲಿ ಗವಹಿಸದ ಕಾರಣ ನಿಮಗೆ ಅದರಲ್ಲಿ ಪಾಲಿಲ್ಲವೆಂದು ಹೇಳಿಬಿಟ್ಟರು. ಆ ಸಂದರ್ಭದಲ್ಲಿ ರ್ವ ಗ್ರಾಮೀಣ ಅರಬ್ ಸೈನಿಕನಂತೂ ಅಮ್ಮಾರ್‌ರೊಂದಿಗೆ ಕರ್ಕಶವಾಗಿ ವರ್ತಿಸಿದ- ಕಿವಿ ಮುರಿದವನೇ! ನಾವು ಯುದ್ಧಾಗ್ನಿಯಲ್ಲಿ ಬೆಂದು ಗಳಿಸಿದ ಸಮರಾರ್ಜಿತದಿಂದ ಲು ಪಡೆಯಲು ಬಂದಿರುವಿರಾ?" ಎಂದಾತ ಅಬ್ಬರಿಸಿದ. ಅಮ್ಮಾರ್ ಬಹಳ ಸಹನಶೀಲ ್ತಿಯಾಗಿದ್ದರು. ಅವರು ಜಗಳಾಡಬಯಸಲಿಲ್ಲ. ಆದರೆ ಉಮರ್‌ರಿಗೆ(ರ) ಅವರು ಪತ್ರ ೆದು ಸೈನಿಕರ ವರ್ತನೆಯ ಬಗ್ಗೆ ದೂರಿಕೊಂಡರು. ಹ.ಉಮರ್(ರ) ಹೀಗೆ ಉತ್ತರ ಬರೆದು ಸಿದರು- "ಯುದ್ಧದಲ್ಲಿ ಭಾಗವಹಿಸಿ ಹೋರಾಡಿದವರಿಗೆ ಮಾತ್ರ ಸಮರಾರ್ಜಿತದ ಹಕ್ಕು ಸಿಗುತ್ತದೆ".

ಅಮ್ಮಾರ್(ರ) ಜಮಲ್ ಯುದ್ಧದಲ್ಲಿ ಹ.ಅಲೀಯವರ(ರ) ಪರವಾಗಿ ಯುದ್ಧ ಾಡಿದರು. ಯುದ್ಧದಲ್ಲಿ ಅಲೀಯವರ ಪಕ್ಷದವರು ವಿಜಯ ಸಾಧಿಸಿದರು. ಜಮಲ್ ುದ್ಧದ ನಂತರ ನಡೆದ ಸಿಫ್ಫೀನ್ ಯುದ್ಧದಲ್ಲೂ ಅವರು ಅಲೀಯವರ ಪರವಾಗಿ ುಆವಿಯಾರ ವಿರುದ್ಧ ಹೋರಾಡಿದರು. ಅದೇ ಯುದ್ಧದಲ್ಲಿ ಅವರು ಹುತಾತ್ಮರಾದರು. ದಿನ ಭೀಕರ ಯುದ್ಧ ನಡೆಯುತ್ತಿತ್ತು. ಸೂರ್ಯಾಸ್ತಮಾನದ ಹೊತ್ತಿಗೆ ಅಮ್ಮಾರ್(ರ) ಲ್ಪ ಹಾಲು ಕುಡಿದು ಹೀಗೆಂದರು-

"ನೀನು ಕುಡಿಯುವ ಕೊನೆಯ ಗುಟುಕು ಹಾಲಾಗಿರುವುದೆಂದು ಪ್ರವಾದಿ(ಸ) ಹೇಳಿದ್ದಾರೆ". ನಂತರ ಈ ರೀತಿ ಹಾಡುತ್ತಾ ಯುದ್ಧ ಭೂಮಿಯಲ್ಲಿ ಮುಂದೆ ಸಾಗಿದರು-

"ಇಂದು ನಾನು ನನ್ನ ಸ್ನೇಹಿತರನ್ನು ಸೇರಲಿರುವೆನು. ಇಂದು ನಾನು ಪ್ರವಾ ಮತ್ತು ಅವರ ಪರಿವಾರ(ಸಂಘಟನೆ) ದವರನ್ನು ಹೋಗಿ ಸೇರಲಿರುವೆನು".

ಹಾಶಿಮ್ ಬಿನ್ ಉತ್ಬಾರ ಕೈಯಲ್ಲಿ ಧ್ವಜವನ್ನು ಕಂಡಾಗ, "ಓ ಹಾಶಿಮ್! ಮ ಸಾಗಿರಿ. ಸ್ವರ್ಗವು ಖಡ್ಗಗಳ ನೆರಳಿನಡಿಯಲ್ಲಿದೆ. ಮರಣವು ಈಟಿಗಳ ಅಂಚಿನಲ್ಲಿದೆ. ಸ್ವ ಬಾಗಿಲುಗಳು ತೆರೆಯಲ್ಪಟ್ಟಿವೆ. ಸ್ವರ್ಗ ಕನ್ಯೆಯರು ಕಾಯುತ್ತಿದ್ದಾರೆ" ಎಂದು ಹೇಳಿ

ಹೀಗೆ ಹೇಳಿ ಹೋರಾಡುತ್ತಿದ್ದಾಗ ಓರ್ವ ಸಿರಿಯನ್ ಸಿಪಾಯಿ ಅವರನ್ನು ಈಟಿಯ ತಿವಿದು ಕೆಳಗೆ ಬೀಳಿಸಿದ. ಇನ್ನೋರ್ವನು ಬಂದು ಅವರ ರುಂಡವನ್ನು ದೇಹದಿ ಬೇರ್ಪಡಿಸಿದ. ಅವರನ್ನು ವಧಿಸಿದ ಸುದ್ದಿಯನ್ನು ಮುಆವಿಯಾರಿಗೆ ತಲಪಿಸಿದಾಗ, ಅಮ್ರ್ ಬಿನ್ ಆಸ್ ಮತ್ತು ಅವರ ಪುತ್ರ ಅಬ್ದುಲ್ಲಾ ಬಿನ್ ಅಮ್ರ್(ರ) ಉಪಸ್ಥಿತರಿದ್ದ ಅಮ್ಮಾರ್‌ರನ್ನು ಬಂಡುಕೋರ ಗುಂಪೊಂದು ವಧಿಸುವುದೆಂಬ ಪ್ರವಾದಿ ನುಡಿಯ ಅಬ್ದುಲ್ಲಾರು ಮುಆವಿಯಾರಿಗೂ ತನ್ನ ತಂದೆ ಅಮ್ರ್‌ರಿಗೂ ನೆನಪಿಸಿದಾಗ ಮುಆವಿ ಹೀಗೆಂದರು- ಅಮ್ಮಾರ್‌ರನ್ನು ವಧಿಸಿದವರು ನಾವೋ? ಅವರನ್ನಂತೂ ಅವರನ್ನು ರಣರಂ ತಂದವರು ವಧಿಸಿದರು. ಅವರ ಸೂಚನೆಯು ಅಲೀಯವರ ಕಡೆಗಾಗಿತ್ತು. ಏಕೆಂ ಅಮ್ಮಾರ್ ಅಲೀಯವರ ಬೆಂಬಲದಲ್ಲಿ ಹೋರಾಡಿ ಮಡಿದಿದ್ದರು. ಅಮ್ಮಾರ್ ಹುತಾತ್ಮ ಸುದ್ದಿ ತಿಳಿದಾಗ ಹ. ಅಲೀಯವರು ಕಣ್ಣೀರು ಸುರಿಸಿದರು. ಅವರ ಪಾರ್ಥಿವ ಶರೀರವ ರಣರಂಗದಿಂದ ತಂದಾಗ ಅವರ ಬಳಿ ನಿಂತು ಅವರು ಹೀಗೆಂದರು, "ಅಮ್ಮಾ ಸತ್ಯವಿಶ್ವಾಸ ಸ್ವೀಕರಿಸಿದಂದು ಅಲ್ಲಾಹನು ಅವರ ಮೇಲೆ ಕರುಣೆ ತೋರಿದನು. ಅ ಹುತಾತ್ಮರಾದಾಗ ಅಲ್ಲಾಹನು ಅವರ ಮೇಲೆ ಕರುಣೆ ತೋರಿದನು. ಅವರು ಪ ಎಬ್ಬಿಸಲ್ಪಡುವ ದಿನವೂ ಅಲ್ಲಾಹನು ಅವರ ಮೇಲೆ ಕರುಣೆ ತೋರುವನು. ನಾನು ಅವರ ಪ್ರವಾದಿವರ್ಯರ(ಸ) ಜೊತೆಯಲ್ಲಿ ಕೇವಲ ನಾಲ್ಕೈದು ಮಂದಿ ಇಸ್ಲಾಮ್ ಸ್ವೀ ಮಾಡಿದ್ದನ್ನು ಘೋಷಿಸಿದಂದಿನಿಂದ ನೋಡುತ್ತಾ ಇದ್ದೇನೆ. ಅವರು ಕ್ಷಮಿಸಲ್ಪಡುವರೆ ಬಗ್ಗೆ ಹಿರಿಯ ಸಹಾಬಿಗಳಲ್ಲಿ ಯಾರಿಗೂ ಭಿನ್ನಾಭಿಪ್ರಾಯವಿರಲಾರದು. ಅಮ್ಮಾರ್ ಮ ಸತ್ಯದ ನಂಟು ಅಭೇದ್ಯ. ಅವರ ಹಂತಕ ಖಂಡಿತ ನರಕ ವಾಸಿ."

## ಮನೆ ಕೆಲಸ ಮಾಡುವ ರಾಜ್ಯಪಾಲ

ಹ. ಅಮ್ಮಾರ್ ಬಿನ್ ಯಾಸಿರ್(ರ) ದೀರ್ಘ ಕಾಲದ ವರೆಗೆ ಪ್ರವಾದಿ ಮುಹಮ್ಮದ್‌ರ ಜೊತೆಯಲ್ಲೇ ಜೀವಿಸಿ ನೇರವಾಗಿ ಅವರಿಂದ ಬೋಧನೆ ಪಡೆಯುತ್ತಿದ್ದರು. ಅವರು ಧಾಮಿ ಜ್ಞಾನದ ವಿಷಯದಲ್ಲಿ ಉನ್ನತ ಪದವಿಯಲ್ಲಿದ್ದರು. ಅವರು ಮಿತಭಾಷಿಯಾಗಿದ್ದ ಯಾರೊಂದಿಗೂ ಹೆಚ್ಚು ಮಾತನಾಡುತ್ತಿರಲಿಲ್ಲ. ಪ್ರವಾದಿ ವಚನಗಳನ್ನು ವರದಿ ಮಾಡ ವಿಷಯದಲ್ಲಿ ಬಹಳ ಜಾಗರೂಕತೆ ವಹಿಸುತ್ತಿದ್ದರು. ಆದುದರಿಂದ ಅಮ್ಮಾರ್‌ರು(ರ) ವ ಮಾಡಿರುವ ಹದೀಸ್‌ಗಳ ಸಂಖ್ಯೆ ಕೇವಲ 62. ಹದೀಸ್ ವರದಿಗಾರರ ನಾಲ್ಕನೇ ಶ್ರೇಣಿಯ

ೆ ಹೆಸರು ಬರುತ್ತದೆ.

ಅಮ್ಮಾರ್‌ರ ಜೀವನವು ಬಹುಮುಖಿ ವೈಶಿಷ್ಟ್ಯಗಳನ್ನು ಹೊಂದಿದೆ. ಇಸ್ಲಾಮ್ ಿಸಿದ ಪ್ರಥಮರಲ್ಲಿ ಅವರು ಸೇರುತ್ತಾರೆ. ಸಹನಶೀಲತೆ, ಧರ್ಮನಿಷ್ಠೆ, ಆರಾಧನೆಯಲ್ಲಿ ನತೆ, ಸರಳತೆ, ನಯವಿನಯ, ಪ್ರವಾದಿ ಪ್ರೇಮ ಮತ್ತು ತ್ಯಾಗ ಸನ್ನದ್ಧತೆಯಲ್ಲಿ ಅವರು ಪಮರಾಗಿದ್ದರು. ಸತ್ಯಸ್ವೀಕಾರ ಮಾಡುವುದೆಂದರೆ ಖಡ್ಗದ ಮುಂದೆ ಕೊರಳೊಡ್ಡುವುದಕ್ಕೆ ನವಾಗಿದ್ದಂತಹ ಕಾಲದಲ್ಲಿ ಅವರು ಇಸ್ಲಾಮ್ ಸ್ವೀಕರಿಸಿದರು. ಸತ್ಯ ಮಾರ್ಗದಲ್ಲಿ ಅವರ ೆ ಎಸಗಲಾದ ಹಿಂಸೆ, ದೌರ್ಜನ್ಯಗಳ ಕಥೆ ಓದಿದರೆ ಮೈ ಜುಮ್ಮೆನಿಸುತ್ತದೆ. ದಿವರ್ಯರ ಮೇಲೆ ಅವರಿಗಿದ್ದ ಪ್ರೀತಿ ಎಷ್ಟೆಂದರೆ ಪ್ರವಾದಿವರ್ಯರಿಗಾಗಿ ಜೀವತ್ಯಾಗಕ್ಕೂ ು ಸಿದ್ಧರಾಗಿದ್ದರು. ಈ ಗಾಢ ಪ್ರೇಮದಿಂದಾಗಿ ಪ್ರವಾದಿವರ್ಯರು ಅಮ್ಮಾರ್‌ರ ಬಗ್ಗೆ ಷ ಗಮನ ಹರಿಸುತ್ತಿದ್ದರು.

ಬದ್ರ್ ಯುದ್ಧದಲ್ಲಿ ಅಬೂಜಹಲ್ ವಧಿಸಲ್ಪಟ್ಟಾಗ ಪ್ರವಾದಿ(ಸ) ಅಮ್ಮಾರ್‌ರನ್ನು ು, ನಿಮ್ಮ ತಾಯಿಯನ್ನು ವಧಿಸಿದವನನ್ನು ಅಲ್ಲಾಹನು ವಧಿಸಿದನು (ಅರ್ಥಾತ್ ಸೇಡು ಸಿದನು) ಎಂದು ಹೇಳಿದರು.

ದೇವ ಭಯ ಮತ್ತು ಆರಾಧನೆಗಳಲ್ಲಿ ತನ್ಮಯತೆ ಅಮ್ಮಾರ್‌ರ ವೈಶಿಷ್ಟ್ಯಗಳಾಗಿದ್ದುವು. ು ಹರಾಮ್ (ನಿಷಿದ್ಧ) ನಿಂದ ಮಾತ್ರ ದೂರ ಉಳಿಯುತ್ತಿದ್ದುದಲ್ಲ, ಸಂದೇಹಾಸ್ಪದ ುಗಳನ್ನೂ ವರ್ಜಿಸುತ್ತಿದ್ದರು. ಒಮ್ಮೆ ಪ್ರವಾದಿಯವರು(ಸ) ಹೀಗೆ ಹೇಳಿರುವುದಾಗಿ (ರ) ವರದಿ ಮಾಡುತ್ತಾರೆ- "ಅಮ್ಮಾರ್‌ರ ಮೂಳೆ ಮೂಳೆಯಲ್ಲೂ ಈಮಾನ್ ಬಿದೆ". ಅಡಿಯಿಂದ ಮುಡಿ ತನಕ ಅವರು ಸತ್ಯವಿಶ್ವಾಸದಿಂದ ತುಂಬಿದ್ದರೆಂದೂ ದಿ(ಸ) ಹೇಳಿರುವುದಾಗಿ ಅಬ್ದುಲ್ಲಾ ಬಿನ್ ಅಬ್ಬಾಸ್‌ರ(ರ) ವರದಿಯಿದೆ. ಅದೇ ರೀತಿ ನಸ್(ರ) ಈ ರೀತಿ ವರದಿ ಮಾಡಿರುತ್ತಾರೆ, "ಖಂಡಿತವಾಗಿಯೂ ಸ್ವರ್ಗವು ಈ ನಾಲ್ಕು ದಿಗಾಗಿ ಹಂಬಲಿಸುತ್ತಿದೆ- ಸಲ್ಮಾನ್, ಅಲೀ, ಮಿಕ್ದಾದ್ ಮತ್ತು ಅಮ್ಮಾರ್(ರ)".

ಅವರು ಐದು ಹೊತ್ತಿನ ನಮಾಝ್‌ಗಳನ್ನು ನಿಷ್ಠೆಯಿಂದ ಪಾಲಿಸುತ್ತಿದ್ದರಲ್ಲದೆ, ಕಾಲದ ಹೆಚ್ಚಿನ ವೇಳೆಯನ್ನು ಐಚ್ಛಿಕ (ತಹಜ್ಜುದ್) ನಮಾಝ್‌ಗಳಿಗಾಗಿಯೂ ಸ್ಮರಣೆಗಳಿಗಾಗಿಯೂ ವಿನಿಯೋಗಿಸುತ್ತಿದ್ದರು. ಕುರ್‌ಆನ್‌ನಲ್ಲಿರುವ ಈ ಕೆಳಗಿನ ್ತವು ಅಮ್ಮಾರ್‌ರ ಕುರಿತೇ ಅವತೀರ್ಣಗೊಂಡಿತ್ತೆಂದು ಅಬ್ದುಲ್ಲಾ ಬಿನ್ ಅಬ್ಬಾಸ್ ುತ್ತಾರೆ-

(ಸತ್ಯನಿಷೇಧಿಯ ನಿಲುಮೆ ಸರಿಯಾದುದೋ ಅಥವಾ) ಆಜ್ಞಾಪಾಲಕನಾಗಿರುವ, ರಾತ್ರಿಯ ಗಳಲ್ಲಿ (ನಮಾಝ್‌ಗಾಗಿ) ನಿಲ್ಲುವ, ಸಾಷ್ಟಾಂಗವೆರಗುವ, ಪರಲೋಕವನ್ನು ಭಯ ವ ಮತ್ತು ತನ್ನ ಪ್ರಭುವಿನ ಕೃಪೆಯನ್ನು ನಿರೀಕ್ಷಿಸುವ ವ್ಯಕ್ತಿಯ ನಿಲುಮೆ ಸರಿಯೊ? ಝುಮರ್: 9) ಎಂತಹ ಕಠಿಣ ಅವಸ್ಥೆಯಲ್ಲೂ ಅವರು ನಮಾಝ್ ಉಪೇಕ್ಷಿಸುತ್ತಿರಲಿಲ್ಲ. ್ಮ ಪ್ರಯಾಣದಲ್ಲಿದ್ದರು. ಅಮ್ಮಾರ್‌ರಿಗೆ ಸ್ನಾನದ ಅಗತ್ಯ ತಲೆದೋರಿತು. ನೀರು

ಸಿಗಲಿಲ್ಲ. ಆಗ ಅವರು ನೆಲದ ಮೇಲೆ ಹೊರಳಾಡಿ ನಮಾಝ್ ಮಾಡಿದರು. ಮದೀ ಮರಳಿ ಪ್ರವಾದಿವರ್ಯರಲ್ಲಿ ಈ ವಿಷಯ ತಿಳಿಸಿದಾಗ, ಸ್ನಾನದ ಅಗತ್ಯವಿರು ತಯಮ್ಮುಮ್ ಮಾಡಿದರೆ ಸಾಕಾಗುತ್ತಿತ್ತು ಎಂದು ಪ್ರವಾದಿ(ಸ) ಹೇಳಿದರು.

ಒಮ್ಮೆ ಒಬ್ಬ ವ್ಯಕ್ತಿ ಉಮರ್ ಫಾರೂಕ್‌ರ(ರ) ಬಳಿಗೆ ಬಂದು, ನನಗೆ ಕಡ್ಡಾಯವಾಗಿದೆ. ನೀರು ಸಿಗುತ್ತಿಲ್ಲ, ಏನು ಮಾಡಲಿ ಎಂದು ಕೇಳಿದರು. ಆಗ ಅಮ್ಮಾರ್ ಬಿನ್ ಯಾಸಿರ್ ಇದ್ದರು. ಅವರು ಉಮರ್‌ರೊಡನೆ ಹೀಗೆ ಹೇಳಿದರು- ನಿ ನೆನಪಿಲ್ಲವೇ? ನಾವಿಬ್ಬರೂ ಒಂದು ಪ್ರಯಾಣದಲ್ಲಿ ಜೊತೆಗಿದ್ದೆವು. (ನಮಗಿಬ್ಬರಿಗೂ ಕಡ್ಡಾಯವಾಗುವ ಸ್ಥಿತಿಯುಂಟಾಯಿತು) ಆಗ ತಾವು ನಮಾಝ್ ಮಾಡಿದಿರಿ. ನಾನಾದ ನೆಲದ ಮೇಲೆ ಬಿದ್ದು ಹೊರಳಾಡಿದೆ. (ಏಕೆಂದರೆ ಜನಾಬತ್‌ನವನು ಹೀಗೆ ಮಾಡಿ ಸ್ನಾನವಾಗುತ್ತದೆಂದು ನಾನು ಭಾವಿಸಿದ್ದೆ) ಅನಂತರ ಪ್ರಯಾಣದಿಂದ ಮರಳಿದ ಬಳಿಕ ನ ಪ್ರವಾದಿವರ್ಯರಲ್ಲಿ ಈ ವಿಷಯ ಪ್ರಸ್ತಾಪಿಸಿದೆ. ಆಗ ಪ್ರವಾದಿ(ಸ) ಹೇಳಿದರು- ( ಶರೀರವನ್ನು ಈ ರೀತಿ ನೆಲದಲ್ಲಿ ಹೊರಳಾಡಿಸುವ ಅಗತ್ಯವಿರಲಿಲ್ಲ) "ನೀವು ಹೀಗೆ ಮಾಡಿ ಸಾಕಿತ್ತು". ಹೀಗೆ ಹೇಳಿ ಪ್ರವಾದಿವರ್ಯರು ತಮ್ಮ ಅಂಗೈಗಳನ್ನು ನೆಲಕ್ಕೆ ಬಡಿದ ಅನಂತರ ಕೈಗೆ ಊದಿದರು (ಧೂಳು ಕೈಯಿಂದ ಹೋಗಲಿಕ್ಕಾಗಿ). ತರುವಾಯ ಎರ ಕೈಗಳನ್ನು ತಮ್ಮ ಮುಖ ಮತ್ತು ಕೈಗಳಿಗೆ ಸವರಿದರು.

ಅಮ್ಮಾರ್(ರ) ಜುಮಾ ಖುತ್ಬಾ ಮಾಡುವುದಕ್ಕಿಂತ ಮುಂಚೆ ಮಿಂಬರ್ ಕುಳಿತು ಸಾಮಾನ್ಯವಾಗಿ ಯಾಸೀನ್ ಅಧ್ಯಾಯವನ್ನು ಪಠಿಸುತ್ತಿದ್ದರು. ಪ್ರವಚ ಸಂಕ್ಷಿಪ್ತವಾಗಿರುತ್ತಿದ್ದರೂ ಗಹನವೂ ಸಮಗ್ರವೂ ಆಗಿರುತ್ತಿತ್ತು. ಪ್ರವಚನವ ಸಂಕ್ಷಿಪ್ತಗೊಳಿಸುವುದರ ಬಗ್ಗೆ ಓರ್ವ ವ್ಯಕ್ತಿ ಅವರನ್ನೊಮ್ಮೆ ಆಕ್ಷೇಪಿಸಿದಾಗ ಹೀಗೆಂದ ನಮಾಝನ್ನು ದೀರ್ಘಗೊಳಿಸುವುದು ಮತ್ತು ಪ್ರವಚನವನ್ನು ಸಂಕ್ಷಿಪ್ತಗೊಳಿಸುವುದು ಒ ವ್ಯಕ್ತಿಯ ಧೀಮಂತಿಕೆಯ ಸಂಕೇತವೆಂದು ಪ್ರವಾದಿ(ಸ) ಹೇಳಿದ್ದಾರೆ.

ಅವರು ಸರಳತೆ, ನಯ ವಿನಯ ಮತ್ತು ಸಂತೃಪ್ತಿಯ ಸಾಕಾರಮೂರ್ತಿಯಾಗಿದ್ದ ಜೀವಮಾನದಲ್ಲಿ ಯಾವುದೇ ಮನೆ ಕಟ್ಟಿಸಲಿಲ್ಲ. ಒಮ್ಮೆ ಅಬ್ದುಲ್ಲಾ ಬಿನ್ ಮಸ್‌ಊದ್ ಅವರು ಒಂದು ಮನೆ ಕಟ್ಟಿಸಿದರು. ಅದನ್ನು ತೋರಿಸಲು ಅಮ್ಮಾರ್‌ರನ್ನು ಕರೆದುಕೊ ಹೋದಾಗ, ಗಟ್ಟಿ ಮುಟ್ಟಾದುದನ್ನು ನಿರ್ಮಿಸಿದ್ದೀರಿ. ದೀರ್ಘ ಜೀವನದ ನಿರೀಕ್ಷೆಯಿರಿಸಿರುವ ಕಾಣುತ್ತದೆ ಎಂದರು.

ಉಮರ್ ಫಾರೂಕ್‌ರ(ರ) ಆಡಳಿತ ಕಾಲದಲ್ಲಿ ಕೂಫಾದ ರಾಜ್ಯಪಾಲರಾಗಿದ ಅಗತ್ಯದ ವಸ್ತುಗಳನ್ನು ಪೇಟೆಯಿಂದ ಖರೀದಿಸಿ ತಾನೇ ಹೊತ್ತು ತರುತ್ತಿದ್ದರು. ಮನೆ ಕೆಲಸಗಳನ್ನೂ ತಾನೇ ಮಾಡುತ್ತಿದ್ದರು. ಅವರ ಉಡುಪು ಸರಳವಾಗಿರುತ್ತಿತ್ತು. ಹರಿದರೆ ತ ಹಾಕಿ ಧರಿಸಲು ನಾಚಿಕೆ ಪಡುತ್ತಿರಲಿಲ್ಲ. ಬಹಳ ಸಂಯಮಿಯೂ ಸಹನಶೀಲರೂ ಆಗಿದ್ದ ಒಮ್ಮೆ ಓರ್ವನು ಅವರನ್ನು ಕೆಣಕಲಿಕ್ಕಾಗಿ, 'ಕಿವಿ ಮುರಿದವನೇ' ಎಂದು ಕರೆದನು.

ು ಬಹಳ ತಾಳ್ಮೆಯೊಂದಿಗೆ, 'ಸ್ವಸ್ಥ ಕಿವಿಯವನೇ, ನನ್ನನ್ನೇಕೆ ಮೂದಲಿಸುತ್ತಿ? ನನ್ನ ು ಅಲ್ಲಾಹನ ಮಾರ್ಗದಲ್ಲಿ ಮುರಿದಿದೆ' ಎಂದು ಉತ್ತರಿಸಿದರು.

ಅವರಿಗೆ ಹ.ಅಲೀಯವರೊಂದಿಗೆ ಗಾಢ ಪ್ರೀತಿಯಿತ್ತು. ಅವರನ್ನು ಯಾರಾದರೂ ೆ ಸಹಿಸುತ್ತಿರಲಿಲ್ಲ. ಸತ್ಯವೆಂದು ಬಗೆದುದರಲ್ಲಿ ಸ್ಥಿರವಾಗಿರುತ್ತಿದ್ದರು. ಅದಕ್ಕಾಗಿ ಯಾವ ಯವನ್ನೂ ಸಂಕಷ್ಟವನ್ನೂ ಲೆಕ್ಕಿಸುತ್ತಿರಲಿಲ್ಲ. ಪ್ರತಿಯೊಂದು ಕೆಲಸದಲ್ಲೂ ತನಗೆ ಹನ ಸಂಪ್ರೀತಿ ಲಭಿಸಬೇಕೆಂಬುದೇ ಅವರ ಬಯಕೆಯಾಗಿತ್ತು. ಲೌಕಿಕ ಲಾಭಗಳತ್ತ ೂ ಕಣ್ಣೆತ್ತಿ ನೋಡಿದವರಲ್ಲ. ಅವರು ನಿಧನರಾದಾಗ ಹ.ಅಲೀ ತುಂಬಾ ಅತ್ತರು. ಜನಾಝಾ ನಮಾಝ್‌ನ ನೇತೃತ್ವ ವಹಿಸಿದರು. ಅವರ ಪಾರ್ಥಿವ ಶರೀರವನ್ನು ಂದಲ್ಲಿ ದಫನ ಮಾಡಲಾಯಿತು. ಅಲ್ಲಾಹನು ಅವರಿಂದ ಸಂತುಷ್ಟನಾಗಲಿ.

# ಹ. ಮುಸ್‌ಅಬ್ ಬಿನ್ ಉಮೈರ್(ರ)

## ಮಕ್ಕಾದ ಸ್ಫುರದ್ರೂಪಿ ಯುವಕ

ಹ. ಮುಸ್‌ಅಬ್ ಬಿನ್ ಉಮೈರ್(ರ) ಮಕ್ಕಾ ಪಟ್ಟಣದ ಓರ್ವ ಸುಂದರ ಯು ಅವರು ಅತ್ಯುನ್ನತ ದರ್ಜೆಯ ಬಟ್ಟೆಬರೆಗಳನ್ನು ಧರಿಸುತ್ತಿದ್ದರು. ಬೆಲೆಬಾಳುವ ಸುಗ ದ್ರವ್ಯವನ್ನು ಪೂಸಿದ ಪೋಷಾಕು ಧರಿಸಿ ಮಕ್ಕಾದ ಬೀದಿಯಲ್ಲಿ ಸಂಚರಿಸಿದರೆ ಇ ವಾತಾವರಣವೇ ಘಮ ಘಮವಾಗುತ್ತಿತ್ತು. ತಂದೆ ಉಮೈರ್ ಮತ್ತು ತಾಯಿಯ ಹೆ ಹನ್ನಾಸ್ ಬಿನ್ತಿ ಮಾಲಿಕ್ ಎಂದಾಗಿತ್ತು. ಹೆತ್ತವರು ಬಹಳ ಸಿರಿವಂತರಾಗಿದ್ದರು. ತ ಪುತ್ರನನ್ನು ಪ್ರೀತಿ-ವಾತ್ಸಲ್ಯಗಳ ಧಾರೆಯೆರೆದು ಪೋಷಿಸಿದ್ದರು. ಪ್ರವಾದಿಯವರು(ಸ) ಮುಸ್‌ಅ ಕುರಿತೆಂದಾದರೂ ಪ್ರಸ್ತಾಪಿಸುವಾಗ, "ಮಕ್ಕಾದಲ್ಲಿ ಮುಸ್‌ಅಬ್‌ರಿಗಿಂತ ಸ್ಫುರದ್ರೂಪಿ ಯು ಯಾರೂ ಇರಲಿಲ್ಲ" ಎಂದು ಹೇಳುತ್ತಿದ್ದರು.

ಮುಸ್‌ಅಬ್ ಬಿನ್ ಉಮೈರ್‌ರಿಗೆ ಅಲ್ಲಾಹನು ಸುಂದರ ವ್ಯಕ್ತಿತ್ವವನ್ನು ನೀಡಿರುವಂತೆ ಪರಿಶುದ್ಧ ಹೃದಯವನ್ನೂ ನೀಡಿದ್ದನು. ಆದುದರಿಂದಲೇ ತೌಹೀದ್‌ನ ಒಂದೇ ಪ್ರಹಾರದಿ ಅವರ ಮನದಲ್ಲಿ ಶಿರ್ಕ್ ಅಥವಾ ಬಹುದೇವಾರಾಧನೆಯ ಬಗ್ಗೆ ತಿರಸ್ಕಾರ ಮೂಡಿ ಪ್ರವಾದಿಯವರ(ಸ) ಸನ್ನಿಧಿಗೆ ಬಂದು ಇಸ್ಲಾಮ್ ಸ್ವೀಕರಿಸಿದರು. ಅದು ಇಸ್ಲಾಮಿನ ಮ ಅತ್ಯಂತ ಅಪಾಯಕಾರಿಯಾದ ಕಾಲಘಟ್ಟವಾಗಿತ್ತು. ಪ್ರವಾದಿಯವರು(ಸ) ಅರ್ಕಮ ಮನೆಯಲ್ಲಿ ಧರ್ಮಬೋಧನೆಯ ಕಾರ್ಯ ನಿರ್ವಹಿಸುತ್ತಿದ್ದರು. ಕೆಲವೇ ಮಂದಿ ಅನುಯಾಯಿ ಅವರ ಜೊತೆಯಲ್ಲಿದ್ದರು. ಮುಸ್ಲಿಮರ ಮಟ್ಟಿಗೆ ಮಕ್ಕಾದ ನೆಲವು ಅಗ್ನಿಪರೀಕ್ಷೆ ಆಗರವಾಗಿತ್ತು. ಆದುದರಿಂದ ಮುಸ್‌ಅಬ್ ಬಿನ್ ಉಮೈರ್ ತಮ್ಮ ಇಸ್ಲಾಮ ಬಹಿರಂಗಗೊಳಿಸಲಿಲ್ಲ. ಅವರು ಆಗಾಗ ಯಾರಿಗೂ ತಿಳಿಯದಂತೆ ಗುಪ್ತವ ಪ್ರವಾದಿವರ್ಯರನ್ನು ಭೇಟಿಯಾಗುತ್ತಿದ್ದರು.

ಒಂದು ದಿನ ಮುಸ್‌ಅಬ್ ಬಿನ್ ಉಮೈರ್ ನಮಾಝ್ ಮಾಡುವುದನ್ನು ಅಕಸ್ಮಾ ಕಂಡ ಉಸ್ಮಾನ್ ಬಿನ್ ತಲ್ಹಾ, ಈ ಸುದ್ದಿಯನ್ನು ಅವರ ತಾಯಿಗೂ ಕುಟುಂಬದವರಿ ಮುಟ್ಟಿಸಿಬಿಟ್ಟರು. ಇದರಿಂದ ಕುಪಿತರಾದ ಹೆತ್ತವರ ಈ ವರೆಗಿನ ಪ್ರೀತಿ, ವಾತ್ಸಲ್ಯಗಳ ಒಮ್ಮೆಗೇ ಮಾಯವಾದುವು. ಅವರು ಮುಸ್‌ಅಬ್‌ರನ್ನು ದ್ವೇಷಿಸತೊಡಗಿದರು. ಮಾತ್ರವ ಅವರಿಗೆ ಗೃಹಬಂಧನದ ಶಿಕ್ಷೆ ವಿಧಿಸಿದರು. ಬಂಧನದ ವೇಳೆ ಅವರನ್ನು ತರತರವ

ಸಲಾಯಿತು. ಅವರು ಅದೆಲ್ಲವನ್ನೂ ಸಹಿಸಿಕೊಂಡರು. ಆದರೆ ಸೆರೆವಾಸದ ಕರಾಳ ತವು ಅವರನ್ನು ಊರು ಬಿಡುವಂತೆ ಮಾಡಿತು. ಶಾಂತಿ ಸಮಾಧಾನ ಅರಸಿ ಯೋಪಿಯಾಕ್ಕೆ ವಲಸೆ ಹೋಗುವವರ ಕೂಟದಲ್ಲಿ ಅವರೂ ಸೇರಿಕೊಂಡರು.

ಈಗ ಅವರಿಗೆ ಆಡಂಬರದ ಪೋಷಾಕಿನ ಚಿಂತೆಯಾಗಲೀ ಅಮೂಲ್ಯ ಸುಗಂಧ ಗಳ ಬಗ್ಗೆ ಆಸಕ್ತಿಯಾಗಲೀ ಲೌಕಿಕ ಬೆಡಗುಬಿನ್ನಾಣಗಳ ಆಗ್ರಹವಾಗಲೀ ಇರಲಿಲ್ಲ. ೀದ್‌ನ ಪ್ರಕಾಶ ಕಿರಣವೊಂದು ಅದೆಲ್ಲವನ್ನೂ ತ್ಯಾಗ ಮಾಡುವಂತೆ ಅವರನ್ನು ೀಪಿಸಿತ್ತು. ನಶ್ವರವಾದ ಈ ಲೋಕ ಜೀವನವು ಅವರಿಗೆ ತೃಣ ಸಮಾನವಾಗಿ ಕಂಡಿತು. ತ ಪರಲೋಕದ ಸುಖಭೋಗಗಳಲ್ಲೇ ಅವರ ದೃಷ್ಟಿ ನೆಟ್ಟಿತು. ಒಟ್ಟಿನಲ್ಲಿ ಕೆಲವು ಕಾಲ ಯೋಪಿಯಾದಲ್ಲಿ ಕಳೆದು ಪುನಃ ಮಕ್ಕಾಕ್ಕೆ ಮರಳಿದರು. ಹಿಜ್ರತ್‌ನ ಸಂಕಷ್ಟಗಳಿಂದಾಗಿ ಸುಂದರ ಶರೀರವು ಈಗ ಕೃಶವಾಗಿತ್ತು. ಸ್ವತಃ ಅವರ ತಾಯಿಗೆ ಅವರನ್ನು ಡಲಾಗಲಿಲ್ಲ. ಅವರ ಮೇಲೆ ಆಕೆಗೆ ಕರುಣೆ ಬಂತು. ಪೀಡಿಸುವುದನ್ನು ಆಕೆ ಬಿಟ್ಟು ಟು.

ಈ ಮಧ್ಯೆ ಇಸ್ಲಾಮಿನ ಪ್ರಕಾಶವು ಮಕ್ಕಾದ ಬೆಟ್ಟಗುಡ್ಡಗಳಿಂದ ಮದೀನಾದತ್ತ ಹರಿಯ ಗಿತ್ತು. ಮದೀನಾದ ನಿವಾಸಿಗಳ ಗಣ್ಯ ವಿಭಾಗವೊಂದು ಇಸ್ಲಾಮ್ ಸ್ವೀಕಾರ ಮಾಡಿತ್ತು. ಪ್ರವಾದಿಯವರ ಸನ್ನಿಧಾನಕ್ಕೆ ಮನವಿಯೊಂದನ್ನು ಕಳಿಸಿ ತಮಗೆ ಶಿಕ್ಷಣ ತರಬೇತಿ ಲಿಕ್ಕಾಗಿ ಯಾರನ್ನಾದರೂ ನೇಮಿಸಬೇಕೆಂದು ವಿನಂತಿಸಿದರು. ಪ್ರವಾದಿವರ್ಯರ(ಸ) ಯಲ್ಲಿ ಮುಸ್‌ಅಬ್ ಬಿನ್ ಉಮೈರ್‌ರಿಗಿಂತ ಸೂಕ್ತ ವ್ಯಕ್ತಿ ಈ ಕಾರ್ಯಕ್ಕಾಗಿ ಬೇರಾರೂ ಲ್ಲ. ಆದುದರಿಂದ ಅವರನ್ನೇ ಮದೀನಾಕ್ಕೆ ರವಾನಿಸಿದರು. ಮದೀನಾದಲ್ಲಿ ಅವರು ಅದ್ ಬಿನ್ ಝುರಾರರ(ರ) ಮನೆಯಲ್ಲಿ ತಂಗಿದರು. ಅಲ್ಲಿಂದ ಮನೆಮನೆಗೆ ತೆರಳಿ ಮಿನ ಸಂದೇಶ ಪ್ರಚಾರ ಕಾರ್ಯದಲ್ಲಿ ನಿರತರಾದರು. ಈ ರೀತಿ ಸತ್ಯವಿಶ್ವಾಸಿಗಳ ಸಂಖ್ಯೆ ಸತೊಡಗಿತು. ಅವರಿಗೆ ನಮಾಝ್ ಕಲಿಸಲಿಕ್ಕಾಗಿ ಮತ್ತು ಕುರ್‌ಆನ್‌ನ ಬೋಧನೆ ಲಿಕ್ಕಾಗಿ ಅವರನ್ನು ಕೆಲವೊಮ್ಮೆ ಅಸ್‌ಅದ್‌ರ ಮನೆಯಲ್ಲೂ ಇನ್ನು ಕೆಲವೊಮ್ಮೆ ಬನೀ ರ್‌ರ ಮನೆಯಲ್ಲೂ ಸೇರಿಸುತ್ತಿದ್ದರು.

ಒಂದು ದಿನ ಮುಸ್‌ಅಬ್ ಬಿನ್ ಉಮೈರ್ ಕೆಲವು ಸತ್ಯವಿಶ್ವಾಸಿಗಳಿಗೆ ಬನೀ ರ್‌ರ ಮನೆಯಲ್ಲಿ ಕುರ್‌ಆನ್‌ನ ಬೋಧನೆ ನೀಡುತ್ತಿದ್ದಾಗ, ಅಬ್ದುಲ್ ಅಶ್‌ಅಲ್ ಎಂಬ ತ್ರದ ಸರದಾರ ಸಅದ್ ಬಿನ್ ಮುಆದ್ ತನ್ನ ಸ್ನೇಹಿತ ಉಸೈದ್ ಬಿನ್ ಝೈರ್‌ರೊಂದಿಗೆ ಬಂದು ಹೀಗೆಂದರು, "ಈ ಇಸ್ಲಾಮಿನ ಪ್ರಚಾರಕನನ್ನು ನಿಮ್ಮ ಯಿಂದ ಓಡಿಸಬೇಕು. ಆತ ಇಲ್ಲಿನ ದುರ್ಬಲ ವಿಶ್ವಾಸಿಗಳ ಮನ ಕದಡಿಸಿ ದುರ್ಮಾರ್ಗದತ್ತ ಯುತ್ತಿದ್ದಾನೆ. ಅಸ್‌ಅದ್ ಬಿನ್ ಝುರಾರ (ಮುಸ್‌ಅಬ್‌ರ ಆತಿಥೇಯ)ರೊಂದಿಗೆ ನನ್ನ ುಂಬಿಕ ಸಂಬಂಧವಿಲ್ಲದಿರುತ್ತಿದ್ದರೆ ನಾನು ನಿಮ್ಮೊಂದಿಗೆ ಈ ಕೆಲಸ ಮಾಡುವಂತೆ ುತ್ತಿರಲಿಲ್ಲ. ನಾನೇ ಆತನನ್ನು ಅಟ್ಟುತ್ತಿದ್ದೆ."

ಈ ಮಾತನ್ನು ಕೇಳಿ ಉಸೈದ್ ಬಿನ್ ಹುಝೈರ್ ತನ್ನ ಈಟಿಯನ್ನು ಆನಿಸಿಕೊಂಡು

ನೇರವಾಗಿ ಮುಸ್‌ಅಬ್ ಮತ್ತು ಅಸ್‌ಅದ್‌ರ ಬಳಿಗೆ ಹೋಗಿ ಕರ್ಕಶವಾಗಿ ಹೀಗೆಂ "ನಿಮ್ಮನ್ನಿಲ್ಲಿಗೆ ಕರೆದವರು ಯಾರು? ದುರ್ಬಲ ವಿಶ್ವಾಸಿಗಳ ಮನಸ್ಸನ್ನು ಹಾಳು ಮಾಡುತ್ತಿ ನಿಮಗೆ ಜೀವ ಬೇಕಿದ್ದರೆ ಈಗಲೇ ಇಲ್ಲಿಂದ ಹೊರಟು ಹೋಗಬೇಕು. ಅನ್ಯಥ ಮುಸ್‌ಅಬ್ ಬಿನ್ ಉಮೈರ್ ಏನೂ ವಿಚಲಿತರಾಗದೆ ನಯವಾಗಿ ಹೀಗೆ ಉತ್ತರಿಸಿ "ಗಡಿ ಬಿಡಿ ಮಾಡಬೇಡಿರಿ. ನಮ್ಮ ಮಾತನ್ನು ಕೇಳಿ, ಇಷ್ಟವಾದರೆ ಒಪ್ಪಿಕೊಳ್ಳಿರಿ. ಇಲ್ಲವ ನಾವೇ ಇಲ್ಲಿಂದ ಹೋಗುತ್ತೇವೆ. ಉಸೈದ್ ತನ್ನ ಈಟಿಯನ್ನು ತೆಗೆದುಕೊಂ ಮುಸ್‌ಅಬ್‌ರ ಮಾತುಗಳನ್ನು ಗಮನವಿಟ್ಟು ಆಲಿಸತೊಡಗಿದರು.

ಮುಸ್‌ಅಬ್ ಬಿನ್ ಉಮೈರ್ ತನ್ನ ಈಟಿಯನ್ನು ಅಲ್ಲೇ ನೆಲಕ್ಕೆ ನಾಟಿ ಕುಳಿತುಕೊ ಕುರ್‌ಆನ್‌ನ ಕೆಲವು ಸೂಕ್ತಗಳನ್ನು ಮಧುರ ಕಂಠದಿಂದ ಪಾರಾಯಣ ಮಾಡಿದ ನ ಇಸ್ಲಾಮಿನ ಮೂಲಭೂತ ವಿಶ್ವಾಸ ಮತ್ತು ಅದರ ವೈಶಿಷ್ಟ್ಯಗಳನ್ನು ಮನ ಮುಟ್ಟು ವಿವರಿಸಿದರು. ಸ್ವಲ್ಪವೇ ಹೊತ್ತಿನಲ್ಲಿ ಉಸೈದರ ಮನ ಪರಿವರ್ತನೆಗೊಂಡಿತು. ಅ ತನಗರಿವಿಲ್ಲದಂತೆಯೇ, ಆಹಾ! ಎಂತಹ ಸುಂದರ ವಾಣಿ! ಎಂತಹ ಮಹಾನ್ ಧರ್ಮ! ಎಷ್ಟೊಂದು ಉತ್ತಮ ಎಂದು ಉದ್ಗರಿಸುತ್ತಾ "ಈ ಧರ್ಮದಲ್ಲಿ ಸೇರಬೇಕಾದರೆ ಮಾಡಬೇಕು?" ಎಂದು ಕೇಳಿದರು. ಶುದ್ಧ ಬಟ್ಟೆ ತೊಟ್ಟು ಬನ್ನಿ. ಅನಂತರ 'ಲಾ ಇ ಇಲ್ಲಲ್ಲಾಹು ಮುಹಮ್ಮದುರ್ರಸೂಲುಲ್ಲಾಹ್" ಎಂಬ ವಾಕ್ಯವನ್ನು ಶುದ್ಧ ಮನಸ್ಸಿನೊ ಉಚ್ಚರಿಸಿ"- ಮುಸ್‌ಅಬ್ ಉತ್ತರಿಸಿದರು. ಅವರು ಅದರಂತೆಯೇ ಮಾಡಿದರು. ಅನ ಅವರು, "ನನ್ನೊಂದಿಗೆ ಇನ್ನೊಬ್ಬ ವ್ಯಕ್ತಿಯಿದ್ದಾರೆ. ಅವರನ್ನೂ ಈ ಸತ್ಯಧರ್ಮಕ್ಕೆ ಆಹ್ವಾ ಬೇಕಾಗಿದೆ. ಒಂದು ವೇಳೆ ಅವರು ಈ ಧರ್ಮವನ್ನು ಸ್ವೀಕರಿಸಿದರೆ ಅಬ್ದುಲ್ ಅಶ್ ಗೋತ್ರದವರೆಲ್ಲರೂ ಅವರನ್ನು ಹಿಂಬಾಲಿಸುವರು. ನಾನು ಅವರನ್ನು ನಿಮ್ಮ ಬ ಕಳಿಸುತ್ತೇನೆ" ಎಂದು ಹೇಳುತ್ತಾ ಸಅದ್ ಬಿನ್ ಮುಆದ್‌ರ ಬಳಿಗೆ ನಡೆದರು.

## ಪ್ರಥಮ ಜುಮಾ ನಮಾಝ್ ಸ್ಥಾಪಿಸಿದ ವ್ಯಕ್ತಿ

ಹ. ಉಸೈದ್ ಬಿನ್ ಹುಝೈರ್(ರ) ಮುಸ್‌ಅಬ್ ಬಿನ್ ಉಮೈರ್‌ರನ್ನು ಊರಿನ ಹೊರಗಟ್ಟಲಿಕ್ಕಾಗಿ ಕೋಪದ ಕೆಂಡವಾಗಿ ಹೋಗಿದ್ದರು. ಆದರೆ ಅಲ್ಲಿಂದ ಅವರು ಪ್ರ ಸಂದೇಶದೊಂದಿಗೆ ಮರಳಿದರು. ಅವರನ್ನು ದೂರದಿಂದಲೇ ನೋಡಿದ ಸಅದ್ ಬ ಮುಆದ್, ದೇವನಾಣೆ! ಈ ವ್ಯಕ್ತಿಯ ಸ್ಥಿತಿಯೇ ಬದಲಾಗಿದೆ. ಇವರಲ್ಲಿ ಏನೋ ಒ ಕ್ರಾಂತಿಯುಂಟಾಗಿದೆ ಎಂದು ಹೇಳಿದರು. ಅವರು ಹತ್ತಿರ ಬಂದಾಗ,ಏನು ಮಾಡಿ ಬಂ ಎಂದು ಕೇಳಿದರು. ಆಗ ಅವರು ಹೀಗೆ ಉತ್ತರಿಸಿದರು- ದೇವನಾಣೆ! ಅವರಿಬ್ಬರೂ ಸ್ವಲ್ಪ ಹೆದರಲಿಲ್ಲ. ನಾನವರನ್ನು ಪ್ರಚಾರ ಕಾರ್ಯದಿಂದ ತಡೆದಾಗ ನಿಮ್ಮಿಷ್ಟದಂತೆಯೇ ಮಾಡು ಎಂದರು. ಆದರೆ ಬನೂ ಹಾರಿಸದವರು ಅಸ್‌ಅದ್ ಬಿನ್ ಝುರಾರರನ್ನು ಕೊಲೆ ಮಾ ಹೊರಟಿದ್ದಾರೆಂದು ನನ್ನೊಡನೆ ಹೇಳಿದರು. ಕಾರಣ ಅವರು ನಿಮ್ಮ ಚಿಕ್ಕಮ್ಮನ ಪುತ್ರನಲ್ಲ ಅದರ ಮೂಲಕ ನಿಮ್ಮನ್ನು ಅವಮಾನಿಸುವುದೇ ಅವರ ಉದ್ದೇಶ.

ಹಾರಿಸ ಮತ್ತು ಅಶ್‌ಅಲ್ ಗೋತ್ರಗಳ ಮಧ್ಯೆ ಬಹಳ ಕಾಲದಿಂದ ಹಗೆತನವಿತ್ತು. ದರಿಂದ ಇಲ್ಲಿ ಉಸೈದ್‌ರ ಉಪಾಯ ಫಲಿಸಿತು. ಸಅದ್ ಬಿನ್ ಮುಆದ್ ಪ್ರೋದ್ರಿಕ್ತರಾಗಿ ಅಸ್‌ಅದ್‌ರ ರಕ್ಷಣೆಗಾಗಿ ಹೊರಟರು. ಅವರ ಧರ್ಮ ಬೇರೆಯಾಗಿದ್ದರೂ ನ್ನವರು ಗಣನೆಗೆ ತೆಗೆಯಲಿಲ್ಲ. ಆದರೆ ಇಲ್ಲಿ ಬಂದು ನೋಡುವಾಗ ಸಂಪೂರ್ಣ ತಿ ನೆಲೆಸಿತ್ತು. ಆಗ ಇದು ಉಸೈದ್‌ರ ಉಪಾಯವೆಂದು ಅವರಿಗೆ ಮನವರಿಕೆಯಾಯಿತು. ಸ್‌ಅಬ್ ಬಿನ್ ಉಮೈರ್ ಮತ್ತು ಅಸ್‌ಅದ್ ಬಿನ್ ಝುರಾರರೊಡನೆ ತಾನು ನೇರವಾಗಿ ತುಕತೆ ನಡೆಸಬೇಕೆಂದು ಉಸೈದ್‌ರ ತಂತ್ರವೆಂದು ಅವರಿಗೆ ತಿಳಿಯಿತು. ಆದರೆ ಆಗ ಅವರ ಬಿಂಬಿಕ ಕರುಣೆ ಮಾಯವಾಯಿತು. ಅವರು ಅತ್ಯಂತ ಕಟು ಭಾಷೆಯಲ್ಲಿ ಹೀಗೆಂದರು, ಬೂ ಉಮಾಮ! ಕುಟುಂಬ ಸಂಬಂಧ ಅಡ್ಡಿಯಾಗದಿರುತ್ತಿದ್ದರೆ ನಾನು ನಿಮ್ಮೊಂದಿಗೆ ಳ ಕೆಟ್ಟದಾಗಿ ವರ್ತಿಸುತ್ತಿದ್ದೆ. ನಾವು ಮೆಚ್ಚದಂತಹ ನಂಬಿಕೆಗಳನ್ನು ನಮ್ಮ ಕೇರಿಯಲ್ಲಿ ಾರ ಪಡಿಸಲು ನಿಮಗೆ ಧೈರ್ಯ ಹೇಗೆ ಬಂತು?"

ಹ. ಮುಸ್‌ಅಬ್ ಬಿನ್ ಉಮೈರ್ ಶಾಂತಚಿತ್ತರಾಗಿ, ನಯವಾಗಿ ಹೀಗೆಂದರು: ಮ್ಮ ಮಾತನ್ನು ಆಲಿಸಿರಿ. ನಿಮಗೆ ಮೆಚ್ಚುಗೆಯಾದರೆ ಸ್ವೀಕರಿಸಿರಿ. ಅನ್ಯಥಾ ನಾವೇ ಂದ ಹೋಗುವೆವು. ಸಅದ್ ಬಿನ್ ಮುಆದ್ ಮುಸ್‌ಅಬ್‌ರ ಮಾತನ್ನು ಒಪ್ಪಿದರು. ರ ಮುಂದೆ ಇಸ್ಲಾಮಿನ ಒಳಿತುಗಳನ್ನು ತೆರೆದಿಟ್ಟು ವಿವರಿಸಿದಾಗ ಅವರ ಹೃದಯದಲ್ಲೂ ಪರ್ಾಟುಂಟಾಯಿತು. ಆ ಕೂಡಲೇ ಅವರು ಇಸ್ಲಾಮ್ ಸ್ವೀಕರಿಸಿದರು. ಅನಂತರ ಬಹಳ ತ್ಸಾಹದೊಂದಿಗೆ ತನ್ನ ಗೋತ್ರದವರ ಕಡೆಗೆ ಹೋದರು. ಗೋತ್ರದವರನ್ನು ಒಂದೆಡೆ ಸಿ, ನಾನು ನಿಮಗೆ ಏನಾಗಬೇಕು ಎಂದು ಕೇಳಿದರು. ಆಗ ಅವರೆಲ್ಲರೂ ಒಕ್ಕೊರಳಿನಿಂದ- ವು ನಮ್ಮ ಸರದಾರ, ಅತ್ಯುನ್ನತ ಕುಲಜಾತ ಮತ್ತು ಚಾಣಾಕ್ಷ ವ್ಯಕ್ತಿಯಾಗಿದ್ದೀರಿ" ಎಂದು ಳಿದರು. ಅವರ ಮಾತಿಗೆ ಸಅದ್ ಬಿನ್ ಮುಆದ್, "ದೇವನಾಣೆ! ನೀವು ಅಲ್ಲಾಹನ ಲೂ ಆತನ ಸಂದೇಶವಾಹಕರ ಮೇಲೂ ವಿಶ್ವಾಸ ತಾಳುವ ವರೆಗೆ ನಿಮ್ಮ ಗಂಡಸರೊಂದಿಗೂ ಗಸರೊಂದಿಗೂ ಮಾತಾಡುವುದು ನನಗೆ ನಿಷಿದ್ಧ" ಎಂದು ಹೇಳಿದರು. ಈ ರೀತಿ ಅವರ ತ ಪ್ರಭಾವದಿಂದಾಗಿ ಅಬ್ದುಲ್ ಅಶ್‌ಅಲ್‌ನ ಎಲ್ಲ ಮನೆತನದವರೂ ಇಸ್ಲಾಮಿನ ಧಿಯೊಳಗೆ ಬಂದರು.

ಮುಸ್‌ಅಬ್ ಬಿನ್ ಉಮೈರ್(ರ) ಒಂದು ದೀರ್ಘಾವಧಿಯ ವರೆಗೆ ಅಸ್‌ಅದ್‌ಬಿನ್ ರಾರರ ಅತಿಥಿಯಾಗಿದ್ದರು. ಆದರೆ ಬನೀ ನಜ್ಜಾರ್ ಗೋತ್ರದವರು ಅವರನ್ನು ಡಿಸತೊಡಗಿದಾಗ ಅಲ್ಲಿಂದ ಸಅದ್ ಬಿನ್ ಮುಆದ್‌ರ(ರ) ಮನೆಗೆ ಹೋಗಿ, ಅಲ್ಲಿಂದಲೇ ಸಂದೇಶ ಪ್ರಚಾರದ ಕಾರ್ಯಚಟುವಟಿಕೆಯನ್ನು ಮುಂದುವರಿಸಿದರು. ಕೆಲವೊಂದು ನೆಗಳನ್ನು ಬಿಟ್ಟರೆ ಮದೀನಾ ಪಟ್ಟಣದ ಹೆಚ್ಚಿನೆಲ್ಲ ಮನೆಗಳು ಇಸ್ಲಾಮಿನ ಪ್ರಕಾಶದಿಂದ ಗತೊಡಗಿದವು. ಮದೀನಾದಲ್ಲಿ ಸತ್ಯವಿಶ್ವಾಸಿಗಳ ಸಂಖ್ಯೆ ಗಣನೀಯವಾಗಿ ಏರತೊಡಗಿದಾಗ ಸ್‌ಅಬ್ ಬಿನ್ ಉಮೈರ್‌ರು ಪ್ರವಾದಿಯವರಿಂದ(ಸ) ಅನುಮತಿ ಪಡೆದು ಜುಮಾ ುರ್ಝ್‌ಗೆ ನಾಂದಿ ಹಾಕಿದರು. ಸಅದ್ ಬಿನ್ ಖುಝೈಮರ(ರ) ಮನೆಯನ್ನು ಅದಕ್ಕಾಗಿ

ಆರಿಸಿದರು. ಮೊದಲು ಅವರು ಪ್ರಭಾವ ಪೂರ್ಣವಾದ ಪ್ರವಚನ ನೀಡಿದರು. ಅನ ನಮಾಝ್ ನಿರ್ವಹಿಸಿದರು. ನಮಾಝ್‌ನ ನಂತರ ಸಭಿಕರಿಗೆ ಸತ್ಕಾರವೇರ್ಪಡಿಸಿ ಅದಕ್ಕಾಗಿ ಒಂದು ಆಡನ್ನು ಕೊಯ್ದರು. ಈ ರೀತಿ ಮುಸ್ಲಿಮರು ಪರಸ್ಪರ ಭೇಟಿಯಾ ಅವಕಾಶ ನೀಡುವಂತಹ ಇಸ್ಲಾಮೀ ಲಾಂಛನವು ಮುಸ್‌ಅಬ್‌ರ ಆಸಕ್ತಿಯಿಂ ಜಾರಿಗೊಂಡಿತು. ಜುಮಾ ವ್ಯವಸ್ಥೆಯನ್ನು ಪ್ರಪ್ರಥಮವಾಗಿ ಸ್ಥಾಪಿಸಿದ ವ್ಯಕ್ತಿಯಾಗಿ ಅ ಇತಿಹಾಸದಲ್ಲಿ ದಾಖಲಿಸಲ್ಪಟ್ಟರು.

ಪ್ರಥಮ ಉಕ್ಬಾ ಒಡಂಬಡಿಕೆಯ ವೇಳೆ ಕೇವಲ 12ಮಂದಿ ಅನ್ಸಾರಿಗಳಿದ್ದರು. ಮುಸ್‌ಅಬ್ ಬಿನ್ ಉಮೈರ್ ಒಂದೇ ವರ್ಷದಲ್ಲಿ ಮದೀನಾವಾಸಿಗಳನ್ನು ಇಸ್ಲಾ ಅನುಯಾಯಿಗಳನ್ನಾಗಿ ಮಾಡಿದರು. ಮುಂದಿನ ವರ್ಷ 73 ಮಂದಿ ಉನ್ನತ ನಾ ನ್ನೊಳಗೊಂಡ ತಂಡವು ತಮ್ಮ ಜನಾಂಗದ ಪರವಾಗಿ ಕರಾರನ್ನು ಪುನರ್ ನವೀಕರಿ ಮತ್ತು ಪ್ರವಾದಿಯವರನ್ನು(ಸ) ಮದೀನಾಕ್ಕೆ ಆಹ್ವಾನಿಸಲು ಮಕ್ಕಾದ ಕಡೆಗೆ ಪ್ರ ಬೆಳೆಸಿತು. ಆ ತಂಡದೊಂದಿಗೆ ಅವರ ಧಾರ್ಮಿಕ ಗುರು ಮುಸ್‌ಅಬ್ ಕೂಡಾ ಇದ್ದ ಅವರು ಮದೀನಾಕ್ಕೆ ತಲಪುತ್ತಲೇ ನೇರವಾಗಿ ಪ್ರವಾದಿಯವರನ್ನು(ಸ) ಭೇಟಿಯಾಗಿ ಮದೀನಾದಲ್ಲಿ ದೊರಕಿದ ಅಪೂರ್ವ ಯಶಸ್ಸಿನ ಸಂಪೂರ್ಣ ವರದಿಯನ್ನು ಸಮರ್ಪಿಸಿ ಪ್ರವಾದಿ(ಸ) ಅತ್ಯಾಸಕ್ತಿಯೊಂದಿಗೆ ಅವರ ಚಟುವಟಿಕೆಗಳನ್ನು ತಿಳಿದುಕೊಂಡು ಅವ ಶ್ಲಾಘಿಸಿದರು.

ಮುಸ್‌ಅಬ್‌ರ ತಾಯಿಗೆ ಅವರ ಆಗಮನದ ಸುದ್ದಿ ಸಿಕ್ಕಿದಾಗ ಅವರಿಗೆ ಕರೆ ಕಳಿಸಿ ಅಲ್ಲಿಗೆ ಹೋದಾಗ ತಾಯಿಯು ಅವರನ್ನು ಜರೆಯುತ್ತಾ, ಕೃತಘ್ನ ಮಗನೆ! ನಾನಿರುವ ಊ ಬಂದೂ ನೀನು ಮೊದಲು ಭೇಟಿಯಾಗಲು ಬಂದಿಲ್ಲವಲ್ಲಾ ಎಂದು ಹೇಳಿದಳು. ಅವರು, ನಾನು ಪ್ರವಾದಿಯವರಿಗಿಂತ(ಸ) ಮುಂಚೆ ಬೇರೆ ಯಾರನ್ನೂ ಭೇಟಿಯಾಗುವುದಿಲ್ಲವೆ ನಿಶ್ಚಯಿಸಿದ್ದೆ ಎಂದು ಹೇಳಿದರು.

ನೀನಿನ್ನೂ ನಮ್ಮ ಧರ್ಮದ ನಿರಾಕರಣೆಯಲ್ಲೇ ಇರುವಿಯೆಂದು ನನಗೆ ತಿಳಿ ಎಂದು ತಾಯಿ ಹೇಳಿದಾಗ, ನಾನು ಮುಹಮ್ಮದ್‌ರವರ(ಸ) 'ಸತ್ಯಧರ್ಮ' ಇಸ್ಲಾ ಅನುಯಾಯಿಯಾಗಿದ್ದೇನೆ. ಅದನ್ನು ಅಲ್ಲಾಹನು ತನಗಾಗಿಯೂ ತನ್ನ ಪ್ರವಾದಿಗಾಗಿ ಇಷ್ಟಪಟ್ಟಿದ್ದಾನೆಂದು ಉತ್ತರಿಸಿದರು.

"ನೀನು ಅಬಿಸೀನಿಯಾದಲ್ಲಿ ಪಟ್ಟ ಪಾಡನ್ನು ಮರೆತುಬಿಟ್ಟೆಯಾ? ಈಗ ಮದೀನಾದಲ್ಲಿ ಅದನ್ನೇ ಎದುರಿಸಲು ಮುಂದಾಗಿದ್ದೀಯಾ? ನಿನ್ನ ಮೇಲೆ ನನಗೆ ಕ ತೋರುತ್ತದೆ. ಎರಡೂ ಸಲ ನೀನು ಸಹಾನುಭೂತಿಗಾಗಿ ಕೃತಜ್ಞನಾಗಿಲ್ಲ" ತಾಯಿ ಹೇಳಿದಳು.

ತನ್ನನ್ನು ಇನ್ನೊಮ್ಮೆ ಸೆರೆಯಲ್ಲಿಡುವ ಚಿಂತೆಯಲ್ಲಿದ್ದಾರೆಂದು ಗ್ರಹಿಸಿದ ಅ ತಾಯಿಯೊಂದಿಗೆ ಕಟುವಾಗಿಯೇ ಹೀಗೆಂದರು- "ನೀವು ನನ್ನನ್ನು ಬಲವಂತವಾಗಿ ಧರ್ಮದಿಂದ ಹಿಂಜರಿಸುವಿರಾ. ನೀವು ನನ್ನನ್ನು ಇನ್ನೊಮ್ಮೆ ಸೆರೆಯಲ್ಲಿಡಬಯಸಿದ್ದೀ

ಚ್ಚರಿಕೆ! ನನ್ನನ್ನು ಬಂಧಿಸಲು ಯಾರಾದರೂ ಮುಂದೆ ಬಂದರೆ ಖಂಡಿತ ಅವನನ್ನು ಕೊಂದು ಾಕುವೆನು."

ಮಗನ ರೋಷ ಕಂಡಾಗ ತಾಯಿಯು- "ತೊಲಗು ಇಲ್ಲಿಂದ, ನನ್ನ ಕಣ್ಣ ಮುಂದೆ ಲ್ಲಬೇಡ"ವೆಂದು ಹೇಳಿ ಅಳತೊಡಗಿದಳು. ಅದರಿಂದ ಮುಸ್‌ಅಬ್ ಪ್ರಭಾವಿತರಾದರು. ವರು ತನ್ನ ತಾಯಿಯೊಂದಿಗೆ ನಯವಾಗಿ, "ಅಮ್ಮಾ! ನಾನು ಬಹಳ ಪ್ರೀತಿಯಿಂದ ನಿಮಗೆ ಲಹೆ ನೀಡುತ್ತಿದ್ದೇನೆ. ನನ್ನ ಮಾತನ್ನು ಕೇಳಿರಿ. ಅಲ್ಲಾಹನು ಒಬ್ಬನೇ ಮತ್ತು ಮುಹಮ್ಮದ್(ಸ) ತನ ದಾಸ ಮತ್ತು ಸಂದೇಶವಾಹಕನೆಂದು ನೀವು ಸಾಕ್ಷ್ಯವಹಿಸಿರಿ" ಎಂದು ಹೇಳಿದರು. ಗ ಆಕೆ, ಹೀಗೆಂದರು- "ಮಿಂಚುತ್ತಿರುವ ನಕ್ಷತ್ರಗಳಾಣೆ! ನಾನು ಆ ಧರ್ಮ ಸ್ವೀಕರಿಸುವಷ್ಟು ಾರ್ಖಳಾಗಲಾರೆ. ಹೋಗು, ನಿನ್ನನ್ನೂ ನಿನ್ನ ಮಾತನ್ನೂ ನಾನು ಕೈ ಬಿಟ್ಟಿದ್ದೇನೆ. ನನ್ನ ರ್ಮವೇ ನನಗೆ ಸಾಕು."

## ಮರವಾದ ಅಂತ್ಯ ಸಂಸ್ಕಾರ

ಮಕ್ಕಾಕ್ಕೆ ಬಂದಿದ್ದ ಮುಸ್‌ಅಬ್ ಬಿನ್ ಉಮೈರ್(ರ) ಮೂರು ತಿಂಗಳ ಕಾಲ ವಾದಿಯವರ(ಸ) ಬಳಿಯಲ್ಲೇ ತಂಗಿದ್ದರು. ಪ್ರವಾದಿ(ಸ) ಮದೀನಾಕ್ಕೆ ವಲಸೆ ಹೋಗುವುದಕ್ಕಿಂತ ದಿವಸಗಳ ಮುಂಚೆ ಅಂದರೆ ರಬೀವುಲ್ ಅವ್ವಲ್ 1ನೇ ದಿನಾಂಕದಂದು ಅವರು ಶ್ಚಿತವಾಗಿ ಮದೀನಾಕ್ಕೆ ವಲಸೆ ಹೋದರು.

ಹಿಜರಿ ಎರಡರಿಂದ ಸತ್ಯ ಅಸತ್ಯಗಳ ನಡುವೆ ಸಂಘರ್ಷವೇರ್ಪಟ್ಟಿತ್ತು. ಯುದ್ಧಗಳ ಣಿಯೇ ಆರಂಭಗೊಂಡಿತು. ಮುಸ್‌ಅಬ್ ಬಿನ್ ಉಮೈರ್ ತನ್ನ ಮಧುರ ತುಗಾರಿಕೆಯಿಂದ, ಅಪ್ರತಿಮ ಬೋಧನಾ ಶೈಲಿಯಿಂದ ಮದೀನಾದಲ್ಲಿ ಎಷ್ಟು ಬೆಳಗಿದರೋ ುದ್ಧ ರಂಗದಲ್ಲೂ ಅವರ ವ್ಯಕ್ತಿತ್ವವು ಅಷ್ಟೇ ಶೋಭಾಯಮಾನವಾಗಿತ್ತು. ಬದ್ರ್ ಯುದ್ಧದ ಳೆ ಮುಹಾಜಿರ್‌ಗಳ ತಂಡದ ಅತಿ ದೊಡ್ಡ ಧ್ವಜ ಅವರ ಕೈಯಲ್ಲೇ ಇತ್ತು. ಉಹ್‌ದ್ ುದ್ಧದಲ್ಲೂ ಅವರು ಅದೇ ರೀತಿಯಲ್ಲಿ ಇಸ್ಲಾಮೀ ಸೈನ್ಯದ ಧ್ವಜವಾಹಕರಾಗಿದ್ದರು.

ಉಹ್‌ದ್ ಯುದ್ಧದಲ್ಲಿ ಮೊದಲು ಮುಸ್ಲಿಮರ ಸೇನೆ ವಿಜಯದ ಹಾದಿ ಹಿಡಿದಿತ್ತು. ವಾದಿವರ್ಯರ ಒಂದು ಆದೇಶ ಪಾಲನೆಯ ವಿಷಯದಲ್ಲಿ ಕೆಲವು ಮಂದಿ ಸಹಾಬಿಗಳಲ್ಲಿ ದೋರಿದ ಭಿನ್ನಾಭಿಪ್ರಾಯದಿಂದಾಗಿ ಯುದ್ಧದ ಗತಿ ಬದಲಾಯಿತು. ಹ. ಖಾಲಿದ್ ಬಿನ್ ೀದ್(ರ) ಆಗ ಸತ್ಯನಿಷೇಧಿಗಳ ಸೇನೆಯ ದಂಡನಾಯಕರಾಗಿದ್ದರು. ಅವರು ಹಿಂಬದಿಯಿಂದ ಸಿದ ಹಠಾತ್ ಆಕ್ರಮಣದಿಂದಾಗಿ ಮುಸ್ಲಿಮ್ ಸೇನೆ ಚೆಲ್ಲಾಪಿಲ್ಲಿಯಾಯಿತು. ಸೈನಿಕರು ್ಕಾಪಾಲಾಗಿ ಓಡತೊಡಗಿದರು. ಆದರೆ ಪ್ರವಾದಿ(ಸ) ಆ ಸಂದರ್ಭದಲ್ಲೂ ಬೆಟ್ಟದಂತೆ ್ಥಿರವಾಗಿ ನಿಂತು ತಮ್ಮ ಸಂಗಾತಿಗಳನ್ನು, "ಇತ್ತ ಬನ್ನಿ ಅಲ್ಲಾಹನ ದಾಸರೇ..." ಎಂದು ಗಿ ಕರೆಯುತ್ತಿದ್ದರು.

ಅದೇ ಸಂದರ್ಭದಲ್ಲಿ ಒಂದೆಡೆ ಮುಸ್‌ಅಬ್ ಬಿನ್ ಉಮೈರ್ ವೈರಿಗಳ ಮಧ್ಯೆ ುಕಿದರು. ಬಲಕೈಯಲ್ಲಿ ಧ್ವಜವನ್ನು ಎತ್ತಿ ಹಿಡಿದಿದ್ದರು. ತೀವ್ರ ಹೋರಾಟ ನಡೆಯುತ್ತಿತ್ತು.

ಏಕಾಂಗಿಯಾಗಿ ಹೋರಾಡುತ್ತಿದ್ದ ಮುಸ್‌ಅಬ್ ಬಿನ್ ಉಮ್ಮೈರ್‌ರ ದೃಢ ವಿಶ್ವಾಸವು ಅವರನ ರಣರಂಗದಿಂದ ಹಿಂಜರಿಯಲು ಬಿಡಲಿಲ್ಲ. ಅವರು ವೀರಾವೇಶದಿಂದ ಹೋರಾಡಿದರು. ಈ ಮಧ್ಯೆ ಇಬ್ನು ಕುಮಯ್ಯ ಎಂಬ ದುಷ್ಟನೊಬ್ಬನು ಅವರ ಬಲ ಕೈ ತೋಳನ್ನು ತಲವಾರಿನಿಂ ಕಡಿದು ಹಾಕಿದನು. ಆದರೆ ಆ ವೀರ ಸೇನಾನಿ ಧ್ವಜವನ್ನು ಕೆಳಗೆ ಬೀಳಗೊಡಲಿಲ್ಲ. ಅದನ ತನ್ನ ಎಡಕೈಯಿಂದ ಎತ್ತಿ ಹಿಡಿದರು. ಆದರೆ ಆತ ಇನ್ನೊಂದು ಪೆಟ್ಟನ್ನು ಅವರ ಎಡತೋಳಿ ಹಾಕಿದಾಗ ಎಡಗೈಯೂ ಕಡಿದು ಕೆಳಗೆ ಬಿತ್ತು. ಆಗ ಅವರು ಎರಡೂ ತುಂಡಾ ತೋಳುಗಳನ್ನು ಹತ್ತಿರಕ್ಕೆ ತಂದು ಧ್ವಜವನ್ನು ಅನಿಸಿ ಹಿಡಿದರು. ಆದರೆ ಆ ದುಷ್ಟ ಸತ್ಯನಿಷೇ ಅಷ್ಟಕ್ಕೂ ಬಿಡಲಿಲ್ಲ. ತನ್ನ ಈಟಿಯಿಂದ ಬಲವಾಗಿ ಅವರ ಎದೆಗೆ ಹೊಡೆದನು. ಮುಸ್‌ಅಬ ಬಿನ್ ಉಮ್ಮೈರ್‌ರ ಎದೆಯಿಂದ ರಕ್ತ ಚಿಮ್ಮಿ ಹರಿಯಿತು. ಅವರು ನೆಲದ ಮೇಲೆ ಉರುಳಿದರ ಆದರೆ ಆಗಲೂ ಇಸ್ಲಾಮಿನ ಆ ನಿಷ್ಠಾವಂತ ಯೋಧ ಧ್ವಜವನ್ನು ಕೆಳಗೆ ಬೀಳಲು ಬಿಡಲಿಲ್ಲ ಕೆಳಗೆ ಬಿದ್ದ ಮುಸ್‌ಅಬ್ ಬಿನ್ ಉಮ್ಮೈರ್ ಮತ್ತೆ ಏಳಲಿಲ್ಲ. ಅವರ ಪ್ರಾಣ ಪಕ್ಷಿ ಹಾ ಹೋಗಿತ್ತು. ಅವರು ಹುತಾತ್ಮರಾಗಿದ್ದರು. ಅವರ ಸಹೋದರ ಅಬುರ್‍ರೂಮ್ ಬಿನ್ ಉಮ್ಮೈ ಮುಂದೆ ಬಂದು ಧ್ವಜವನ್ನು ಹಿಡಿದುಕೊಂಡರು. ಕೊನೆಯ ಗಳಿಗೆಯ ವರೆಗೆ ಅವರು ವೀರಾವೇಶದಿಂದ ಹೋರಾಡಿದರು.

ಯುದ್ಧ ಮಾಡುತ್ತಿದ್ದಾಗಲೂ ವೈರಿಗಳ ಮಧ್ಯೆ ಸಿಲುಕಿರುವಾಗಲೂ ಹುತಾತ್ಮರಾಗು ಸಂದರ್ಭದಲ್ಲೂ ಮುಸ್‌ಅಬ್ ಬಿನ್ ಉಮ್ಮೈರ್ ಕುರ್‌ಆನ್‌ನ ಈ ಕೆಳಗಿನ ಸೂಕ್ತವನ ಆವರ್ತಿಸುತ್ತಿದ್ದರು. ಅದೇ ಅವಸ್ಥೆಯಲ್ಲಿ ಅವರು ಕೊನೆಯುಸಿರೆಳೆದಿದ್ದರು.

"ಮುಹಮ್ಮದ್(ಸ) ಓರ್ವ ಸಂದೇಶವಾಹಕರೇ ಹೊರತು ಇನ್ನೇನೂ ಆಗಿರುವುದಿಲ್ಲ ಅವರಿಗಿಂತ ಮುಂಚೆ ಇತರ ಸಂದೇಶವಾಹಕರೂ ಗತಿಸಿ ಹೋಗಿದ್ದಾರೆ." (3: 14

ಯುದ್ಧ ಮುಗಿದಾಗ ಪ್ರವಾದಿ(ಸ) ಮುಸ್‌ಅಬ್ ಬಿನ್ ಉಮ್ಮೈರ್‌ರ(ರ) ಪಾರ್ಥಿ ಶರೀರದ ಬಳಿಗೆ ಬಂದು ಈ ಕುರ್‌ಆನ್ ಸೂಕ್ತವನ್ನು ಪಠಿಸಿದರು-

"ಸತ್ಯವಿಶ್ವಾಸ ಸ್ವೀಕರಿಸಿದವರ ಪೈಕಿ ಅಲ್ಲಾಹನೊಡನೆ ಮಾಡಿದ ಕರಾರನ್ನು ನಿಜವೆಂದ ಸಾಧಿಸಿ ತೋರಿಸಿದ ಕೆಲವರೂ ಇದ್ದಾರೆ." (33: 2

ಅನಂತರ ಮುಸ್‌ಅಬ್ ಬಿನ್ ಉಮ್ಮೈರ್‌ರ(ರ) ಜಡದೇಹವನ್ನು ಸಂಬೋಧಿ ಹೀಗೆಂದರು, "ನಾನು ನಿಮ್ಮನ್ನು ಮಕ್ಕಾದಲ್ಲಿ ನೋಡಿದ್ದೆ. ನಿಮ್ಮಷ್ಟು ಸುಂದರ ಮತ ಅತ್ಯುತ್ತಮ ಬಟ್ಟೆ ಧರಿಸಿದ ವ್ಯಕ್ತಿ ಅಲ್ಲಿ ಯಾರೂ ಇರಲಿಲ್ಲ. ಆದರೆ ಇಂದು ನಾನ ನೋಡುತ್ತಿದ್ದೇನೆ. ನಿಮ್ಮ ತಲೆಗೂದಲು ಅಸ್ತವ್ಯಸ್ತ ಗೊಂಡಿವೆ. ಶರೀರದಲ್ಲಿ ಕೇವಲ ಒಂದ ಚದ್ದರವಿದೆ. ಅಲ್ಲಾಹನ ಸಂದೇಶವಾಹಕ ಸಾಕ್ಷ್ಯ ನುಡಿಯುತ್ತಿದ್ದಾನೆ. ನೀವೆಲ್ಲರೂ ಕಿಯಾಮತ್ ದಿನ ಅಲ್ಲಾಹನ ಸನ್ನಿಧಿಯಲ್ಲಿ ಹಾಜರಾಗಲಿರುವಿರಿ."

ಅದು ಮುಸ್ಲಿಮರ ಅತ್ಯಂತ ಬಡತನದ ಕಾಲವಾಗಿತ್ತು. ಹುತಾತ್ಮರ ಅಂತ್ಯ ಸಂಸ್ಕಾರ ಕಫನ್ ಬಟ್ಟೆಗೂ ಗತಿಯಿಲ್ಲದ ಕಾಲವಾಗಿತ್ತು. ಮುಸ್‌ಅಬ್ ಬಿನ್ ಉಮ್ಮೈರ್‌ರ(ರ) ಮೈಮೇ ಕೇವಲ ಒಂದು ಚದ್ದರವಿತ್ತು. ಅದರಿಂದ ಅವರನ್ನು ಮುಚ್ಚಲು ನೋಡಿದಾಗ ತಲೆಯ ಭಾ

ರೆಯುತ್ತಿತ್ತು. ತಲೆಯ ಬಳಿಗೆ ಎಳೆದರೆ ಕಾಲುಗಳು ಕಾಣುತ್ತಿದ್ದುವು. ಕೊನೆಗೆ ತಲೆಯ ಾಗವನ್ನು ಅದೇ ಬಟ್ಟೆಯಲ್ಲಿ ಮುಚ್ಚಿ ಕಾಲಿನ ಭಾಗವನ್ನು 'ಅದ್‌ಖರ್' ಎಂಬ ಒಂದು ಾತಿಯ ಹುಲ್ಲಿನಿಂದ ಮುಚ್ಚಲಾಯಿತು. ಆಮಿರ್ ಬಿನ್ ರಬೀಅ, ಸುವೈಬಿತ್ ಬಿನ್ ಸಅದ್ ುತ್ತು ಮೃತನ ಸಹೋದರ ಅಬುರ್ರೂಮ್ ಬಿನ್ ಉಮೈರ್‌ರ(ರ) ಸಹಕಾರದಿಂದ ಅವರ ಾರ್ಥಿವ ಶರೀರವನ್ನು ದಫನ ಮಾಡಲಾಯಿತು.

ಇಸ್ಲಾಮ್ ಸ್ವೀಕಾರಕ್ಕಿಂತ ಮುಂಚೆ ಮುಸ್‌ಅಬ್ ಬಿನ್ ಉಮೈರ್ ಎಷ್ಟು ಆಡಂಬರ ್ರಿಯರಾಗಿದ್ದರೋ ಅದರ ನಂತರ ಅಷ್ಟೇ ಸರಳ ಜೀವಿಯಾಗಿ ಮಾರ್ಪಟ್ಟರು. ಅವರ ಥಳಬಾಳುವ ಪೋಷಾಕುಗಳೆಲ್ಲ ಹೋಗಿ ಓರ್ವ ಸಾಮಾನ್ಯ ಫಕೀರನಂತೆ ಅವರು ಜೀವಿಸ ೊಡಗಿದರು. ಒಮ್ಮೆ ಅವರು ಪ್ರವಾದಿಯವರನ್ನು(ಸ) ಭೇಟಿಯಾಗಲು ಬಂದಾಗ ಅವರ ರೀರದಲ್ಲಿ ಚರ್ಮದ ಅಂಗಿಯೊಂದು ಮಾತ್ರವಿತ್ತು. ಅದರಲ್ಲೂ ಅನೇಕ ತೇಪೆಗಳಿದ್ದುವು. ಹಾಬಿಗಳು ಅವರನ್ನು ನೋಡಿ ಬೆಕ್ಕಸ ಬೆರಗಾದರು. ಪ್ರವಾದಿ(ಸ) ಹೇಳಿದರು, "ಇನ್ನು ಈ ಲೋಕ ಮತ್ತು ಲೌಕಿಕವಾದಿಗಳು ತಮ್ಮ ಸ್ಥಿತಿಯನ್ನು ಬದಲಾಯಿಸಬೇಕಾಗಿದೆ. ಈ ಯುವಕನಿಗಿಂತ ಆಡಂಬರ ಜೀವಿ ಮಕ್ಕಾದಲ್ಲಿ ಬೇರಾರೂ ಇರಲಿಲ್ಲ. ಆದರೆ ಅಲ್ಲಾಹನ ಮತ್ತು ಆತನ ಪ್ರವಾದಿಯ ಪ್ರೇಮವು ಅವರನ್ನು ಎಲ್ಲದರಿಂದಲೂ ನಿರಪೇಕ್ಷವಾಗಿ ಮಾಡಿ ಬಿಟ್ಟಿತು."

ಮುಸ್‌ಅಬ್ ಬಿನ್ ಉಮೈರ್‌ರ ಪತ್ನಿಯ ಹೆಸರು ಹುಮ್ನಾ ಬಿಂತಿ ಜಹಶ್ ಎಂದಾಗಿತ್ತು. ಝೈನಬ್ ಎಂಬ ಏಕೈಕ ಪುತ್ರಿಯು ಅವರ ಪೀಳಿಗೆಯಾಗಿ ಉಳಿದರು.

# ಹ. ಅಬೂ ಜಂದಲ್(ರ)

## ಹುದೈಬಿಯಾದಲ್ಲಿ

ಅಬೂ ಜಂದಲ್(ರ) ಕುರೈಶ್ ಸರದಾರರಾಗಿದ್ದ ಸುಹೈಲ್ ಬಿನ್ ಅಮ್ರ್(ರ) ಪುತ್ರರಾಗಿದ್ದರು. ಸುಹೈಲ್ ತನ್ನ ಮಾತುಗಾರಿಕೆಯಿಂದಾಗಿ ಕುರೈಶರ ಪ್ರವಚನಕಾರನೆಂದು ಪ್ರಸಿದ್ಧರಾಗಿದ್ದರು. ತಮ್ಮ ವಾಕ್‌ಚಾತುರ್ಯ ಮತ್ತು ಪ್ರಬಲ ಭಾಷಣಗಳಿಂದ ಜನರಲ್ಲಿ ಆವೇಶವುಂಟು ಮಾಡುತ್ತಿದ್ದರು. ಆದರೆ ದುರದೃಷ್ಟವಶಾತ್ ಅವರ ಈ ಪ್ರತಿಭೆಗಳೆಲ್ಲವೂ ಮಕ್ಕಾ ವಿಜಯದ ತನಕವೂ ಇಸ್ಲಾಮಿನ ವಿರುದ್ಧ ವ್ಯಯವಾಗುತ್ತಿದ್ದುವು. ಆದರೆ ದೇವೇಚ್ಛೆಯೇ ಬೇರೆಯಾಗಿತ್ತು. ಅವರ ಮಕ್ಕಳೆಲ್ಲ ಇಸ್ಲಾಮಿಗೆ ಅರ್ಪಿತವಾಗಿದ್ದರು. ಅವರ ಇಬ್ಬರು ಪುತ್ರಿಯರಾದ ಸಹ್ಲ ಮತ್ತು ಉಮ್ಮು ಕುಲ್ಸೂಮ್ ಹಾಗೂ ಇಬ್ಬರು ಪುತ್ರರಾದ ಅಬ್ದುಲ್ಲಾ ಮತ್ತು ಅಬೂ ಜಂದಲ್, ಪ್ರವಾದಿತ್ವದ ಆರಂಭ ಕಾಲದಲ್ಲೇ ಇಸ್ಲಾಮ್‌ನೊಳಗೆ ಬಂದಿದ್ದರು. ಇಸ್ಲಾಮ್ ಸ್ವೀಕರಿಸಿದ ಕಾರಣಕ್ಕೆ ಅಬೂ ಜಂದಲ್‌ರ ಕಾಲಿಗೆ ಬೇಡಿ ತೊಡಿಸಿ ಅವರ ತಂದೆ ಗೃಹ ಬಂಧನದಲ್ಲಿರಿಸಿದರು. ಅನೇಕ ವರ್ಷಗಳ ವರೆಗೆ ಅವರು ಅಲ್ಲಿ ಸಂಕಷ್ಟ ಪೀಡನೆಗಳನ್ನು ಸಹಿಸುತ್ತಲಿದ್ದರು. ಈ ಗೃಹಬಂಧನ ಎಷ್ಟರ ವರೆಗೆ ಮುಂದುವರಿಯಿತೆಂದರೆ ಪ್ರವಾದಿ(ಸ) ಮಕ್ಕಾದಿಂದ ಮದೀನಾಕ್ಕೆ ವಲಸೆ ಹೋಗಿ, ಅಲ್ಲಿ ಬದ್ರ್, ಉಹ್‌ದ್ ಮತ್ತು ಕಂದಕ ಯುದ್ಧಗಳು ನಡೆದುವು. ಆದರೆ ಅವರಿಗೆ ಬಿಡುಗಡೆ ಲಭಿಸಲಿಲ್ಲ. ಹಿ.ಶ. 6ರ ದುಲ್‌ಕಅದ್ ತಿಂಗಳಲ್ಲಿ ಪ್ರವಾದಿ ಮುಹಮ್ಮದ್‌ರವರು(ಸ) ತಮ್ಮ 1400 ಮಂದಿ ಸಹಾಬಿಗಳ ಜೊತೆ ಉಮ್ರಾ ನಿರ್ವಹಿಸಲಿಕ್ಕಾಗಿ ಮದೀನಾದಿಂದ ಮಕ್ಕಾದ ಕಡೆಗೆ ಪ್ರಯಾಣ ಬೆಳೆಸಿದರು. ಕುರೈಶರಿಗೆ ಹೇಗೋ ಈ ಸುದ್ದಿ ತಿಳಿಯಿತು. ಅವರು ಮುಸ್ಲಿಮರನ್ನು ಮಕ್ಕಾದೊಳಗೆ ಪ್ರವೇಶಿಸಲು ಬಿಡಲಾರೆವು ಎಂದು ಪ್ರತಿಜ್ಞೆಗೈದರು. ಪ್ರವಾದಿವರ್ಯರು ಮಕ್ಕಾದಿಂದ ಕೆಲವು ಮೈಲುಗಳ ದೂರ ಹುದೈಬಿಯಾ ಎಂಬಲ್ಲಿ ತಂಗಿದರು. ನಾವು ಕೇವಲ ಉಮ್ರಾ ನಿರ್ವಹಿಸಲಿಕ್ಕಾಗಿ ಬಂದಿದ್ದೇವೆ. ಯುದ್ಧ-ಜಗಳಗಳು ನಮ್ಮ ಉದ್ದೇಶವಲ್ಲ. ಆದುದರಿಂದ ಕೆಲವು ಸಮಯದ ವರೆಗೆ ನಮ್ಮೊಳಗೆ ಒಪ್ಪಂದವಾದರೆ ಒಳ್ಳೆಯದೆಂದು ಕುರೈಶರಿಗೆ ಅಲ್ಲಿಂದ ಹೇಳಿ ಕಳಿಸಿದರು. ಈ ಸಂದೇಶಕ್ಕೆ ಉತ್ತರವಾಗಿ ಕುರೈಶರು ಉರ್ವಾ ಬಿನ್ ಮಸ್‌ಊದ್ ಸಕಫೀ ಎಂಬವರನ್ನು ತಮ್ಮ ರಾಯಭಾರಿಯಾಗಿ ಪ್ರವಾದಿವರ್ಯರೊಡನೆ ಮಾತುಕತೆಗೆ ಕಳಿಸಿದರು. ಉರ್ವಾ ಪ್ರವಾದಿಯವರನ್ನು ಭೇಟಿಯಾಗಿ ಮರಳಿ ಬಂದು

ಶರೊಂದಿಗೆ ಹೀಗೆ ಹೇಳಿದರು, ಮುಹಮ್ಮದ್‌ರ(ಸ) ಸಂಗಾತಿಗಳು ಅವರನ್ನು ಅತಿಯಾಗಿ
ಿಸುತ್ತಾರೆ. ಅವರಿಗಾಗಿ ಅವರು ಯಾವ ತ್ಯಾಗಕ್ಕೂ ಸಿದ್ಧರಾಗಿರುತ್ತಾರೆ. ಪ್ರಾಣ ತ್ಯಾಗಕ್ಕೂ
ು ಹಿಂಜರಿಯಲಾರರು. ಆದುದರಿಂದ ಮುಸ್ಲಿಮರೊಂದಿಗೆ ಒಪ್ಪಂದ ಮಾಡಿಕೊಳ್ಳುವುದೇ
ಯದು.

ಆದರೆ ಕುರೈಶರಿಗೆ ಉರ್ವಾರ ಮಾತು ಹಿಡಿಸಲಿಲ್ಲ. ಅವರು ಅವರ ಮಾತನ್ನು
ಕರಿಸಿದರು. ಪ್ರವಾದಿ(ಸ) ಇನ್ನೊಬ್ಬರನ್ನು ಕುರೈಶರ ಬಳಿಗೆ ಅದೇ ಸಂದೇಶ ನೀಡಿ
ದರು. ಆದರೆ ಅವರೊಂದಿಗೂ ಕುರೈಶರು ಕೆಟ್ಟದಾಗಿ ವರ್ತಿಸಿದರು. ಮಾತ್ರವಲ್ಲ
ಸ್ಲಿಮರೊಡನೆ ಹೋರಾಡಲು ಅವರು ಒಂದು ತುಕಡಿಯನ್ನು ಕಳಿಸಿದರು. ಮುಸ್ಲಿಮರು
ರನ್ನು ಸೆರೆಹಿಡಿದು ಪ್ರವಾದಿವರ್ಯರ ಮುಂದೆ ಹಾಜರು ಪಡಿಸಿದರು. ಆದರೆ ಪ್ರವಾದಿ(ಸ)
ನರನ್ನು ಕ್ಷಮಿಸಿ ಬಿಟ್ಟು ಬಿಟ್ಟರು. ಕೊನೆಯಲ್ಲಿ ಸಂಪೂರ್ಣ ಹೊಣೆ ಮುಕ್ತರಾಗಲಿಕ್ಕಾಗಿ
ಾದಿವರ್ಯರು ಉಸ್ಮಾನ್ ಬಿನ್ ಅಫ್ಫಾನ್‌ರನ್ನು(ರ) ತಮ್ಮ ರಾಯಭಾರಿಯಾಗಿ ಮಕ್ಕಾಕ್ಕೆ
ದರು. ಕುರೈಶರು ಉಸ್ಮಾನ್‌ರನ್ನು ಮಕ್ಕಾದಲ್ಲಿ ತಡೆದಿರಿಸಿದರು.

ಅತ್ತ ಮುಸ್ಲಿಮರಲ್ಲಿ ಉಸ್ಮಾನ್‌ರು ವಧಿಸಲ್ಪಟ್ಟರೆಂಬ ವದಂತಿ ಹಬ್ಬಿತು. ಮುಸ್ಲಿಮರು
ರಿಂದ ತುಂಬಾ ಕೆರಳಿದರು. ಪ್ರವಾದಿಯವರು(ಸ) ಉಸ್ಮಾನ್‌ರ ಕೊಲೆಯ ಪ್ರತೀಕಾರ
ುಲಿಕ್ಕಾಗಿ ಪ್ರಾಣದ ಹಂಗು ತೊರೆದು ಸಿದ್ಧರಾಗುವಂತೆ ತಮ್ಮೊಂದಿಗೆ ಉಮ್ರಾಕ್ಕೆಂದು
ಿದ್ದ ಸಹಾಬಿಗಳಿಂದ ಕರಾರನ್ನು ಪಡೆದರು. ಈ ಒಡಂಬಡಿಕೆಯು 'ಬೈಅತುರ್ರಿದ್ವಾನ್'
ಬ ಹೆಸರಿನಿಂದ ಇತಿಹಾಸದಲ್ಲಿ ಪ್ರಸಿದ್ಧವಾಯಿತು. ಈ ಒಡಂಬಡಿಕೆಯಲ್ಲಿ
ಗೊಂಡವರೊಂದಿಗೆ ಅಲ್ಲಾಹನು ಪ್ರಸನ್ನನಾದನೆಂಬ ಶುಭವಾರ್ತೆಯನ್ನು ಕುರ್‌ಆನ್‌ನಲ್ಲಿ
ಲಾಯಿತು. ಉಸ್ಮಾನ್ ವಧಿಸಲ್ಪಟ್ಟಿದ್ದಾರೆಂಬ ಸುದ್ದಿ ಸುಳ್ಳೆಂದು ಆ ಬಳಿಕ ಮುಸ್ಲಿಮರಿಗೆ
ವರಿಕೆಯಾಯಿತು. ಆದರೆ ಮುಸ್ಲಿಮರಲ್ಲುಂಟಾದ ಆವೇಶವನ್ನು ಕಂಡು ಸತ್ಯನಿಷೇಧಿಗಳ
ರ್ಯ ಕುಂದಿತು. ಅವರು ಒಪ್ಪಂದಕ್ಕೆ ಸಿದ್ಧರಾದರು.

ಕುರೈಶರ ಕಡೆಯಿಂದ ಅಬೂ ಜಂದಲ್‌ರ ತಂದೆ ಸುಹೈಲ್ ಬಿನ್ ಅಮ್ರ್ ಒಪ್ಪಂದದ
ಗಳನ್ನು ನಿರ್ಣಯಿಸಲಿಕ್ಕಾಗಿ ಹುದೈಬಿಯಾಕ್ಕೆ ಆಗಮಿಸಿದರು. ಪ್ರವಾದಿಯವರು(ಸ)
ಯವರಿಗೆ(ರ) ಒಪ್ಪಂದದ ಶರ್ತಗಳನ್ನು ಬರೆಯುವಂತೆ ಆಜ್ಞಾಪಿಸಿದರು. ಮೊತ್ತ
ದಲು 'ರಹ್ಮಾನನಾದ ಅಲ್ಲಾಹನು' ಮತ್ತು 'ಅಲ್ಲಾಹನ ಸಂದೇಶವಾಹಕರು' ಎಂಬ
ಗಳ ಕುರಿತು ಆಕ್ಷೇಪ-ಚರ್ಚೆಗಳು ನಡೆದುವು. ಸುಹೈಲ್‌ರ ಇಂಗಿತದಂತೆಯೇ "ಅಲ್ಲಾಹನ
ದಿಂದ ಮುಹಮ್ಮದ್ ಮತ್ತು ಕುರೈಶರ ನಡುವೆ ನಡೆಯುವ ಒಪ್ಪಂದ" ಎಂದು
ುಲಾಯಿತು.

ಅದರ ಒಂದನೇ ಶರ್ತ ಹೀಗಿತ್ತು- ಮುಸ್ಲಿಮರು ಈ ವರ್ಷ ಉಮ್ರಾ ನಿರ್ವಹಿಸದೆ
ಿರುಗಬೇಕು. ಮುಂದಿನ ವರ್ಷ ಬೇಕಾದರೆ ಅವರು ಉಮ್ರಾ ನಿರ್ವಹಿಸ ಬಹುದು.

ಅನಂತರ ಎರಡನೇ ಶರ್ತ ಬರೆಸಲಾಯಿತು. ಅದು ಹೀಗಿತ್ತು- ಮಕ್ಕಾದಿಂದ
ರಾದರೂ ಪಲಾಯನ ಮಾಡಿ ಮುಸ್ಲಿಮರ ಬಳಿಗೆ ಬಂದರೆ, ಅವನು ಮುಸ್ಲಿಮನಾಗಿದ್ದರೂ

ಸರಿ, ಅವನನ್ನು ಕುರೈಶರಿಗೆ ಮರಳಿಸಬೇಕು. ಮುಸ್ಲಿಮರ ಪೈಕಿ ಯಾರಾದರೂ ಮಕ್ಕಾ ವಶಕ್ಕೆ ಬಂದರೆ ಅವನನ್ನು ಹಿಂದಿರುಗಿಸಲಾಗದು.

ಮುಸ್ಲಿಮರ ಮಟ್ಟಿಗೆ ಈ ಶರ್ತವು ಅತ್ಯಂತ ವಿಚಿತ್ರವೆನಿಸಿತು. ಅವರು ಅದನ್ನು ಒ ಸಿದ್ಧರಾಗಲಿಲ್ಲ. ಒಕ್ಕೊರಳಿನಿಂದ 'ಅನ್ಯಾಯ, ಅನ್ಯಾಯ' ಎಂದು ಬೊಬ್ಬಿಟ್ಟರು. ನಮ್ಮ ಅನುಮೋದನೆಯಿಲ್ಲವೆಂದು ಸಾರಿದರು. ಆದರೆ ಸುಹೈಲ್ ಬಿನ್ ಅಮ್ ಶರ್ತವನ್ನು ಬರೆಯಲೇ ಬೇಕೆಂಬ ಹಠವಿತ್ತು. ಕೊನೆಗೂ ಪ್ರವಾದಿಯವರು ಆ ಶರ್ತ ಒಪ್ಪಿದರು. ಅದನ್ನು ಬರೆಯುತ್ತಿದ್ದಂತೆಯೇ ಅಲ್ಲಿ ಅಭೂತಪೂರ್ವ ಘಟನೆಯೊ ನಡೆಯಿತು. ಸುಹೈಲ್‌ರ ಮಗ ಅಬೂ ಜಂದಲ್ ಗೃಹಬಂಧನದಿಂದ ಹೇಗೋ ತ ಹುದೈಬಿಯಕ್ಕೆ ತಲಪಿದ್ದರು. ಅವರ ಕಾಲುಗಳಿಗೆ ಬೇಡಿ ತೊಡಿಸಲಾಗಿತ್ತು. ಮಣಿಗಂಟಿನಿಂದಲೂ ಕಾಲಹರಡಿನಿಂದಲೂ ರಕ್ತ ಸೋರುತ್ತಿತ್ತು.

## ಅಬೂ ಜಂದಲ್ ಮರಳಿ ಮುಶ್ರಿಕರ ವಶಕ್ಕೆ

ಅಬೂ ಜಂದಲ್(ರ) ಅಲ್ಲಿದ್ದ ಮುಸ್ಲಿಮರನ್ನುದ್ದೇಶಿಸಿ ಅತ್ಯಂತ ದಯನೀಯ ಹೀಗೆಂದರು, "ಮುಸ್ಲಿಮರೇ, ಇಸ್ಲಾಮ್ ಸ್ವೀಕಾರ ಮಾಡಿದ ಒಂದೇ ತಪ್ಪಿಗಾಗಿ ನ ಯಾವ ರೀತಿ ಹಿಂಸಿಸಲಾಗಿದೆಯೆಂದು ನೀವು ನೋಡುವುದಿಲ್ಲವೇ? ನೀವಾದರೂ ನ ಈ ದುರ್ಗತಿಯಿಂದ ಪಾರು ಮಾಡಲಾರಿರಾ?"

ಅವರನ್ನು ಈ ಅವಸ್ಥೆಯಲ್ಲಿ ಕಂಡು ಮುಸ್ಲಿಮರು ಬಹಳ ಮರುಗಿದರು. ಅವ ಬರಮಾಡಿಕೊಳ್ಳಲು ಅವರೆಲ್ಲರೂ ಮುಂದಾದರು. ಸತ್ಯನಿಷೇಧಿಗಳ ವಿರುದ್ಧ ಅವರ ರೋ ಭುಗಿಲೆದ್ದಿತು. ಅಷ್ಟರಲ್ಲಿ ಕರಾರು ಪತ್ರವನ್ನು ಬರೆಯಲು ಅಣಿಯಾಗುತ್ತಿದ್ದ ಸುಹೈಲ್ ಅಮ್ರ್ ಹೇಳಿದರು,

"ಮುಹಮ್ಮದ್(ಸ)! ಈ ಕರಾರು ಪತ್ರದ ಶರ್ತದ ಪ್ರಕಾರ ಈ ದುರುಳನನ್ನು (ಅ ಜಂದಲ್) ನಮಗೆ ಒಪ್ಪಿಸಬೇಕು. ಶರ್ತಗಳನ್ನು ಪಾಲಿಸಲು ಇದು ಪ್ರಥಮ ಅವ ಅನ್ಯಥಾ ಕರಾರು ಪತ್ರ ಸಿಂಧುವಾಗಲಾರದು."

ಕರಾರು ಪತ್ರ ಇನ್ನೂ ಲಿಖಿತ ರೂಪಕ್ಕೆ ಇಳಿದಿರಲಿಲ್ಲ. ಆದುದರಿಂದ ಪ್ರವಾದಿ ಸುಹೈಲ್‌ರೊಡನೆ ಹೀಗೆಂದರು, "ಸಹೋದರಾ! ಕರಾರು ಪತ್ರವನ್ನು ಇನ್ನೂ ಬರೆಯಲಾಗಿಲ್ಲವ ಹಾಗಿರುವಾಗ ಅಬೂ ಜಂದಲ್‌ರನ್ನು ನಾವು ಮರಳಿಸುವುದೆಂತು?"

"ಕರಾರು ಪತ್ರ ಬರೆಯದಿದ್ದರೂ ಅದರ ಶರ್ತಗಳನ್ನು ನಾವು ಪರ ಒಪ್ಪಿಕೊಂಡಿದ್ದೇವಷ್ಟೆ. ಆದುದರಿಂದ ಅಬೂ ಜಂದಲ್‌ರನ್ನು ಮರಳಿಸಲೇ ಬೇಕು. ಇಲ್ಲವಾ ನಾವು ಒಪ್ಪಂದ ಮಾಡಲಾರೆವು " ಸುಹೈಲ್ ಖಡಾ ಖಂಡಿತವಾಗಿ ಹೇಳಿದರು.

ಪ್ರವಾದಿ(ಸ) ಮತ್ತು ಸಹಾಬಿಗಳು ಸುಹೈಲ್‌ರನ್ನು ತರತರವಾಗಿ ಸಮಾಧಾನ ಪಡಿ ಪ್ರಯತ್ನಿಸಿದರು. ಆದರೆ ಅವರು ಯಾವ ಮಾತನ್ನೂ ಕೇಳಲು ತಯಾರಿರಲಿಲ್ಲ. ಕಟ್ಟಕ ಪ್ರವಾದಿ(ಸ) ಸುಹೈಲ್‌ರ ಶರ್ತವನ್ನು ಒಪ್ಪಿ, 'ಹಾಗಾದರೆ ನೀವು ಅಬೂ ಜಂದಲ್

ಂಕೊಂಡು ಹೋಗಿ' ಎಂದು ಹೇಳಿದರು.

ಎಂತಹ ಕಳವಳಕಾರಿ ಸನ್ನಿವೇಶ! ಓರ್ವ ಸತ್ಯವಿಶ್ವಾಸಿಯನ್ನು ಇನ್ನಷ್ಟು ಹಿಂಸೆಗೆ ಪಡಿಸಲು ಸತ್ಯನಿಷೇಧಿಗಳಿಗೆ ಒಪ್ಪಿಸಲಾಗುತ್ತಿದೆ. ತೋಳನ ಕೈಗೆ ಕುರಿಮರಿಯನ್ನು ದಂತೆ! ಆ ಸಂದರ್ಭದಲ್ಲಿ ಅಬೂ ಜಂದಲ್ ಗೋಳೋ ಎಂದು ಅತ್ತರು. ಅವರು ಗಂಟಲು ಬಿರಿಯುತ್ತಾ ಗೋಳಿಟ್ಟರು. "ಮುಸ್ಲಿಮರೇ! ಒಬ್ಬ ಮುಸ್ಲಿಮನನ್ನು ಪುನಃ ್ರಕರಿಗೆ ಒಪ್ಪಿಸುತ್ತೀರಾ? ಈ ಬಡಪಾಯಿಯನ್ನು ಪುನಃ ಅಗ್ನಿಷ್ಟಿಕೆಗೆ ಹಾಕುತ್ತೀರಾ? ನನ್ನ ದ ಮೇಲೆ ಪೆಟ್ಟಿನ ಗಾಯಗಳನ್ನು ನೋಡಿರಿ. ಅದರಿಂದ ಯಾವ ರೀತಿ ರಕ್ತ ಹರಿಯುತ್ತಿದೆ ಡಿ. ನನ್ನನ್ನು ರಕ್ಷಿಸಿರಿ, ನನ್ನನ್ನು ರಕ್ಷಿಸಿರಿ."

ಕಾವೇರಿದ ವಾತಾವರಣ! ಅಬೂ ಜಂದಲ್‌ರ ಮರ್ದಿತಾವಸ್ಥೆಯನ್ನು ಕಂಡು ್ಲಿಮರೆಲ್ಲರ ಕಣ್ಣುಗಳೂ ತೇವಗೊಂಡವು. ಆದರೆ ನಾಯಕನ(ಸ) ಆಜ್ಞಾಪಾಲನೆಯಲ್ಲಿ ೆಲ್ಲರೂ ಮೌನವಾಗಿದ್ದರು. ಈ ಪ್ರಕರಣದಲ್ಲಿ ಅತ್ಯಂತ ಹೆಚ್ಚು ಪ್ರಭಾವಿತಗೊಂಡ ಯೆಂದರೆ ಹ. ಉಮರ್ ಫಾರೂಕ್(ರ). ಅವರು ಹುಬ್ಬುಗಂಟಿಕ್ಕಿಕೊಂಡು ನೇರವಾಗಿ ಾದಿಯವರ(ಸ) ಬಳಿಗೆ ಬಂದು ಕೇಳಿದರು,

"ಅಲ್ಲಾಹನ ಸಂದೇಶವಾಹಕರೇ! ತಾವು ಸತ್ಯಸಹಿತ ಬಂದ ಪ್ರವಾದಿಯಲ್ಲವೇ?"

"ಖಂಡಿತವಾಗಿಯೂ ನಾನು ಸತ್ಯ ಪ್ರವಾದಿಯಾಗಿರುವೆನು."

"ನಾವು ಸತ್ಯದಲ್ಲೂ ನಮ್ಮ ವೈರಿಗಳು ಅಸತ್ಯದಲ್ಲೂ ಇರುವೆವಲ್ಲವೆ?"

"ಖಂಡಿತವಾಗಿಯೂ."

"ಹಾಗಾದರೆ ನಾವು ಅವರಿಗೆ ಶರಣಾಗಿ ಒಪ್ಪಂದ ಮಾಡಿಕೊಳ್ಳುವುದೇಕೆ?"

"ಉಮರ್! ನಾನು ಖಂಡಿತವಾಗಿಯೂ ಅಲ್ಲಾಹನ ಪ್ರವಾದಿಯಾಗಿದ್ದೇನೆ. ಅಲ್ಲಾಹನ ಯನ್ನು ಎಂದೂ ಉಲ್ಲಂಘಿಸಲಾರೆ. ಆತನೇ ನನ್ನ ಬೆಂಬಲಕ್ಕಿದ್ದಾನೆ. ಆತನೇ ನನ್ನ ಸಹಾಯಕ."

ಪ್ರವಾದಿವರ್ಯರ ಈ ಮಾತು ಕೇಳಿ ಉಮರ್ ಮೌನವಾದರು. ಅಬೂ ಜಂದಲ್‌ರ ನಾದ ಪುನಃ ಮುಗಿಲು ಮುಟ್ಟಿತು. ಅವರು ಪುನಃ ಹೇಳ ತೊಡಗಿದರು, "ಮುಸ್ಲಿಮರೇ! ನನ್ನನ್ನು ಪುನಃ ಕುರೈಶರಿಗೆ ಒಪ್ಪಿಸುತ್ತೀರಾ? ಅವರು ನನ್ನನ್ನು ಪುನಃ ಧರ್ಮಭ್ರಷ್ಟನನ್ನಾಗಿ ಡಿ ಬಿಡಲಾರರೇ?"

ಪ್ರವಾದಿವರ್ಯರು ಅಬೂ ಜಂದಲ್‌ರನ್ನುದ್ದೇಶಿಸಿ ಹೀಗೆಂದರು,

"ಅಬೂ ಜಂದಲ್! ತಾಳ್ಮೆ ವಹಿಸಿರಿ. ನಮ್ಮ ವರ್ತನೆಯ ಪರಿಣಾಮ ಬಹುಬೇಗನೆ ಟವಾಗಬಹುದು. ಅಲ್ಲಾಹನು ನಿಮಗೂ ನಿಮ್ಮಂತಹ ಇತರ ಮರ್ದಿತರಿಗೂ ಬೇರಾವುದೇ ಯನ್ನು ತೋರಿಸಿ ಕೊಡದಿರಲಾರನು. ನೀವು ಹೋಗಿರಿ."

ಅಬೂ ಜಂದಲ್‌ರನ್ನು ಕಾಲಿಗೆ ಬೇಡಿ ತೊಡಿಸಿದ ಅವಸ್ಥೆಯಲ್ಲೇ ಸುಹೈಲ್ ಬಿನ್ ್ರರಿಗೆ ಒಪ್ಪಿಸಲಾಯಿತು. ಅನಂತರ ಕರಾರು ಪತ್ರದ ಮೇಲೆ ಉಭಯತ್ರರೂ ಸಹಿ ದರು.

ಒಂದನೇ ಶರ್ತದ ಪ್ರಕಾರ ಪ್ರವಾದಿ(ಸ) ಮತ್ತು ಸಂಗಾತಿಗಳು ಉಮ್ರಾ ನಿರ್ವಹಿಸದೇ ಮರಳಿ ಮದೀನಾದ ಕಡೆಗೆ ಪ್ರಯಾಣ ಬೆಳೆಸಿದರು. ಸ್ವಲ್ಪ ಮುಂದುವರಿದಿದ್ದರಷ್ಟೆ ಪ್ರವಾದಿಯವರಿಗೆ(ಸ) ಅಲ್ಲಾಹನ ವತಿಯಿಂದ ದಿವ್ಯವಾಣಿ ಅವತೀರ್ಣಗೊಂಡಿತು.

"(ಓ ಪ್ರವಾದಿ!) ನಾವು ನಿಮಗೆ ಅತ್ಯಂತ ಸ್ಪಷ್ಟ ವಿಜಯವನ್ನು ದಯಪಾಲಿಸಿದೆ ಎಂಬ ಸೂಕ್ತದಿಂದ ಆರಂಭಗೊಳ್ಳುವ 'ಅಲ್ ಫತ್ಹ್' ಅಧ್ಯಾಯ ಅವತೀರ್ಣಗೊಂಡಿ

ಈ ಸೂಕ್ತಗಳ ಮೂಲಕ ಅಲ್ಲಾಹನು ಮುಸ್ಲಿಮರಿಗೆ ಮುಂದೆ ಪ್ರಾಪ್ತವಾಗಲಿ ವಿಜಯಗಳ ಮತ್ತು ಸಮರಾರ್ಜಿತಗಳ ಕಡೆಗೆ ಸೂಚನೆ ನೀಡಿದನು. ವಸ್ತುತಃ ಸಹಾಬಿಗಳೆಲ್ಲ ಈ ಘಟನೆಯನ್ನು ತಮ್ಮ ಪಾಲಿಗೆ ದಯನೀಯ ಸೋಲೆಂದು ಭಾವಿಸಿದ್ದರು.

ಇದರಿಂದಾಗಿ ಕಾವೇರಿದ ವಾತಾವರಣವು ಒಮ್ಮೆಲೇ ತಣ್ಣಗಾಯಿತು. ಉಮರ್‌ರಿಗೆ ತಾನು ಪ್ರವಾದಿವರ್ಯರ(ಸ) ಮುಂದೆ ಆಡಿದ ಮಾತುಗಳ ಬಗ್ಗೆ ಅತ್ಯಂತ ಖೇದವಾಯಿ

## ಅಬೂ ಜಂದಲ್ ಮದೀನಾ ತಲುಪಿದರು!

ಪ್ರವಾದಿ(ಸ) ಹುದೈಬಿಯಾದಿಂದ ಮದೀನಾಕ್ಕೆ ಮರಳಿದರು. ಸಕೀಫ್ ಗೋತ್ರದ ಓ ಮರ್ದಿತ ಮುಸ್ಲಿಮ್ ಯುವಕ ಮಕ್ಕಾದ ಮುಶ್ರಿಕರ ಹಿಂಸೆ-ದೌರ್ಜನ್ಯಗಳಿಂದ ಹೇಗ ತಪ್ಪಿಸಿಕೊಂಡು ಮದೀನಾಕ್ಕೆ ಬಂದನು. ಆತನ ಹೆಸರು ಅಬೂಬಸೀರ್(ರ) ಎಂದಾಗಿ ಮಕ್ಕಾದವರಿಗೆ ಈ ವಿಷಯ ತಿಳಿದಾಗ ಆತನ ಹಿಂದೆಯೇ ಇಬ್ಬರು ದೂತರನ್ನು ಅ ಮದೀನಾಕ್ಕೆ ಕಳಿಸಿದರು. ಅವರು ಪ್ರವಾದಿವರ್ಯರ(ಸ) ಬಳಿಗೆ ಬಂದು, ಅಬೂ ಬಸೀರ್‌ರ ತಮಗೆ ಒಪ್ಪಿಸುವಂತೆ ಕೇಳಿ ಕೊಂಡರು. ಪ್ರವಾದಿವರ್ಯರು ಹುದೈಬಿಯಾ ಒಡಂಬಡಿಕೆ ಪ್ರಕಾರ ಅಬೂ ಬಸೀರ್‌ರನ್ನು ಅವರ ಕೈಗಳಿಗೆ ಒಪ್ಪಿಸಿದರು. ಅವರು ಮಕ್ಕಾ ಸಾಗುತ್ತಿರುವಾಗ ದಾರಿ ಮಧ್ಯೆ ಅಬೂ ಬಸೀರ್ ಉಪಾಯದಿಂದ ಅವರಲ್ಲೊಬ್ಬನ ಖಡ್ಗವ ಕಸಿದು ಒಬ್ಬನನ್ನು ಕೊಂದು ಹಾಕಿದರು. ಮತ್ತೊಬ್ಬ ಮದೀನಾಕ್ಕೆ ಓಡಿ ಹೋ ಪ್ರವಾದಿವರ್ಯರಲ್ಲಿ ನಡೆದ ವೃತ್ತಾಂತವನ್ನು ತಿಳಿಸಿದನು. ಅಷ್ಟರಲ್ಲಿ ಅಬೂ ಬಸೀರ್ ಕೂ ಅಲ್ಲಿಗೆ ತಲಪಿ ಪ್ರವಾದಿವರ್ಯರೊಂದಿಗೆ ಹೀಗೆಂದರು-

"ಅಲ್ಲಾಹನ ಸಂದೇಶವಾಹಕರೆ! ಅಲ್ಲಾಹನು ತಮ್ಮನ್ನು ನನ್ನ ವಿಷಯದಲ್ಲಿ ಹೊ ಮುಕ್ತ ಗೊಳಿಸಿರುವನು. ಏಕೆಂದರೆ ತಾವು ಒಪ್ಪಂದ ಶರ್ತವನ್ನು ಪೂರ್ತಿಗೊಳಿಸಿದ್ದೀ ಅಲ್ಲಾಹನು ಈ ಸತ್ಯನಿಷೇಧಿಗಳ ಕೈಯಿಂದ ನನ್ನನ್ನು ರಕ್ಷಿಸಿದನು ಎಂಬುದು ಬೇರೆ ವಿಷಯ

ಅಬೂ ಬಸೀರ್‌ನ ಮಾತನ್ನು ಕೇಳಿ ಪ್ರವಾದಿ(ಸ) ಸಹಾಬಿಗಳನ್ನುದ್ದೇಶಿಸಿ, "ಈ ವ್ಯ ಕೆಲವು ಸಂಗಾತಿಗಳು ಸಿಕ್ಕಿ ಬಿಟ್ಟರೆ ಈತ ಯುದ್ಧಾಗ್ನಿ ಹೊತ್ತಿಸಬಲ್ಲನು" ಎಂದು ಹೇಳಿದ

ತನ್ನನ್ನು ಮಕ್ಕಾಕ್ಕೆ ಕಳಿಸಲಾಗುವುದೆಂದರಿತ ಅಬೂ ಬಸೀರ್ ಮೆಲ್ಲನೆ ಮದೀನ ತೀರ ಪ್ರದೇಶದತ್ತ ಪ್ರಯಾಣ ಬೆಳೆಸಿದರು. ಮಕ್ಕಾದಿಂದ ಸಿರಿಯಾಕ್ಕೆ ಹೋಗುವ ಹೆದ್ದಾರಿಯ ಒಂದು ಕಡೆ ಠಿಕಾಣಿ ಹೂಡಿದರು. ಆ ದಾರಿಯಾಗಿ ಕುರೈಶರ ವ್ಯಾಪಾರಿ ತಂಡಗಳು ಆಗ ಹಾದು ಹೋಗುತ್ತಿದ್ದುವು. ಕೆಲವು ದಿನಗಳ ಬಳಿಕ ಅಬೂ ಜಂದಲ್ ಕೂಡಾ ಅ

ರ್‌ರನ್ನು ಬಂದು ಸೇರಿದರು. ಅದೇ ರೀತಿ ಇನ್ನೂ ಕೆಲವು ಮರ್ದಿತ ಮುಸ್ಲಿಮರು ಮಕ್ಕಾದ ಶರ ಹಿಡಿತದಿಂದ ತಪ್ಪಿಸಿ ಕೊಂಡು ಅಲ್ಲಿಗೆ ತಲಪಿದರು. ಹೀಗೆ ಅಲ್ಲಿ ಮರ್ದಿತರ ಒಂದು ತವೇ ಉಂಟಾಯಿತು.

ಈ ತಂಡವು ಕುರೈಶರ ವ್ಯಾಪಾರಿ ತಂಡಗಳ ಮೇಲೆ ಆಕ್ರಮಣ ಮಾಡಿ ಕೊಳ್ಳೆ ಹೊಡೆಯ ತಗಿತು. ಇದು ನಿರಂತರ ಮುಂದುವರಿಯುತ್ತಾ, ಕುರೈಶರಿಗೆ ಯಾವುದೇ ಸರಕನ್ನು ಯುವುದು ದುಸ್ತರವಾಯಿತು. ಈ ರೀತಿ ಅವರ ಆರ್ಥಿಕ ಮೂಲವಾಗಿದ್ದ ವ್ಯಾಪಾರ ವಾಟುಗಳು ಭಾರೀ ಅಪಾಯಕ್ಕೆ ಸಿಲುಕಿದುವು. ಈಗ ಅವರಿಗೆ ಚಿಂತೆ ಹತ್ತಿತು. ಇದೆಲ್ಲವೂ ಸ್ಲಿಮರನ್ನು ಮಕ್ಕಾದಿಂದ ಮರಳಿ ಕಳಿಸಲಾಗುವುದಿಲ್ಲ ಎಂಬ ಶರ್ತ ವಿಧಿಸಿದುದರ ಣಾಮವಾಗಿದೆ. ಈ ಶರ್ತ ಜಾರಿಯಲ್ಲಿರುವ ತನಕ ಕುರೈಶರ ಯಾವುದೇ ವ್ಯಾಪಾರಿ ತಂಡವು ಸ್ಲಿಮರ ಹಿಡಿತದಿಂದ ತಪ್ಪಿಸಿ ಹೋಗಲು ಸಾಧ್ಯವಿಲ್ಲವೆಂದು ಅವರಿಗೆ ಮನವರಿಕೆ ಯಿತು. ಈ ಶರ್ತವನ್ನು ರದ್ದುಗೊಳಿಸುವುದೇ ಲೇಸೆಂದು ಅವರು ಭಾವಿಸಿದರು. ದರಿಂದ ಅವರು ಒಬ್ಬ ದೂತನನ್ನು ಪ್ರವಾದಿಯವರ(ಸ) ಬಳಿಗೆ ಕಳಿಸಿದರು. ಪ್ರಸ್ತುತ ವನ್ನು ಅಲ್ಲಾಹನಿಗಾಗಿಯೂ ಕುಟುಂಬ ಸಂಬಂಧದ ಸುಧಾರಣೆಯ ದೃಷ್ಟಿಯಿಂದಲೂ ದ್ದುಗೊಳಿಸುವಂತೆ ಹಾಗೂ ಅಬೂ ಬಸೀರ್ ಮತ್ತು ಅಬೂ ಜಂದಲ್‌ರನ್ನು ಮದೀನಾಕ್ಕೆ ಕೊಳ್ಳುವಂತೆ ಆ ದೂತನ ಮೂಲಕ ವಿನಂತಿಸಿದರು. ಇನ್ನು ಮುಂದೆ ಮುಸ್ಲಿಮರ ಪೈಕಿ ರಾದರೂ ನಿಮ್ಮಲ್ಲಿಗೆ ಓಡಿ ಬಂದರೆ ಅವರನ್ನು ನಮ್ಮಲ್ಲಿಗೆ ಮರಳಿಸುವ ಹೊಣೆಗಾರಿಕೆ ಗಿಲ್ಲ. ಅವರು ಸ್ವತಂತ್ರರು ಎಂದೂ ಹೇಳಿ ಕಳಿಸಿದರು.

ಪ್ರವಾದಿವರ್ಯರು ಕುರೈಶರ ಈ ವಿನಂತಿಯನ್ನು ಒಪ್ಪಿದರು. ಅಬೂ ಬಸೀರ್ ಮತ್ತು ಬೂ ಜಂದಲ್‌ರಿಗೆ ಒಂದು ಪತ್ರ ಬರೆದು, ಮದೀನಾಕ್ಕೆ ಬರುವಂತೆಯೂ ಉಳಿದವರು ತಮ್ಮ ಮನೆಗಳಿಗೆ ಹೋಗುವಂತೆಯೂ ಆದೇಶಿಸಿದರು. ಈ ಪತ್ರ ಅಬೂ ಬಸೀರ್‌ರಿಗೆ ಪಿದಾಗ ಅವರು ಮರಣ ಶಯ್ಯೆಯಲ್ಲಿದ್ದರು. ಪತ್ರವನ್ನು ಓದುತ್ತಿದ್ದಂತೆಯೇ ಅವರು ನೆಯುಸಿರೆಳೆದರು. ಅಬೂ ಜಂದಲ್‌ರು ಅವರ ಜನಾಝಾ ನಮಾಝ್ ನಿರ್ವಹಿಸಿ ಅಲ್ಲೇ ನ ಕಾರ್ಯ ಮುಗಿಸಿದ ಬಳಿಕ ಪ್ರವಾದಿವರ್ಯರ ಆದೇಶದಂತೆ ಮದೀನಾಕ್ಕೆ ಬಂದರು. ದೀನಾಕ್ಕೆ ಬಂದ ಬಳಿಕ ಮಕ್ಕಾ ವಿಜಯ, ಹುನೈನ್, ತಾಯಿಫ್, ತಬೂಕ್ ಸೇರಿದಂತೆ ಲ್ಲ ಯುದ್ಧಗಳಲ್ಲೂ ಪ್ರವಾದಿವರ್ಯರ ಜತೆಗಿದ್ದರು.

ಪ್ರವಾದಿಯವರ(ಸ) ಕಾಲದಲ್ಲೂ ಅಬೂಬಕರ್‌ರವರ(ರ) ಖಿಲಾಫತ್‌ನ ಕಾಲಾವಧಿಯಲ್ಲೂ ಬೂ ಜಂದಲ್ ಮದೀನಾದಲ್ಲೇ ನೆಲೆಸಿದರು. ಉಮರ್‌ರ(ರ) ಕಾಲದಲ್ಲಿ ಸಿರಿಯಾಕ್ಕೆ ಹೋಗುವ ಸೇನೆಯಲ್ಲಿ ಸೇರಿಕೊಂಡು ರೋಮನರ ವಿರುದ್ಧ ವೀರಾವೇಶದಿಂದ ಹೋರಾಡಿದರು. ನಂತರ ಆರು ವರ್ಷಗಳ ಕಾಲ ಅವರು ಯುದ್ಧ ರಂಗದಲ್ಲಿದ್ದರೆಂದು ಇತಿಹಾಸಕಾರರು ಖಲಿಸಿದ್ದಾರೆ. ಹಿ.ಶ. 18ರಲ್ಲಿ ಪ್ಲೇಗ್ ಜ್ವರಕ್ಕೆ ಸಾವಿರಾರು ಯೋಧರು ಬಲಿಯಾದರು. ಬೂ ಜಂದಲ್ ಕೂಡಾ ಅವರಲ್ಲಿದ್ದರು. ಅವರ ಮನೆಯಿಂದ ನೂರಾರು ಮೈಲು ದೂರದ ರಂಗದಲ್ಲಿ ಅವರು ಸಾವನ್ನಪ್ಪಿದರು.

ಸಿರಿಯಾದಲ್ಲಿದ್ದಾಗ ಅಪೂರ್ವ ಘಟನೆಯೊಂದು ನಡೆಯಿತು. ಒಮ್ಮೆ ಕೆಲವು ಯೋ ಮದ್ಯಪಾನ ಮಾಡಿ ಬಿಟ್ಟರು. ಅಬೂ ಜಂದಲ್ ಕೂಡಾ ಅದರಲ್ಲಿ ಶಾಮೀಲಾಗಿದ್ದರು. ಅ ನಿಜವಾಗಿಯೂ ಮದ್ಯಪಾನಿಗಳಾಗಿರಲಿಲ್ಲ. ತಾತ್ಕಾಲಿಕ ದೌರ್ಬಲ್ಯದಿಂದಾಗಿ ಅವರಿಂದ ಪ್ರಮಾದ ಸಂಭವಿಸಿ ಬಿಟ್ಟಿತ್ತು. ಸಿರಿಯಾದ ಅಧಿಕಾರಿಯಾಗಿದ್ದ ಅಬೂ ಉಬೈದಾ ಜರ್ರಾಹ್(ರ), ಖಲೀಫಾ ಉಮರ್‌ರವರ(ರ) ಆದೇಶ ಪ್ರಕಾರ ಎಲ್ಲ ತಪ್ಪಿತಸ್ಥರಿಗೂ 80 ಛಡಿಯೇಟಿನ ಶಿಕ್ಷೆ ವಿಧಿಸಿದರು. ಸಾರ್ವಜನಿಕವಾಗಿ ನೀಡಲಾದ ಈ ಶಿಕ್ಷೆಯ ಪ್ರ ಎಷ್ಟಾಗಿತ್ತೆಂದರೆ ತಮ್ಮಿಂದ ಸಂಭವಿಸಿದ ಪ್ರಮಾದಕ್ಕಾಗಿ ಅವರೆಲ್ಲರೂ ನಾಚಿ ತ ಮನೆಗಳಿಂದ ಹೊರ ಬರುವುದನ್ನು ಬಿಟ್ಟು ಬಿಟ್ಟರು. ಅಬೂ ಜಂದಲ್ ಅವರ ಪೈಕಿ ಹೆಚ್ಚು ನಾಚಿಕೆ ಸ್ವಭಾವದವರಾಗಿದ್ದರು. ಅವರು ಅತಿ ಹೆಚ್ಚು ಲಜ್ಜಿತರಾದರು. ಅ ಉಬೈದಾರಿಗೆ ಈ ವಿಷಯ ತಿಳಿದಾಗ ಅದನ್ನು ಹ.ಉಮರ್‌ರಿಗೆ(ರ) ತಿಳಿಸುತ್ತಾ ಅ ಜಂದಲ್‌ರಿಗೆ ಸಾಂತ್ವನ ನೀಡಿ ಒಂದು ಪತ್ರ ಬರೆಯುವಂತೆ ವಿನಂತಿಸಿದರು.

ಹ.ಉಮರ್(ರ) ಅವರಿಗೆ ಹೀಗೆ ಪತ್ರ ಬರೆದರು- "ಅಬೂ ಜಂದಲ್‌ರಿಗೆ ಉ ಬರೆಯುವ ಪತ್ರ. ಅಲ್ಲಾಹನು ತನ್ನೊಂದಿಗೆ ಭಾಗೀದಾರರಾಗಿ ಮಾಡುವವರನ್ನು ಎಂದೆಂ ಕ್ಷಮಿಸುವುದಿಲ್ಲ. ಅದಕ್ಕಿಂತ ಹೊರತಾದ ಕಡಿಮೆ ದರ್ಜೆಯ ಎಲ್ಲ ಪಾಪಗಳ ಆತನಿಚ್ಛಿಸಿದರೆ ಕ್ಷಮಿಸಿ ಬಿಡುವನು. ಆದುದರಿಂದ ನೀವು ತೌಬಾ ಮಾಡಿರಿ. ತಲೆ ಎತ್ತಿ ನಡೆಯಿರಿ. ನಿರಾಶರಾಗಬೇಡಿರಿ. ಅಲ್ಲಾಹನು ಹೇಳುತ್ತಾನೆ- "ತಮ್ಮ ಮೇಲೆ ತ ಅನ್ಯಾಯವೆಸಗಿ ಕೊಂಡಿರುವ ಓ ನನ್ನ ದಾಸರೆ! ಅಲ್ಲಾಹನ ಕರುಣೆಯ ಬಗ್ಗೆ ನಿರಾಶರಾಗಬೇ ನಿಶ್ಚಯವಾಗಿಯೂ ಅಲ್ಲಾಹನು ಸಕಲ ಪಾಪಗಳನ್ನು ಕ್ಷಮಿಸಿ ಬಿಡುತ್ತಾನೆ. ಅವನ ಕ್ಷಮಾಶೀಲನೂ ಕರುಣಾನಿಧಿಯೂ ಆಗಿರುತ್ತಾನೆ." (ಅಝ್ಝುಮರ್: 53)

ಸಹಾಬಿಗಳು ಏನಾದರೂ ತಪ್ಪೆಸಗಿದರೆ ಅದರ ಶಿಕ್ಷೆಗಾಗಿ ತಮ್ಮನ್ನು ಸ್ವ ಸಮರ್ಪಿಸುತ್ತಿದ್ದರು. ಅಷ್ಟೇ ಅಲ್ಲ, ತಾವು ಮಾಡಿದ ಪಾಪಗಳಿಗಾಗಿ ಬಹಳಷ್ಟು ಮರುಗುತ್ತಿ ಅದರ ಪ್ರಭಾವವನ್ನು ಅಳಿಸಲು ಪಶ್ಚಾತ್ತಾಪ, ದಾನ-ಧರ್ಮಗಳನ್ನು ಮಾಡುತ್ತಿದ್ದರು. ಅ ಜಂದಲ್ ಕೂಡಾ ನಾಚಿಕೆಯಿಂದ ಹೊರ ಬರಲಾರದಾದಾಗ ಹ.ಉಮರ್‌ರವರು ಅವರಲ್ಲಿ ಆತ್ಮಸ್ಥೈರ್ಯ ತುಂಬಿ ಪತ್ರ ಬರೆದರು. ಅಬೂ ಜಂದಲ್‌ರಿಗೆ ಸಮುದಾಯ ಎಷ್ಟು ಗೌರವ ಸ್ಥಾನ ಪ್ರಾಪ್ತವಾಗಿತ್ತೆಂದು ಇದರಿಂದ ಅಂದಾಜಿಸಬಹುದು. ರಾಷ್ಟ್ರ ನಾಯ ಅವರೊಂದಿಗೆ ನೇರವಾಗಿ ವ್ಯವಹರಿಸುತ್ತಾರೆ. ಅಬೂ ಜಂದಲ್ ಅತ್ಯುತ್ತಮ ಕವಿ ಆಗಿದ್ದರು. ಅವರು ಅನೇಕ ಕವನಗಳನ್ನು ರಚಿಸಿ ಹಾಡಿದ್ದಾರೆಂದು ಚರಿತ್ರೆಯಿಂದ ತಿ ಬರುತ್ತದೆ.

# ಹ. ಖಬ್ಬಾಬ್ ಬಿನ್ ಅರತ್(ರ)

## ಸ್ವೀಕಾರ ಬಹಿರಂಗಗೊಳಿಸಿದ ಮೊದಲಿಗ

ಮಕ್ಕಾದ ಗುಲಾಮರ ಸಂತೆ. ಸಾಕಷ್ಟು ಸಂಖ್ಯೆಯಲ್ಲಿ ಬಾಲ-ಯುವ ಗುಲಾಮರನ್ನು ಟಕ್ಕಾಗಿ ನಿಲ್ಲಿಸಲಾಗಿದೆ. ಉಮ್ಮು ಅನ್ಮಾರ್ ಖುಝಾಇಯ ಎಂಬೋರ್ವ ಮಹಿಳೆ ಸೇವೆಗಾಗಿ ಮತ್ತು ಸಂಪಾದನೆ ಮಾಡಿ ತನಗೆ ಕೊಡಲಿಕ್ಕಾಗಿ ಓರ್ವ ಗುಲಾಮನನ್ನು ದಿಸಬೇಕೆಂಬ ಉದ್ದೇಶದಿಂದ ಸಂತೆಗೆ ಬಂದಳು. ಅಲ್ಲಿ ನೆರೆದಿದ್ದ ಗುಲಾಮರ ಪೈಕಿ ಬ್ಬನನ್ನೂ ದಿಟ್ಟಿಸುತ್ತಾ ಮುಂದೆ ಸಾಗಿದಳು. ಕೊನೆಗೂ ಆಕೆಯ ಆಯ್ಕೆಯ ದೃಷ್ಟಿ ಪ್ರೌಢಾವಸ್ಥೆಗೆ ತಲುಪಿರದ ಓರ್ವ ಬಾಲಕನ ಮೇಲೆ ಬಿತ್ತು. ಬಾಲಕನ ಆರೋಗ್ಯ ಮತ್ತು ಆತನ ಮುಖದಲ್ಲಿ ಪ್ರಕಟವಾಗುತ್ತಿದ್ದ ಬುದ್ಧಿಮತ್ತೆಯೇ ಆತನನ್ನು ಖರೀದಿಸಲು ನ್ನು ಪ್ರೇರೇಪಿಸಿತ್ತು. ಆಕೆ ಹಣ ಕೊಟ್ಟು ಆತನನ್ನು ಖರೀದಿಸಿ ಮನೆಗೆ ಕೊಂಡೊಯ್ದಳು.

ಮಧ್ಯೆ ಆಕೆ ಪ್ರಶ್ನಿಸಿದಳು,

'ಮಗನೇ! ನಿನ್ನ ಹೆಸರೇನು?'

'ಖಬ್ಬಾಬ್'

'ನಿನ್ನ ತಂದೆಯ ಹೆಸರು?'

'ಅರತ್'

'ನೀನೆಲ್ಲಿಯವನು?'

'ನಜ್ದ್‌ನವನು.'

'ಹಾಗಾದರೆ ನೀನು ಅರಬ್ ಜನಾಂಗದವನು?'

'ಹೌದು, ನಾನು ತಮೀಮ್ ಗೋತ್ರಕ್ಕೆ ಸೇರಿದವನು.'

'ನೀನು ಇಲ್ಲಿ ಮಾರಾಟಗಾರರ ಕೈಗೆ ಹೇಗೆ ಸಿಕ್ಕಿದೆ?'

'ಒಂದು ಗೋತ್ರದ ಜನರು ನಮ್ಮೂರಿನ ಮೇಲೆ ಹಠಾತ್ ದಾಳಿ ಮಾಡಿ ನಮ್ಮ ಬಿವಾರುಗಳನ್ನು ವಶಪಡಿಸಿಕೊಂಡರು. ನಮ್ಮ ಸ್ತ್ರೀಯರನ್ನು ಸೆರೆ ಹಿಡಿದರು. ಮಕ್ಕಳನ್ನೂ ದರು. ಈ ರೀತಿ ಹಿಡಿಯಲ್ಪಟ್ಟವರಲ್ಲಿ ನಾನೂ ಸೇರಿದ್ದೆ. ಅನಂತರ ಒಂದು ಕೈಯಿಂದ ನ್ನೊಂದು ಕೈಗೆ ಹೋಗುತ್ತಾ ಇಲ್ಲಿ ಮಕ್ಕಾಕ್ಕೆ ತಲುಪಿದೆ. ಈಗ ನಿಮ್ಮ ಕೈಗೆ ಬಂದಿದ್ದೇನೆ.'

ಉಮ್ಮು ಅನ್ಮಾರ್ ಬಾಲಕ ಖಬ್ಬಾಬ್‌ನನ್ನು ಆಯುಧ ತಯಾರಿಸುವ ( ಕಲಿಯಲಿಕ್ಕಾಗಿ ಓರ್ವ ಕಮ್ಮಾರನಿಗೆ ಒಪ್ಪಿಸಿದಳು. ಆತ ಬಹುಬೇಗನೆ ಅದನ್ನು ಕಲಿತ. ಅ ಕೈಕಾಲು ಗಟ್ಟಿ ಮುಟ್ಟಾದುವು. ಉಮ್ಮು ಅನ್ಮಾರ್ ಒಂದು ಅಂಗಡಿಯನ್ನು ಬಾಡಿಗೆಗೆ ಪ ಖಬ್ಬಾಬ್‌ರನ್ನು ಅಲ್ಲಿ ನೇಮಿಸಿದಳು. ಆಯುಧ ತಯಾರಿಸುವ ಕಚ್ಚಾ ವಸ್ತುಗಳನ್ನು ಖರೀ ಕೊಟ್ಟಳು.

ಖಬ್ಬಾಬ್‌ರ ಕಲೆಯಿಂದಾಗಿ ಆಕೆ ಭಾರೀ ಲಾಭ ಗಳಿಸಿದಳು. ಖಬ್ಬಾಬ್‌ರ ಕೀರ್ತಿ ನ ಎಲ್ಲೆಡೆ ಹಬ್ಬಿತು. ಜನರು ಭಾರೀ ಸಂಖ್ಯೆಯಲ್ಲಿ ತಲವಾರು ಮತ್ತಿತರ ಆಯುಧಗ ಖರೀದಿಸಲು ಅವರ ಅಂಗಡಿಗೆ ಬರ ತೊಡಗಿದರು. ಅವರ ಕೀರ್ತಿ ಹಬ್ಬಲು ಇನ್ನೊ ಕಾರಣವೂ ಇತ್ತು. ಅವರು ಅತ್ಯಂತ ಪ್ರಾಮಾಣಿಕ ಹಾಗೂ ವಚನ ಪಾಲಕರಾಗಿದ್ದ

ಖಬ್ಬಾಬ್‌ರು(ರ) ನವ ತಾರುಣ್ಯದಲ್ಲಿದ್ದಿದ್ದರೂ ಅವರ ಧೀಮಂತಿಕೆ ಹಿರಿಯ ಮೀರಿಸುವಂತಿತ್ತು. ತನ್ನ ಕೆಲಸ ಕಾರ್ಯಗಳು ಮುಗಿದ ಬಳಿಕ ಏಕಾಂತದಲ್ಲಿ ಕುಳಿತು ಅ ಯೋಚನಾಮಗ್ನರಾಗಿರುತ್ತಿದ್ದರು. ತಾನು ಜೀವಿಸುತ್ತಿರುವ ಈ ಸಮಾಜವು ಎಷ್ಟೊ ಕೆಟ್ಟಿದೆ. ಯಾವ ಅಂಧಕಾರದಲ್ಲಿ ತೊಳಲಾಡುತ್ತಿದೆ ಎಂದು ಯೋಚಿಸುವಾಗಲೇ ಅವರ ಮನ ಕಂಪಿಸುತ್ತಿತ್ತು. ಒಂದಲ್ಲ ಒಂದು ದಿನ ಈ ಅಂಧಕಾರ ತೊಲಗದೆ ಇರಲಾ ಎಂದು ಅವರ ಮನಸ್ಸು ಕೂಗಿ ಹೇಳುತ್ತಿತ್ತು. ಆದುದರಿಂದ ಅವರು ಅಜ್ಞಾನದ ಅಂಧ ತೊಲಗಿ ಸನ್ಮಾರ್ಗದ ಬೆಳಕು ಹರಿಯುವ ದಿನವನ್ನು ಕಾಣುವ ಹಂಬಲದಿಂದ ಅಲ್ಲಾಹ ತನಗೆ ದೀರ್ಘಾಯುಷ್ಯ ದಯಪಾಲಿಸುವಂತೆ ಪ್ರಾರ್ಥಿಸುತ್ತಿದ್ದರು.

ಖಬ್ಬಾಬ್‌ರ ಪ್ರಾರ್ಥನೆ ವ್ಯರ್ಥವಾಗಲಿಲ್ಲ. ಅವರ ಆಗ್ರಹ ಬಹುಬೇ ಪೂರ್ತಿಗೊಂಡಿತು. ಪ್ರವಾದಿ ಮುಹಮ್ಮದ್(ಸ) ಮಕ್ಕಾದಲ್ಲಿ ಬೆಳಗಿದ ಸನ್ಮಾರ್ಗದ ಬೆ ಮೆಲ್ಲಮೆಲ್ಲನೆ ಹರಡುತ್ತಾ ಇತ್ತು. ಖಬ್ಬಾಬ್‌ರ ಕಿವಿಗೂ ಅದರ ಕರೆ ಬಿತ್ತು. ಅ ಪ್ರವಾದಿಯವರ(ಸ) ಸನ್ನಿಧಿಗೆ ತೆರಳಿ ಅಲ್ಲಾಹನ ವಾಣಿಯನ್ನು ಆಲಿಸಿದರು. ಅ ಹೃದಯದಲ್ಲಿ ಅದು ಪ್ರಕಾಶ ಹರಡಿತು.

ಅವರು ಪ್ರವಾದಿಯವರತ್ತ ಕೈಚಾಚಿ ಅಲ್ಲಾಹನಲ್ಲದೆ ಅನ್ಯ ಆರಾಧ್ಯರಿಲ್ಲ, ಮುಹಮ್ಮದ್ ಅಲ್ಲಾಹನ ಸಂದೇಶವಾಹಕರಾಗಿದ್ದಾರೆ ಎಂದು ಘೋಷಿಸಿ ಇಸ್ಲಾಮಿನೊಳಗೆ ಪ್ರವೇಶಿಸಿದ ಆರಂಭದಲ್ಲಿ ಇಸ್ಲಾಮ್ ಸ್ವೀಕರಿಸಿದವರಲ್ಲಿ ಅವರು ಆರನೇ ವ್ಯಕ್ತಿಯಾಗಿದ್ದರು.

ಖಬ್ಬಾಬ್ ತನ್ನ ಇಸ್ಲಾಮ್ ಸ್ವೀಕಾರವನ್ನು ಯಾರಿಂದಲೂ ಬಚ್ಚಿಡಲು ಬಯಸಲಿ ಅದನ್ನು ಬಹಿರಂಗವಾಗಿಯೇ ಹೇಳತೊಡಗಿದರು. ಇದು ಅವರ ಒಡತಿಯ ಕಿವಿಗೂ ಮುಟ್ಟಿ ಈ ಸುದ್ದಿ ಆಕೆಗೆ ಮುಟ್ಟಿದ್ದೇ ತಡ ಆಕೆ ಕೆರಳಿ ಕೆಂಡವಾದಳು. ತನ್ನ ಸಹೋದರ ಸ ಬಿನ್ ಅಬ್ದುಲ್ ಉಝ್ಝಾ ಹಾಗೂ ಬನೂ ಖುಝಾಅ ಗೋತ್ರದ ಕೆಲವು ಯುವಕರ ಕರೆದುಕೊಂಡು ಖಬ್ಬಾಬ್‌ರ ಬಳಿಗೆ ತಲಪಿದರು. ಆಗ ಅವರು ತನ್ನ ಕೆಲಸದ ತಲ್ಲೀನರಾಗಿದ್ದರು. ಅವರನ್ನುದ್ದೇಶಿಸಿ ಸಬಾ ಹೀಗೆ ಗರ್ಜಿಸಿದ, "ಖಬ್ಬಾಬ್! ನಮಗೆ

ಗ್ಗೆ ಒಂದು ಸುದ್ದಿ ತಲುಪಿದೆ. ಆದರೆ ಅದನ್ನು ನಂಬಲಾಗಲಿಲ್ಲ."

'ಯಾವ ಸುದ್ದಿ?' ಖಬ್ಬಾಬ್ ಶಾಂತವಾಗಿ ಪ್ರಶ್ನಿಸಿದರು. ಸಬಾ ಕೋಪದಿಂದ ಪುನಃ ಬೊಬ್ಬಿರಿದ, "ನೀನು ಧರ್ಮ ಭ್ರಷ್ಟನಾಗಿರುವೆ, ನಮ್ಮ ಹಿರಿಯರಿಂದ ಬಂದಂತಹ ಧರ್ಮವನ್ನು ತೊರೆದು ಬನೂ ಹಾಶಿಮರ ಆ ನೀಚನನ್ನು ಅನುಸರಿಸ ತೊಡಗಿರುವೆಯೆಂಬ ಸುದ್ದಿ ಎಲ್ಲೆಲ್ಲೂ ಹಬ್ಬಿದೆ"

"ನಾನು ಧರ್ಮ ಭ್ರಷ್ಟನಾಗಿಲ್ಲ. ನಾನು ಯಾರೂ ಸಹಭಾಗಿಯಿಲ್ಲದಂತಹ ಏಕೈಕನಾದ ಅಲ್ಲಾಹನನ್ನು ನಂಬಿದ್ದೇನೆ. ನಿಮ್ಮ ಮೂರ್ತಿ ಪೂಜೆಯನ್ನು ನಾನು ಬಿಟ್ಟಿದ್ದೇನೆ. ಮುಹಮ್ಮದ್(ಸ) ಅಲ್ಲಾಹನ ದಾಸ ಹಾಗೂ ಸಂದೇಶವಾಹಕರೆಂದು ಸಾಕ್ಷ್ಯವಹಿಸಿದ್ದೇನೆ" ಖಬ್ಬಾಬ್ ಶಾಂತವಾಗಿ ಹೇಳಿದರು.

ಖಬ್ಬಾಬ್‌ರ ಬಾಯಿಯಿಂದ ಹೊರಟ ಈ ಮಾತು ಸಬಾ ಮತ್ತು ಅವನ ಸಂಗಡಿಗರ ಕಿವಿಗೆ ಬಿದ್ದದ್ದೇ ತಡ ಅವರೆಲ್ಲರೂ ಒಮ್ಮೆಲೆ ಖಬ್ಬಾಬ್‌ರ ಮೇಲೆ ಮುಗಿಬಿದ್ದರು. ಒದೆತ ಮತ್ತು ಗುದ್ದಿನ ಸುರಿಮಳೆಯೇ ಅವರ ಮೇಲೆ ಬಿತ್ತು. ಯಾರಿಗೆ ಏನು ಸಿಕ್ಕಿತೋ ಅದರಿಂದ ಹೊಡೆಯಲಾರಂಭಿಸಿದರು. ಕಬ್ಬಿಣದ ಸರಳು, ಸುತ್ತಿಗೆ ಇತ್ಯಾದಿಗಳಿಂದ ಹೊಡೆದರು. ಖಬ್ಬಾಬ್ ಹೊಡೆತ ತಿಂದು ತಿಂದು ಕೊನೆಗೆ ಸಹಿಸಲಾರದೆ ಪ್ರಜ್ಞೆ ತಪ್ಪಿಬಿದ್ದು ಬಿಟ್ಟರು. ಅವರ ಶರೀರದಿಂದ ರಕ್ತ ಹರಿಯತೊಡಗಿತು.

ಈ ಸುದ್ದಿ ಕಾಳ್ಗಿಚ್ಚಿನಂತೆ ನಗರದಲ್ಲಿ ಹರಡಿತು. ಹುಡುಗನ ಧೈರ್ಯ ಕಂಡು ಜನರಿಗೆ ಅತ್ಯಾಶ್ಚರ್ಯವಾಯಿತು. ಏಕೆಂದರೆ ಅವರಿಗಿಂತ ಮುಂಚೆ ಮುಹಮ್ಮದ್‌ರ(ಸ) ಮೇಲೆ ವಿಶ್ವಾಸವಿರಿಸಿದ ಯಾರೂ ಈ ರೀತಿ ಬಹಿರಂಗವಾಗಿ ಇಸ್ಲಾಮ್ ಸ್ವೀಕರಿಸಿದ್ದನ್ನು ಘೋಷಿಸಿರಲಿಲ್ಲ. ಕುರೈಶ್ ಸರದಾರರಿಗೂ ದಿಗ್ಭ್ರಮೆಯುಂಟಾಯಿತು. ಯಾರೂ ಇಲ್ಲದ ಅನಾಥನಾದ ಈ ಗುಲಾಮ ತಮ್ಮ ಹಿರಿಯರ ಧರ್ಮದ ಬಗ್ಗೆ, ಅವರ ಆರಾಧ್ಯರ ಬಗ್ಗೆ ಈ ರೀತಿ ಮಾತನಾಡಬಲ್ಲನೆಂದು ಅವರು ಕನಸು ಮನಸಲ್ಲೂ ಯೋಚಿಸಿರಲಿಲ್ಲ. ತನ್ನ ಬೆಂಬಲಕ್ಕೆ ಯಾರೂ ಇಲ್ಲ ಮತ್ತು ತನಗೆ ಆಶ್ರಯ ನೀಡುವವರೂ ಯಾರೂ ಇಲ್ಲವೆಂದು ತಿಳಿದಿದ್ದೂ ಈ ರೀತಿಯ ದಿಟ್ಟತನ ತೋರಿದುದರಲ್ಲಿ ಕುರೈಶ್ ಸರದಾರರು ಚಿಂತೆಯಲ್ಲಿ ಮುಳುಗಿದರು. ಅವರ ಮಟ್ಟಿಗೆ ಅಂದು ಅತ್ಯಂತ ಕರಾಳ ದಿನವಾಗಿತ್ತು. ಅವರ ಭಾವನೆ ತಪ್ಪೂ ಆಗಿರಲಿಲ್ಲ. ಖಬ್ಬಾಬ್‌ರ ಧೈರ್ಯದ ನಂತರವೇ ಅವರ ಇತರ ಸಂಗಾತಿಗಳಲ್ಲೂ ಆತ್ಮವಿಶ್ವಾಸ ಮೂಡಿತು. ಅವರೂ ಒಬ್ಬೊಬ್ಬರಾಗಿ ತಮ್ಮ ಇಸ್ಲಾಮ್ ಸ್ವೀಕಾರವನ್ನು ಘೋಷಿಸತೊಡಗಿದರು.

## ಧೀರೋದಾತ್ತ ಬದುಕು

ಒಂದು ದಿನ ಅಬೂ ಸುಫ್ಯಾನ್, ವಲೀದ್, ಅಬೂಜಹಲ್ ಮತ್ತಿತರ ಕುರೈಶ್ ಸರದಾರರು ಕಅಬಾ ಭವನದ ಬಳಿ ಒಟ್ಟು ಸೇರಿದ್ದರು. ಅವರ ಚರ್ಚಾ ವಿಷಯ ಮುಹಮ್ಮದ್‌ರವರ(ಸ) ವ್ಯಕ್ತಿತ್ವ ಮತ್ತು ಅವರ ಸಂದೇಶವಾಗಿತ್ತು. ಮುಹಮ್ಮದ್‌ರ(ಸ)

ಸಂದೇಶವು ದಿನೇ ದಿನೇ ಹಬ್ಬುತ್ತಾ, ಬೆಳೆಯುತ್ತಾ, ಜನಪ್ರಿಯವಾಗುತ್ತಾ ಹೋಗುತ್ತಿದೆಯೆಂ
ಅವರಿಗೆ ಮನವರಿಕೆಯಾಯಿತು. ಆದುದರಿಂದ ರೋಗ ಉಲ್ಬಣಗೊಳ್ಳುವುದಕ್ಕಿಂತ ಮುಂ
ಅದಕ್ಕೆ ಮದ್ದರೆಯಬೇಕೆಂದು ತೀರ್ಮಾನಿಸಿದರು. ಅಂದು ಅವರು ಅಲ್ಲಿಂದ ಏಳುವಾ
ಒಮ್ಮತದಿಂದ ತೀರ್ಮಾನಿಸಿದ್ದೇನೆಂದರೆ ಪ್ರತಿಯೊಬ್ಬನೂ ತನ್ನ ಗೋತ್ರದಲ್ಲಿ ಯಾರಾದರು
ಮುಹಮ್ಮದ್‌ರನ್ನು(ಸ) ಅನುಸರಿಸುವುದನ್ನು ಕಂಡರೆ ಕಠಿಣವಾಗಿ ಶಿಕ್ಷಿಸಬೇಕು. ಆ ಶಿಕ್ಷೆ ಎಷ್ಟ
ಕಠೋರವಾಗಿರಬೇಕೆಂದರೆ ಒಂದೋ ಅವನು ಆ ಧರ್ಮವನ್ನು ತ್ಯಜಿಸಿ ಮಾತೃ ಧರ್ಮಕ
ಮರಳಬೇಕು. ಇಲ್ಲವಾದರೆ ಅವನ ಜೀವನ ಜ್ಯೋತಿಯು ನಂದಿ ಹೋಗಬೇಕು.

ಈ ತೀರ್ಮಾನದ ಪ್ರಕಾರ ಖಬ್ಬಾಬ್‌ರನ್ನು ದಂಡಿಸುವ ಹೊಣೆಯನ್ನು ಸಬಾ ಬಿನ್ ಅಬ್ದುಲ್ ಉಝ್ಝಾ ಮತ್ತು ಆತನ ಬನೂ ಖಿಝಾಅ ಗೋತ್ರದವರಿಗೆ ವಹಿಸಿಕೊಡಲಾಯಿತು. ನಡು ಮಧ್ಯಾಹ್ನದ ಉರಿ ಬಿಸಿಲು. ನೆಲವು ಸೂರ್ಯನ ತಾಪಕ್ಕೆ ಕಾದ ಬಾಣಲೆಯಂತಾಗುತ್ತಿತ್ತು. ಆಗ ಈ ಮಂದಿ ಖಬ್ಬಾಬ್‌ರನ್ನು ಎಲ್ಲೆಲ್ಲೂ ಆಶ್ರಯವಿಲ್ಲದ ನಡು ಬಯಲಿಗೆ ಎಳೆದುಕೊಂಡು ಹೋಗುತ್ತಿದ್ದರು. ಅವರ ಉಡುಪನ್ನು ಕಳಚಿ ಲೋಹದ ನಿಲುವಂಗಿಯನ್ನು ಅವರಿಗೆ ತೊಡಿಸಿ ಬಿಸಿಲಲ್ಲಿ ನಿಲ್ಲಿಸುತ್ತಿದ್ದರು. ಅಷ್ಟೇ ಅಲ್ಲ ಅವರಿಗೆ ನೀರನ್ನು ಒದಗಿಸುತ್ತಿರಲಿಲ್ಲ. ಅವರ ಯಾತನೆಯು ಪರಾಕಾಷ್ಟೆಗೇರಿದಾಗ ಅವರೊಂದಿಗೆ ಹೀಗೆ ಕೇಳುತ್ತಿದ್ದರು, "ಮುಹಮ್ಮದ್‌ರ(ಸ) ಬಗ್ಗೆ ನೀನು ಏನೆನ್ನುತ್ತೀ?" ಆಗ ಖಬ್ಬಾಬ್ ಹೀಗೆ ಉತ್ತರಿಸುತ್ತಿದ್ದರು,

"ಅವರು ಅಲ್ಲಾಹನ ದಾಸ ಮತ್ತು ಅವನ ಸಂದೇಶವಾಹಕರಾಗಿದ್ದಾರೆ. ನಮ್ಮನ್ನು ಸತ್ಯನಿಷೇಧ ಮತ್ತು ಬಹುದೇವಾರಾಧನೆಯ ಅಂಧಕಾರದಿಂದ ಹೊರತೆಗೆದು ಸತ್ಯವಿಶ್ವಾಸ ಮತ್ತು ಸನ್ಮಾರ್ಗದೆಡೆಗೆ ಒಯ್ಯಲಿಕ್ಕಾಗಿ ಅಲ್ಲಾಹನು ಅವರನ್ನು ಸತ್ಯಧರ್ಮ ಸಹಿತ ಕಳಿಸಿರುವನು."

ಈ ಉತ್ತರ ಕೇಳಿದ ಕೂಡಲೇ ಅವರ ಮೇಲೆ ದೌರ್ಜನ್ಯವೆಸಗಲಾಗುತ್ತಿತ್ತು. ಗುದ್ದು ಒದೆತಗಳಿಂದ ಅವರನ್ನು ಸತ್ಕರಿಸಲಾಗುತ್ತಿತ್ತು. ಅನಂತರ ಆ ಜನರು ಪುನಃ ಪ್ರಶ್ನಿಸುತ್ತಿದ್ದರು,

"ಲಾತ್ ಮತ್ತು ಉಝ್ಝಾ ದೇವತೆಗಳ ಬಗ್ಗೆ ನಿನ್ನ ಅಭಿಪ್ರಾಯವೇನು?"

"ಅವು ವಿಗ್ರಹಗಳಲ್ಲವೇ? ಅವುಗಳಿಗೆ ಯಾವುದೇ ಮಾತನ್ನು ಕೇಳುವ ಮತ್ತು ಅದಕ್ಕೆ ಉತ್ತರಿಸುವ ಶಕ್ತಿಯೇ ಇಲ್ಲ. ಅವು ಯಾರಿಗೂ ಲಾಭವನ್ನಾಗಲಿ ನಷ್ಟವನ್ನಾಗಲಿ ಮಾಡಲಾರವು." ಇದನ್ನು ಕೇಳಿದ ಕೂಡಲೇ ಖಬ್ಬಾಬ್‌ರ ವಿರೋಧಿಗಳು ಅವರ ಬೆನ್ನಿನ ಮೇಲೆ ಬಿಸಿಲಿನ ಝಳಕ್ಕೆ ಕಾದ ದೊಡ್ಡ ದೊಡ್ಡ ಕಲ್ಲುಗಳನ್ನೆತ್ತಿ ತಂದು ಇಡುತ್ತಿದ್ದರು. ಇದರಿಂದ ಅವರ ಬೆನ್ನಿನ ಚರ್ಮ ಕರಗಿ ಹೋಗುತ್ತಿತ್ತು. ಉಮ್ಮು ಅನ್ಮಾರ್ ತನ್ನ ಸಹೋದರ ಸಬಾಗಿಂತ ಕಠೋರತೆಯಲ್ಲಿ ಕಡಿಮೆಯೇನೂ ಇರಲಿಲ್ಲ. ಒಂದು ದಿನ ಖಬ್ಬಾಬ್‌ರ ಅಂಗಡಿಗೆ ಪ್ರವಾದಿಯವರು(ಸ) ಬರುವುದನ್ನು ಮತ್ತು ಅವರೊಂದಿಗೆ ಮಾತನಾಡುವುದನ್ನು ಆಕೆ ಕಂಡಳು. ಆಕೆಯ ಕೋಪ ನೆತ್ತಿಗೇರಿತು. ಅಂದಿನಿಂದ ದಿನಾಲೂ ಆಕೆ ಅಂಗಡಿಗೆ ಬಂದು ಕಾದ ಸರಳನ್ನು ಖಬ್ಬಾಬ್‌ರ ತಲೆಯ ಮೇಲಿಡುತ್ತಿದ್ದಳು. ಆದರಿಂದ ಅವರ ತಲೆ ಸುಡುತ್ತಿತ್ತು. ಅವರು

ಮೂರ್ಛೆ ಹೋಗುತ್ತಿದ್ದರು. ಎಚ್ಚರವಾದಾಗ ಆಕೆಯನ್ನೂ ಆಕೆಯ ಸಹೋದರನನ್ನೂ ಪಿಸುತ್ತಿದ್ದರು.

ಮಕ್ಕಾದಲ್ಲಿ ಸತ್ಯನಿಷೇಧಿಗಳ ಹಿಂಸೆ-ದೌರ್ಜನ್ಯಗಳು ಮಿತಿಮೀರಿದಾಗ ಪ್ರವಾದಿಯವರು(ಸ) ಸಹಾಬಿಗಳಿಗೆ ಮದೀನಾಕ್ಕೆ ಹೋಗುವಂತೆ ಆದೇಶಿಸಿದರು. ಖಬ್ಬಾಬ್ ಕೂಡಾ ಮದೀನಾಕ್ಕೆ ಹೋಗುವ ಸಿದ್ಧತೆ ನಡೆಸಿದರು. ಆದರೆ ಅವರು ಉಮ್ಮು ಅನ್ಮಾರ್‌ಳಿಗೆ ಹಾಕಿದ ಶಾಪವು ಸಾಕ್ಷಾತ್ಕಾರಗೊಳ್ಳುವ ವರೆಗೂ ಮಕ್ಕಾ ಬಿಟ್ಟು ಹೋಗಲಿಲ್ಲ. ಅವರ ಪ್ರಾರ್ಥನೆಯನ್ನು ಅಲ್ಲಾಹನು ಬಹುಬೇಗನೆ ಸ್ವೀಕರಿಸಿದನು. ಉಮ್ಮು ಅನ್ಮಾರ್ ಅತಿಯಾದ ತಲೆಬೇನೆಗೆ ತುತ್ತಾದಳು. ಅಸಹನೀಯ ನೋವಿನಿಂದ ಆಕೆ ನಾಯಿಯಂತೆ ಕಿರುಚುತ್ತಿದ್ದಳು. ಅವಳ ಮಕ್ಕಳು ಅವಳನ್ನು ಇದ್ದ ವೈದ್ಯರ ಬಳಿಗೆಲ್ಲಾ ಕೊಂಡು ಹೋದರು. ಆದರೆ ಅದರಿಂದ ಯಾವುದೇ ಪ್ರಯೋಜನವಾಗಲಿಲ್ಲ. ಈ ತಲೆಬೇನೆ ಹೋಗಬೇಕಾದರೆ ಆಕೆಯ ತಲೆಗೆ ಕಾದ ಕಬ್ಬಿಣ ತಾಗಿಸಬೇಕು ಎಂದು ವೈದ್ಯರು ಸಲಹೆ ನೀಡಿದರು. ಅದರಂತೆಯೇ ಆಕೆಯ ತಲೆಗೆ ಬೆಂಕಿಯ ಕಾದ ಕಬ್ಬಿಣವನ್ನು ತಾಗಿಸಿದಾಗ ಆಕೆಗಾಗುವ ಯಾತನೆಯಿಂದ ತನ್ನ ತಲೆಬೇನೆಯನ್ನು ಮರೆತು ಬಿಡುತ್ತಿದ್ದಳು.

ಮದೀನಾದಲ್ಲಿ ಅನ್ಸಾರ್‌ಗಳ ಆತಿಥ್ಯ ಮತ್ತು ಸಹಕಾರದಿಂದಾಗಿ ಬಹಳ ಕಾಲದ ವರೆಗೂ ಅವರು ವಂಚಿತವಾಗಿದ್ದಂತಹ ಶಾಂತಿ ಸಮಾಧಾನವನ್ನು ಅನುಭವಿಸಿದರು. ಪ್ರವಾದಿವರ್ಯರ(ಸ) ಸಾಮಿಪ್ಯದಿಂದ ಅವರ ಮನಸ್ಸು ಪುಳಕಿತಗೊಂಡಿತು. ಅವರ ಕಣ್ಣುಗಳು ತಂಪಾದುವು. ಅವರು ಪ್ರವಾದಿವರ್ಯರ(ಸ) ಜೊತೆಯಲ್ಲಿ ಬದ್ರ್ ಮತ್ತು ಉಹುದ್ ಯುದ್ಧಗಳಲ್ಲಿ ಪಾಲ್ಗೊಂಡರು.-ಉಹುದ್ ಯುದ್ಧದಲ್ಲಿ ಉಮ್ಮು ಅನ್ಮಾರ್‌ನ ಸಹೋದರ ಸಬಾನನ್ನು ಹಂಝಾ(ರ) ಕೆಡವಿ ನೆಲಕ್ಕುರುಳಿಸಿದಾಗ ರಕ್ತದಲ್ಲಿ ಆತ ಚಡಪಡಿಸುವುದನ್ನು ಕಂಡು ಅವರ ನೊಂದ ಮನಸ್ಸಿಗೆ ಸಾಂತ್ವನ ದೊರಕಿತು.

ಖಬ್ಬಾಬ್(ರ) ಅನೇಕ ವರ್ಷಗಳ ಕಾಲ ಜೀವಿಸಿದರು. ನಾಲ್ವರು ಖಲೀಫರ ಮಾದರೀ ಆಡಳಿತ ಕಾಲವನ್ನು ಕಂಡರು. ಅದರ ಆಶ್ರಯದಲ್ಲಿ ಅವರು ಗೌರವಾನ್ವಿತ ಜೀವನ ಸಾಗಿಸಿದರು. ಒಂದು ದಿನ ಅವರು ಹ.ಉಮರ್‌ರನ್ನು(ರ) ಭೇಟಿಯಾಗಲು ಹೋದರು. ಉಮರ್ ಬಹಳ ಆದರದಿಂದ ಖಬ್ಬಾಬ್‌ರನ್ನು ಬರಮಾಡಿಕೊಂಡರು. ಅವರನ್ನು ಉನ್ನತ ಪೀಠವೊಂದರಲ್ಲಿ ಕುಳ್ಳಿರಿಸುತ್ತಾ ಇಲ್ಲಿ ಕುಳಿತುಕೊಳ್ಳಲು ಬಿಲಾಲ್‌ರ ನಂತರ ನಿಮಗಿಂತ ಅರ್ಹ ವ್ಯಕ್ತಿ ಯಾರೂ ಇಲ್ಲವೆಂದರು. ಅನಂತರ ಖಬ್ಬಾಬ್‌ರಲ್ಲಿ ಅವರು ಮಕ್ಕಾದ ಸತ್ಯ ನಿಷೇಧಿಗಳಿಂದ ಎದುರಿಸಿದ ದೌರ್ಜನ್ಯಗಳ ಬಗ್ಗೆ ವಿಚಾರಿಸಿದರು. ಆದರೆ ಅವರು ಉತ್ತರಿಸಲು ಸಂಕೋಚಪಟ್ಟಾಗ ಉಮರ್(ರ) ಬಹಳ ಒತ್ತಾಯಿಸಿದರು. ಆಗ ಅವರು ತನ್ನ ಅಂಗಿಯನ್ನು ಸರಿಸಿ ತನ್ನ ಬೆನ್ನು ತೋರಿಸಿದರು. ಅದನ್ನು ನೋಡಿದ ಉಮರ್ ಹೌಹಾರಿದರು. ಈ ತರಹ ಆಗಲು ಕಾರಣವೇನೆಂದು ವಿಚಾರಿಸಿದಾಗ ಅವರು ಹೀಗೆಂದರು, "ಒಂದು ದಿನ ಅವರು ಬೆಂಕಿ ಉರಿಸಿದರು. ನಂತರ ನನ್ನ ಉಡುಪನ್ನು ಕಳಚಿ ನನ್ನನ್ನು ಅದರ ಮೇಲೆ ಅಂಗಾತ

ಮಲಗಿಸಿ ಅತ್ತ ಇತ್ತ ಎಳೆದರು. ಅದರಿಂದ ನನ್ನ ದೇಹದ ಚರ್ಮ ಮತ್ತು ಮಾಂ ಚುರ್‌ಚುರ್‌ನ್ನುತ್ತಾ ಬೆಂದು ಹೋಯಿತು. ಕೊಬ್ಬು ಕರಗಿ ಆ ಬೆಂಕಿಯನ್ನು ನಂದಿಸಿತು

ಖಬ್ಬಾಬ್ ಓರ್ವ ಗುಲಾಮರಾಗಿದ್ದರು. ಅವರಿಗೆ ಆಶ್ರಯದಾತರಾಗಿ ಯಾರ ಇರಲಿಲ್ಲ. ಅವರ ಬೆಂಬಲಕ್ಕೂ ಯಾರೂ ಇರಲಿಲ್ಲ. ಆದುದರಿಂದ ಮಕ್ಕಾದ ಸತ್ಯನಿಷೇಧಿಗಳ ಅವರನ್ನು ಕಠಿಣ ಹಿಂಸೆಗೆ ಗುರಿಪಡಿಸಿದರು. ಕಠೋರವಾಗಿ ಪೀಡಿಸಿದರು. ಅವರ ಮೈ ಮೇಲಿ ಬಟ್ಟೆ ಕಳಚಿ ಉರಿಯುತ್ತಿರುವ ಅಗ್ನಿಯ ಕೆಂಡಗಳ ಮೇಲೆ ಮಲಗಿಸಿ ಅವರ ಮೇಲೆ ಭಾರ ಕಲ್ಲನ್ನೆತ್ತಿಡುತ್ತಿದ್ದರು. ಅಷ್ಟಕ್ಕೂ ಸಾಕು ಮಾಡದೆ ಒಬ್ಬನು ಆ ಕಲ್ಲಿನ ಮೇಲೆ ಹತ್ತಿ ನಿಂತ ಅದನ್ನು ಕಾಲಿನಿಂದ ಒತ್ತುತ್ತಿದ್ದನು. ಅವರ ಬೆನ್ನಿನ ಕೊಬ್ಬು ಉರಿದು ಕರಗಿ ಅದರ ದ್ರವ ಕೆಂಡವನ್ನು ಆರಿಸುವ ವರೆಗೂ ಅವರು ಅದರ ಮೇಲೆ ಚಡಪಡಿಸುತ್ತಿದ್ದರು. ಆದ ಅಷ್ಟಾಗಿಯೂ ಅವರ ನಾಲಗೆಯು ಸತ್ಯವಚನದಿಂದ ಹಿಂದೆ ಸರಿಯುತ್ತಿರಲಿಲ್ಲ. ಈ ದಯನೀಯ ಪರಿಸ್ಥಿತಿಯನ್ನು ನೋಡಿ ಕರುಣಾಳುಗಳಲ್ಲಿ ಕರುಣಾಳುವಾದ ಪ್ರವಾ ಮುಹಮ್ಮದ್(ಸ), ಖಬ್ಬಾಬ್‌ರನ್ನು ಸಮಾಧಾನ ಪಡಿಸುತ್ತಿದ್ದರು. ಆದರೆ ಪ್ರವಾದಿವರ್ಯರ ಸಾಂತ್ವನದ ಮಾತು ಖಬ್ಬಾಬ್‌ರ ಮಾಲಿಕನಿಗೆ ಹಿಡಿಸುತ್ತಿರಲಿಲ್ಲ. ಆತ ಕಠೋರ ಹೃದಯಿಯಾಗಿದ್ದ ಆತ ಅವರನ್ನು ಇನ್ನಷ್ಟು ಹಿಂಸಿಸಿದ. ಕಾದ ಕಬ್ಬಿಣದಿಂದ ಅವರ ತಲೆಯನ್ನು ಸುಟ್ಟು ಗಾಯಗೊಳಿಸಿದ. ಅವರು ಪ್ರವಾದಿವರ್ಯರಲ್ಲಿ,

"ನನ್ನನ್ನು ಈ ಯಾತನೆಯಿಂದ ಪಾರುಗೊಳಿಸುವಂತೆ ಅಲ್ಲಾಹನಲ್ಲಿ ಪ್ರಾರ್ಥಿಸಿರಿ ಎಂದು ಬಿನ್ನವಿಸಿದರು. ಪ್ರವಾದಿವರ್ಯರು, 'ದೇವಾ! ಖಬ್ಬಾಬ್‌ರಿಗೆ ನೆರವಾಗು' ಎಂದ ಪ್ರಾರ್ಥಿಸಿದರು.

ಈ ರೀತಿ ದೈಹಿಕ ಶಿಕ್ಷೆಯಿಂದ ಪ್ರತೀಕಾರದ ಅಗ್ನಿ ತಣಿಯದಾದಾಗ, ಆರ್ಥಿಕ ನಷ್ಟವನ್ನುಂಟು ಮಾಡುವ ಹವಣಿಕೆ ಆರಂಭವಾಯಿತು. ಆಸ್ ಬಿನ್ ವಾಯಿಲ್ ಎಂಬಾತನು ಖಬ್ಬಾಬ್‌ರಿಗೆ ಹಣ ಕೊಡಬೇಕಾಗಿತ್ತು. ತನ್ನ ಸಾಲ ತೀರಿಸೆಂದು ಖಬ್ಬಾಬ್ ಆತನಲ್ಲಿ ಹೇಳಿದಾಗಲೆಲ್ಲ ಆತ, ನೀನು ಮುಹಮ್ಮದ್‌ರನ್ನು ತೊರೆಯುವ ತನಕ ನಿನಗೆ ಹಣ ಸಿಗಲಾರದು ಎಂದು ಹೇಳುತ್ತಿದ್ದ.

"ನೀನು ಸತ್ತು ಇನ್ನೊಮ್ಮೆ ಹುಟ್ಟಿ ಬರುವ ತನಕ ನಾನು ಮುಹಮ್ಮದ್‌ರನ್ನು(ಸ) ತೊರೆಯಲಾರೆ" ಎಂದು ಖಬ್ಬಾಬ್ ಉತ್ತರಿಸುತ್ತಿದ್ದರು.

"ಹಾಗಾದರೆ ನೋಡೋಣ. ನಾನು ಇನ್ನೊಮ್ಮೆ ಹುಟ್ಟಿ ಬರುತ್ತೇನೆ. ಆಗ ನನಗೆ ಹಣವೂ ಸಂತಾನವೂ ಇರುವುದು. ಆಗ ನಿನ್ನ ಸಾಲ ಸಂದಾಯ ಮಾಡುವೆನು" ಆತ ಪುನಃ ಹೇಳಿದ. ಇದು ಮರಣಾನಂತರ ಇನ್ನೊಂದು ಜೀವನವಿರುವುದು ಎಂಬ ಮುಸ್ಲಿಮರ ನಂಬಿಕೆಯ ಮೇಲೆ ಆತನ ವ್ಯಂಗ್ಯೋಕ್ತಿಯಾಗಿತ್ತು. ಆತನ ಈ ಮಾತಿಗೆ ಕುರ್‌ಆನ್‌ನ ಈ ಕೆಳಗಿನ ಸೂಕ್ತ ಅವತೀರ್ಣಗೊಂಡಿತು.

"ನಮ್ಮ ವಚನಗಳನ್ನು ನಿರಾಕರಿಸುತ್ತಾ, 'ನಾನಂತೂ ಸಂಪತ್ತು ಮತ್ತು ಸಂತಾನವನ್ನು ಖಂಡಿತವಾಗಿಯೂ ಪಡೆಯುತ್ತಲೇ ಇರುವೆನು', ಎಂದು ಹೇಳುವವನನ್ನು ಕಂಡಿರಾ? ಇವನಿಗೆ

ೀಚರ ವಿಷಯಗಳ ಸುಳಿವು ಸಿಕ್ಕಿ ಬಿಟ್ಟಿರುವುದೇ? ಅಥವಾ ಇವನು ರಹ್ಮಾನನಿಂದ ವರೂ ವಾಗ್ದಾನ ಪಡೆದಿರುವನೇ? ಖಂಡಿತ ಇಲ್ಲ. ಇವನು ಒದರುತ್ತಿರುವುದನ್ನು ನಾವು ಟ್ಟುಕೊಳ್ಳುವೆವು ಮತ್ತು ಇವನ ಶಿಕ್ಷೆಯನ್ನು ಇನ್ನಷ್ಟು ಹೆಚ್ಚಿಸುವೆವು. ಯಾವ ಸಂಪತ್ ರ್ಮಗಳ ಬಗ್ಗೆ ಇವನು ಹೇಳುತ್ತಿರುವನೋ ಅವೆಲ್ಲವುಗಳಿಗೆ ನಾವೇ ವಾರೀಸುದಾರರಾಗುವೆವು , ಇವನು ಒಂಟಿಯಾಗಿ ನಮ್ಮ ಮುಂದೆ ಹಾಜರಾಗುವನು." (19: 77-80)

ಖಬ್ಬಾಬ್ ಬಿನ್ ಅರತ್ ಬಹಳ ಕಾಲದ ವರೆಗೆ ಸತ್ಯವಿಶ್ವಾಸದ ಮೇಲೆ ಸ್ಥಿರವಾಗಿದ್ದು ಸಂಕಷ್ಟಗಳನ್ನೂ ಸಹಿಸಿದರು. ಪ್ರವಾದಿಯವರಿಂದ(ಸ) ಅನುಮತಿ ದೊರೆತ ಬಳಿಕ ಮದೀನಾಕ್ಕೆ ಹಿಜ್ರತ್ ಮಾಡಿದರು. ಹಿಜ್ರತ್ ಕೂಡಾ ಕಷ್ಟಕೋಟಲೆಗಳಿಗೆ ಹೆದರಿ ರಲಿಲ್ಲ. ಬದಲಾಗಿ ಕೇವಲ ಅಲ್ಲಾಹನಿಗಾಗಿ ಹಿಜ್ರತ್ ಮಾಡಿರುವುದಾಗಿ ಅವರು ತ್ತಿದ್ದರು. ಮದೀನಾಕ್ಕೆ ಬಂದ ನಂತರ ಪ್ರವಾದಿಯವರು(ಸ) ತಮೀಮ್ ಗೋತ್ರದ ಮ ಖರಾಷ್ ಬಿನ್ ಸುಮ್ಮರೊಂದಿಗೆ ಅವರನ್ನು ಸಹೋದರ ಸಂಬಂಧದಲ್ಲಿ ಬೆಸೆದರು.

ಖಬ್ಬಾಬ್ ಮೊದಲು ಅತ್ಯಂತ ಬಡವರಾಗಿದ್ದರೂ ಕೊನೆಯ ಕಾಲದಲ್ಲಿ ಬಹಳ ಂತರಾದರು. ಆದರೆ ಆ ಶ್ರೀಮಂತಿಕೆಯನ್ನು ಅವರು ತನಗಾಗಿ ಉಪಯೋಗಿಸಲಿಲ್ಲ. ಹಣವನ್ನು ಮನೆಯ ಒಂದು ಮೂಲೆಯಲ್ಲಿರಿಸಿದ್ದರು. ಅದನ್ನು ಎಲ್ಲ ಬಡವರು ಕ್ಷಿತರು ಅರಿತಿದ್ದರು. ಅವರು ಆ ಹಣವನ್ನು ರಕ್ಷಿಸಲಿಕ್ಕಾಗಿ ಯಾವುದೇ ವ್ಯವಸ್ಥೆ ರಲಿಲ್ಲ. ಅದಕ್ಕೆ ಬೀಗ ಜಡಿದಿರಲಿಲ್ಲ. ಅಪೇಕ್ಷಿತರು ಎಷ್ಟು ಬೇಕಾದರೂ ಅದರಿಂದ ಕೊಂಡು ಹೋಗಬಹುದಾಗಿತ್ತು. ಆದರೂ ಈ ಸೊತ್ತಿನ ಬಗ್ಗೆ ನನ್ನನ್ನು ಲಾಗುವುದೆಂಬ ಭಯದಿಂದ ಅವರು ಸದಾ ಕಂಪಿಸುತ್ತಿದ್ದರು.

ಖಬ್ಬಾಬ್ ಮರಣ ಶಯ್ಯೆಯಲ್ಲಿದ್ದಾಗ ಅವರನ್ನು ನೋಡಲು ಹೋದ ಅವರ ಕೆಲವು ತಿಗಳೊಂದಿಗೆ ಹೀಗೆಂದರು, "ಇಲ್ಲಿ 80 ಸಾವಿರ ದಿರ್ಹಮ್‌ಗಳಿವೆ. ಅಲ್ಲಾಹನಾಣೆ! ನಾನು ಂದಲೂ ಅದನ್ನು ಬಚ್ಚಿಡಲಿಲ್ಲ. ಯಾರೂ ತೆಗೆಯದಂತೆ ತಡೆಯಲಿಲ್ಲ" ಇಷ್ಟು ಹೇಳಿ ಅಳತೊಡಗಿದರು. ಕಾರಣ ಕೇಳಿದಾಗ ಅವರು ಹೀಗೆಂದರು, "ನನ್ನ ಅನೇಕ ತಿಗಳಿಗೆ ಲೌಕಿಕ ಸಂಪತ್ತು ಲಭಿಸಿರಲಿಲ್ಲ. ಆದರೆ ನಾನು ಬಹಳ ಕಾಲ ಜೀವಿಸಿದೆ. ಳಿ ಬಹಳ ಸಂಪತ್ತು ಬಂತು. ಅದು ನನ್ನ ಕರ್ಮಗಳಿಗೆ ಇದೇ ಲೋಕದಲ್ಲಿ ಸಿಕ್ಕಿದ ಲವೋ ಎಂಬ ಭಯ ನನ್ನನ್ನು ಕಾಡುತ್ತಿದೆ."

ಹ. ಖಬ್ಬಾಬ್ ತಮ್ಮ 72ನೇ ವಯಸ್ಸಿನಲ್ಲಿ ಈ ಲೋಕಕ್ಕೆ ವಿದಾಯ ಕೋರಿದರು. ಕಾಲದಲ್ಲೂ ಅದರ ಬಳಿಕವೂ ಅವರು ತಲವಾರುಗಳನ್ನು ನಿರ್ಮಿಸಿ ಸಂಪಾದನೆ ತ್ತಿದ್ದರು. ಇಸ್ಲಾಮ್ ಸ್ವೀಕಾರ ಮಾಡಿದ ನಂತರ ಅವರ ಜೀವನವು ಕೆಲವು ಸಮಯದ ಕಡು ಬಡತನದಲ್ಲಿ ಕಳೆಯಿತು. ಆದರೆ ಅನಂತರ ಅವರು ಸಂಪತ್ತನ್ನು ಬಹಳಷ್ಟು ರು. ಮರಣದ ವೇಳೆ ಅವರ ಬಳಿ 40 ಸಾವಿರ ದಿರ್ಹಮ್ ಉಳಿತಾಯವಿತ್ತು.

ಖಬ್ಬಾಬ್‌ರು(ರ) ಪ್ರವಾದಿಯವರ(ಸ) ಮಾತು-ಕೃತಿಗಳ ಮೇಲೆ ಸೂಕ್ಷ್ಮ ನಿಗಾ

ಇಡುತ್ತಿದ್ದರು. ಮಾತ್ರವಲ್ಲ ಅದನ್ನು ತನ್ನ ಜೀವನದಲ್ಲಿ ಅಳವಡಿಸಲು ಗರಿಷ್ಠ ಪ್ರಯತ್ನಿಸುತ್ತಿ ಅವರು ಒಟ್ಟು 33 ಹದೀಸ್‌ಗಳನ್ನು ವರದಿ ಮಾಡಿರುವರು.

ಖಬ್ಬಾಬ್(ರ) ಮರಣ ಹೊಂದಿದಾಗ ಅಂದಿನ ಆಡಳಿತಗಾರರಾಗಿದ್ದ ಖಲೀಫ ಬಿನ್ ಅಬೂತಾಲಿಬ್ ಅವರ ಗೋರಿಯ ಬಳಿ ನಿಂತು ಹೇಳಿದರು, "ಅಲ್ಲಾಹನು ಖಬ್ಬಾ ಮೇಲೆ ಕರುಣೆ ತೋರಲಿ. ಅವರು ತನ್ನಿಷ್ಟದಂತೆ ಇಸ್ಲಾಮ್ ಸ್ವೀಕರಿಸಿದರು. ತನ್ನಿಷ್ಟ ಹಿಜ್ರತ್ ಮಾಡಿದರು. ಓರ್ವ ಯೋಧನಂತೆ ಜೀವಿಸಿದರು. ಅಲ್ಲಾಹನು ಸತ್ಕರ್ಮಗಳ ಫಲವನ್ನು ಎಂದೂ ವ್ಯರ್ಥಗೊಳಿಸುವುದಿಲ್ಲ."

# ೮. ಉಸ್ಮಾನ್ ಬಿನ್ ಮಝ್‌ಊನ್(ರ)

## ಕ ಆಶ್ರಯದಿಂದ ಮುಕ್ತಿ

ಹ. ಉಸ್ಮಾನ್ ಬಿನ್ ಮಝ್‌ಊನ್(ರ) ಮಕ್ಕಾದ ಓರ್ವ ಸಭ್ಯ, ಸಜ್ಜನ ಾಗಿದ್ದರು. ಅಜ್ಞಾನ ಕಾಲದಲ್ಲಿ ಅರಬರು ಮದ್ಯಪಾನಿಗಳಾಗಿದ್ದರು. ಮದ್ಯವೆಂದರೆ ಗೆ ಪಂಚ ಪ್ರಾಣ. ಅದರ ಪ್ರಶಂಸೆಯಲ್ಲಿ ಅವರು ಹಾಡುತ್ತಿದ್ದರು. ಆದರೆ ಉಸ್ಮಾನ್ ಮಝ್‌ಊನ್(ರ) ಎಂದೂ ಮದ್ಯ ಕುಡಿದವರಲ್ಲ. ಅವರು ಸಾಮಾನ್ಯವಾಗಿ ಹೀಗೆ ತ್ತಿದ್ದರು- "ಮನುಷ್ಯನ ಬುದ್ಧಿ ಸ್ತಿಮಿತ ಕಳಕೊಳ್ಳುವಂತಹ ವಸ್ತುವನ್ನು ುವುದರಿಂದೇನು ಪ್ರಯೋಜನ? ನೀಚ ಜನರ ಮುಂದೆ ಆತ ಪರಿಹಾಸ್ಯಕ್ಕೊಳಗಾಗುತ್ತಾನೆ. ೇರಿದಾಗ ಆತನಿಗೆ ತಾಯಿ ಯಾರು, ತಂಗಿ ಯಾರು ಎಂಬ ಪರಿವೆ ಸಹ ಇರುವುದಿಲ್ಲ."

ಈ ಸ್ವಾಭಾವಿಕ ಪಾವನ ಸ್ವಭಾವದಿಂದಾಗಿಯೇ ಅವರ ಮನಸ್ಸು ನಿರ್ಮಲವಾಗಿತ್ತು. ಯವರ(ಸ) ಧರ್ಮ ಬೋಧನೆಯ ಪರಿಣಾಮವಾಗಿ ತೌಹೀದ್ ಅವರ ಮನದಲ್ಲಿ ೇ ಅಚ್ಚೊತ್ತಲ್ಪಟ್ಟಿತು. ಅವರು ಇಸ್ಲಾಮ್ ಸ್ವೀಕಾರ ಮಾಡಿದ ಸಮಯದಲ್ಲಿ ಒಟ್ಟು ೂರು ಮಂದಿ ಈಗಾಗಲೇ ಇಸ್ಲಾಮ್ ಧರ್ಮ ಸ್ವೀಕರಿಸಿದ್ದರು. ಅಬೂ ಉಬೈದಾ ಜರ್‍ರಾಹ್, ಅಬ್ದುರ್ರಹ್ಮಾನ್ ಬಿನ್ ಔಫ್, ಅಬೂ ಉಬೈದಾ ಬಿನ್ ಹಾರಿಸ್, ನ್ ಬಿನ್ ಮಝ್‌ಊನ್(ರ) ಮೊದಲಾದವರು ಒಟ್ಟಿಗೆ ಇಸ್ಲಾಮ್ ಸ್ವೀಕರಿಸಿದರು. ್ಲರೂ ಅರ್ಕಮ್ ಬಿನ್ ಅರ್ಕಮ್‌ರವರ(ರ) ಮನೆಯಲ್ಲಿ ಆಶ್ರಯ ಪಡೆದಿದ್ದರು.

ಪ್ರವಾದಿತ್ವದ ೫ನೇ ವರ್ಷ ಮರ್ದಿತ ಮುಸ್ಲಿಮರ ತಂಡವೊಂದು ಪ್ರವಾದಿಯವರ(ಸ) ನ ಮೇರೆಗೆ ಇಥಿಯೋಪಿಯಾಕ್ಕೆ ವಲಸೆ ಹೋಯಿತು. ಉಸ್ಮಾನ್ ಬಿನ್ ಮಝ್‌ಊನ್‌ರು ಡದ ನಾಯಕರಾಗಿದ್ದರು. ಅವರು ಕೆಲವು ಕಾಲ ಅಲ್ಲಿ ವಾಸವಾಗಿದ್ದರು. ಹೀಗಿರುವಾಗ ತ ಕುರೈಶರೆಲ್ಲರೂ ಇಸ್ಲಾಮ್ ಸ್ವೀಕರಿಸಿದ್ದಾರೆಂಬ ವದಂತಿ ಹಬ್ಬಿತು. ಇದನ್ನು ಂದು ನಂಬಿದ ಈ ಮುಸ್ಲಿಮರು ಇನ್ನು ಸಂಕಷ್ಟದ ದಿನಗಳಿಂದ ಪಾರಾದೆವು ಎಂದು ಯ ನಿಟ್ಟುಸಿರೆಳೆಯುತ್ತಾ ಮಕ್ಕಾದ ಹಾದಿ ಹಿಡಿದರು. ಆದರೆ ಮಕ್ಕಾದ ಹತ್ತಿರ ದ್ದಂತೆಯೇ ಅವರಿಗೆ ಆ ವದಂತಿಯಲ್ಲಿ ಸತ್ಯಾಂಶವಿರಲಿಲ್ಲವೆಂದು ಮನವರಿಕೆಯಾಯಿತು. ದ ಅವರು ಬಹಳ ಕಳವಳಕ್ಕೀಡಾದರು. ಏಕೆಂದರೆ ಮರಳಿ ಅಷ್ಟು ದೂರ ಪ್ರಯಾಣ ನ ಸ್ಥಿತಿಯಲ್ಲಿ ಅವರಿರಲಿಲ್ಲ. ಅತ್ತ ಮಕ್ಕಾಕ್ಕೆ ಹೋಗೋಣವೆಂದರೆ ಅಲ್ಲೂ

ಸತ್ಯನಿಷೇಧಿಗಳ ಕಾಟ ತಪ್ಪಿದ್ದಲ್ಲ. ಈ ಉಭಯ ಸಂಕಟದ ನಡುವೆ ಸಿಕ್ಕಿದ ಎಲ್ಲಿದ್ದರೋ ಅಲ್ಲೇ ತಂಗಿದರು. ಅನಂತರ ಒಬ್ಬೊಬ್ಬರಾಗಿ ತಂತಮ್ಮ ಸತ್ಯ ಸಂಬಂಧಿಕರ ಮತ್ತು ಆಪ್ತೇಷ್ಟರ ಅಭಯ ಪಡೆದು ಮಕ್ಕಾಕ್ಕೆ ಹೋದಾಗ ಉಸ್ಮಾನ್ ಮಝ್‌ಊನ್ ಕೂಡಾ ವಲೀದ್ ಬಿನ್ ಮುಗೀರಾನ ಅಭಯ ಪಡೆದು ಮಕ್ಕಾದ ಪ್ರವೇಶಿಸಿದರು. ಮಕ್ಕಾದ ಸಾಮಾಜಿಕ ನಿಯಮದಂತೆ ಒಬ್ಬನಿಗೆ ಯಾರಾದರೂ ಅಭಯ ತನ್ನ ಆಶ್ರಯದಲ್ಲಿರಿಸಿದರೆ ಅವನನ್ನು ಯಾರೂ ಮುಟ್ಟುವಂತಿರಲಿಲ್ಲ. ಆತನಿಗೆ ಯ ಕಿರುಕುಳ- ಕೀಟಲೆ ಕೊಡುವಂತಿರಲಿಲ್ಲ. ಅದು ಅವನ ಎಷ್ಟೇ ದೊಡ್ಡ ಶತ್ರುವಾಗಿ ಸರಿ.

ವಲೀದ್ ಬಿನ್ ಮುಗೀರಾ ಮಕ್ಕಾದ ಓರ್ವ ಪ್ರತಿಷ್ಠಿತ ವ್ಯಕ್ತಿಯಾಗಿದ್ದ ಕಾರಣ ಪ್ರಭಾವದಿಂದಾಗಿ ಉಸ್ಮಾನ್ ಬಿನ್ ಮಝ್‌ಊನ್ ಮುಶ್ರಿಕರ ಕಿರುಕುಳದಿಂದ ಪಾರಾ ಆದರೆ ಪ್ರವಾದಿ(ಸ) ಮತ್ತವರ ಇತರ ಸಂಗಾತಿಗಳ ಮೇಲೆ ಮಕ್ಕಾದ ಮುಶ್ರಿಕರು ದೌರ್ಜನ್ಯಗಳನ್ನೆಸಗುವುದನ್ನು ಕಂಡಾಗ ಅವರ ನೆಮ್ಮದಿಯ ಕಟ್ಟೆಯೊಡೆಯಿತು. ಒಂದ ಅವರು ತನ್ನನ್ನೇ ಉದ್ದೇಶಿಸಿ ಹೀಗೆಂದರು- "ಉಸ್ಮಾನ್! ನಿನ್ನ ಮೇಲೆ ನನಗೆ ಮೂಡುತ್ತಿದೆ. ನಿನ್ನ ಸಂಗಾತಿಗಳು ಮತ್ತು ಕುಟುಂಬದ ಸದಸ್ಯರು ಅಲ್ಲಾಹನ ಮಾಗ ತರತರವಾಗಿ ಪೀಡಿಸಲ್ಪಡುತ್ತಿದ್ದಾರೆ. ನೀನಾದರೋ ಓರ್ವ ಮುಶ್ರಿಕ್ ದೇವಧಿಕ ಆಶ್ರಯದಲ್ಲಿ ಸಮಾಧಾನದಿಂದ ಬದುಕುತ್ತಿರುವೆ. ಛೆ! ನೀನು ತುಂಬಾ ದುರ್ಬಲನಾಗಿ

ಈ ಆತ್ಮಸಾಕ್ಷಿಯ ಕರೆಯು ಅವರನ್ನು ಚಡಪಡಿಸುವಂತೆ ಮಾಡಿತು. ಆಗಲೇ ವಲೀದ್ ಬಿನ್ ಮುಗೀರಾನ ಬಳಿಗೆ ಹೋಗಿ ಹೀಗೆಂದರು- "ಓ ಅಬ್ದುಶ್ಶಮ್ಸ್! ಈ ವರೆಗೆ ನಿಮ್ಮ ಆಶ್ರಯದಲ್ಲಿದ್ದೆ. ನಿಮ್ಮ ಕರ್ತವ್ಯವನ್ನು ನೀವು ಪೂರೈಸಿದಿರಿ. ಮುಂದೆ ನಾನು ಅಲ್ಲಾಹನ ಮತ್ತು ಆತನ ಪ್ರವಾದಿಯ ಆಶ್ರಯದಲ್ಲಿರ ಬಯಸಿ ನನಗೆ ನಿಮ್ಮ ಆಶ್ರಯ ಬೇಡ. ನನಗೆ ಪ್ರವಾದಿ(ಸ) ಮತ್ತು ಅವರ ಸಂಗಾತಿಗಳ ಮಾದ ಸಾಕು."

"ನಿಮಗೆ ಯಾರಾದರೂ ಕಿರುಕುಳ ನೀಡಿದರೇ?"- ವಲೀದ್ ಪ್ರಶ್ನಿಸಿದ.

"ಹಾಗೇನೂ ಇಲ್ಲ. ವಾಸ್ತವದಲ್ಲಿ ನನಗಿನ್ನು ಅಲ್ಲಾಹನ ಮತ್ತು ಆತನ ಪ್ರವ ಹೊರತು ಇನ್ನಾರ ಆಶ್ರಯದ ಅಗತ್ಯವೂ ಇಲ್ಲ. ನೀವು ನನ್ನೊಟ್ಟಿಗೆ ಕಅಬಾ ಭ ನಡೆಯಿರಿ. ಅಂದು ನನಗೆ ಅಭಯ ನೀಡಿದ್ದನ್ನು ಘೋಷಿಸಿದಂತೆಯೇ ಅದನ್ನು ವಾ ಪಡೆದಿರುವುದಾಗಿ ಘೋಷಿಸಿರಿ" ಉಸ್ಮಾನ್ ಬಿನ್ ಮಝ್‌ಊನ್ ಮುಗೀರನಿಗೆ ಹೇ ಕೊನೆಗೂ ನಿರ್ಬಂಧಿತನಾಗಿ ಅವರ ಅಪೇಕ್ಷೆಯಂತೆ ಕಅಬಾ ಭವನದ ಬಳಿ, ಆಶ್ರಯದಿಂದ ಉಸ್ಮಾನ್ ಬಿನ್ ಮಝ್‌ಊನ್‌ರನ್ನು ಮುಕ್ತಗೊಳಿಸಿರುವುದಾಗಿ ಘೋಷಿ

ಉಸ್ಮಾನ್ ಬಿನ್ ಮಝ್‌ಊನ್ ಅದನ್ನು ದೃಢೀಕರಿಸುತ್ತಾ ಎದ್ದು ನಿಂತು ಸಾರಿದರು: "ಜನರೇ! ವಲೀದ್ ಬಿನ್ ಮುಗೀರಾ ಅತ್ಯಂತ ಪ್ರಾಮಾಣಿಕ

ಣಾಳುವಾಗಿದ್ದರು. ಆದರೆ ಈಗ ನನಗೆ ಅಲ್ಲಾಹ್ ಮತ್ತು ಆತನ ಪ್ರವಾದಿಯ ಹೊರತು ನ್ನರ ಆಶ್ರಯದ ಅಗತ್ಯವೂ ಇಲ್ಲವೆಂದು ನಾನು ಭಾವಿಸಿರುವುದರಿಂದ ಅವರ ಔದಾರ್ಯದ ರದಿಂದ ನಾನೇ ಮುಕ್ತನಾಗುತ್ತಿದ್ದೇನೆ."

## ಗೋಷ್ಠಿಯಲ್ಲಿ ಪೆಟ್ಟು ತಿಂದವರು

ಉಸ್ಮಾನ್ ಬಿನ್ ಮಝ್‌ಊನ್, ವಲೀದ್‌ನ ಆಶ್ರಯದಿಂದ ಬಿಡುಗಡೆಗೊಂಡ ಕ ಲಬೀದ್ ಬಿನ್ ರಬೀಅ ಎಂಬವನ ಜೊತೆ ಕುರೈಶರ ಸಭೆಯೊಂದಕ್ಕೆ ಹೋದರು. ೀದ್ ಆ ಕಾಲದ ಪ್ರಸಿದ್ಧ ಕವಿಯಾಗಿದ್ದನು. ಆತ ಅಲ್ಲಿಗೆ ತಲಪಿದ ಕೂಡಲೇ ಕವಿಗೋಷ್ಠಿ ಂಭಗೊಂಡಿತು. ಲಬೀದ್ ತನ್ನ ಕಾವ್ಯವನ್ನು ಹೀಗೆ ವಾಚಿಸಿದ, 'ದೇವನ ಹೊರತು ಲ್ಲವೂ ಸುಳ್ಳು.'

ಆಗ ಉಸ್ಮಾನ್ ಬಿನ್ ಮಝ್‌ಊನ್, "ನೀನು ಸತ್ಯ ಹೇಳಿದೆ" ಎಂದು ಶ್ಲಾಘಿಸಿದರು. ಂತರ ಆತ ಎರಡನೇ ಚರಣ ಓದಿದ- 'ಎಲ್ಲ ಅನುಗ್ರಹಗಳೂ ಖಂಡಿತ ಅಳಿದು ೀಗುವುವು.'

ಇದನ್ನು ಕೇಳಿದ ಕೂಡಲೇ ಉಸ್ಮಾನ್ ಬಿನ್ ಮಝ್‌ಊನ್ ಅದನ್ನು ನಿರಾಕರಿಸುತ್ತಾ ನು ಸುಳ್ಳು ಹೇಳುತ್ತಿರುವೆ" ಎಂದು ಸಾರಿದರು. ಆಗ ಸಭಿಕರು ಅವರನ್ನು ಕೆಂಗಣ್ಣಿನಿಂದ ೀಡುತ್ತಾ ಲಬೀದ್‌ನೊಂದಿಗೆ ಆ ದ್ವಿಪದಿಯನ್ನು ಇನ್ನೊಮ್ಮೆ ಆವರ್ತಿಸುವಂತೆ ವಿನಂತಿಸಿದರು. ಮೊದಲ ಚರಣವನ್ನು ಆವರ್ತಿಸಿದಾಗ ಉಸ್ಮಾನ್ ಪ್ರಶಂಸಿಸಿದರು. ಎರಡನೇ ಚರಣ ತಿಸಿದಾಗ, "ನೀನು ಸುಳ್ಳು ಹೇಳುತ್ತಿರುವೆ. ಸ್ವರ್ಗದ ಸೌಭಾಗ್ಯಗಳು ಎಂದೂ ಅಳಿಯಲಾರವು" ದು ಹೇಳಿದರು.

ಆಗ ಲಬೀದ್ ದ್ವೇಷದ ಕಿಡಿ ಹಾರಿಸುತ್ತಾ ಹೀಗೆಂದ, "ಕುರೈಶರೇ! ಅಲ್ಲಾಹನಾಣೆ ್ಮ ಸಭೆಗಳು ಹೀಗಿರುತ್ತಿರಲಿಲ್ಲ." ಈ ಪ್ರಚೋದನಕಾರಿ ಮಾತಿನಿಂದ ಸಭಿಕರು ಕೆರಳಿದರು. ್ಟ ದುಷ್ಟನು ಮುಂದೆ ಬಂದು ಉಸ್ಮಾನ್ ಬಿನ್ ಮಝ್‌ಊನ್‌ರ ಕೆನ್ನೆಗೆ 'ಪಟಾರನೆ' ಿಸಿದ. ಪೆಟ್ಟಿನ ರಭಸದಿಂದಾಗಿ ಅವರ ಎಡಕಣ್ಣು ಕೆಂಪಾಯಿತು. ಆಗ ಸಭಿಕರು ಗೆಂದರು, ಉಸ್ಮಾನ್! ದೇವನಾಣೆಗೂ ವಲೀದ್‌ನ ಅಭಯಾಶ್ರಯದಲ್ಲಿ ನೀನು ಬಹಳ ತಿಷ್ಠಿತನಾಗಿದ್ದೆ. ನಿನ್ನ ಕಣ್ಣು ಈ ವಿಪತ್ತಿನಿಂದ ಸುರಕ್ಷಿತವಾಗಿತ್ತು.

"ದೇವನ ಆಶ್ರಯವೇ ಅತ್ಯಂತ ಪ್ರತಿಷ್ಠಿತ ಹಾಗೂ ಶಾಂತಿದಾಯಕವಾಗಿದೆ. ನನ್ನ ದು ಕಣ್ಣಿಗೆ ಪೆಟ್ಟಾದರೆ ಅದರ ದುಃಖದಲ್ಲಿ ಭಾಗಿಯಾಗಲು ಇನ್ನೊಂದು ಕಣ್ಣು ಕೂಡಾ ವಿದೆ." ಉಸ್ಮಾನ್ ಬಿನ್ ಮಝ್‌ಊನ್ ಯಾವ ಸಂಕೋಚವೂ ಇಲ್ಲದೆ ಸಭಿಕರನ್ನುದ್ದೇಶಿಸಿ ಳಿದರು, "ಈಗಲಾದರೂ ನನ್ನ ಅಭಯ ಬಯಸುವೆಯಾ" ವಲೀದ್ ಕೇಳಿದ.

"ನನಗೆ ಅಲ್ಲಾಹನ ಆಶ್ರಯ ಮಾತ್ರ ಸಾಕು" ಉಸ್ಮಾನ್ ಉತ್ತರಿಸಿದರು.

ಉಸ್ಮಾನ್ ಬಿನ್ ಮಝ್‌ಊನ್(ರ) ಕೆಲವು ಕಾಲದ ತನಕ ಮಕ್ಕಾದಲ್ಲೇ ಇದ್ದು

ಸತ್ಯನಿಷೇಧಿಗಳ ಹಿಂಸೆ-ದೌರ್ಜನ್ಯಗಳನ್ನು ಸಹಿಸುತ್ತಲೇ ಇದ್ದರು. ಕೊನೆಗೂ ಪ್ರವಾದಿ( ಎಲ್ಲ ಸಹಾಬಿಗಳಿಗೆ ಮಕ್ಕಾ ಬಿಟ್ಟು ಮದೀನಾಕ್ಕೆ ವಲಸೆ ಹೋಗುವಂತೆ ಆಜ್ಞಾಪಿಸಿದಾ ಉಸ್ಮಾನ್ ತನ್ನ ಇಬ್ಬರು ಸಹೋದರರಾದ ಕುದಾಮ ಬಿನ್ ಮಝ್‌ಊನ್ ಮತ್ತು ಅಬ್ದು ಬಿನ್ ಮಝ್‌ಊನ್‌ರ ಜೊತೆ ಮದೀನಾಕ್ಕೆ ಪ್ರಯಾಣ ಬೆಳೆಸಿದರು. ಅವರೊಂದಿಗೆ ಅ ಪುತ್ರ ಸಾಯಿಬ್ ಬಿನ್ ಉಸ್ಮಾನ್ ಕೂಡಾ ಇದ್ದರು. ಶಾಂತಿಗೇಹವಾದ ಮದೀನಾ ಪಟ್ಟ ತಲಪಿ ಅವರು ಅಬ್ದುಲ್ಲಾ ಬಿನ್ ಸಲಮ ಅಜ್‌ಲಾನಿಯವರ(ರ) ನಿವಾಸದಲ್ಲಿ ತಂಗಿದ ಉಸ್ಮಾನ್ ಬಿನ್ ಮಝ್‌ಊನ್ ಅವರು ತಮ್ಮ ಕುಟುಂಬದ ಒಬ್ಬನೇ ಸದಸ್ಯ ಬ ಉಳಿಯದ ರೀತಿಯಲ್ಲಿ ಎಲ್ಲರನ್ನೂ ಮಕ್ಕಾದಿಂದ ಮದೀನಾಕ್ಕೆ ರವಾನಿಸಿದರು. ಮಕ್ಕಾ ಅವರ ಕುಟುಂಬದ ಮನೆಗಳೆಲ್ಲವೂ ಮುಚ್ಚಲ್ಪಟ್ಟವು.

ಮದೀನಾಕ್ಕೆ ತಲಪಿದ ಉಸ್ಮಾನ್ ಬಿನ್ ಮಝ್‌ಊನ್ ಮತ್ತವರ ಸಹೋದರ ಖಾಯಂ ವಾಸ್ತವ್ಯ ಹೂಡಲಿಕ್ಕಾಗಿ ಪ್ರವಾದಿ(ಸ) ವಿಶಾಲವಾದ ಜಮೀನೊಂದನ್ನು ನೀಡಿದ ಅಬುಲ್ ಹಶೀಮ್ ತೈಹಾನ್(ರ) ಎಂಬವರನ್ನು ಅವರ ಸಹೋದರ ಸಂಬಂಧದ ಜೋಡಿಸಿದರು.

ಉಸ್ಮಾನ್ ಬಿನ್ ಮಝ್‌ಊನ್‌ರ ಚಾರಿತ್ರ್ಯ ಅತ್ಯುನ್ನತ ಮಟ್ಟದ್ದಾಗಿತ್ತು. ಅಜ್ಞ ಕಾಲದಲ್ಲಿಯೇ ಅವರಿಗೆ ಶರಾಬಿನೊಂದಿಗೆ ತಿರಸ್ಕಾರ ಭಾವವಿತ್ತು. ಲಜ್ಜಾ ಗುಣವು ಅ ಸ್ವಭಾವದಲ್ಲಿ ಎದ್ದು ಕಾಣುತ್ತಿತ್ತು. ಒಂದು ದಿನ ಅವರು ಪ್ರವಾದಿವರ್ಯರ(ಸ) ಬಳಿ ಬಂ ಹೀಗೆಂದರು,

"ಪ್ರವಾದಿವರ್ಯರೆ! ನನ್ನ ಗುಪ್ತಾಂಗವನ್ನು ನನ್ನ ಪತ್ನಿಗೂ ತೋರಿಸಲು ಇ ಪಡುವುದಿಲ್ಲ."

'ಏಕೆ?' ಪ್ರವಾದಿ(ಸ) ಪ್ರಶ್ನಿಸಿದರು.

"ನನಗೆ ತುಂಬಾ ನಾಚಿಕೆಯಾಗುತ್ತಿದೆ."

"ಅಲ್ಲಾಹನು ಅವಳನ್ನು ನಿಮಗೂ ನಿಮ್ಮನ್ನು ಅವಳಿಗೂ ಮುಕ್ತಗೊಳಿಸಿದ್ದಾನೆ.

ಸ್ವಲ್ಪ ಹೊತ್ತಿನ ನಂತರ ಅವರು ಪ್ರವಾದಿವರ್ಯರ(ಸ) ಬಳಿಯಿಂದ ಎದ್ದು ಹೋದ ಆಗ ಪ್ರವಾದಿ(ಸ)ಸಭಿಕರಿಗೆ ಹೀಗೆಂದರು, "ಉಸ್ಮಾನ್ ಬಿನ್ ಮಝ್‌ಊನ್ ಅತ್ಯಂತ ನಾ ಸ್ವಭಾವದ ವ್ಯಕ್ತಿಯಾಗಿದ್ದಾರೆ."

ಉಸ್ಮಾನ್ ಬಿನ್ ಮಝ್‌ಊನ್ ಲೋಕ ನಿರಪೇಕ್ಷ ವ್ಯಕ್ತಿಯಾಗಿದ್ದರು. ವೈರಾ ತಾಳುವಷ್ಟರ ಮಟ್ಟಿಗೆ ಅದು ಮುಂದುವರಿಯಿತು. ಕಾಮಾಸಕ್ತಿಯನ್ನು ಹೋಗಲಾ ಅರ್ಥಾತ್ ಬೀಜಗಳ ಕಸಿಗೈದು ಏಕಾಂತ ಜೀವನ ಸಾಗಿಸಬೇಕೆಂದು ಅವರು ಒಪ ಬಯಸಿದರು. ಇದನ್ನು ಪ್ರವಾದಿಯವರಲ್ಲಿ(ಸ) ತಿಳಿಸಿದಾಗ ಪ್ರವಾದಿವರ್ಯರು ಅವರ ಅದರಿಂದ ತಡೆದರು. ತರುವಾಯ ಹೀಗೆಂದರು,

"ನನ್ನ ಬದುಕಿನಲ್ಲಿ ನಿಮಗೆ ಅತ್ಯುತ್ತಮ ಮಾದರಿಯಿಲ್ಲವೆ? ನಾನು ನನ್ನ ಪತ್ನಿಯರೊಂ

ುತ್ತೇನೆ, ಮಾಂಸ ತಿನ್ನುತ್ತೇನೆ, ಉಪವಾಸ ಆಚರಿಸುತ್ತೇನೆ. ಉಪವಾಸ ಬಿಡುತ್ತೇನೆ ಕೂಡಾ. ುದರಿಂದ ಯಾರು ಕಸಿಮಾಡಿಸುತ್ತಾನೋ ಆತ ನಮ್ಮವನಲ್ಲ."

## ನ್ನತುಲ್ ಬಕೀಅ್‌ನ ಪ್ರಥಮ ಸಮಾಧಿಸ್ಥ

ಆರಾಧನೆಯು ಉಸ್ಮಾನ್ ಬಿನ್ ಮಝ್‌ಊನ್‌ರ ನೆಚ್ಚಿನ ಕಾಯಕವಾಗಿತ್ತು. ಇಡೀ ತ್ರಿ ನಮಾಝ್‌ನಲ್ಲಿ ತಲ್ಲೀನರಾಗುತ್ತಿದ್ದರು. ಹಗಲಲ್ಲಿ ಉಪವಾಸ ವ್ರತ ಆಚರಿಸುತ್ತಿದ್ದರು. ; ಮನೆಯಲ್ಲಿ ಅವರು ಆರಾಧನೆಗಾಗಿ ಒಂದು ಕೊಠಡಿಯನ್ನು ಮೀಸಲಾಗಿರಿಸಿದ್ದರು. ವರಲ್ಲೇ ಹಗಲೂ ರಾತ್ರಿ ಇಅ್‌ತಿಕಾಫ್‌ನಲ್ಲಿರುತ್ತಿದ್ದರು. ಒಟ್ಟಿನಲ್ಲಿ ಅವರ ಆರಾಧನಾ ರಿಯು ಈ ರೀತಿಯಾಗಲು ಲೋಕದಿಂದ ವಿರಕ್ತಿಯೇ ಕಾರಣವಾಗಿತ್ತು. ಒಂದು ದಿನ ವಾದಿಯವರು(ಸ) ಉಸ್ಮಾನ್ ಬಿನ್ ಮಝ್‌ಊನ್‌ರ ಕೊಠಡಿಯ ಬಳಿಗೆ ಬಂದು ಮೂರು ರಿ ಹೀಗೆಂದರು-

"ಉಸ್ಮಾನ್! ಅಲ್ಲಾಹನು ನನ್ನನ್ನು ಸನ್ಯಾಸವನ್ನು ಬೋಧಿಸಲು ನೇಮಿಸಿಲ್ಲ. ಲಭವೂ ಸರಳವೂ ಆದ ನನ್ನ ದೈವಿಕ ಧರ್ಮವು ಸಕಲ ಧರ್ಮಗಳಿಗಿಂತಲೂ ತ್ತಮವಾಗಿದೆ."

ಆರಾಧನೆಯಲ್ಲಿರುವ ತನ್ಮಯತೆಯಿಂದಾಗಿ ಅವರು ಪತ್ನಿ, ಮಕ್ಕಳನ್ನು ಮರೆತು ಟ್ಟಿದ್ದರು. ಒಂದು ಸಲ ಅವರ ಪತ್ನಿ ಹ. ಖೌಲ(ರ) ಪ್ರವಾದಿವರ್ಯರ ಬಳಿಗೆ ಬಂದರು. ವರ ತಲೆಗೂದಲು ಅಸ್ತವ್ಯಸ್ತಗೊಂಡಿತ್ತು. ಮುಖ ಕಳೆಗುಂದಿತ್ತು. ಇದನ್ನು ಕಂಡು ಪ್ರವಾದಿ ತ್ನಿಯರು ಕೇಳಿದರು-

"ನೀವೇಕೆ ಈ ಅವಸ್ಥೆಯಲ್ಲಿದ್ದೀರಿ? ನಿಮ್ಮ ಪತಿಯಂತೂ ಕುರೈಶರಲ್ಲಿ ಅತಿ ಸಂಪನ್ನ ಕ್ತಿಯಾಗಿದ್ದಾರಲ್ಲವೆ."

"ನನಗೆ ಅವರಿಂದೇನಾಗಬೇಕಾಗಿದೆ. ಅವರು ರಾತ್ರಿಯಿಡೀ ನಮಾಝ್ ಮಾಡುತ್ತಾರೆ. ಗಲಿಡೀ ಉಪವಾಸ ವ್ರತ ಆಚರಿಸುತ್ತಾರೆ." - ಉಸ್ಮಾನ್‌ರ ಪತ್ನಿ ಉತ್ತರಿಸಿದರು.

ಪ್ರವಾದಿ ಪತ್ನಿಯರು ಈ ವಿಷಯವನ್ನು ಪ್ರವಾದಿವರ್ಯರಿಗೆ ತಿಳಿಸಿದಾಗ, ಆ ಕೂಡಲೇ ವರು ಉಸ್ಮಾನ್ ಬಿನ್ ಮಝ್‌ಊನ್‌ರ ಬಳಿಗೆ ಹೋಗಿ, ಉಸ್ಮಾನ್ ನಿಮಗೆ ನಾನು ಾದರಿಯಲ್ಲವೆ? ಎಂದು ಕೇಳಿದರು.

"ನನ್ನ ತಂದೆ-ತಾಯಿಗಳು ತಮಗೆ ಅರ್ಪಿತ! ಪ್ರವಾದಿವರ್ಯರೆ, ಏನು ವಿಷಯ"- ಸ್ಮಾನ್ ಮರು ಪ್ರಶ್ನೆ ಹಾಕಿದರು.

ಆಗ ಪ್ರವಾದಿ(ಸ) ಕೇಳಿದರು, "ಉಸ್ಮಾನ್! ನೀವು ರಾತ್ರಿಯಿಡೀ ಆರಾಧನೆ ಮಾಡುತ್ತೀರಾ? ಗಲಿಡೀ ಉಪವಾಸ ಆಚರಿಸುತ್ತೀರಾ?"

ಅವರು 'ಹೌದೆ'ಂದು ಉತ್ತರಿಸಿದಾಗ, ಪ್ರವಾದಿಯವರು(ಸ) ಉಸ್ಮಾನ್‌ರಿಗೆ ಈ ರೀತಿ ದೇಶಿಸಿದರು, "ಹಾಗೆ ಮಾಡಬೇಡಿ. ನಿಮಗೆ ನಿಮ್ಮ ದೃಷ್ಟಿಯ ಮೇಲೆ, ನಿಮ್ಮ ಶರೀರದ

ಮೇಲೆ ಮತ್ತು ನಿಮ್ಮ ಮನೆ ಮಂದಿಯ ಮೇಲೆ ಹಕ್ಕಿದೆ. ನೀವು ನಮಾಝ್ ಮಾಡಿ ವಿಶ್ರಾಂತಿಯನ್ನೂ ತೆಗೆದುಕೊಳ್ಳಿ. ಉಪವಾಸ ಆಚರಿಸಿದರೆ, ಆಚರಿಸದೆಯೂ ಇರಿ."

ಪ್ರವಾದಿವರ್ಯರ ಉಪದೇಶದ ಬಳಿಕ ಉಸ್ಮಾನ್ ಬಿನ್ ಮಝ್‌ಊನ್ ತನ್ನ ಸುಧಾರಿಸಿಕೊಂಡರು. ಅನಂತರ ಅವರ ಪತ್ನಿಯು ಪ್ರವಾದಿ ಪತ್ನಿಯರ ಬಳಿಗೆ ಬಂದ ಓರ್ವ ಮದುವಣಗಿತ್ತಿಯಂತೆ ಶೋಭಿಸುತ್ತಿದ್ದರು.

ಹ. ಉಸ್ಮಾನ್ ಬಿನ್ ಮಝ್‌ಊನ್ ಸತ್ಯಾಸತ್ಯದ ಪ್ರಥಮ ಸಂಘರ್ಷವಾಗಿದ್ದ ಬ ಯುದ್ಧದಲ್ಲಿ ಭಾಗವಹಿಸಿದ್ದರು. ಅಲ್ಲಿಂದ ಮರಳಿದ ನಂತರ ಅವರು ರೋಗ ಪೀಡಿತರಾದ ಅವರ ಅನ್ಸಾರಿ ಸಹೋದರ ಅಬುಲ್ ಹಸೀಮ್ ಮತ್ತವರ ಪತ್ನಿ ಮಕ್ಕಳು ಅವರ ಶುಶ ನಡೆಸಿದರು. ಆದರೇನು ಮಾಡುವುದು? ಮರಣದ ಮುಂದೆ ಅವರು ಸೋತು ಹೋಗಿದ್ದ ಪ್ರವಾದಿಯವರ(ಸ) ಹಿಜ್ರತ್‌ನ ಎರಡು ವರ್ಷಗಳ ಬಳಿಕ ಹಿ.ಶ. 2ರ ಕೊನೆಯಲ್ಲಿ ಅ ಈ ಲೋಕಕ್ಕೆ ವಿದಾಯ ಕೋರಿದರು.

ಉಸ್ಮಾನ್ ಬಿನ್ ಮಝ್‌ಊನ್, ಅನ್ಸಾರಿ ಮಹಿಳೆಯಾಗಿದ್ದ ಉಮ್ಮುಲ್ ಉ ಮನೆಯಲ್ಲಿ ನಿಧನ ಹೊಂದಿದ್ದರು. ಅವರ ಪಾರ್ಥಿವ ಶರೀರವನ್ನು ಸ್ನಾನ ಮಾ ಕಬರಸ್ತಾನಕ್ಕೆ ಕೊಂಡು ಹೋಗಲು ಸಿದ್ಧ ಪಡಿಸುತ್ತಿದ್ದಾಗ ಪ್ರವಾದಿ(ಸ) ಅಲ್ಲಿಗೆ ಬಂದ ಉಮ್ಮುಲ್ ಉಲಾರು ಮೃತದೇಹವನ್ನು ಸಂಬೋಧಿಸುತ್ತಾ, "ಅಬೂ ಸಾಯಿಬ್! ನಿ ಮೇಲೆ ಅಲ್ಲಾಹನ ಅನುಗ್ರಹಗಳಿರಲಿ. ಅಲ್ಲಾಹನು ನಿಮ್ಮನ್ನು ಪ್ರತಿಷ್ಠಿತಗೊಳಿಸಿರುವನೆಂಬು ನಾನು ಸಾಕ್ಷಿಯಾಗಿದ್ದೇನೆ" ಎಂದರು.

ಆಗ ಪ್ರವಾದಿವರ್ಯರು ಉಮ್ಮುಲ್ ಉಲಾರೊಡನೆ, "ಅಲ್ಲಾಹನು ಇವ ಪ್ರತಿಷ್ಠಿತಗೊಳಿಸಿರುವನೆಂದು ನಿಮಗೆ ಹೇಗೆ ತಿಳಿಯಿತು" ಎಂದು ಕೇಳಿದರು.

"ನನ್ನ ತಂದೆ ತಾಯಿಗಳು ತಮಗೆ ಅರ್ಪಿತ. ಪ್ರವಾದಿವರ್ಯರೆ! ಅವರನ್ನಲ್ಲದೆ ಇ ಯಾರನ್ನು ಅಲ್ಲಾಹನು ಪ್ರತಿಷ್ಠಿತಗೊಳಿಸುವನು?" ಉಮ್ಮುಲ್ ಉಲಾ ಹೇಳಿದರು.

ಇದನ್ನು ಕೇಳಿ ಪ್ರವಾದಿ(ಸ) ಹೀಗೆಂದರು, "ಉಸ್ಮಾನ್ ಓರ್ವ ದೃಢ ವಿಶ್ವಾಸಿಯಾಗಿದ್ದ ಅವರಿಗೆ ಉತ್ತಮ ಪರಿಣಾಮವನ್ನೇ ನಿರೀಕ್ಷಿಸುತ್ತೇನೆ. ಆದರೆ ನಾನು ಅಲ್ಲಾ ಪ್ರವಾದಿಯಾಗಿದ್ದೂ, ಅಲ್ಲಾಹನಾಣೆ! ನನ್ನ ಅಂತಿಮ ಗತಿ ಏನಾದೀತೆಂದು ಹೇಳಲ

(ಇಬ್ನು ಸಅದ್, ತಬಕಾ

ಉಸ್ಮಾನ್ ಬಿನ್ ಮಝ್‌ಊನ್‌ರ ನಿಧನದಿಂದ ಪ್ರವಾದಿ(ಸ) ತುಂ ದುಃಖಿತರಾದರು. ಅವರು ಉಸ್ಮಾನ್‌ರ ಹಣೆಯನ್ನು ಮೂರು ಬಾರಿ ಚುಂಬಿಸಿದರು. ಕಣ್ಣ ಧಾರೆಯಾಗಿ ಹೊರಟು ಉಸ್ಮಾನ್‌ರ ಮುಖದ ಮೇಲೆ ಉದುರಿತು. ತರುವಾಯ ತಲೆ ಗದ್ಗದ ಕಂಠದಿಂದ ಹೀಗೆಂದರು, "ಅಬೂ ಸಾಯಿಬ್! ನೀವು ನಮ್ಮನ್ನು ಬಿಟ್ಟಗಲಿದ್ದಿ ನೀವು ಲೋಕದಿಂದ ಸಂಪೂರ್ಣ ನಿರಪೇಕ್ಷರಾಗಿ ವಿದಾಯ ಕೋರಿದಿರಿ."

ಆ ಕಾಲದಲ್ಲಿ ಮದೀನಾದಲ್ಲಿ ಮುಸ್ಲಿಮರಿಗೆ ಪ್ರತ್ಯೇಕ ಕಬರಸ್ಥಾನವಿರಲಿಲ್ಲ. ಉಸ್

ಮರ್ಝ್‌ಊನ್ ನಿಧನರಾದಾಗ ಪ್ರವಾದಿಯವರು(ಸ), ಬಕೀಅ್ ಮೈದಾನವನ್ನು
ಕ್ಕಾಗಿ ಆರಿಸಿಕೊಂಡರು. ಈ ರೀತಿ ಜನ್ನತುಲ್ ಬಕೀಅ್‌ನಲ್ಲಿ ಪ್ರಪ್ರಥಮವಾಗಿ ದಫನ
ಡಲ್ಪಟ್ಟ ಪ್ರವಾದಿ ಸಂಗಾತಿ ಉಸ್ಮಾನ್ ಬಿನ್ ಮರ್ಝ್‌ಊನ್ ಆಗಿದ್ದರು ಎಂಬುದು
ರಿಗೆ ಇತಿಹಾಸದಲ್ಲಿ ಸಂದ ವಿಶೇಷ ಗೌರವವಾಗಿತ್ತು. ಅವರ ಜನಾಝ ನಮಾಝನ್ನು
ಾದಿವರ್ಯರೇ(ಸ) ನಿರ್ವಹಿಸಿದರು. ದಫನ ಕಾರ್ಯದ ಉಸ್ತುವಾರಿಯನ್ನು ಗೋರಿಯಂಚಿನಲ್ಲಿ
ತು ಪ್ರವಾದಿವರ್ಯರೇ ವಹಿಸಿದರು. ದಫನ ಕಾರ್ಯ ಮುಗಿದ ನಂತರ ಗೋರಿಯ ತಲೆ
ದಲ್ಲಿ ಯಾವುದೋ ಒಂದು ವಸ್ತುವನ್ನು ನೆಟ್ಟು ಹೀಗೆ ಹೇಳಿದರು, "ಇನ್ನು ಯಾರಾದರೂ
ಣ ಹೊಂದಿದರೆ ಅವರನ್ನು ಇವರ ಸುತ್ತಮುತ್ತ ದಫನ ಮಾಡಲಾಗುವುದು."

# ಹ. ಅಬೂಬಕರ್(ರ)

## ಚಿತ್ರ ಹಿಂಸೆಗೆ ಮಣಿಯದ ಪ್ರವಾದಿ ಪ್ರೇಮ

ಮುಹಮ್ಮದ್‌ರವರಿಗೆ(ಸ) ಪ್ರವಾದಿತ್ವ ಲಭಿಸಿದ ಆರಂಭ ಕಾಲದ ಮಾತು. ಒಂ ದಿನ ಪ್ರವಾದಿ(ಸ) ಮತ್ತು ಅಬೂಬಕರ್(ರ) ಹಾಗೂ ಇತರ ಕೆಲವು ಸಂಗಾತಿಗಳು ಕಅ ಭವನದ ಬಳಿ ಕುಳಿತಿದ್ದರು. ಅಲ್ಲೇ ಹತ್ತಿರದಲ್ಲಿ ಕುರೈಶರ ಗಣ್ಯ ವ್ಯಕ್ತಿಗಳೂ ಕುಳಿತಿದ್ದ ಅಬೂಬಕರ್‌ರವರು(ರ) ಪ್ರವಾದಿವರ್ಯರ(ಸ) ಅನುಮತಿ ಪಡೆದು ಆ ಜನರ ಮುಂದೆ ಒಂ ಭಾಷಣ ಮಾಡಿದರು. ಅದರಲ್ಲಿ ಅವರ ಸತ್ಯನಿಷೇಧ ಮತ್ತು ಬಹುದೇವಾರಾಧನೆಯ ಆಕ್ಷೇಪಿಸುತ್ತಾ, ಸತ್ಯ ಧರ್ಮವನ್ನು ಸ್ವೀಕರಿಸುವಂತೆ ಕರೆ ನೀಡಿದರು. ಇದು ಕುರೈಶ್ ನಾಯ ಮೇಲೆ ಅನುಕೂಲಕರ ಪ್ರಭಾವ ಬೀರುವ ಬದಲು ಪ್ರತಿಕೂಲ ಪರಿಣಾಮ ಬೀರಿತು. ಭಾ ಮುಗಿಯುತ್ತಿದ್ದಂತೆಯೇ ನಾಲ್ಕೂ ಕಡೆಯಿಂದ ಸತ್ಯನಿಷೇಧಿಗಳು ಅಬೂಬಕರ್‌ರ ಮೇಲೆ ನಿಷ್ಕರುಣೆಯಿಂದ ಥಳಿಸತೊಡಗಿದರು. ಕುರೈಶರ ನಾಯಕರ ಪೈಕಿ ಸಮಾಧಾನದ ವ್ಯಕ್ತಿಯೆಂ ಪರಿಗಣಿಸಲ್ಪಡುತ್ತಿದ್ದ ಉತ್ಬಾ ಬಿನ್ ರಬೀಅ ಬಹಳ ಕುಪಿತನಾಗಿ ಅಬೂಬಕರ್‌ರ ಮು ತನ್ನ ಬೂಟುಗಾಲಿನಿಂದ ಚೆನ್ನಾಗಿ ಒದ್ದನು. ಮಾತ್ರವಲ್ಲ ಅವರ ಹೊಟ್ಟೆಯ ಮೇ ಇನ್ನಷ್ಟು ಒದೆಯ ತೊಡಗಿದನು. ಇದರಿಂದ ಅಬೂಬಕರ್ ತುಂಬಾ ಘಾಸಿಗೊಂಡರು. ಅ ಮುಖದ ಮೇಲೆ ಗಾಯಗಳಾಗಿ ರಕ್ತ ಸೋರತೊಡಗಿತು. ಅವರನ್ನು ಗುರುತಿಸುವ ಕಷ್ಟವಾಗಿತ್ತು. ಅವರ ಜೊತೆ ಇತರ ಸತ್ಯವಿಶ್ವಾಸಿಗಳೂ ಕುರೈಶರ ಕ್ರೌರ್ಯಕ್ಕೆ ಬಲಿಯಾದ ಪ್ರವಾದಿ(ಸ) ಕೂಡಾ ಅಲ್ಲಿದ್ದರು. ಪ್ರವಾದಿವರ್ಯರನ್ನು ಅವರು ಹಿಂದಕ್ಕೆ ತಳ್ಳಿದರೇ ಹೊ ಬೇರೇನೂ ಮಾಡಲಿಲ್ಲ. ಅಬೂತಾಲಿಬ್‌ರ ಪ್ರಭಾವ ಮತ್ತು ಖದೀಜಾ(ರ) ಪ್ರವಾದಿವಯ ಪತ್ನಿಯಾಗಿದ್ದ ಕಾರಣ ಅವರು ಪ್ರವಾದಿವರ್ಯರ ಮೇಲೆ ಕೈ ಮಾಡಲಿಲ್ಲ.

ಅಬೂಬಕರ್‌ರ ತೈಮ್ ಗೋತ್ರದ ಜನರಿಗೆ ಈ ವಿಷಯ ತಿಳಿದಾಗ ಅವರು ಓಡೋ ಬಂದು ಅವರನ್ನು ವೈರಿಗಳ ಹಿಡಿತದಿಂದ ಬಿಡಿಸಿದರು. ಆ ಸಂದರ್ಭದಲ್ಲಿ ಅಬೂಬ ಪ್ರಜ್ಞಾಹೀನರಾಗಿದ್ದರು. ಬದುಕುವುದೇ ಕಷ್ಟವೆಂದು ತೋರುತ್ತಿತ್ತು. ಅವರ ಈ ಸ್ಥಿತಿಯ ಕಂಡು ಅವರ ಗೋತ್ರದವರು ಮಮ್ಮಲ ಮರುಗಿದರು. ಅಬೂಬಕರ್ ಒಂದು ವೇಳೆ ಮ ಹೊಂದಿದರೆ ಅದರ ಪ್ರತೀಕಾರ ತೆಗೆಯದೆ ಬಿಡಲಾರೆವೆಂದೂ ಉತ್ಬಾ ಬಿನ್ ರಬೀಅನ ಜೀವಂತ ಬಿಡಲಾರೆವೆಂದೂ ಅವರು ಆಣೆ ಹಾಕಿ ಪ್ರತಿಜ್ಞೆ ಮಾಡಿದರು. ಅಷ

ೂಬಕರ್‌ರನ್ನು ಒಂದು ಬಟ್ಟೆಯಲ್ಲಿ ಸುತ್ತಿ ಅವರ ಮನೆಗೆ ಕೊಂಡೊಯ್ದರು. ಅವರ ದೆ ಅಬೂ ಕಹಾಫ ಸಹಿತ ಗೋತ್ರದ ಜನರೆಲ್ಲರೂ ಅವರನ್ನು ಕೂಗಿ ಕರೆದರೂ ಅವರಿಗೆ ಜ್ಞೆ ಮರಳಲಿಲ್ಲ. ಕೊನೆಗೂ ಸಂಜೆಯ ಹೊತ್ತಿಗೆ ಪ್ರಜ್ಞೆ ಮರಳಿ ಮಾತನಾಡಲು ಶಕ್ತರಾದಾಗ ಪ್ರಥಮವಾಗಿ ಅವರು, 'ಪ್ರವಾದಿವರ್ಯರೆಲ್ಲಿ?' ಎಂದು ಕೇಳಿದರು.

ಇದನ್ನು ಕೇಳಿ ತೈಮ್ ಗೋತ್ರದವರ ಸಿಟ್ಟು ನೆತ್ತಿಗೇರಿತು. ಈ ಅವಸ್ಥೆಯಲ್ಲೂ ಹಮ್ಮದ್‌ರನ್ನು ಬಿಡುವುದಿಲ್ಲವೇ ಎಂದು ಮೂದಲಿಸಿದರು. ತರುವಾಯ ಅಬೂಬಕರ್‌ರ ಮಿ ಉಮ್ಮುಲ್ ಖೈರ್‌ರಿಗೆ ಅವರನ್ನು ನೋಡಿಕೊಳ್ಳುವಂತೆ ಹೇಳಿ ಹೊರಟು ಹೋದರು. ರ ತಾಯಿ ಅವರನ್ನು ಏನಾದರೂ ತಿನ್ನುವಂತೆ, ಕುಡಿಯುವಂತೆ ಪದೇ ಪದೇ ತ್ತಾಯಿಸಿದರು. ಆದರೆ ಅವರು ಒಂದೇ ಪ್ರಶ್ನೆ ಕೇಳುತ್ತಿದ್ದರು: "ಪ್ರವಾದಿವರ್ಯರು ಿದ್ದಾರೆ?" ಅವರು ಆಹಾರ ಪಾನೀಯವನ್ನು ಸೇವಿಸಲೇ ಇಲ್ಲ. ಪ್ರವಾದಿವರ್ಯರ ಸ್ಥಿತಿ ಗೇನೂ ತಿಳಿಯದು ಎಂದು ತಾಯಿಯೂ ಉತ್ತರಿಸುತ್ತಲೇ ಇದ್ದರು. ಆಗಿನ್ನೂ ಉಮ್ಮುಲ್ ್ ಸತ್ಯವಿಶ್ವಾಸ ಸ್ವೀಕರಿಸಿರಲಿಲ್ಲ. ಕೊನೆಗೂ ಅಬೂಬಕರ್‌ರು ಪ್ರವಾದಿವರ್ಯರ ಕುರಿತು ಮ್ಮು ಜಮೀಲ್‌ರಲ್ಲಿ ತಿಳಿದು ಬರುವಂತೆ ತಾಯಿಗೆ ತಿಳಿಸಿದರು. ಅವರು ಉಮ್ಮು ೀಲ್‌ರ ಬಳಿ ಹೋಗಿ ಅಬೂಬಕರ್ ನಿಮ್ಮಲ್ಲಿ ಮುಹಮ್ಮದ್‌ರ(ಸ) ಕುರಿತು ಾರಿಸುತ್ತಿದ್ದಾನೆ. ಆತನಿಗೆ ತುಂಬಾ ಪೆಟ್ಟಿನ ಗಾಯಗಳಾಗಿವೆಯೆಂದರು. ಉಮ್ಮು ಜಮೀಲ್ ೂ ಹೇಳಲಿಲ್ಲ. ತನ್ನನ್ನು ಅಬೂಬಕರ್‌ರ ಬಳಿಗೆ ಕರೆದುಕೊಂಡು ಹೋಗುವಂತೆ ಮ್ಮುಲ್ ಖೈರ್‌ರಲ್ಲಿ ವಿನಂತಿಸಿದರು. ಅವರು ತನ್ನೊಂದಿಗೆ ಉಮ್ಮು ಜಮೀಲ್‌ರನ್ನು ೂಬಕರ್‌ರ ಬಳಿಗೆ ಕರೆದೊಯ್ದರು. ಅವರ ಪರಿಸ್ಥಿತಿಯನ್ನು ಕಂಡು ಉಮ್ಮು ಜಮೀಲ್ ಹಾರಿದರು. ಅವರಿಗೆ ತುಂಬಾ ದುಃಖವಾಯಿತು.

"ದೇವನಾಣೆ! ನಿಮ್ಮೊಂದಿಗೆ ಈ ರೀತಿ ವರ್ತಿಸಿದ ಜನರು ನಿಜವಾಗಿಯೂ ದುಷ್ಟರೂ ರ್ಧಿಕ್ಕಾರಿಗಳೂ ಆಗಿದ್ದಾರೆ. ಖಂಡಿತವಾಗಿಯೂ ಅಲ್ಲಾಹನು ಅವರಿಂದ ನಿಮ್ಮ ೀಕಾರ ಪಡೆದೇ ತೀರುವನೆಂಬ ದೃಢ ನಂಬಿಕೆ ನನಗಿದೆ"- ಎಂದವರು ತನಗರಿ ದಂತೆಯೇ ಹೇಳಿ ಬಿಟ್ಟರು.

ಅನಂತರ ಉಮ್ಮು ಜಮೀಲ್, ಅಬೂಬಕರ್‌ರನ್ನು ಏನಾದರೂ ತಿನ್ನುವಂತೆ ಕುಡಿಯುವಂತೆ ಂತಿಸಿದರು. ಆದರೆ ಅವರು, "ನನಗೆ ಮೊದಲು ಪ್ರವಾದಿವರ್ಯರ ಕುರಿತು ಹೇಳಿರಿ" ನಾಗ ಉಮ್ಮು ಜಮೀಲ್‌ರು, "ನಿಮ್ಮ ಮಾತನ್ನು ನಿಮ್ಮ ತಾಯಿ ಕೇಳುತ್ತಾರೆ" ಎಂದರು.

"ಅವರ ಬಗ್ಗೆ ನೀವೇನೂ ಚಿಂತಿಸಬೇಡಿ. ಅವರಿಂದೇನೂ ತೊಂದರೆಯಾಗದು"- ೂಬಕರ್ ಹೇಳಿದರು.

"ಪ್ರವಾದಿ(ಸ) ಅಲ್ಲಾಹನ ಅನುಗ್ರಹದಿಂದ ಕ್ಷೇಮವಾಗಿದ್ದಾರೆ."

"ಈಗ ಅವರೆಲ್ಲಿದ್ದಾರೆ?"

"ಅರ್ಕಮ್ ಬಿನ್ ಅರ್ಕಮ್‌ರ ಮನೆಯಲ್ಲಿದ್ದಾರೆ."

"ಹಾಗಾದರೆ ದೇವನಾಣೆ! ನಾನು ಪ್ರವಾದಿವರ್ಯರನ್ನು ಕಣ್ಣಾರೆ ಕಾಣುವ ವರೆಗೂ

ಅನ್ನ-ಪಾನೀಯಗಳನ್ನು ಮುಟ್ಟಲಾರೆ"- ಅಬೂಬಕರ್‌ರ ದಿಟ್ಟ ಉತ್ತರವಾಗಿತ್ತು.

ಆಗ ಜನರು ಅಬೂಬಕರ್‌ರನ್ನು ನೋಡಲು ಬರುತ್ತಿದ್ದರು. ಜನರೆಲ್ಲ ಹೋದ ನಂ ಉಮ್ಮು ಜಮೀಲ್ ಮತ್ತು ಉಮ್ಮುಲ್ ಖೈರ್, ಅಬೂಬಕರ್‌ರ ಕೈ ಹಿಡಿದುಕೊಂ ಪ್ರವಾದಿವರ್ಯರ ಸನ್ನಿಧಿಗೆ ತೆರಳಿದರು. ಅಬೂಬಕರ್‌ರ ಈ ದುರವಸ್ಥೆಯನ್ನು ಕಂ ಪ್ರವಾದಿವರ್ಯರ ಕಣ್ಣುಗಳು ತೇವಗೊಂಡವು. ಅವರು ಅಬೂಬಕರ್‌ರ ಹಣೆಯ ಚುಂಬಿಸಿದರು. ಇದನ್ನು ಕಂಡು ಇತರ ಸಹಾಬಿಗಳ ಕಣ್ಣಿನಿಂದಲೂ ಕಣ್ಣೀರ ಹನಿ ಉದುರಿದುವು. ಉಮ್ಮು ಜಮೀಲ್ ಮೊದಲೇ ಸತ್ಯವಿಶ್ವಾಸ ಸ್ವೀಕರಿಸಿದವರಾಗಿದ್ದರು. ಆ ಉಮ್ಮುಲ್ ಖೈರ್ (ಅಬೂಬಕರ್‌ರ ತಾಯಿ) ಮುಸ್ಲಿಮಳಾಗಿರಲಿಲ್ಲ.

ಆ ಸಂದರ್ಭದಲ್ಲಿ ಅಬೂಬಕರ್‌ರು ಪ್ರವಾದಿವರ್ಯರೊಡನೆ, "ತನ್ನ ತಾಯ ಸನ್ಮಾರ್ಗ ದರ್ಶನಕ್ಕಾಗಿ ಪ್ರಾರ್ಥಿಸುವಂತೆ" ವಿನಂತಿಸಿದರು. ಪ್ರವಾದಿವರ್ಯರು ಆ ಕೂಡ ಕೈಯೆತ್ತಿ ಪ್ರಾರ್ಥಿಸಿದರು. ಅದರಿಂದ ಅವರ ಮನ ಬೆಳಗಿತು. ಅವರೂ ಸತ್ಯವಿಶ ಸ್ವೀಕರಿಸಿದರು.

ಉಮ್ಮು ಜಮೀಲ್ ಎಂಬ ಕುಲನಾಮದ ಈ ಮಹಿಳೆ ಬೇರಾರೂ ಅ ಪ್ರವಾದಿವರ್ಯರ(ಸ) ಸತ್ಯ ಸಂದೇಶವನ್ನು ಆರಂಭದಲ್ಲೇ ಸ್ವೀಕರಿಸಿದ, ಪ್ರವಾದಿ ಮ ಅಬೂಬಕರ್‌ರವರ ಅತ್ಯಂತ ಭರವಸೆಯ ಆ ಮಹಿಳೆ ಹ.ಉಮರ್ ಫಾರೂಕ್‌ರ ಸಹೋದರಿ ಫಾತಿಮಾ ಬಿಂತಿ ಖತ್ತಾಬ್(ರ) ಆಗಿದ್ದರು.

# ತಲ್ಹಾ ಬಿನ್ ಉಬೈದುಲ್ಲಾ ತೈಮಿ(ರ)

ತಲ್ಹಾ ಬಿನ್ ಉಬೈದುಲ್ಲಾ ತೈಮಿ(ರ) ಮೀಸೆ ಚಿಗುರುವ ಓರ್ವ ಯುವಕನಾಗಿದ್ದನು. ' ವ್ಯಾಪಾರೀ ತಂಡದೊಂದಿಗೆ ಸಿರಿಯಾಕ್ಕೆ ಹೋಗುತ್ತಿದ್ದರು. ವ್ಯಾಪಾರಿ ತಂಡವು ಬಸ್ರಾ ಾಗ ಕುರೈಶ್ ಹಿರಿಯರು ಮತ್ತು ಅನುಭವಿಗಳು ಅಲ್ಲಿಯ ಪೇಟೆಯಲ್ಲಿ ಕ್ರಯ ುದಲ್ಲಿ ತಲ್ಲೀನರಾಗಿದ್ದರು. ತಲ್ಹಾರಿಗೆ ಅನುಭವವೇನೂ ಇಲ್ಲದಿದ್ದರೂ ತನ್ನ ಅಪಾರ ುತಿಕೆ ಮತ್ತು ದೂರದರ್ಶಿತ್ವದ ಕಾರಣದಿಂದಾಗಿ ಅನುಭವಸ್ಥರನ್ನು ಹಿಂದೆ ಹಾಕಿ ು ವ್ಯಾಪಾರವನ್ನು ಕುದರಿಸುವಲ್ಲಿ ಯಶಸ್ವಿಯಾದರು. ಆ ಪೇಟೆಯು ವಿವಿಧ ಕಡೆಗಳಿಂದ ವ್ಯಾಪಾರಿಗಳಿಂದ ಸದಾ ಕಿಕ್ಕಿರಿದಿರುತ್ತಿತ್ತು. ತಲ್ಹಾ ಪೇಟೆಗೆ ಬರುತ್ತಲೂ ಹೋಗುತ್ತಲೂ ದ್ದರು. ಒಂದು ದಿನ ಅವರ ಜೀವನದಲ್ಲಿ ಒಂದು ಅಪೂರ್ವ ಘಟನೆ ಸಂಭವಿಸಿತು. ಅವರ ಜೀವನವನ್ನೇ ಬದಲಾಯಿಸಿ ಬಿಟ್ಟಿತು. ಮಾತ್ರವಲ್ಲ ಅದು ಇತಿಹಾಸದ ನ್ನೇ ಬದಲಾಯಿಸಿತು.

ಒಂದು ತಲ್ಹಾ ಬಸ್ರಾದ ಪೇಟೆಯಲ್ಲಿದ್ದಾಗ ಓರ್ವ ಕ್ರೈಸ್ತ ಪುರೋಹಿತ ಹೀಗೆ ುಸುವುದನ್ನು ಕೇಳಿದರು,

'ವ್ಯಾಪಾರಿಗಳೇ! ನಿಮ್ಮ ಪೈಕಿ ಮಕ್ಕಾದ ವ್ಯಾಪಾರಿ ಯಾರಾದರೂ ಇದ್ದಾರೆಯೇ!" ಹತ್ತಿರದಲ್ಲಿ ನಿಂತಿದ್ದ ತಲ್ಹಾ ಅವರು, "ಹೌದು. ನಾನು ಮಕ್ಕಾದಿಂದ ಬಂದಿದ್ದೇನೆ" ು.

'ನಿಮ್ಮಲ್ಲಿ ಅಹ್ಮದ್ ಪ್ರತ್ಯಕ್ಷರಾಗಿದ್ದಾರೆಯೇ?"

ಯಾವ ಅಹ್ಮದ್?"

ಅವರೇ, ಅಬ್ದುಲ್ ಮುತ್ತಲಿಬ್‌ರ ಮಗ ಅಬ್ದುಲ್ಲಾರ ಮಗ" ಪುರೋಹಿತರು ು. ಮುಂದುವರಿಸುತ್ತಾ"ಈ ತಿಂಗಳಲ್ಲಿ ಅವರು ಪ್ರತ್ಯಕ್ಷರಾಗಬೇಕಿತ್ತು. ಅವರು ು ಪ್ರವಾದಿ. ನಿಮ್ಮ ದೇಶದ ಪವಿತ್ರ ಭೂಮಿಯಲ್ಲಿ ನೇಮಿಸಲ್ಪಡುವರು. ಅಲ್ಲಿಂದ ನ ಪ್ರದೇಶಕ್ಕೆ ವಲಸೆ ಹೋಗುವರು. ಅದು ಖರ್ಜೂರದ ರಾಶಿಯ ಊರಾಗಿರುವುದು. ಮಣ್ಣು ಉಪ್ಪು ಮಿಶ್ರಿತವಾಗಿರುವುದು. ಅದರಿಂದ ನೀರಿನ ಚಿಲುಮೆಗಳು ಹರಿಯುವುದು. ! ಅವರ ಮೇಲೆ ವಿಶ್ವಾಸ ತಾಳುವುದರಲ್ಲಿ ಹಿಂದೇಟು ಹಾಕಬಾರದು."

ಪುರೋಹಿತರ ಈ ಮಾತು ತಲ್ಹಾರ ಮನಸ್ಸಿನೊಳಕ್ಕೆ ನಾಟಿತು. ಅವರು ಕೂಡಲೇ

ವ್ಯಾಪಾರಿ ತಂಡವನ್ನು ಬಿಟ್ಟು ತನ್ನ ಒಂಟೆಯನ್ನೇರಿ ವೇಗವಾಗಿ ಮಕ್ಕಾದತ್ತ ಪ್ರ ಬೆಳೆಸಿದರು. ಮಕ್ಕಾ ತಲಪಿ ತನ್ನ ಮನೆಗೆ ಹೋದರು. "ಇಲ್ಲೇನಾದರೂ ನಡೆದಿದೆಯೇ!" ಎಂದವರು ಮನೆಯವರನ್ನು ವಿಚಾರಿಸಿದರು.

"ಹೌದು. ಮುಹಮ್ಮದ್ ಬಿನ್ ಅಬ್ದುಲ್ಲಾ(ಸ) ಹೊಸ ವಾದವೊಂದನ್ನು ಮೊಳಗಿ ಅವರು ಪ್ರವಾದಿಯಂತೆ. ಅಬೂ ಕಹಾಫರ ಪುತ್ರ (ಅಬೂಬಕರ್) ಅವರ ಬೆಂಬಲ ಬಿಟ್ಟಿದ್ದಾರೆ" ಮನೆಯವರು ಉತ್ತರಿಸಿದರು.

ತಲ್ಹಾರಿಗೆ ಅಬೂಬಕ್ಕರ್‌ರ ಪರಿಚಯ ಮೊದಲಿನಿಂದಲೇ ಇತ್ತು. ಅತ್ಯಂತ ಸ್ವಭಾವಿಯೂ ಜನಾನುರಾಗಿಯೂ ಕೋಮಲ ಹೃದಯಿಯೂ ಆಗಿದ್ದ ಅಬೂಬಕರ್ ಸಚ್ಚಾರಿತ್ರ್ಯವಂತ ಹಾಗೂ ಸತ್ಯಸಂಧ ವ್ಯಾಪಾರಿಯೂ ಆಗಿದ್ದರು. ಅಲ್ಲದೆ ಅವರು ಇತಿಹಾಸವನ್ನು ಬಲ್ಲವರಾಗಿದ್ದರು. ಜನರು ಅವರನ್ನು ಬಹಳವಾಗಿ ಆದರಿಸುತ್ತಿದ್ದರು. ಒಡನಾಟದಿಂದ ಸಂತುಷ್ಟರಾಗುತ್ತಿದ್ದರು. ತಲ್ಹಾರು ಅಬೂಬಕರ್‌ರನ್ನು ಭೇಟಿ "ಮುಹಮ್ಮದ್(ಸ) ತಾನು ಪ್ರವಾದಿಯೆಂದು ವಾದಿಸಿರುವುದೂ ನೀವು ಅವರ ಅನುಯಾಯಿ ಮಾರ್ಪಟ್ಟಿರುವುದೂ ಸರಿಯೇ?" ಎಂದು ಪ್ರಶ್ನಿಸಿದರು.

ಅಬೂಬಕರ್(ರ) ಹೌದೆಂದು ಉತ್ತರಿಸುತ್ತಾ ಪ್ರವಾದಿವರ್ಯರ ವಿವರಗಳನ್ನು ಅವರನ್ನು ಸತ್ಯ ಧರ್ಮ ಸ್ವೀಕರಿಸುವಂತೆ ಪ್ರೇರೇಪಿಸಿದರು. ಆ ಸಂದರ್ಭದಲ್ಲಿ ತ ಕ್ರೈಸ್ತ ಪುರೋಹಿತನು ಹೇಳಿದ ವಿಷಯಗಳನ್ನು ಅಬೂಬಕರ್‌ರಿಗೆ ತಿಳಿಸಿದಾಗ ಅತ್ಯಾಶ್ಚರ್ಯಪಟ್ಟರು. ಅನಂತರ ಅಬೂಬಕರ್‌ರು ತಲ್ಹಾರನ್ನು ಪ್ರವಾದಿವರ್ಯರ ಕರೆದುಕೊಂಡು ಹೋದರು. ದಾರಿ ಮಧ್ಯೆ ಅವರು ಹೀಗೆಂದರು, "ಕ್ರೈಸ್ತ ಪುರೋಹಿತ ವಿಷಯಗಳನ್ನು ಪ್ರವಾದಿವರ್ಯರಿಗೆ ತಿಳಿಸಿರಿ. ಅವರ ಸಂದೇಶವೇನೆಂಬುದನ್ನು ಬಾಯಿಯಿಂದಲೇ ಕೇಳಿರಿ ಮತ್ತು ಆ ಸತ್ಯ ಧರ್ಮವನ್ನು ಸ್ವೀಕರಿಸಿರಿ."

ತಲ್ಹಾರು ಪ್ರವಾದಿವರ್ಯರನ್ನು ಭೇಟಿಯಾದಾಗ ಅವರ ಮುಂದೆ ಪ್ರವ ಇಸ್ಲಾಮಿನ ಸಂದೇಶವನ್ನು ಇಟ್ಟರು. ಕುರ್‌ಆನ್‌ನ ಕೆಲವು ಭಾಗಗಳನ್ನು ಪಠಿಸಿ ಕೇ ಮತ್ತು ಪರಲೋಕದ ಪುರಸ್ಕಾರಗಳ ಬಗ್ಗೆ ತಿಳಿಸಿದರು. ಇದರಿಂದ ಪ್ರಭಾವಿತರಾದ ತ ತನ್ನೊಂದಿಗೆ ಕ್ರೈಸ್ತ ಪುರೋಹಿತ ಹೇಳಿದ ವಿಷಯವನ್ನು ತಿಳಿಸಿ, ಪವಿತ್ರ ವಚನವನ್ನು ಉ ಇಸ್ಲಾಮಿನೊಳಗೆ ಪ್ರವೇಶಿಸಿದರು. ಪ್ರವಾದಿಯವರಿಗೆ(ಸ) ಇದರಿಂದ ಬಹಳ ಸಂತೋಷವ ಅಬೂಬಕರ್‌ರವರ(ರ) ಮೂಲಕ ಇಸ್ಲಾಮಿಗೆ ಬಂದವರಲ್ಲಿ ತಲ್ಹಾಬಿನ್ ಉಬೈ ನಾಲ್ಕನೆಯವರಾಗಿದ್ದಾರೆ.

ಈ ಕುರೈಶ್ ತರುಣ ಇಸ್ಲಾಮ್ ಸ್ವೀಕರಿಸಿದ ಸುದ್ದಿ ಅವರ ಮನೆಯ ಕುಟುಂಬದವರಿಗೂ ಸಿಕ್ಕಿದಾಗ ಅವರು ಕಂಗಾಲಾದರು. ವಿಶೇಷವಾಗಿ ಅವರ ತಾ ದುರಂತ ಸುದ್ದಿಯಿಂದ ಅತ್ಯಂತ ದುಃಖಿತರಾದರು. ಏಕೆಂದರೆ ಉನ್ನತ ಚಾ ಉದಾರಮತಿಯಾದ ತನ್ನ ಪುತ್ರ ಒಂದು ದಿನ ತನ್ನ ಗೋತ್ರದ ನಾಯಕನಾಗುವನೆಂಬ ಅವರಲ್ಲಿತ್ತು. ಅವರ ಗೋತ್ರದವರು ಅವರನ್ನು ಮರಳಿ ಮಾತೃ ಧರ್ಮಕ್ಕೆ ತರಲು ತರ

ಕ್ಷಿಸಿದರು. ಆದರೆ ಅವರ ಪ್ರಯತ್ನಗಳೆಲ್ಲ ನೀರಿನ ಮೇಲೆ ಹೋಮ ಮಾಡಿದಂತಾಯಿತು. ಕಿಂಚಿತ್ತೂ ತನ್ನ ನಿಲುವನ್ನು ಬದಲಾಯಿಸಲಿಲ್ಲ. ಪ್ರೀತಿ ವಾತ್ಸಲ್ಯಗಳ ಮೆದು ಉರುಳು ದೇ ಪ್ರಯೋಜನಕ್ಕೆ ಬರಲಿಲ್ಲವೆಂದು ಮನಗಂಡಾಗ ಅವರು ಅವರ ಮೇಲೆ ನ್ಯವೆಸಗ ತೊಡಗಿದರು.

ಮಸ್‌ಊದ್ ಬಿನ್ ಖಿರಾಶ್ ಅವರು ಹೀಗೆ ಉಲ್ಲೇಖಿಸುತ್ತಾರೆ: ಒಂದು ದಿನ ನಾನು ರ್ವಾಗಳ ಮಧ್ಯೆ ಓಡಾಡುತ್ತಿದ್ದೆ. ಆಗ ಒಂದು ದೃಶ್ಯ ಕಂಡೆ. ಕೆಲವು ಮಂದಿ ಓರ್ವ ಕನನ್ನು ಬೆಂಬತ್ತಿ ನಡೆಯುತ್ತಿದ್ದರು. ಯುವಕನ ಕೈಗಳನ್ನು ಅವನ ಕೊರಳಿಗೆ ಗಿತ್ತು. ಆ ಜನರು ಅವನನ್ನು ಚೆನ್ನಾಗಿ ಥಳಿಸುತ್ತಿದ್ದರು. ಕೆಲವರು ಅವನನ್ನು ುತ್ತಿದ್ದರು. ಇನ್ನು ಕೆಲವರು ಅವನನ್ನು ಗುದ್ದುತ್ತಿದ್ದರು. ಅವನ ತಲೆ-ಮುಖಗಳಿಗೆ ಯುತ್ತಿದ್ದರು. ಆ ಯುವಕನ ಹಿಂದಿನಿಂದ ಮುದುಕಿಯೊಬ್ಬಳು ಅವನನ್ನು ಬೇಕಾಬಿಟ್ಟಿ ತ್ತಿದ್ದಳು. ನಾನು ಆ ಜನರೊಂದಿಗೆ ಇದೇನಾಗುತ್ತಿದೆ, ಆತ ಮಾಡಿದ ತಪ್ಪಾದರೂ ಎಂದು ವಿಚಾರಿಸಿದೆ. ಅವರು ಹೇಳಿದರು, "ಈತ ತಲ್ಹಾ ಬಿನ್ ಉಬೈದುಲ್ಲಾ. ತನ್ನ ಧರ್ಮವನ್ನು ಬಿಟ್ಟು ಹಾಶಿಮ್ ಮನೆತನದ ಆ 'ನೂತನವಾದಿ'ಯನ್ನು ಿಸತೊಡಗಿದ್ದಾನೆ. ಆ ಸ್ತ್ರೀ ಯಾರೆಂದು ನಾನು ಕೇಳಿದೆ. "ಅದು ಅವನ ತಾಯಿ ಮಿಯ ಪುತ್ರಿ ಸಯಿಯಾ" ಎಂದವರು ಉತ್ತರಿಸಿದರು.

ಅನಂತರ ಕುರೈಶರ ಹುಲಿಯೆಂದು ಬಿರುದಾಂಕಿತನಾಗಿದ್ದ ನೌಫಲ್ ಬಿನ್ ಖುವೈಲಿದ್, ನ್ನೂ ಅಬೂಬಕರ್‌ರನ್ನೂ ಹಗ್ಗದಲ್ಲಿ ಕಟ್ಟಿ ಮಕ್ಕಾದ ಪೋಲಿ ಹುಡುಗರ ವಶಕ್ಕೊಪ್ಪಿಸಿ . ಅವರು ಅವರನ್ನು ಚೆನ್ನಾಗಿ 'ನೋಡಿಕೊಂಡರು' ಈ ದೌರ್ಜನ್ಯಗಳನ್ನು ತಲ್ಹಾ ಅಬೂಬಕರ್ ಒಟ್ಟಾಗಿ ಸಹಿಸಿದುದರಿಂದಲೇ ಅವರಿಬ್ಬರನ್ನು 'ಕರೀನೈನ್' (ಆಪ್ತರು) ಕರೆಯಲಾಗುತ್ತಿತ್ತು.

## ಂತ ಹುತಾತ್ಮ

ಾಲಚಕ್ರ ಉರುಳುತ್ತಲಿತ್ತು. ತಲ್ಹಾ ಬಿನ್ ಉಬೈದುಲ್ಲಾ ತರತರದ ಪರೀಕ್ಷೆಗಳನ್ನು ಘುತ್ತ ತನ್ನ ವಿಶ್ವಾಸದ ದೃಢತೆಯನ್ನು ಸಾಬೀತು ಪಡಿಸುತ್ತಿದ್ದರು. ಇನ್ನೊಂದೆಡೆ ್ ಮತ್ತು ಮುಸ್ಲಿಮರ ಮಟ್ಟಿಗೆ ಅವರ ಔದಾರ್ಯ ಮತ್ತು ಸದ್ವರ್ತನೆಯು ೊಳ್ಳುತ್ತಾ ಇತ್ತು. ಮುಸ್ಲಿಮರು ಅವರನ್ನು 'ಜೀವಂತ ಶಹೀದ್' ಎಂದು ಕರೆಯುತ್ತಿದ್ದರೆ, ಯವರು(ಸ), 'ತಲ್ಹತ್ ಖೈರ್, ತಲ್ಹತ್ ಜೂದ್ ಮತ್ತು ತಲ್ಹತ್ ಫಯ್ಯಾಝ್' ಹೆಸರಿನಿಂದ ಕರೆಯುತ್ತಿದ್ದರು. ಒಳಿತು, ಔದಾರ್ಯ ಮತ್ತು ದಾನ ಶೀಲತೆಯ ತಲ್ಹಾ ್. ಈ ಬಿರುದುಗಳ ಪೈಕಿ ಪ್ರತಿಯೊಂದಕ್ಕೂ ಒಂದು ಹಿನ್ನಲೆಯಿದೆ. ಅವು ಒಂದು ದಕ್ಕಿಂತ ಆಕರ್ಷಕ ಘಟನೆಗಳಾಗಿವೆ.

ಜೀವಂತ ಶಹೀದ್' ಬಿರುದಿನ ಹಿನ್ನಲೆಯೇನೆಂದರೆ, ಉಹ್‌ದ್ ಯುದ್ಧದ ವೇಳೆ

ಮುಸ್ಲಿಮರು ಪ್ರವಾದಿಯವರನ್ನು(ಸ) ಬಿಟ್ಟು ಚದರಿ ಹೋದರು. ಆ ಸಂಕೀರ್ಣ ಹ
ಭಯಾನಕ ಪರಿಸ್ಥಿತಿಯಲ್ಲಿ ಪ್ರವಾದಿಯವರ(ಸ) ಬಳಿಯಲ್ಲಿ ಮದೀನಾದ 10 ವ
ಅನ್ಸಾರಿಗಳು ಮತ್ತು ಮಕ್ಕಾದಿಂದ ಬಂದ ಮುಹಾಜಿರ್‌ಗಳ ಪೈಕಿ ಕೇವಲ ತಲ್ಹಾ
ಉಬೈದುಲ್ಲಾ ಉಳಿದಿದ್ದರು. ಪ್ರವಾದಿ(ಸ) ಈ ಸಂಗಾತಿಗಳ ಜೊತೆ ಬೆಟ್ಟವನ್ನು ಹತ್ತುತ್ತಿ
ಆಗ ಸತ್ಯನಿಷೇಧಿಗಳ ಗುಂಪೊಂದು ಅವರನ್ನು ಬೆನ್ನಟ್ಟಿಕೊಂಡು ಬೆಟ್ಟವೇರ ತೊಡ
ಅವರು ಪ್ರವಾದಿಯವರನ್ನು(ಸ) ವಧಿಸಬಯಸಿದ್ದರು. ಆಗ ಪ್ರವಾದಿ(ಸ), "ಈ ಮಂದಿಂ
ಹಿಂದಟ್ಟುವವರು ಯಾರಾದರೂ ಇದ್ದಾರೆಯೇ? ಅವನು ಸ್ವರ್ಗದಲ್ಲಿ ನನ್ನ ಆಪ್ತನಾಗಿರು
ಎಂದರು. ಆಗ ತಲ್ಹಾ ಹೇಳಿದರು- "ಅಲ್ಲಾಹನ ಸಂದೇಶವಾಹಕರೇ ನಾನಿದ್ದೇನೆ."

"ನೀವು ಬೇಡ, ನೀವು ಇಲ್ಲೇ ಇರಿ" ಪ್ರವಾದಿ(ಸ) ಹೇಳಿದರು.

ಆಗ ಒಬ್ಬ ಅನ್ಸಾರಿ ಹೇಳಿದರು, "ನಾನಿದ್ದೇನೆ ಅಲ್ಲಾಹನ ಸಂದೇಶವಾಹಕ

"ಸರಿ ನೀವು ಅವರನ್ನು ಅಟ್ಟಿರಿ" ಪ್ರವಾದಿ(ಸ) ಹೇಳಿದರು.

ಆ ಅನ್ಸಾರಿ ಮುಂದೆ ಹೋಗಿ ವೈರಿಗಳೊಂದಿಗೆ ಕಾದಾಡಿ ಕಾದಾಡಿ ಕೊನೆಗೂ ಮ
ಬಿದ್ದರು. ಪ್ರವಾದಿ(ಸ) ಈ ಮಧ್ಯೆ ಇನ್ನಷ್ಟು ಮೇಲೇರಿದರು. ಆದರೆ ವೈರಿಗಳೂ
ಬೆಂಬತ್ತಿ ಸನಿಹಕ್ಕೆ ತಲುಪಿದರು. ಆಗ ಪುನಃ ಪ್ರವಾದಿ(ಸ) ಕೇಳಿದರು, "ಇವರನ್ನು ಎದು
ಯಾರಿದ್ದಾರೆ?"

"ನಾನಿದ್ದೇನೆ, ಪ್ರವಾದಿವರ್ಯರೇ" ಎಂದು ತಲ್ಹಾ ಮುಂದಡಿಯಿಟ್ಟರು.

"ನೀವು ಬೇಡ, ನೀವಿಲ್ಲೇ ಇರಿ" ಪ್ರವಾದಿ(ಸ) ಹೇಳಿದರು.

ಆಗ ಇನ್ನೊಬ್ಬ ಅನ್ಸಾರಿ ಸಿದ್ಧರಾದರು, "ನಾನಿದ್ದೇನೆ ಪ್ರವಾದಿವರ್ಯರೇ"
ಹೇಳಿದರು.

"ಸರಿ! ನೀವು ಹೋರಾಡಿರಿ" ಪ್ರವಾದಿ(ಸ) ಅನುಮತಿ ನೀಡಿದರು.

ಅವರೂ ವೈರಿಗಳೊಂದಿಗೆ ಸೆಣಸಾಡಿ ಹುತಾತ್ಮರಾದರು.

ಈ ರೀತಿ ಪ್ರವಾದಿಯವರು(ಸ) ಪ್ರತಿ ಬಾರಿ ವೈರಿಗಳೊಂದಿಗೆ ಹೋರಾಡಲು ಕ
ತಲ್ಹಾ ಮುಂದೆ ಬರುತ್ತಿದ್ದರು. ಆದರೆ ಪ್ರವಾದಿವರ್ಯರು(ಸ) ಅವರನ್ನು ತಡೆಯುತ್ತಿ
ಆಗ ಅನ್ಸಾರಿಗಳ ಪೈಕಿ ಒಬ್ಬೊಬ್ಬರೇ ಮುಂದೆ ಬಂದು ಹೋರಾಡುತ್ತಾ ಹುತಾತ್ಮರಾಗುತ್ತಿ
ಈ ರೀತಿ ಹೋರಾಡುತ್ತ ಹೋರಾಡುತ್ತಾ ಹತ್ತು ಮಂದಿ ಅನ್ಸಾರಿಗಳೂ ಮಡಿದು ಬಿ
ಈಗ ತಲ್ಹಾಬಿನ್ ಉಬೈದುಲ್ಲಾ ಒಬ್ಬರು ಮಾತ್ರ ಉಳಿದರು. ವೈರಿಗಳು ಪ್ರವಾದಿವ
ಹತ್ತಿರ ಬಂದಾಗ, "ಈಗ ನಿಮ್ಮ ಸರದಿ" ಎಂದು ತಲ್ಹಾರಿಗೆ ಆಜ್ಞೆ ನೀಡಿದರು.

ಪ್ರವಾದಿವರ್ಯರ ಹಲ್ಲುಗಳು ಉದುರಿದ್ದುವು. ಅವರ ಹಣೆ ಮತ್ತು
ಗಾಯಗಳಾಗಿದ್ದುವು. ಮುಖದಿಂದ ರಕ್ತ ಹರಿಯುತ್ತಿತ್ತು. ಗಾಯಗಳಿಂದಾಗಿ ಪ್ರವಾದಿವ
ನಿತ್ರಾಣರಾಗಿದ್ದರು. ಈ ಸಂದರ್ಭದಲ್ಲಿ ತಲ್ಹಾರು ವೈರಿಗಳ ಮೇಲೆ ಆಕ್ರಮಣ
ಅವರನ್ನು ಪ್ರವಾದಿವರ್ಯರಿಂದ ದೂರ ಅಟ್ಟುತ್ತಿದ್ದರು. ಅನಂತರ ಮರಳಿ

ವಾದಿವರ್ಯರ ಕೈ ಹಿಡಿದು ಬೆಟ್ಟ ಹತ್ತುತ್ತಿದ್ದರು. ಸ್ವಲ್ಪ ಮೇಲೆ ಅವರನ್ನು ದೂರ ಕುಳ್ಳಿರಿಸಿ ಃ ಬಂದು ಸತ್ಯ ನಿಷೇಧಿಗಳ ಜತೆ ಹೋರಾಟ ನಡೆಸುತ್ತಿದ್ದರು. ಈ ರೀತಿ ಅನೇಕ ಬಾರಿ ಯಿತು. ಕೊನೆಗೂ ಸತ್ಯ ನಿಷೇಧಿಗಳು ಯುದ್ಧ ರಂಗ ಬಿಟ್ಟು ಪಲಾಯನ ಮಾಡಿದರು.

ಆಗ ಅಬೂಬಕರ್(ರ) ಮತ್ತು ಅಬೂ ಉಬೈದಾ ಬಿನ್ ಜರ್ರಾಹ್(ರ) ವಾದಿವರ್ಯರಿಂದ ದೂರ ಇದ್ದರು. ಅವರು ಪ್ರವಾದಿವರ್ಯರ ಸಹಾಯಕ್ಕಾಗಿ ಧಾವಿಸಿ ದಾಗ ಪ್ರವಾದಿ(ಸ) ಹೇಳಿದರು, "ನನ್ನನ್ನು ಬಿಡಿರಿ, ನಿಮ್ಮ ಸಂಗಾತಿ (ತಲ್ಹಾ)ಯನ್ನು ಸಿರಿ."

ಅವರಿಬ್ಬರೂ ತಲ್ಹಾರ ಬಳಿಗೆ ತಲುಪಿದಾಗ ನೋಡುವುದೇನು? ಅವರ ಮೈಯಿಂದ ದ ಕೋಡಿಯೇ ಹರಿಯುತ್ತಿತ್ತು. ಖಡ್ಗ, ಭರ್ಚಿ ಮತ್ತು ಬಾಣಗಳ ಎಪ್ಪತ್ತಕ್ಕಿಂತಲೂ ಕ ಗಾಯಗಳಾಗಿದ್ದುವು. ಅವರ ಅಂಗೈ ಕಡಿದು ಹೋಗಿತ್ತು.ಅವರು ಒಂದು ಹೊಂಡದಲ್ಲಿ ಜ್ಞಾಹೀನರಾಗಿ ಬಿದ್ದುಬಿಟ್ಟಿದ್ದರು. ಅಂದಿನಿಂದ ಪ್ರವಾದಿವರ್ಯರು ಸಾಮಾನ್ಯವಾಗಿ ರೊಡನೆ ಹೀಗೆ ಹೇಳುತ್ತಿದ್ದರು,

"ತನ್ನ ಹರಕೆ (ಮರಣ)ಯನ್ನು ಪೂರ್ತಿಗೊಳಿಸಿರುವ, ಭೂಮುಖದಲ್ಲಿ ನಡೆದಾಡುವ ಕ್ತಿಯನ್ನು ನೋಡ ಬಯಸುವುದಾದರೆ ತಲ್ಹಾಬಿನ್ ಉಬೈದುಲ್ಲಾರನ್ನು ನೋಡಿರಿ."

ಉಹುದ್ ಯುದ್ಧದ ಕುರಿತು ಪ್ರಸ್ತಾಪ ಬಂದಾಗಲೆಲ್ಲಾ ಹ. ಅಬೂಬಕ್ಕರ್(ರ) ಹೀಗೆ ಳುತ್ತಿದ್ದರು, "ಅದು ಸಂಪೂರ್ಣವಾಗಿ ತಲ್ಹಾರ ದಿನವಾಗಿತ್ತು."

'ಜೀವಂತ ಶಹೀದ್' ನ ಘಟನೆ ಇದಾಗಿದ್ದರೆ, ಅವರ ಒಳಿತು, ಔದಾರ್ಯ ಮತ್ತು ನಶೀಲತೆಯ ಕುರಿತು ಅನೇಕ ಪ್ರಸ್ತಾಪನೀಯ ಘಟನೆಗಳಿವೆ. ಅವುಗಳ ಪೈಕಿ ಒಂದು ಗಿದೆ-

ತಲ್ಹಾ ಬಿನ್ ಉಬೈದುಲ್ಲಾ ಬಹಳ ದೊಡ್ಡ ವ್ಯಾಪಾರಿಯಾಗಿದ್ದರು. ಅವರ ಬಳಿ ಅಪಾರ ಸಂಪತ್ತೂ ಇತ್ತು. ಒಂದು ದಿನ ಅವರ ಬಳಿ ಎಪ್ಪತ್ತು ಲಕ್ಷ ದಿರ್ಹಮ್ ಬಂತು. ರು ರಾತ್ರಿಯಿಡೀ ಬಹಳ ಕಳವಳದಿಂದಿದ್ದರು. ಅವರ ಕಳವಳ ಮತ್ತು ಚಿಂತೆಯನ್ನು ೀಡಿ ಅವರ ಪತ್ನಿ(ಅಬೂಬಕರ್‌ರ ಪುತ್ರಿ ಉಮ್ಮು ಕುಲ್ಸೂಮ್) ಹೀಗೆ ಹೇಳಿದರು,

"ಅಬೂ ಮುಹಮ್ಮದ್! ನಿಮಗೇನಾಯಿತು? ನನ್ನಿಂದೇನಾದರೂ ನಿಮಗೆ ಂದರೆಯಾಯಿತೆ!"

"ಇಲ್ಲ, ನೀನಂತೂ ಓರ್ವ ಅತ್ಯುತ್ತಮ ಪತ್ನಿಯಾಗಿರುವೆ. ರಾತ್ರಿಯಿಡೀ ನಾನು ತಿತನಾಗಿರುವೆ. ಇಷ್ಟು ದೊಡ್ಡ ಮೊತ್ತವನ್ನು ಮನೆಯಲ್ಲಿಟ್ಟು ಸುಖ ನಿದ್ರೆಯಲ್ಲಿರುವವನು ಪ್ರಭುವಿನ ಬಗ್ಗೆ ಯಾವ ನಿರೀಕ್ಷೆಯನ್ನಿಟ್ಟಿರಬಹುದು? ನೀನೇ ಹೇಳು!"

"ಅದರಲ್ಲಿ ಚಿಂತಿಸುವುದೇನಿದೆ? ನೀವೇನೂ ನಿಮ್ಮ ಕುಟುಂಬದ ಮತ್ತು ಅಪ್ತೇಷ್ಟರ ಕವರನ್ನು ಮರೆತಿಲ್ಲವಲ್ಲ. ಬೆಳಿಗ್ಗೆ ಈ ಎಲ್ಲ ಹಣವನ್ನು ಅವರಿಗೆ ದಾನ ಮಾಡಿ ಬಿಡಿರಿ" ಸಲಹೆ ನೀಡಿದರು.

ಇದರಿಂದ ಸಂತೋಷಗೊಂಡ ತಲ್ಹಾ ಹೀಗೆ ಉತ್ತರಿಸಿದರು, "ನಿಜವಾಗಿಯ ನೀನೋರ್ವ ಸೌಭಾಗ್ಯವಂತ ತಂದೆಯ ಸೌಭಾಗ್ಯವತಿ ಮಗಳಾಗಿರುವೆ. ಅಲ್ಲಾಹನು ನಿ ಮೇಲೆ ಕೃಪೆತೋರಲಿ."

ಬೆಳಿಗ್ಗೆ ಎದ್ದ ಕೂಡಲೇ ಆ ಎಲ್ಲ ಹಣವನ್ನು ಚೀಲಗಳಲ್ಲೂ ಹರಿವಾಣಗಳಲ್ಲ ಹಾಕಿ ಅವರು ಮುಹಾಜಿರ್ ಮತ್ತು ಅನ್ಸಾರ್‌ಗಳ ಬಡಬಗ್ಗರಿಗೆ ಹಂಚಿಬಿಟ್ಟರು.

ಒಂದು ದಿನ ಓರ್ವ ವ್ಯಕ್ತಿ ತಲ್ಹಾರನ್ನು ಭೇಟಿಯಾಗಿ ಸಹಾಯ ಯಾಚಿಸಿದರ ತಮ್ಮನ್ನು ಪರಸ್ಪರ ಜೋಡಿಸುವಂತಹ ಒಂದು ಸಂಬಂಧದ ಬಗ್ಗೆ ಅವರು ಪ್ರಸ್ತಾಪಿಸಿದಾ ಈ ಸಂಬಂಧದ ಕುರಿತಾಗಿ ನನ್ನೊಂದಿಗೆ ಈ ಮೊದಲು ಯಾರೂ ಹೇಳಿಲ್ಲವಲ್ಲ ಎಂ ಅವರು ಹೇಳಿದರು. ಅನಂತರ ಹೀಗೆಂದರು, "ನನ್ನ ಬಳಿ ಒಂದು ತುಂಡು ಭೂಮಿಯಿ ಅದಕ್ಕೆ ಉಸ್ಮಾನ್ ಬಿನ್ ಅಫ್ಫಾನ್(ರ) ಮೂರು ಲಕ್ಷ ದಿರ್‌ಹಮ್ ಕೊಡುತ್ತೇನೆಂ ಹೇಳಿದರು. ಬೇಕಾದರೆ ಅದನ್ನು ತೆಗೆದುಕೊಳ್ಳಿ, ಇಲ್ಲವೆ ಅದನ್ನು ಮಾರಿ ಬಂದ ಹಣವ ತೆಗೆದುಕೊಳ್ಳಿ."

ಆ ವ್ಯಕ್ತಿ ಹಣ ಕೊಟ್ಟರೆ ಸಾಕೆಂದರು. ಅವರು ಅವರಿಗೆ ಹಣವನ್ನೇ ನೀಡಿದರ

# ಹ. ಅಬುಲ್ ಆಸ್ ಬಿನ್ ರಬೀಅ್(ರ)

## ನಿಷೇಧಿಯಾಗಿದ್ದ ಅಳಿಯ

ಅಬುಲ್ ಆಸ್‌ಬಿನ್ ರಬೀಅ್ ಅವರು ಕುರೈಶ್ ಗೋತ್ರದ ಅಬ್ದುಶ್ಶಮ್ಸ್ ಮನೆತನದ ಗೌರವಾನ್ವಿತ ವ್ಯಕ್ತಿಯಾಗಿದ್ದರು. ಸಿರಿ ಸಂಪತ್ತು ಮತ್ತು ಕುಲ ಗೌರವದ ಮನೆಯಲ್ಲೂ ಉನ್ನತ ಸ್ಥಾನಮಾನ ಹೊಂದಿದ್ದರು. ತನ್ನ ಸ್ವಾಭಿಮಾನ, ನಿಷ್ಠೆ ಮತ್ತಿತರ ಉತ್ತಮ ವೈಕ್ತಿಕ ಗುಣಗಳಿಂದಾಗಿಯೂ ತನ್ನ ಹಿರಿಯರ ಪರಂಪರಾಗತ ಸಾಧನೆಗಳಿಂದಾಗಿಯೂ ಸರ್ವೋರ್ವ ಮಾದರಿ ವ್ಯಕ್ತಿಯಾಗಿದ್ದರು.

ಅಬುಲ್ ಆಸ್‌ರಿಗೆ ವ್ಯಾಪಾರದಲ್ಲಿ ಬಹಳ ಆಸಕ್ತಿಯಿತ್ತು. ವ್ಯಾಪಾರವು ಪರಂಪರಾಗತವಾಗಿ ಅವರಿಗೆ ಕುರೈಶರಿಂದ ಸಿಕ್ಕಿದ ಕುಲ ಕಸುಬಾಗಿತ್ತು. ಅಬುಲ್ ಆಸ್‌ರ ವ್ಯಾಪಾರೀ ತಂಡಗಳು ವರ್ಷದಲ್ಲಿ ಎರಡು ಪ್ರಯಾಣ ಮಾಡುತ್ತಿದ್ದವು. ಚಳಿಗಾಲದಲ್ಲಿ ಯಮನ್‌ಗೂ ಬೇಸಿಗೆಯಲ್ಲಿ ಶಾಮಕ್ಕೂ ಹೋಗುತ್ತಿದ್ದುವು. ಮಕ್ಕಾ ಮತ್ತು ಸಿರಿಯಾಗಳ ನಡುವೆ ಅವರ ವ್ಯಾಪಾರಿ ತಂಡಗಳು ಸದಾ ಸಂಚರಿಸುತ್ತಿದ್ದವು. ಪ್ರತಿಯೊಂದು ತಂಡದಲ್ಲಿ ನೂರು ಒಂಟೆಗಳು ಮತ್ತು ಇನ್ನೂರು ಮಂದಿ ಇರುತ್ತಿದ್ದರು. ಅವರ ದಕ್ಷತೆ ಮತ್ತು ಪ್ರಾಮಾಣಿಕತೆಯಿಂದಾಗಿ ಕುರೈಶ್‌ನ ಜನರು ತಮ್ಮ ವ್ಯಾಪಾರೀ ಸರಕುಗಳನ್ನು ಅವರಿಗೆ ಒಪ್ಪಿಸುತ್ತಿದ್ದರು.

ಪ್ರವಾದಿ ಮುಹಮ್ಮದ್‌ರ(ಸ) ಪ್ರಿಯ ಪತ್ನಿ ಖದೀಜಾರಿಗೆ ಅಬುಲ್ ಆಸ್ ಎಂದರೆ ಅತ ಪ್ರಾಣ.ಅವರು ಅವರನ್ನು ತನ್ನ ಮಗನಂತೆ ಪ್ರೀತಿಸುತ್ತಿದ್ದರು. ಅವರ ತಾಯಿ ಖದೀಜಾರ ಹಿರಿಯ ಸಹೋದರಿಯಾಗಿದ್ದಳು. ಅದೇ ರೀತಿ ಅಬುಲ್ ಆಸ್ ಕೂಡಾ ಖದೀಜಾರನ್ನು ತಾಯಿಗಿಂತಲೂ ಅಧಿಕವಾಗಿ ಪ್ರೀತಿಸುತ್ತಿದ್ದರು. ಖದೀಜಾರ ಮನೆಗೆ ಅವರು ಯಾವಾಗ ಬೇಕಾದರೂ ಬರುತ್ತಿದ್ದರು. ಅವರಿಗೆ ಖತೀಜಾರ ಪ್ರೀತಿ ಪೂರ್ವಕ ಸ್ವಾಗತ ಸದಾ ದೊರೆಯುತ್ತಿತ್ತು. ಖದೀಜಾರಂತೆಯೇ ಪ್ರವಾದಿ ಮುಹಮ್ಮದ್(ಸ) ಕೂಡಾ ಅವರನ್ನು ತುಂಬಾಗಿ ಪ್ರೀತಿಸುತ್ತಿದ್ದರು.

ದಿನಗಳು ತಿಂಗಳುಗಳಾಗಿ, ತಿಂಗಳುಗಳು ವರ್ಷಗಳಾಗಿ ಉರುಳುತ್ತಿದ್ದುವು. ಪ್ರವಾದಿ(ಸ) ಅವರ ಹಿರಿಯ ಮಗಳು ಝೈನಬ್ ಪ್ರೌಢಾವಸ್ಥೆಗೆ ತಲುಪಿದರು. ಕುರೈಶರ ಅನೇಕ ನಾಯಕರ ಮಕ್ಕಳು ಅವರನ್ನು ಮದುವೆಯಾಗಬಯಸಿದರು. ಆದರೆ ಅದೃಷ್ಟವು ಅಬುಲ್ ಆಸ್‌ರ ಮಟ್ಟಿಗೆ ಒಲಿಯಿಸಿತು. ಅಬುಲ್ ಆಸ್‌ರೊಂದಿಗೆ ಝೈನಬ್‌ರ ವಿವಾಹ ನಡೆಯಿತು. ಈ ವಿವಾಹ

ನಡೆದು ಕೆಲವೇ ವರ್ಷಗಳಲ್ಲಿ ಮುಹಮ್ಮದ್‌ರನ್ನು(ಸ) ಅಲ್ಲಾಹನ ಪ್ರವಾದಿಯಾಗಿ ನೇ ಮಾಡುತ್ತಾ ನಿಮ್ಮ ಆಪ್ತರನ್ನು ಅಲ್ಲಾಹನ ಶಿಕ್ಷೆಯಿಂದ ಪಾರುಗೊಳಿಸಿರಿ ಎಂಬ ಆದೇಶ ನೀಡಿದರು. ಅದರಂತೆ ಪ್ರವಾದಿವರ್ಯರು(ಸ) ಕೆಲಸ ಮಾಡತೊಡಗಿದರು.

ಪ್ರಥಮವಾಗಿ ಖದೀಜಾ ಸತ್ಯ ಧರ್ಮವನ್ನು ಸ್ವೀಕರಿಸಿದರು. ಅನಂತರ ಅ ಪುತ್ರಿಯರಾದ ಝೈನಬ್, ರುಕಿಯ್ಯಾ, ಉಮ್ಮು ಕುಲ್ಸೂಮ್ ಮತ್ತು ಫಾತಿಮಾ(ರ) ಇಸ್ಲಾ ಸ್ವೀಕರಿಸಿದರು. ಆಗ ಫಾತಿಮಾ ಸಣ್ಣ ಹುಡುಗಿಯಾಗಿದ್ದರು. ಆದರೆ ಪ್ರವಾದಿವರ್ಯರ ಅ ಝೈನಬ್‌ರ ಗಂಡ ಅಬುಲ್ ಆಸ್‌ರಿಗೆ ತನ್ನ ಪತ್ನಿಯೊಂದಿಗೆ ಅತಿಯಾದ ಪ್ರೀತಿಯಿದ್ದ ಅವರು ಈ ಧರ್ಮವನ್ನು ಸ್ವೀಕರಿಸಲು ಮುಂದಾಗಲಿಲ್ಲ. ಅವರು ತನ್ನ ಪರಂಪರಾ ಧರ್ಮದಲ್ಲೇ ಮುಂದುವರಿದರು.

ಪ್ರವಾದಿಯವರ(ಸ) ಸಂದೇಶ ಪ್ರಚಾರ ತೀವ್ರಗೊಂಡಂತೆಯೇ ಕುರೈಶರ ವಿರೋಧ ಉಗ್ರ ರೂಪ ತಾಳಿತು. ಕುರೈಶ್ ಸರದಾರರೆಲ್ಲರೂ ಒಂದು ದಿನ ಪರಸ್ಪರ ಹ ಹೇಳಿಕೊಂಡರು, "ಹಾಳಾಗಿ ಹೋಗಬೇಕು ನಾವು! ನಾವು ಮುಹಮ್ಮದ್‌ರ(ಸ) ಪುತ್ರಿಯರ ನಮ್ಮ ಗಂಡು ಮಕ್ಕಳೊಂದಿಗೆ ವಿವಾಹ ಮಾಡಿಸಿ ನಾವೇ ನಮ್ಮ ಮೇಲೆ ದುಃಖ ಭಾರವ ಹೇರಿಕೊಂಡೆವು. ಆ ಹೆಣ್ಣು ಮಕ್ಕಳನ್ನು ನಾವು ಅವರ ಮನೆಗಳಿಗೇ ಮರಳಿಸಿ ಮುಹಮ್ಮದ್(ಸ) ನಮ್ಮತ್ತ ಗಮನ ಹರಿಸುವ ಬದಲು ಅವರ ಗಮನವೆಲ್ಲ ತನ್ನ ಹೆ ಮಕ್ಕಳ ಕಡೆಗೆ ತಿರುಗೀತು."

ಈ ರೀತಿ ಆಲೋಚಿಸಿದ ನಂತರ ಅವರು ಅಬುಲ್ ಆಸ್‌ರ ಮನೆಗೆ ತೆರಳಿ, ಪ ವಿಚ್ಛೇದನ ಕೊಟ್ಟು, ಆಕೆಯನ್ನು ತಂದೆಯ ಮನೆಗೆ ಕಳಿಸುವಂತೆ ಒತ್ತಾಯಿಸಿದರು. ಆ ಅಬುಲ್ ಆಸ್ ಅವರ ಒತ್ತಾಯಕ್ಕೆ ಸೊಪ್ಪು ಹಾಕಲಿಲ್ಲ. "ಅಲ್ಲಾಹನಾಣೆ! ನಾನು ಪತ್ನಿಯನ್ನು ಎಂದೆಂದಿಗೂ ತೊರೆಯಲಾರೆ. ಆಕೆಯ ಸ್ಥಾನದಲ್ಲಿ ಲೋಕದ ಯ ಸ್ತ್ರೀಯನ್ನೂ ಸ್ವೀಕರಿಸಲಾರೆ" ಎಂದು ಸ್ಪಷ್ಟವಾಗಿ ಸಾರಿ ಕುರೈಶರನ್ನು ನಿರಾಶೆಗೊಳಿಸಿಬಿಟ್ಟ ಆದರೆ ಅಬೂಜಹಲ್‌ನ ಮಕ್ಕಳಾದ ಉತ್ಬಾ ಮತ್ತು ಉತೈಬ ತಮ್ಮ ಪತ್ನಿಯರಿಗೆ- ಪ್ರವಾದಿ ಪುತ್ರಿಯರಾದ ರುಕಿಯ್ಯಾ ಮತ್ತು ಉಮ್ಮು ಕುಲ್ಸೂಮ್‌ರಿಗೆ- ವಿಚ್ಛೇದನೆ ಕೊಟ್ಟು, ಅವರ ತಂದೆಯ ಮನೆಗೆ ಕಳಿಸಿಕೊಟ್ಟರು. ಪ್ರವಾದಿಯವರಿಗೆ(ಸ) ತಮ್ಮ ಪ್ರಿಯ ಪುತ್ರಿಯರು ಮ ಮರಳಿದುದರಿಂದ ಬಹಳ ಸಂತೋಷವಾಯಿತು. ಅಬುಲ್ ಆಸ್ ಕೂಡಾ ವಿಚ್ಛೇದನ ನ ತನ್ನ ಪತ್ನಿಯನ್ನು ಮನೆಗೆ ಕಳಿಸಿದ್ದರೆ ಉತ್ತಮವಾಗಿತ್ತೆಂದು ಅವರು ಬಯಸಿದ್ದರು. ಆ ಅದಕ್ಕೆ ಒತ್ತಾಯ ಪಡಿಸುವಂತಹ ಶಕ್ತಿ ಪ್ರವಾದಿವರ್ಯರಲ್ಲಿ ಇರಲಿಲ್ಲ. ಆಗ ಸ ವಿಶ್ವಾಸಿನಿಗಳೊಂದಿಗೆ ಬಹುದೇವಾರಾಧಕರನ್ನು ವಿವಾಹವಾಗಬಾರದೆಂಬ ನಿಯಮ ಜಾ ಬಂದಿರಲಿಲ್ಲ.

ಪ್ರವಾದಿ (ಸ) ಮದೀನಾಕ್ಕೆ ವಲಸೆ ಹೋಗಿ ಅಲ್ಲಿ ನೆಲೆಯೂರಿದ ನಂತರ ಕುರೈಶ ಬದ್ರ್ ಯುದ್ಧಕ್ಕೆ ಸಿದ್ಧತೆ ನಡೆಸಿದಾಗ ಅಬುಲ್ ಆಸ್‌ರನ್ನೂ ಯುದ್ಧದಲ್ಲಿ ಭಾಗವಹಿಸುವ ಒತ್ತಾಯಿಸಿದರು. ಅವರಿಗೆ ಯುದ್ಧದಲ್ಲಿ ಭಾಗವಹಿಸಲು ಇಷ್ಟವಿರಲಿಲ್ಲ. ಮುಸ್ಲಿಮರೊಂ

ೃ ಮಾಡುವುದು ಅವರಿಗೆ ಬೇಕಾಗಿರಲಿಲ್ಲ. ಆದರೆ ತನ್ನ ಗೋತ್ರದಲ್ಲಿ ಅವರಿಗೆ ಇರುವ ಮಾನದಿಂದಾಗಿ ಅವರು ಯುದ್ಧಕ್ಕೆ ಹೊರಡಲೇ ಬೇಕಾಯಿತು. ಈ ಯುದ್ಧದಲ್ಲಿ ರಿಗೆ ಭಾರೀ ಸೋಲುಂಟಾಯಿತು. ಅವರ ಮಾನ ಮರ್ಯಾದೆ ಮಣ್ಣು ಪಾಲಾದುವು. ನಾಯಕರುಗಳ ಸೊಂಟ ಮುರಿಯಿತು. ಅವರ ಪೈಕಿ ಕೆಲವರು ಸೆರೆಯಾಳುಗಳಾದರು. ರು ಓಡಿ ಹೋಗಿ ತಮ್ಮ ಜೀವ ಉಳಿಸಿಕೊಂಡರು. ಹ.ಝೈನಬ್‌ರ(ರ) ಪತಿ ಅಬುಲ್ ಕೂಡಾ ಸೆರೆಯಾಳುಗಳಲ್ಲಿ ಒಬ್ಬರಾಗಿದ್ದರು.

ಕೈದಿಗಳ ಬಿಡುಗಡೆಗೆ ಪ್ರವಾದಿ(ಸ) ಪರಿಹಾರ ಧನವನ್ನು ನಿಶ್ಚಯಿಸಿದರು. ಪರಿಹಾರ ನ್ನು ಕೈದಿಗಳ ಕೌಟುಂಬಿಕ ಮತ್ತು ಸಾಮಾಜಿಕ ಸ್ಥಾನಮಾನ ಮತ್ತು ಅವರ ಆರ್ಥಿಕ ತಿಗಳಂತೆ ನಿರ್ಣಯಿಸಲಾಗಿತ್ತು. ಅದು ಒಂದು ಸಾವಿರದಿಂದ ನಾಲ್ಕು ಸಾವಿರ ಮ್‌ಗಳವರೆಗಿತ್ತು. ಇದರಿಂದಾಗಿ ಮಕ್ಕಾ- ಮದೀನಾಗಳ ಮಧ್ಯೆ ಪ್ರತಿನಿಧಿಗಳ ಸಂಚಾರ ಭಗೊಂಡಿತು. ಅವರು ತಮ್ಮ ಆಪ್ತೇಷ್ಟರ ಬಿಡುಗಡೆಗಾಗಿ ಹಣದೊಂದಿಗೆ ದಿವರ್ಯರನ್ನು ಭೇಟಿಯಾಗುತ್ತಿದ್ದರು. ಹ.ಝೈನಬ್ ಕೂಡಾ ತಮ್ಮ ಪತಿ ಅಬುಲ್ ರ ವಿಮೋಚನೆಗಾಗಿ ಒಬ್ಬ ಪ್ರತಿನಿಧಿಯನ್ನು ಹಣ ತೆತ್ತು ಕಳಿಸಿದರು. ಅದರಲ್ಲಿ ದೀಜಾ(ರ) ತಮ್ಮ ಪುತ್ರಿ ಝೈನಬ್‌ರನ್ನು ವಧುವಾಗಿ ಬೀಳ್ಕೊಡುವಾಗ ನೀಡಿದ ಹಾರ ಾ ಇತ್ತು. ಪ್ರವಾದಿ(ಸ) ಆ ಹಾರವನ್ನು ಕಂಡ ಕೂಡಲೇ ತಮ್ಮ ಪ್ರಿಯ ಪತ್ನಿಯನ್ನು ು ಕಣ್ಣೀರಿಳಿಸಿದರು. ಜೊತೆಗೆ ತಮ್ಮ ಕರುಳ ಕುಡಿಯ ವಿವಶಾವಸ್ಥೆಯೂ ಪ್ರವಾದಿವರ್ಯರ ಖವನ್ನು ಇಮ್ಮಡಿಗೊಳಿಸಿತು. ಸ್ವಲ್ಪ ಹೊತ್ತು ಮೌನವಾದ ಬಳಿಕ ಪ್ರವಾದಿ(ಸ) ಬಿಗಳನ್ನುದ್ದೇಶಿಸಿ ಹೀಗೆಂದರು,

"ಅಬುಲ್ ಆಸ್‌ರನ್ನು ಬಿಡುಗಡೆಗೊಳಿಸಲಿಕ್ಕಾಗಿ ಝೈನಬ್ ಈ ಹಾರವನ್ನು ಪರಿಹಾರ ವಾಗಿ ಕಳಿಸಿದ್ದಾಳೆ. ನೀವೆಲ್ಲರೂ ಒಪ್ಪುವುದಾದರೆ ಕೈದಿ(ಅಬುಲ್ ಆಸ್)ಯನ್ನು ಗಡೆಗೊಳಿಸಿರಿ ಮತ್ತು ಈ ಹಾರವನ್ನು ಅವಳಿಗೆ ಮರಳಿಸಿರಿ." ಸಹಾಬಿಗಳೆಲ್ಲರೂ ಾದಿವರ್ಯರ ಮಾತನ್ನು ಅನುಮೋದಿಸಿದರು. ಅದರಂತೆ ಅಬುಲ್ ಆಸ್ ಪರಿಹಾರ ವಿಲ್ಲದೆಯೇ ಬಿಡುಗಡೆಗೊಂಡರು. ಆದರೆ ಪ್ರವಾದಿವರ್ಯರು ಒಂದು ಶರ್ತವನ್ನು ಅವರ ಂದಿಟ್ಟಿದ್ದರು. ಅದು ಮಕ್ಕಾಕ್ಕೆ ಮರಳಿದ ಕೂಡಲೇ ತಮ್ಮ ಪುತ್ರಿ ಝೈನಬ್‌ಳನ್ನು ದೀನಾಕ್ಕೆ ಕಳಿಸಿ ಕೊಡಬೇಕೆಂಬುದಾಗಿತ್ತು.

## ಿಯನ ಸತ್ಯ ಸ್ವೀಕಾರ

ಅಬುಲ್ ಆಸ್ ಮಕ್ಕಾ ತಲಪಿದ ಕೂಡಲೇ ತನ್ನ ವಾಗ್ದಾನವನ್ನು ಪಾಲಿಸುತ್ತಾ, ೈನಬ್‌ರನ್ನು ಮದೀನಾಕ್ಕೆ ಕಳಿಸುವ ಏರ್ಪಾಡು ಮಾಡಿದರು. ಮಕ್ಕಾದಿಂದ ಸ್ವಲ್ಪ ರದಲ್ಲಿ ಪ್ರವಾದಿವರ್ಯರ(ಸ) ಆಳುಗಳು ಝೈನಬ್‌ರನ್ನು ಸ್ವೀಕರಿಸಲಿಕ್ಕಾಗಿ ಬಂದಿರುವರು ದು ತನ್ನ ಪತ್ನಿಗೆ ತಿಳಿಸಿದರು. ಅನಂತರ ಸವಾರಿ ಮತ್ತು ದಾರಿ ವೆಚ್ಚದ ವಸ್ತುಗಳೊಂದಿಗೆ

ಅವರನ್ನು ಕಳಿಸಿದರು. ಜೊತೆಯಲ್ಲಿ ತನ್ನ ತಮ್ಮನಾದ ಅಮ್ರ್‌ಬಿನ್ ರಬೀಅ್‌ರನ್ನು ಕಳಿ ಝೈನಬ್‌ರನ್ನು ಪ್ರವಾದಿವರ್ಯರ ಆಳುಗಳಿಗೆ ಒಪ್ಪಿಸಿ ಬರುವಂತೆ ಸೂಚಿಸಿದರು.

ಅಮ್ರ್ ಬಿನ್ ರಬೀಅ್ ಬಿಲ್ಲನ್ನು ಹೆಗಲಿಗೆ ಆನಿಸಿ, ಬತ್ತಳಿಕೆಯನ್ನು ಭುಜಕ್ಕೆ ಹಾಡು ಹಗಲೇ ಝೈನಬ್‌ರನ್ನು ಒಂಟೆಯ ಮೇಲೇರಿಸಿ ಪ್ರಯಾಣ ಬೆಳೆಸಿದರು. ಇದ ಜನರಲ್ಲಿ ಕೋಲಾಹಲವೆದ್ದಿತು. ಅವರನ್ನು ಬೆನ್ನಟ್ಟಿ ಸ್ವಲ್ಪ ದೂರದಲ್ಲೇ ಹಿಡಿ ಝೈನಬ್‌ರನ್ನು ಬೆದರಿಸಿದರು. ಆಗ ಅಮ್ರ್ ಬಿಲ್ಲಿಗೆ ಬಾಣ ಹೂಡಿ ಹೀಗೆ ಗರ್ಜಿಸಿ "ಅಲ್ಲಾಹನಾಣೆ! ಯಾರಾದರೂ ಅವರ ಮೇಲೆ ಕೈ ಮಾಡಲು ಮುಂದೆ ಬಂದರೆ ಎದೆಯನ್ನು ಸೀಳಿ ಬಿಡುವೆನು". ಅವರು ಓರ್ವ ನುರಿತ ಬಿಲ್ಲಾಳು ಆಗಿದ್ದರು. ಅವರ ಎಂದೂ ತಪ್ಪುತ್ತಿರಲಿಲ್ಲ. ಆಗ ಅಬೂಸುಫ್ಯಾನ್ ಅಲ್ಲಿಗೆ ತಲುಪಿದರು. ಅವರು ಅ ಬಿನ್ ರಬೀಅ್‌ರನ್ನು ಉದ್ದೇಶಿಸಿ ಹೀಗೆಂದರು, "ಮಗನೇ, ತಾಳು, ಬಾಣ ಬಿಡ ನಿನ್ನೊಂದಿಗೆ ಸ್ವಲ್ಪ ಮಾತನಾಡಬೇಕಾಗಿದೆ."

ಅಮ್ರ್ ಬಿನ್ ರಬೀಅ್ ಸುಮ್ಮನಾದಾಗ ಅಬೂ ಸುಫ್ಯಾನ್ ಮುಂದುವರಿಸಿ "ಹಾಡು ಹಗಲೇ ಝೈನಬ್‌ಳನ್ನು ಕರೆದುಕೊಂಡು ಹೋಗುವುದು ಸರಿ ಕಾಣುವುದಿಲ್ಲ. ಯುದ್ಧದಲ್ಲಿ ನಮಗಾದ ಭಾರೀ ಪರಾಭವದ ಕುರಿತು ಅರಬರು ಚೆನ್ನಾಗಿ ತಿಳಿದಿದ್ದಾರೆ. ಪರಾಭವಗೊಂಡಿರುವುದು ಝೈನಬ್‌ಳ ತಂದೆಯ ಕೈಯಲ್ಲಿ ತಾನೆ. ಈಗ ನೀವು ಅವ ಹೀಗೆ ಕರೆದು ಕೊಂಡುಹೋದರೆ ಜನರು ನಮ್ಮನ್ನು ಹೇಡಿಗಳೆಂದು ಮೂದಲಿಸಿಯ ಆದುದರಿಂದ ನನ್ನ ಮಾತನ್ನು ಕೇಳು. ಈಗ ನೀನು ಅವಳನ್ನು ಪತಿಯ ಮನೆಯಲ್ಲೇ ಬ 'ನಾವು ಅವಳನ್ನು ಮರಳಿ ತಂದಿದ್ದೇವೆ'ಎಂಬುದು ಮನೆ ಮಾತಾದಾಗ ಕೆಲವು ದಿನಗಳ ನ ಆಕೆಯನ್ನು ರಹಸ್ಯವಾಗಿ ಆಕೆಯ ತಂದೆಯ ಬಳಿಗೆ ಕಳಿಸು. ನಮಗೆ ಅವಳನ್ನು ತಡೆದಿರಿಸುವುದ ಯಾವ ಆಸಕ್ತಿಯೂ ಇಲ್ಲ."

ಅಮ್ರ್, ಅಬೂ ಸುಫ್ಯಾನ್‌ರ ಮಾತನ್ನು ಒಪ್ಪಿ ಝೈನಬ್‌ರನ್ನು ಮಕ್ಕಾಗೆ ವ ಕೊಂಡು ಹೋದರು. ಕೆಲವು ದಿನಗಳ ನಂತರ ಒಂದು ರಾತ್ರಿ ಅವರನ್ನು ಮಕ್ಕಾದಿ ಕರೆತಂದು ಮದೀನಾದಲ್ಲಿ ಪ್ರವಾದಿವರ್ಯರ ಪ್ರತಿನಿಧಿಗಳ ಕೈಗೊಪ್ಪಿಸಿದರು. ಪತ್ನಿಯ ಅಗಲಿ ಅಬುಲ್ ಆಸ್ ಮಕ್ಕಾದಲ್ಲೇ ಕೆಲವು ಕಾಲ ಉಳಿದರು. ಮಕ್ಕಾ ವಿಜಯಕ್ಕಿಂತ ಸಮಯ ಮುಂಚೆ ಅವರು ವ್ಯಾಪಾರ ನಿಮಿತ್ತ ಸಿರಿಯಾಕ್ಕೆ ತೆರಳಿದರು. ಮರಳಿ ಬರು ಮದೀನಾದ ಹತ್ತಿರ ಪ್ರವಾದಿವರ್ಯರ ಒಂದು ಸೇನಾ ತುಕಡಿ ಅವರ ಮೇಲೆ ಆಕ್ರ ಮಾಡಿ ಸರಕು ಹೇರಿದ್ದ ಒಂಟೆಗಳನ್ನು ವಶಪಡಿಸಿತು. ಜನರನ್ನು ಬಂಧಿಸಿತು. ಆ ತಂಡ 100 ಒಂಟೆಗಳು ಮತ್ತು 170 ಸವಾರರಿದ್ದರು. ಆದರೆ ಅಬುಲ್ ಆಸ್ ಅವರ ಕೈಗೆ ಸಿಗಲ ಅವರು ಹೇಗೋ ತಪ್ಪಿಸಿಕೊಂಡು ರಾತ್ರಿ ಅಂಧಕಾರ ಕವಿದಾಗ ಮಕ್ಕಾಕ್ಕೆ ತೆರಳುವ ಬ ಹೆದರುತ್ತಾ ನಡುಗುತ್ತಾ ಮದೀನಾದ ದಾರಿ ಹಿಡಿದರು. ಎಲ್ಲಾ ರೀತಿಯ ಅಪಾಯಗಳ ಪಾರಾಗಿ ಝೈನಬ್‌ರ ಬಳಿಗೆ ತಲಪಿ ಅವರಲ್ಲಿ ಅಭಯ ಯಾಚಿಸಿದರು.

ಪ್ರವಾದಿ(ಸ) ಬೆಳಗ್ಗಿನ ನಮಾಝ್‌ಗಾಗಿ ಸಿದ್ಧತೆ ನಡೆಸುತ್ತಿದ್ದಾಗ ನಮಾಝ್‌ನ ಹೆಳೆಯರ ಪಂಕ್ತಿಯಿಂದ ಒಂದು ಧ್ವನಿ ಮೊಳಗಿತು, "ಜನರೇ! ನಾನು ಮುಹಮ್ಮದ್‌ರ(ಸ) ಪ್ರಿ ಝೈನಬ್. ನಾನು ಅಬುಲ್ ಆಸ್‌ರಿಗೆ ಆಶ್ರಯ ನೀಡಿದ್ದೇನೆ ನೀವೂ ಅವರಿಗೆ ಅಭಯ ತಿರಿ". ನಮಾಝ್ ಮುಗಿದ ಬಳಿಕ ಪ್ರವಾದಿವರ್ಯರು ಜನರತ್ತ ತಿರುಗಿ, "ನಾನು ಿದ್ದನ್ನು ನೀವು ಕೇಳಿದಿರಾ" ಎಂದು ವಿಚಾರಿಸಿದರು. ಜನರು ಹೌದೆಂದಾಗ ವಾದಿವರ್ಯರು(ಸ) ಹೀಗೆಂದರು, "ನನ್ನ ಪ್ರಾಣ ಯಾರ ವಶದಲ್ಲಿರುವುದೋ ಅಲ್ಲಾಹನಾಣೆ! ಗೆ ಅವರ ಬಗ್ಗೆ ಮೊದಲು ಏನೂ ತಿಳಿದಿರಲಿಲ್ಲ. ಮುಸ್ಲಿಮರ ಸಾಮಾನ್ಯ ವ್ಯಕ್ತಿ ಕೂಡಾ ಾರಿಗೆ ಬೇಕಾದರೂ ಅಭಯ ನೀಡಬಹುದು."

ತರುವಾಯ ಪ್ರವಾದಿವರ್ಯರು ಮನೆಗೆ ತೆರಳಿ ಝೈನಬ್‌ರೊಡನೆ ಹೀಗೆಂದರು,

"ಮಗಳೇ! ಅಬುಲ್ ಅಸ್‌ನನ್ನು ಚೆನ್ನಾಗಿ ಉಪಚರಿಸಬೇಕು. ಆದರೆ ಒಂದು ಮಾತು ನಪಿಡಬೇಕು. ನಿನ್ನ ಶರೀರ ಆತನಿಗೆ ಹಲಾಲ್ ಅಲ್ಲ" ಅನಂತರ ಪ್ರವಾದಿವರ್ಯರು ಬುಲ್ ಆಸ್‌ರ ವ್ಯಾಪಾರೀ ತಂಡದ ಮೇಲೆ ದಾಳಿ ನಡೆಸಿದ ಸೇನಾ ತುಕಡಿಯ ಜವಾನರನ್ನು ರೆದು ಹೀಗೆಂದರು,

"ನಮ್ಮ ದೃಷ್ಟಿಯಲ್ಲಿ ಅಬುಲ್ ಆಸ್‌ನ ಸ್ಥಾನಮಾನ ಎಷ್ಟಿದೆಯೆಂದು ನೀವು ಚೆನ್ನಾಗಿ ಲ್ಲಿರಿ. ನೀವು ವಶಪಡಿಸಿಕೊಂಡಿರುವ ಸರಕನ್ನು ಅವರ ಮೇಲೆ ಔದಾರ್ಯ ತೋರಿ ಂರಳಿಸಬಲ್ಲಿರಾದರೆ ನನಗೆ ಬಹಳ ಸಂತೋಷವಾದೀತು. ಒಂದು ವೇಳೆ ನಿಮಗೆ ಮರಳಿಸಲು ಷ್ಟವಿಲ್ಲವೆಂದಾದರೆ ನಾನೇನೂ ಹೇಳಲಾರೆ. ಅಲ್ಲಾಹನು ಸಮರಾರ್ಜಿತವಾಗಿ ಅದನ್ನು ಮಗೆ ದಯಪಾಲಿಸಿರುವನು. ನೀವೇ ಅದರ ಹಕ್ಕುದಾರರಾಗಿದ್ದೀರಿ."

ಸಹಾಬಿಗಳೆಲ್ಲರೂ ಒಕ್ಕೊರಳಿನಿಂದ ಅಬುಲ್ ಆಸ್‌ರ ಸರಕನ್ನು ಮರಳಿಸುವುದಾಗಿ ಘೋಷಿಸಿದರು. ಅವರು ತನ್ನ ಸರಕನ್ನು ಪಡೆಯಲು ಬಂದಾಗ ಅವರೊಂದಿಗೆ ಹೀಗೆ ಹೇಳಿದರು, "ಅಬುಲ್ ಆಸ್! ನೀವು ಕುರೈಶರ ಅತ್ಯಂತ ಗೌರವಾನ್ವಿತ ವ್ಯಕ್ತಿಯಾಗಿರುವ ಜೊತೆಗೆ ಪ್ರವಾದಿ ಮುಹಮ್ಮದ್‌ರವರ(ಸ) ಅಳಿಯನೂ ಆಗಿರುತ್ತೀರಿ. ನೀವು ಮುಸ್ಲಿಮ್ ಆದರೆ ಎಷ್ಟೊಂದು ಚೆನ್ನಾಗಿತ್ತು. ಹಾಗಾದರೆ ನಾವು ಈ ಎಲ್ಲ ಸರಕಿನ ಮೇಲಿನ ಹಕ್ಕುಗಳನ್ನು ಬಿಟ್ಟು ಬಿಡುವೆವು. ಆಗ ಮಕ್ಕಾದವರ ಈ ಸರಕಿನ ಪ್ರಯೋಜನವೂ ನಿಮಗೆ ಲಭಿಸೀತು. ನೀವು ಇಲ್ಲೇ ಇದ್ದು ಬಿಡಿರಿ."

ಆದರೆ ಅವರ ವಿನಂತಿಯನ್ನು ತಿರಸ್ಕರಿಸುತ್ತಾ ಅಬುಲ್ ಆಸ್ ಹೇಳಿದರು, "ನಾನು ದ್ರೋಹ ಮಾಡುವ ಮೂಲಕ ಹೊಸ ಧರ್ಮದ ಆರಂಭ ಮಾಡಬೇಕೆಂದು ಬಯಸುತ್ತೀರಾ? ನೀವು ಬಹಳ ಕೆಟ್ಟ ಆಹ್ವಾನ ನೀಡುತ್ತೀರಿ."

ತರುವಾಯ ಅವರು ಆ ಎಲ್ಲ ಸರಕುಗಳನ್ನೂ ಮಕ್ಕಾಕ್ಕೆ ಸಾಗಿಸಿ ಎಲ್ಲ ಹಕ್ಕುದಾರರಿಗೂ ಅದನ್ನು ಒಪ್ಪಿಸಿದ ಬಳಿಕ, ಇನ್ನು ಯಾರದಾದರೂ ಸರಕು ನನ್ನ ವಶದಲ್ಲಿದೆಯೇ" ಎಂದು ಕೇಳಿದರು. ಅವರೆಲ್ಲರೂ 'ಇಲ್ಲ'ವೆಂದರು- ನೀವು ಎಲ್ಲ ಹಕ್ಕುಗಳನ್ನು ತೀರಿಸುವ ಅತ್ಯಂತ

ಸಜ್ಜನ ವ್ಯಕ್ತಿಯಾಗಿದ್ದೀರಿ. ಅಲ್ಲಾಹನು ನಿಮಗೆ ನಮ್ಮ ಪರವಾಗಿ ಅತ್ಯುತ್ತಮ ಪ್ರತಿಫ ನೀಡಲಿ ಎಂದು ಪ್ರಾರ್ಥಿಸಿದರು. "ಹಾಗಾದರೆ ಕೇಳಿ!, ನಾನು ಎಲ್ಲರ ಹಕ್ಕುಗಳನ್ನೂ ಸಂದಾಂ ಮಾಡಿದ್ದೇನೆ. ಕೇಳಿರಿ! ಅಲ್ಲಾಹನಲ್ಲದೆ ಅನ್ಯ ಆರಾಧ್ಯರಿಲ್ಲ ಮತ್ತು ಮಹಮ್ಮದ್( ಅಲ್ಲಾಹನ ಸಂದೇಶವಾಹಕರಾಗಿದ್ದಾರೆಂದು ನಾನು ಸಾಕ್ಷ್ಯ ನುಡಿಯುತ್ತೇನೆ. ನಿಮ್ಮ ಸೊತ್ತನ್ನೇ ಕಬಳಿಸಿ ಹೋದೆನೆಂದು ನೀವು ಆರೋಪಿಸುವ ಭಯವಿಲ್ಲದಿರುತ್ತಿದ್ದರೆ ನಾನು ಮದೀನಾದಲ್ಲೆ ಪ್ರವಾದಿಯವರ(ಸ) ಬಳಿ ಇಸ್ಲಾಮ್ ಸ್ವೀಕರಿಸುತ್ತಿದ್ದೆ" ಅಬುಲ್ ಆಸ್ ಹೇಳಿದರು.

ತರುವಾಯ ಅವರು ಮದೀನಾಕ್ಕೆ ಪ್ರವಾದಿವರ್ಯರ ಬಳಿಗೆ ತೆರಳಿದರು. ಪ್ರವಾದಿವರ್ಯ ಅವರನ್ನು ಆತ್ಮೀಯವಾಗಿ ಬರಮಾಡಿಕೊಂಡರು. ಅವರ ಹಿಂದಿನ ನಿಕಾಹನ್ನು ಉಳಿಸುತ ಅವರ ಪತ್ನಿಯನ್ನು ಅವರಿಗೆ ಮರಳಿಸಿದರು. ಅವರ ಕುರಿತು ಪ್ರವಾದಿವರ್ಯರು(ಸ) ಆಗಾ ಹೇಳುವ ಮಾತು ಹೀಗಿತ್ತು, "ಅಬುಲ್ ಆಸ್ ನನ್ನೊಂದಿಗೆ ಮಾತನಾಡಿದಾಗ ಸತ್ಯವನ್ನೆ ನುಡಿದರು ಮತ್ತು ವಾಗ್ದಾನ ಮಾಡಿದಾಗ ಅದನ್ನು ಪೂರೈಸಿದರು."

# ಹ. ಫಾತಿಮಾ ಬಿಂತಿ ಖತ್ತಾಬ್(ರ)

## ಸೋದರನ ರೌದ್ರಾವತಾರ

ಫಾತಿಮಾ ಬಿಂತಿ ಖತ್ತಾಬ್ ಕುರೈಶ್ ಗೋತ್ರದ ಬನೂ ಅದೀ ಮನೆತನದವರಾಗಿದ್ದರು. ವಾದಿ(ಸ) ಸ್ವರ್ಗದ ಸುವಾರ್ತೆ ನೀಡಿದ 10 ಮಂದಿ ಮಹಾನ್ ಸಹಾಬಿಗಳಲ್ಲೊಬ್ಬರಾದ ಸಈದ್ ಬಿನ್ ಝೈದ್‌ರು(ರ) ಫಾತಿಮಾರ ಪತಿಯಾಗಿದ್ದರು. ಈ ಆದರ್ಶ ದಂಪತಿಗಳು ೃತ್ತಮ ಸ್ವಭಾವವನ್ನು ಹೊಂದಿದವರಾಗಿದ್ದರು. ಪ್ರವಾದಿಯವರು(ಸ) ಮಕ್ಕಾದಲ್ಲಿ ಸತ್ಯ ದೇಶ ಪ್ರಚಾರ ಆರಂಭಿಸಿದ ಕೂಡಲೇ ಯಾವುದೇ ಅಳುಕಿಲ್ಲದೆ ಈ ಪತಿ- ಪತ್ನಿಯರಿಬ್ಬರೂ ಂದೆ ಬಂದು ಅದನ್ನು ಅಪ್ಪಿಕೊಂಡರು. ಅದಕ್ಕಿಂತ ಮುಂಚೆ ಕೆಲವೇ ಮಂದಿ ಸತ್ಯ ರ್ಮ ಸ್ವೀಕರಿಸಿದ್ದರು. ಪತಿಗಿಂತ ಮುಂಚೆ ಪತ್ನಿಯು ಸತ್ಯ ಧರ್ಮ ಸ್ವೀಕಾರ ಮಾಡಿದ್ದರು. ತಿಮಾ 27ನೇಯವರಾದರೆ ಸಈದ್ 28ನೇಯವರಾಗಿದ್ದರೆಂದು ವರದಿಗಳಿಂದ ತಿಳಿಯುತ್ತದೆ. ದಂಪತಿಗಳಿಗೆ ಅಸ್ಸಾಬಿಕೂನಲ್ ಅವ್ವಲೂನ್(ಪ್ರಥಮರು) ಎಂಬ ವಿಶೇಷ ಸ್ಥಾನವೂ ್ರಾಪ್ತವಿದೆ.

ಫಾತಿಮಾ ಬಿಂತಿ ಖತ್ತಾಬ್ ಇಸ್ಲಾಮ್ ಸ್ವೀಕಾರ ಮಾಡಿದ ಆ ಕಾಲದಲ್ಲಿ ಅವರ ಸೋದರ ಉಮರ್ ಬಿನ್ ಖತ್ತಾಬ್ ಇಸ್ಲಾಮಿನ ಬದ್ಧ ವೈರಿಯಾಗಿದ್ದರು. ಇಸ್ಲಾಮಿನ ದಿಗೆ ತಡೆಯೊಡ್ಡುವವರಲ್ಲಿ ಅವರು ಮುಂಚೂಣಿಯಲ್ಲಿರುತ್ತಿದ್ದರು. ಸಹೋದರಿ ಫಾತಿಮಾರ ರ ಚಿತ್ತತೆ ಮತ್ತು ನಿಸ್ಪೃಹತೆಯು ಅವರನ್ನು ಫಾರೂಕ್ ಆಝಮ್ ಅಥವಾ ಮಹಾನ್ ರೂಕ್ ಆಗಿ ಮಾರ್ಪಡಿಸಿತು. ಇದು ಫಾತಿಮಾ ಬಿಂತಿ ಖತ್ತಾಬ್‌ರ ಬದುಕಿನ ಅತ್ಯಂತ ೀಭಾಯಮಾನ ಅಧ್ಯಾಯವಾಗಿದೆ. ಹಿ.ಶ. 6ರ ಒಂದು ಪ್ರಭಾತದಲ್ಲಿ ಉಮರ್(ರ) ತನ್ನ ಖಡ್ಗದೊಂದಿಗೆ ಮನೆಯಿಂದ ಹೊರಬಿದ್ದರು. ಇಂದು ಆ ಸದ್ದನ್ನಡಗಿಸಿಯೇ ಸಿದ್ಧ ಎಂಬ ಧೃಢ ಸಂಕಲ್ಪದೊಂದಿಗೆ ಅವರು ಹೊರಟಿದ್ದರು. ಅದಕ್ಕೆ ಪ್ರೇರಣೆಯೇನಾಗಿರಬಹುದು? ಮರ್ ಐದು ವರ್ಷಗಳ ಕಾಲ ಸತ್ಯ ಸ್ವೀಕಾರ ಮಾಡಿದ ಆ ಬಡಪಾಯಿಗಳನ್ನು ನಿರಂತರ ಿಯಿಸಿ ನೋಡಿದರು. ಆದರೆ ಫಲ ಶೂನ್ಯ. ಕೊನೆಗೆ ಆ ಸಂದೇಶ ವಾಹಕನನ್ನೇ ಮುಗಿಸಿ ಟ್ಟರೇನು? ಮುಂದೆ ಎಂದೆಂದಿಗೂ ಆ ಶಬ್ಧ ದಿಗಂತದಲ್ಲಿ ಮೊಳಗಲಾರದು. ಆ ವನೆಯಿಂದಲೇ ಅಂದು ಅವರು ಹೊರಟಿದ್ದರು.

ಕೆಲವು ಇತಿಹಾಸಗಾರರು, ಪ್ರವಾದಿವರ್ಯರನ್ನು ಕೊಲ್ಲಲು ಉಮರ್ ಹೊರಟಿರುವುದಕ್ಕೆ

ಬೇರೆಯೇ ಕಾರಣವನ್ನು ನೀಡಿದ್ದಾರೆ. ಇಸ್ಲಾಮ್ ದಿನೇ ದಿನೇ ಬೆಳೆಯುತ್ತಿರುವುದನ್ನು ಕ ಉಮರ್ ಮರುಗಿದರು. ತನ್ನ ಯಾವುದೇ ಹಿಂಸೆ ದೌರ್ಜನ್ಯಗಳು ಅವರ ಮೇಲೆ ಪ್ರ ಬೀರುತ್ತಿಲ್ಲವೆಂದು ಅವರು ಕಳವಳಗೊಂಡರು. ಮುಸ್ಲಿಮರು ತಮ್ಮ ವಿಶ್ವಾಸವನ್ನು ತೊ ಮಾತೃ ಧರ್ಮಕ್ಕೆ ಮರಳುವ ಬದಲು ವಿಶ್ವಾಸದ ರಕ್ಷಣೆಗಾಗಿ ಇಥಿಯೋಪಿಯಾಕ್ಕೆ ಪ್ರಯ ಬೆಳೆಸುವುದನ್ನು ಕಂಡು ಅವರಿಂದ ಸಹಿಸಲಾಗಲಿಲ್ಲ. ಅದಕ್ಕಾಗಿ ಪ್ರವಾದಿವರ್ಯರನ್ನೇ ಮು ಬಿಡಲು ಅವರು ದೃಢ ನಿರ್ಧಾರ ಮಾಡಿದರು.

ಒಂದು ವರದಿ ಹೀಗೂ ಇದೆ- ಪ್ರವಾದಿಯವರ(ಸ) ಪಿತೃ ಸಹೋದರ, ಕುರೈಶರ ಶೂರ ಬಿಲ್ಲಾಳು ಹಮ್‌ಝಾ(ರ) ಇಸ್ಲಾಮ್ ಸ್ವೀಕರಿಸಿದಾಗ ಸತ್ಯನಿಷೇಧಿ ಕುರೈ ಪಂಕ್ತಿಯಲ್ಲಿ ಅದು ಅತಿದೊಡ್ಡ ಬಿರುಕುಂಟು ಮಾಡಿತು. ಅವರು ಉದ್ರಿಕ್ತರಾಗಿ ಒಂ ಸಭೆ ಸೇರಿದರು. ಅದರಲ್ಲಿ ಉಮರ್ ಕೂಡಾ ಭಾಗವಹಿಸಿದರು. ಸಭೆಯಲ್ಲಿ ಅಬೂಜಹ ಪ್ರಚೋದನಕಾರಿಯಾದ ಒಂದು ಭಾಷಣ ಮಾಡಿ ಹೀಗೆ ಘೋಷಿಸಿದನು- 'ಯ ಮುಹಮ್ಮದ್‌ನನ್ನು ಕೊಲೆ ಮಾಡುವರೋ ಅವರಿಗೆ 100 ಕೆಂಪು ಬಣ್ಣದ ಒಂಟೆಗಳ 40 ಸಾವಿರ ದಿರ್ಹಮ್ ನಗದನ್ನೂ ಬಹುಮಾನವಾಗಿ ಕೊಡಲಾಗುವುದು. ಇದು ಅತಿ ದು ಮೊತ್ತದ ಬಹುಮಾನವಾಗಿತ್ತು. ಆ ಸಂದರ್ಭದಲ್ಲಿ ಉಮರ್‌ರ ವಿಕಾರ ಕೆರಳಿತು. ಅವ ಬಹುಮಾನದ ಆಮಿಷವಿರಲಿಲ್ಲವಾದರೂ ಭಾವಾವೇಶದಿಂದ, ನಾನು ಈ ಕಾರ್ಯವ ಮಾಡಬಲ್ಲೆ ಎಂದು ಘೋಷಿಸಿದರು. ಏಕೆಂದರೆ ಅವರಿಗೆ ತನ್ನ ಶಕ್ತಿ ಮತ್ತು ಪ್ರತಾ ಮೇಲೆ ಬಹಳ ಹೆಮ್ಮೆಯಿತ್ತು.'

"ಅಬುಲ್ ಹಕಮ್! (ಅಬೂಜಹಲ್‌ನ ಹೆಸರು) ಲಾತ್ ಮತ್ತು ಉಝ್ಝಾ ದೇವತೆಗಳ ಮುಹಮ್ಮದ್‌ರ ರುಂಡ ಹಾರಿಸದೇ ನಾನು ಈ ಭೂಮಿಯ ಮೇಲೆ ಕುಳಿತುಕೊಳ್ಳಲ ಅವರು ಪ್ರತಿಜ್ಞೆಗೈದರು.

ಉಮರ್ ಬೆಳಗ್ಗೆದ್ದು ನಗ್ನ ಖಡ್ಗ ಹಿಡಿದು ಮನೆಯಿಂದ ಹೊರಟು ಸ್ವಲ್ಪ ದ ಹೋಗಿದ್ದರಷ್ಟೆ. ದಾರಿಯಲ್ಲಿ ಬನೂ ಅದೀ ಗೋತ್ರದ ನಈಮ್ ಬಿನ್ ಅಬ್ದುಲ್ಲಾ ಎ ವ್ಯಕ್ತಿ ಅವರಿಗೆದುರಾದರು. ಅವರು ಮನಸ್ಸಿನಲ್ಲಿ ಇಸ್ಲಾಮ್ ಸ್ವೀಕರಿಸಿದ್ದರು. ಆದರೆ ಅದ ಇನ್ನೂ ಬಹಿರಂಗಪಡಿಸಿರಲಿಲ್ಲ. ಉಮರ್‌ರ ಮುಖದಲ್ಲಿ ಎದ್ದು ತೋರುತ್ತಿದ್ದ ಭೀ ಭಾವವನ್ನು ಗುರುತಿಸಿದ ನಈಮ್ ಏನೋ ಅನಾಹುತ ನಡೆಯಲಿದೆಯೆಂದು ಕಂ ಕೊಂಡರು. ಅವರು ಉಮರ್‌ರನ್ನುದ್ದೇಶಿಸಿ, 'ಉಮರ್! ಬೆಳಗ್ಗೆನೇ ನಗ್ನ ಖಡ್ಗದೊಂ ಎಲ್ಲಿಗೆ ಹೊರಟಿರಿ' ಎಂದು ಕೇಳಿದರು.

ಉಮರ್: ತನ್ನ ಧರ್ಮವನ್ನು ತೊರೆದ, ಕುರೈಶರ ಏಕತೆಯನ್ನು ಛಿದ್ರಛಿದ್ರಗೊಳಿಸಿ ನಮ್ಮನ್ನೆಲ್ಲ ಮೂರ್ಖರೆಂದು ಸಾರುವ ಆ ಘಾತಕನನ್ನು ಇಂದು ಮುಗಿಸಿಯೇ ಬಿಡ ಹೊರಟಿದ್ದೇನೆ. ಆತ ನಮ್ಮ ಆರಾಧ್ಯ ದೇವತೆಗಳನ್ನು ಖಂಡಿಸುತ್ತಿದ್ದಾನೆ. ನಮ್ಮ ಧರ್ಮವ ಕೆಡಿಸುತ್ತಿದ್ದಾನೆ. ಆತನ ರುಂಡ ಹಾರಿಸದೆ ನಾನು ಈ ನೆಲದ ಮೇಲೆ ಕುಳಿತುಕೊಳ್ಳಲಾರೆನೆಂ ಪ್ರತಿಜ್ಞೆಗೈದು ಹೊರಟಿದ್ದೇನೆ.

ನಈಮ್: ಇದು ದೊಡ್ಡ ಅಪಾಯಕಾರಿ ಕ್ರಮ. ಉಮರ್! ನೀವು ಬಹಳ ತಪ್ಪು ೖನೆಗೆ ಸಿಲುಕಿದ್ದೀರಿ. ನೀವು ಮುಹಮ್ಮದ್‌ರನ್ನು ವಧಿಸಿದರೆ ಅಬ್ದುಮನಾಫ್ ಗೋತ್ರದವರು ಮ್ಮನ್ನು ಜೀವಂತ ಬಿಡುವರೆ?

ಉಮರ್: ನನಗೆ ಯಾರ ಭಯವೂ ಇಲ್ಲ. ಬಹುಶಃ ನೀವು ಪರಂಪರಾಗತ ರ್ಮವನ್ನು ತೊರೆದು ಮುಹಮ್ಮದ್‌ರ ಧರ್ಮವನ್ನು ಸ್ವೀಕರಿಸಿದಂತೆ ಭಾಸವಾಗುತ್ತದೆ. ದರಿಂದ ಅವರಿಗಿಂತ ಮುಂಚೆ ನಿಮ್ಮನ್ನೇ ನೋಡಿಕೊಂಡರೆ ಹೇಗೆ?

ನಈಮ್: ನನ್ನನ್ನು ಆ ಮೇಲೆ ವಧಿಸುವಿರಂತೆ. ಮೊದಲು ನಿಮ್ಮ ಮನೆಯವರನ್ನು ಲ್ಪ ನೋಡಿಕೊಳ್ಳಿ.

ಉಮರ್: ಬೆಚ್ಚಿಬಿದ್ದು, ನನ್ನ ಮನೆಯವರು! ಯಾರದು?

ನಈಮ್: ಅದೇ! ನಿಮ್ಮ ಸಹೋದರಿ ಫಾತಿಮಾ ಮತ್ತು ಭಾವ ಸಈದ್ ಬಿನ್ ೖದ್ ಇಬ್ಬರೂ ಆ ಧರ್ಮವನ್ನು ಸ್ವೀಕರಿಸಿದ್ದಾರೆ. ನನಗಿಂತ ಅವರ ಮೇಲೆ ನಿಮಗೆ ಹೆಚ್ಚು ಕ್ಕು ಬಾಧ್ಯತೆ ಇದೆ.

ಉಮರ್‌ರ ಕೋಪಾಗ್ನಿ ನೆತ್ತಿಗೇರಿತು. ಅವರು ಆ ಕೂಡಲೇ ಅರ್ಕಮ್‌ರ ಮನೆಗೆ ೋಗುವುದನ್ನು ಬಿಟ್ಟು ತನ್ನ ಸಹೋದರಿಯ ಮನೆಯತ್ತ ದಾಪುಗಾಲು ಹಾಕಿದರು. ಮನೆಯ ತ್ತಿರ ತಲಪುವಾಗ ಅವರಿಗೆ ಮನೆಯೊಳಗೆ ಯಾರೋ ಏನೋ ಓದುವ ಸ್ವರ ಕೇಳಿಸಿತು. ೀರಾಗಿ ಬಾಗಿಲು ತಟ್ಟಿದರು. ಫಾತಿಮಾರಿಗೆ ಇದು ತನ್ನ ಸಹೋದರನೆಂದು ತಿಳಿಯಿತು. ನಗೆ ಮತ್ತು ಪತಿ ಸಈದ್‌ರಿಗೆ ಕುರ್‌ಆನ್ ಕಲಿಸುತ್ತಿದ್ದ ಖಬ್ಬಾಬ್ ಬಿನ್ ಅರತ್‌ರನ್ನು ತಿಮಾ ಮನೆಯ ಹಿಂದುಗಡೆ ಅವಿತಿರುವಂತೆ ವಿನಂತಿಸಿದರು. ಲಗು ಬಗೆಯಿಂದ ತಾವು ದುವ ಕುರ್‌ಆನ್ ಹಾಳೆಗಳನ್ನು ಬಚ್ಚಿಟ್ಟು ಅವರು ಬಾಗಿಲು ತೆರೆದರು. ಬಾಗಿಲ ಬಳಿ ದ್ರಾವತಾರದಿಂದ ನಿಂತಿದ್ದ ಉಮರ್‌ರನ್ನು ಕಂಡು ಫಾತಿಮಾ, ಏನಣ್ಣಾ ಏನು ಸಮಾಚಾರ ಂದು ಕೇಳಿದರು.

## ಹೋದರಿಯ ದಿಟ್ಟ ಉತ್ತರ

ಉಮರ್(ರ) ಮನೆಯೊಳಗೆ ಕಾಲಿಡುತ್ತಿದ್ದಂತೆಯೇ, 'ಅದೇನು ಸ್ವರ ನಾನು ಕೇಳುತ್ತಿದ್ದುದು' ಂದು ಗದರಿಸುತ್ತಾ ಕೇಳಿದರು.

"ಏನು ಸ್ವರ? ನೀವೇನೂ ಕೇಳಿರಲಿಕ್ಕಿಲ್ಲ. ನಿಮಗೇನೋ ಭ್ರಮೆಯಾಗಿರಬೇಕು-" ತಿಮಾ ಮತ್ತು ಸಈದ್ ದಂಪತಿಗಳು ಹೇಳಿದರು.

'ಇಲ್ಲ. ನಾನು ಕೇಳಿದ್ದೇನೆ. ದೇವನಾಣೆ! ನಾನು ಕೇಳಿದ್ದೇನೆ. ನೀವಿಬ್ಬರೂ ುಹಮ್ಮದ್‌ರ(ಸ) ಧರ್ಮವನ್ನು ಅವಲಂಬಿಸಿದ್ದೀರಿ'- ಉಮರ್ ಕ್ರೋಧ ಭರಿತರಾಗಿ ಳಿದರು.

ಮುಂದೆ ಅವರಿಂದೇನೂ ಹೇಳಲಾಗಲಿಲ್ಲ. ಅವರು ತನ್ನ ಭಾವ ಸಈದ್ ಬಿನ್

ಝೈದ್‌ರ ಮೇಲೆ ಹಾರಿದರು. ಅವರ ಉದ್ದದ ತಲೆಗೂದಲನ್ನು ಹಿಡಿದು ನೆಲಕ್ಕಪ್ಪಳಿಸಿದ ತರುವಾಯ ಒಂದೇ ಸವನೆ ಹೊಡೆಯ ತೊಡಗಿದರು. ಪತಿಯ ರಕ್ಷಣೆಗೆ ಅಡ್ಡ ಬ ಫಾತಿಮಾರನ್ನು ಕೂಡಾ ಥಳಿಸಿದರು. ಅನಂತರ ಸೌದೆ ತುಂಡೊಂದನ್ನು ಎತ್ತಿ ಸಈದ್ ಬಲವಾಗಿ ಬೀಸಿ ಹೊಡೆಯುವಷ್ಟರಲ್ಲಿ ಫಾತಿಮಾ ಪುನಃ ಅಡ್ಡ ಬಂದರು. ಏಟು ಅ ಹಣೆಗೆ ಬಿತ್ತು. ತಲೆಯೊಡೆದು ರಕ್ತ ಚಿಮ್ಮಿತು. ಅವರು ಸಹೋದರನಿಗೆ ಶರಣಾಗುವ ಬದ ಅವರ ಧರ್ಮಾಭಿಮಾನವು ಇನ್ನಷ್ಟು ಕೆರಳಿತು. ಫಾತಿಮಾ ಸಹೋದರನ ಮುಖ ನೋ ಹೀಗೆ ಹೇಳಿದರು-

"ಹೌದೌದು! ನಾವು ಇಸ್ಲಾಮ್ ಸ್ವೀಕರಿಸಿದ್ದೇವೆ. ಅಲ್ಲಾಹನ ಮೇಲೂ ಆ ಪ್ರವಾದಿಯ ಮೇಲೂ ವಿಶ್ವಾಸವಿರಿಸಿದ್ದೇವೆ. ಅದನ್ನು ನಮ್ಮ ಮನಸ್ಸಿನಿಂದ ಅಳಿಸ ಯಾರಿಗೂ ಸಾಧ್ಯವಿಲ್ಲ. ನೀವು ಏನು ಬೇಕಾದರೂ ಮಾಡಿ. ನಮ್ಮ ಪ್ರಾಣ ಹೋದ ನಾವು ಸತ್ಯಧರ್ಮವನ್ನು ಬಿಡಲಾರೆವು."

ರಕ್ತದಲ್ಲಿ ತೊಯ್ದು ಹೋಗಿದ್ದ ಸಹೋದರಿಯ ಮುಖ ಒಂದು ಕಡೆಯಾದರೆ, ಆಕೆ ಬಾಯಿಯಿಂದ ಹೊರಟ ದಿಟ್ಟ ಮಾತುಗಳು ಇನ್ನೊಂದು ಕಡೆ. ಉಮರ್(ರ) ಅವಾಕ್ಕಾದ ಅರಬಸ್ತಾನದ ಆ ಸಿಂಹದ ಘರ್ಜನೆ ಅಡಗಿತು. ಉಮರ್ ಯೋಚನೆಯಲ್ಲಿ ಬಿದ್ದರು. ಅ ಕೋಪ ತಣಿಯಿತು, ಮನನೊಂದಿತು. ಮುಂದೆ ಲೋಕದ ಮಹಾನ್ ನಾಯಕರಾಗಬೇಕಾಗಿ ಅರಬಸ್ತಾನದ ಈ ಸುಪುತ್ರನನ್ನು ಫಾತಿಮಾ ಬಿಂತಿ ಖತ್ತಾಬ್ ತನ್ನ ರಕ್ತ ಹರಿಸಿ ಬೇರೆಂ ದಾರಿಗೆ ಹಾಕಿದರು.

ಉಮರ್ ಸ್ವಲ್ಪ ಹೊತ್ತು ಮೌನವಾಗಿದ್ದು, ಅನಂತರ ಮೆಲ್ಲನೆ ಹೀಗೆಂದರು-

'ಸರಿ. ಹಾಗಾದರೆ ನೀವು ಓದುತ್ತಿದ್ದುದನ್ನು ನನಗೂ ಸ್ವಲ್ಪ ತೋರಿಸಿ.'

'ನೀವು ಅದನ್ನು ಹಾಳುಗೆಡಹಿ ಬಿಡುವಿರಿ ಅಥವಾ ನಾಶ ಪಡಿಸುವಿರಿ ಎಂದು ಭ ವಾಗುತ್ತಿದೆ'- ಫಾತಿಮಾ ಹೇಳಿದರು.

ಉಮರ್(ರ) ತನ್ನ ಎಲ್ಲ ಕುಲದೇವತೆಗಳ ಆಣೆ ಹಾಕಿ ಹೇಳಿದರು- ನೀವೇ ಹೆದರಬೇಕಾಗಿಲ್ಲ. ಖಂಡಿತ ನಾನು ಅದನ್ನು ಹಾಳುಗೆಡಹಲಾರೆ. ಓದಿ ವಾಪಾಸು ಕೊಡುತ್ತೇ

ಫಾತಿಮಾರ ಮನದಾಳದಲ್ಲಿ ಈಗ ಭರವಸೆ ಮೂಡಿತು. ಸಹೋದರನ ಮನಸ್ಸಿನ ಮೇ ಅಲ್ಲಾಹನ ವಾಣಿಯ ಪ್ರಭಾವವಾದೀತೇನೋ ಎಂದು ಅವರು ಭಾವಿಸಿದರು. ಅನಂ ಸಹೋದರನೊಂದಿಗೆ ಹೀಗೆಂದರು-

'ನಾವು ಅಲ್ಲಾಹನ ವಾಣಿಯನ್ನು ಪಠಿಸುತ್ತಿದ್ದೆವು. ಅದರ ಹಾಳೆಯನ್ನು ಪರಿಶು ಜನರು ಮಾತ್ರ ಮುಟ್ಟಬಹುದು. ನೀವು ಸ್ನಾನ ಮಾಡದೆ ಅದನ್ನು ಮುಟ್ಟುವಂತಿಲ್ಲ.'

ಉಮರ್ ಎದ್ದು ಕೂಡಲೇ ಸ್ನಾನ ಮಾಡಿ ಬಂದರು. ಫಾತಿಮಾ, ಕುರ್‌ಆ ಬರೆಯಲ್ಪಟ್ಟ ಹಾಳೆಗಳನ್ನು ಅವರ ಕೈಗೆ ನೀಡಿದರು. ಅವರು ತ್ವಾಹಾ ಅಧ್ಯಾಯದ ಆರಂಭ ಸೂಕ್ತಗಳನ್ನು ಪಠಿಸುತ್ತಾ ಹೋದಂತೆ ಅವರ ಮೈ ಕಂಪಿಸತೊಡಗಿತು. ಮನಸ್ಸಿನಿಂದ ಶಿಕ್

ನ್ರ್ (ಬಹುದೇವತ್ವ ಮತ್ತು ಸತ್ಯನಿಷೇಧ)ಗಳ ಮಾಲಿನ್ಯ ತೊಲಗಿತು. ಅವರು ಪಠಿಸುತ್ತಾ ಾದಂತೆ ಕುರ್‌ಆನ್‌ನ ಪದಗಳ ಮಾಧುರ್ಯ, ಭಾಷಾ ಶೈಲಿ, ಅದರ ಘನತೆ ಹಾಗೂ ೀರ ಗಾಂಭೀರ್ಯವು ಅವರನ್ನು ಅಧೀನಗೊಳಿಸಿತು.

'ಅಲ್ಲಾಹು ಲಾ ಇಲಾಹ ಇಲ್ಲಾ ಹುವ ಲಹುಲ್ ಅಸ್ಮಾಉಲ್ ಹುಸ್ನಾ' (ಅಲ್ಲಾಹ್, ನ ಹೊರತು ಆರಾಧ್ಯರಾರೂ ಇಲ್ಲ. ಆತನಿಗೆ ಅತಿ ಸುಂದರ ನಾಮಗಳಿವೆ) ಎಂಬಲ್ಲಿಗೆ ಪಿದಾಗಲಂತೂ ಉಮರ್ ಸಂಪೂರ್ಣ ಶರಣಾಗಿ ಬಿಟ್ಟರು. 'ಆಹಾ! ಎಷ್ಟೊಂದು ಸುಂದರ ಶೆಯಿದು' ಎಂದು ಅವರಿಗರಿವಿಲ್ಲದಂತೆಯೇ ಅವರ ಬಾಯಿಯಿಂದ ಹೊರಟಿತು. ಮರ್‌ರ ಬಾಯಿಯಿಂದ ಈ ಮಾತು ಕೇಳುತ್ತಲೇ ಮನೆಯ ಹಿಂಭಾಗದಲ್ಲಿ ಅಡಗಿ ಕುಳಿತಿದ್ದ ಬ್ಬಾಬ್ ಬಿನ್ ಅರತ್ ಮುಂದೆ ಬಂದು ಅವರನ್ನು ಅಭಿನಂದಿಸುತ್ತಾ ಹೀಗೆಂದರು-

"ಉಮರ್! ನಿಮಗೆ ಶುಭವಾಗಲಿ. ನಿನ್ನೆಯಷ್ಟೇ ಪ್ರವಾದಿ(ಸ) ಮಾಡಿದ ಪ್ರಾರ್ಥನೆಯು ್ಮ ಪಾಲಿಗೆ ಸ್ವೀಕೃತವಾಯಿತು. ಪ್ರವಾದಿ(ಸ) ಅಲ್ಲಾಹನೊಡನೆ ಈ ರೀತಿ ಪ್ರಾರ್ಥಿಸಿದ್ದರು- ರ್ವಶಕ್ತನಾದ ಅಲ್ಲಾಹನೇ! ಅಮ್ರ್ ಬಿನ್ ಹಿಶಾಮ್ (ಅಬೂ ಜಹಲ್) ಮತ್ತು ಉಮರ್ ್ ಖತ್ತಾಬ್‌ರ ಪೈಕಿ ನೀನು ಬಯಸುವ ಒಬ್ಬನನ್ನು ಇಸ್ಲಾಮಿಗಾಗಿ ನೀಡು.

ಅವರು ಬಹಳ ಪ್ರಭಾವಿತರಾಗಿದ್ದರು. ಅಶ್ರುಧಾರೆ ಹರಿದು ಅವರ ಗಡ್ಡ ಒದ್ದೆಯಾಯಿತು. ರು ತನ್ನ ಸಹೋದರಿ ಮತ್ತು ಭಾವನನ್ನು ಅಭಿಸಂಬೋಧಿಸಿ ಹೀಗೆಂದರು-

'ನನ್ನಿಂದಾದ ಅತಿರೇಕಗಳನ್ನು ಅಲ್ಲಾಹನಿಗಾಗಿ ಕ್ಷಮಿಸಿರಿ. ನೀವು ಸಾಕ್ಷಿಯಾಗಿರಿ. ನಾನು ಮಾಣಿಕವಾಗಿ ಹೇಳುತ್ತಿದ್ದೇನೆ. ನಾನು ಮುಹಮ್ಮದ್‌ರ(ಸ) ಮೇಲೆ ವಿಶ್ವಾಸ ತಾಳುತ್ತೇನೆ.'